ಸಂಪುಟ - 10, ಸಂಚಿಕೆ- 01 VOLUME: 10, ISSUE: 01

ಪ್ರತಿಸ್ಪಂದ

ಕೊಡು ಕೊಳ್ಳುವಿಕೆಯ ಸಂಕರ

ಸಾಹಿತ್ಯ, ಸಂಸ್ಕೃತಿ - ಸಂಶೋಧನ ತ್ರೈಮಾಸಿಕ ತಜ್ಞ ಪರಿಶೀಲನ ಪತ್ರಿಕೆ
LITERATURE, CULTURE - RESEARCH QUARTERLY
PEER - REVIEWED JOURNAL
ISSN: 2320-9941

HTTPS://PRATHISPANDHA.WORDPRESS.COM/

ಪ್ರತಿಸ್ಪಂದ
PRATHISPANDA

ಸಂಪುಟ - 10, ಸಂಚಿಕೆ- 01
PEER - REVIEWED JOURNAL
ISSN: 2320-9941
VOLUME: 10, ISSUE: 01

ಪ್ರತಿಸ್ಪಂದ

ಕೊಡು ಕೊಳ್ಳುವಿಕೆಯ ಸಂಕರ

PRATHISPANDA

An Exchange of Creative Impulse

ಗೌರವ ಸಂಪಾದಕರು
ಕೆ. ಆರ್. ಬಸವರಾಜು

ಸಂಪಾದಕರು
ಡಾ. ಸರಸ್ವತಿ ಕೆ. ಬಿ.

ಭಾಗ - 1

HTTPS://PRATHISPANDHA.WORDPRESS.COM/

ಸಾಹಿತ್ಯ, ಸಂಸ್ಕೃತಿ – ಸಂಶೋಧನಾ ತ್ರೈಮಾಸಿಕ ತಜ್ಞ ಪರಿಶೀಲನ ಪತ್ರಿಕೆ
literature, culture - Research Quarterly Peer - Reviewed journal
ISSN: **2320–9941**

ಪ್ರತಿಸ್ಪಂದ

ಕೊಡು–ಕೊಳ್ಳುವಿಕೆಯ ಸಂಕರ

PRATHISPANDA

An Exchange of creative Impulse

ಭಾಗ – 01, PART - 1

ಸಂಪುಟ: 10, ಸಂಚಿಕೆ 01, ಜನವರಿ – ಮಾರ್ಚ್ 2026

VOLUME: 10, ISSUE: 01, JANUARY - MARCH 2026

ಗೌರವ ಸಂಪಾದಕರು

ಕೆ. ಆರ್. ಬಸವರಾಜು

ಸಂಪಾದಕರು

ಡಾ. ಸರಸ್ವತಿ ಕೆ. ಬಿ.

ಪ್ರಕಟಣೆ :

ಪ್ರತಿಸ್ಪಂದ ಸಾಹಿತ್ಯ, ಸಂಸ್ಕೃತಿ – ಸಂಶೋಧನಾ ತ್ರೈಮಾಸಿಕ ಪತ್ರಿಕೆ

ತೋಟದ ಮನೆ ನಂ 107(25)

ಕಂಚಾಘಟ್ಟ ಹೊಸ ಬಡಾವಣೆ

ತಿಪಟೂರು 572201

e-mail: prathispanda@gmail.com

website : https://prathispandha.wordpress.com/

ತಜ್ಞ ಪರಿಶೀಲನ ಸಮಿತಿ
PEER REVIEW COMMITTEE

ಡಾ. ಸರಸ್ವತಿ ಕೆ. ಬಿ.
ಸಹ ಪ್ರಾಧ್ಯಾಪಕರು, ಇಂಗ್ಲೀಷ್ ವಿಭಾಗ
ಬಿ.ಎಂ.ಎಸ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಹುಳಿಯಾರು – ಕೆಂಕೆರೆ
ತುಮಕೂರು ಜಿಲ್ಲೆ, ಕರ್ನಾಟಕ

Dr. Saraswati K. B
Associate Professor, English Department
BMS Govt. First Grade College, Huliyar - Kenkere
Tumkur District, Karnataka

ಡಾ. ಎಂ. ರಂಗಸ್ವಾಮಿ
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಮದ್ರಾಸ್ ವಿಶ್ವವಿದ್ಯಾಲಯ, ಚೆನ್ನೈ, ತಮಿಳುನಾಡು

Dr. M. Rangaswamy
Assistant Professor,
Kannada Department
University Of Madras,
Chenni, Tamil Nadu

ಡಾ. ಜ್ಯೋತಿ ಕೆ. ಬಿ.
ಸಹ ಪ್ರಾಧ್ಯಾಪಕರು, ಇಂಗ್ಲಿಷ್ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊರಟಗೆರೆ
ತುಮಕೂರು ಜಿಲ್ಲೆ, ಕರ್ನಾಟಕ

Dr. Jyoti K. B.
Associate Professor, English Department
Govt. First Grade College, Koratagere,
Tumkur District, Karnataka

ಡಾ. ಗೋವಿಂದರಾಯ ಎಂ.
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಧುಗಿರಿ
ತುಮಕೂರು ಜಿಲ್ಲೆ, ಕರ್ನಾಟಕ

Dr. Govindaraya M.
Associate Professor
Kannada Department
Govt. First Grade College, Madhugiri
Tumkur District, Karnataka

ಅನಿತ ಕೆ. ವಿ.
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಮೌಂಟ್ ಕಾರ್ಮಲ್ ಕಾಲೇಜು ಸ್ವಾಯತ್ತ, ವಸಂತನಗರ
ಬೆಂಗಳೂರು, ಕರ್ನಾಟಕ

Anitha K. V.
Assistant Professor, Kannada Department
Mount Carmel College Autonomous, Vasanthnagar
Bengaluru, Karnataka

ಡಾ. ರವಿಶಂಕರ್ ಎ. ಕೆ.
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಕ್ರಿಸ್ತು ಜಯಂತಿ ಡೀಮ್ಡ್ ಟು ಬಿ ವಿಶ್ವವಿದ್ಯಾಲಯ
ಕೆ. ನಾರಾಯಣಪುರ
ಬೆಂಗಳೂರು, ಕರ್ನಾಟಕ

Dr. Ravishankar A. K.
Assistant Professor, Kannada Department
Kristu Jayanti Deemed to be University,
K. Narayanapura
Bengaluru, Karnataka

ಸಿದ್ಧರಾಮಯ್ಯ ಡಿ. ಎಂ
ಪದವೀಧರ ಪ್ರಾಥಮಿಕ ಶಿಕ್ಷಕ
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ
ಬಾಡೇನಹಳ್ಳಿ, ಗುಬ್ಬಿ ತಾಲ್ಲೂಕು
ತುಮಕೂರು ಜಿಲ್ಲೆ, ಕರ್ನಾಟಕ

Siddaramaiah D. M
Graduate Primary Teacher
Government Higher Primary School
Baadenahalli, Gubbi Taluk,
Tumkur District, Karnataka

ಶ್ರೀ. ರಾಮು ಟಿ. ಡಿ.
ಪದವೀಧರ ಪ್ರಾಥಮಿಕ ಶಿಕ್ಷಕ
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ
ಕಾತ್ರಿಕೆಹಾಲ್, ಚಿಕ್ಕನಾಯಕನಹಳ್ಳಿ ತಾಲ್ಲೂಕು
ತುಮಕೂರು ಜಿಲ್ಲೆ, ಕರ್ನಾಟಕ

Ramu T. D
Graduate Primary Teacher
Government Higher Primary School
Kathrikehal, C N Halli Taluk
Tumkur District, Karnataka

ಕಾನೂನು ಸಲಹೆಗಾರರು
ಪೃಥ್ವಿ ಸೂರಿ
ಲೇಖಕರು ಹಾಗೂ ವಕೀಲರು

ಸಂಪಾದಕೀಯ...

'ನಾನು ಯಾಕೆ ಬರೆಯುತ್ತೇನೆ' ಎಂಬ ಲೇಖನದಲ್ಲಿ ಜಾರ್ಜ್ ಆರ್ವೆಲ್, ಲೇಖಕನ ಬೆರವಣಿಗೆಯ ಹಿಂದೆ ನಾಲ್ಕು ಉದ್ದೇಶಗಳನ್ನು ಗುರುತಿಸುತ್ತಾನೆ. ದುಡಿಯುವ ಮಾರ್ಗವಾಗಿ ಬರವಣಿಗೆ ಎಂಬುದರ ಹೊರತಾಗಿ ಲೇಖಕನೊಬ್ಬ ಬರೆಯಲು ನಾಲ್ಕು ಪ್ರೇರಣೆಗಳಿರುತ್ತವೆ. ಪ್ರತಿಯೊಂದು ಕಾಲಮಾನವೂ ವಿಶೇಷವಾಗಿದ್ದು, ಯಾವುದೇ ಲೇಖನಗಳು ಆಯಾ ಕಾಲದ ನಾಡಿಮಿಡಿತವನ್ನು ಸ್ಪಂದಿಸುತ್ತವೆ. ಆರ್ವೆಲ್ ಪ್ರಕಾರ ಈ ನಾಲ್ಕು ಅಂಶಗಳು ಯಾವುವೆಂದರೆ Sheer egoism, Aesthetic Enthusiasm, Historical Impulse and Political Purpose.

ಭಾಷೆಯ ಮೂಲಕ ರಾಜಕೀಯ ನಿಲುವುಗಳನ್ನು, ಅಧಿಕಾರವು ಜಾರಿಗೆ ತರುವ ಕಾನೂನುಗಳನ್ನು ವಿಮರ್ಶಿಸುವ, ಪ್ರಶ್ನಿಸುವ ಮತ್ತು ಚರ್ಚಿಸುವ ಸಾಹಿತ್ಯವು ಮಾಹಿತಿ ನೀಡುತ್ತಲೇ ಚಿತೋಹಾರಿಯಾಗಿರುವಂತೆ ಬರೆಯುವ ಕಲೆಯು ಈ ಕಾಲಮಾನದಲ್ಲಿ ಬಹುತೇಕ ಅಲಭ್ಯವಾಗುತ್ತಿರುವುದು ಗಮನಿಸಬೇಕಾದ ಅಂಶ. ಇತ್ತೀಚಿನ ಸಂಶೋಧನಾ ಪ್ರಬಂಧಗಳು ಹೆಚ್ಚಾಗಿ ಆರ್ವೆಲ್ ಹೇಳುವ Historical Impulse ಉದ್ದೇಶಕ್ಕಾಗಿ ಬರೆಯಲ್ಪಡುತ್ತಿರುವುದು ಕಂಡುಬರುತ್ತಿದೆ. ಇತಿಹಾಸದಲ್ಲಿ ಆಗಿಹೋದವರ ವ್ಯಕ್ತಿತ್ವಗಳು, ಸಾಂಸ್ಕೃತಿಕ ಆಚರಣೆಗಳು, ಪ್ರಸಿದ್ಧ ಕೃತಿಗಳ ಕುರಿತಾದ ವಿಶ್ಲೇಷಣೆಗಳು ದಾಖಲಾದಂತೆ ವಾಸ್ತವದ ಕಟುಸತ್ಯಗಳನ್ನು ಕುರಿತ ವಿಶ್ಲೇಷಣೆಗಳು ವಿರಳವಾಗುತ್ತಿವೆ. ಯುದ್ಧಗಳು, ದೇಶಗಳ ನಡುವಿನ ಸಂಘರ್ಷ, ಕಾನೂನಿನ ಅಡಚಣೆಗಳಿಂದ ಸಾಮಾನ್ಯ ಪ್ರಜೆಗಳಿಗೆ ಆಗುತ್ತಿರುವ ನೋವು, ಅವಮಾನಗಳು, ಪ್ರಸ್ತುತ ಶಿಕ್ಷಣ ಕ್ಷೇತ್ರದಲ್ಲಿ ಆಗುತ್ತಿರುವ ಬದಲಾವಣೆಗಳು, ಹವಾಮಾನ ವೈಪರೀತ್ಯಗಳು, ಸಮಕಾಲೀನ ಚರ್ಚೆಗಳ ಬಗ್ಗೆಗಿನ ಅವಲೋಕನಗಳು ಇಲ್ಲವಾಗುತ್ತಿರುವುದು ಏನನ್ನು ಸಂಕೇತಿಸುತ್ತಿದೆ? ಯಾವುದೇ ಕಾಲಮಾನದ ಮನಃಸ್ಥಿತಿಗಳ ಪರಿಚಯವನ್ನು ಆಯಾಕಾಲದ ಕೃತಿಗಳು/ ಲೇಖನಗಳು ಪ್ರತಿಫಲಿಸುತ್ತವೆ. ಮಾಹಿತಿಯನ್ನು ಸೃಜನಶೀಲವಾಗಿಸಲು ಬೇಕಾದ ಕೌಶಲ್ಯಗಳ

ಕೊರತೆಯನ್ನು ನೀಗಿಸಿಕೊಳ್ಳುವುದು ಇಂದಿನ ಯುವ ಲೇಖಕರಿಗೆ ಅಗತ್ಯ. ಸಮಾಜದ ಆಗುಹೋಗುಗಳನ್ನು ಗಮನಿಸುವ, ಮಾಹಿತಿಗಳಿಗಾಗಿ ಕೇವಲ ಸಾಮಾಜಿಕ ಮಾಧ್ಯಮಗಳನ್ನು ಅವಲಂಬಿಸದೆ ಜನರ ಮಧ್ಯೆ ಜೀವಿಸುವ ಹಾಗು ಆ ಮೂಲಕ ತಮ್ಮ ನಿಲುವುಗಳನ್ನು ತಿದ್ದಿಕೊಂಡು, ಅಭಿಪ್ರಾಯಗಳನ್ನು ಸ್ಪಷ್ಟವಾಗಿ ದಾಖಲಿಸುವ ಜವಾಬ್ದಾರಿ ನಮ್ಮೆಲರದ್ದು.

– ಡಾ. ಸರಸ್ವತಿ ಕೆ. ಬಿ

(ಈ ಪತ್ರಿಕೆಯಲ್ಲಿ ಪ್ರಕಟವಾದ ಎಲ್ಲಾ ಅಭಿಪ್ರಾಯಗಳು, ಆಯಾ ಲೇಖಕರ ಸಂಶೋಧನೆ, ಅಧ್ಯಯನಗಳಾಗಿರುತ್ತವೆ. ಆದ್ದರಿಂದ ಲೇಖನದ ಹಕ್ಕನ್ನು ಆಯಾ ಲೇಖಕರು ಹೊಂದಿರುತ್ತಾರೆ. ಪ್ರಕಟಣೆಯ ಹಕ್ಕನ್ನು ಪತ್ರಿಕೆಗೆ ನೀಡಿರುತ್ತಾರೆ.)

ISSN : 2320-9941
Linking ISSN (ISSN-L): 2320-9941
Key-title: Prathispandha
Title proper: Prathispandha.
Country: India
Medium: Print
Last modification date: 01/09/2014
Type of record: Confirmed
ISSN Center responsible of the record: ISSN National Centre for India

For all potential issues concerning this bibliographic record (missing or wrong data etc.), please contact the ISSN National Centre mentioned above by clicking on the link.

ಸಲಹಾ ಮಂಡಳಿಯ ಅಭಿಪ್ರಾಯಗಳು :

ಪ್ರತಿಸ್ಪಂದ ಪತ್ರಿಕೆಯು ಬರಹಗಾರರಿಗೆ ಉತ್ತಮ ವೇದಿಕೆಯನ್ನು ಒದಗಿಸಿ ಕೊಟ್ಟಿದೆ. ಜಾನಪದ, ವಚನ ಸಾಹಿತ್ಯ, ಆಧುನಿಕ ಸಾಹಿತ್ಯದ ಬೇರೆ ಬೇರೆ ಕಾಲಘಟ್ಟಗಳಲ್ಲಿ ನಿರ್ವಚನಗೊಂಡಿರುವ ಸಾಹಿತ್ಯ ಕೃತಿಗಳು, ಶರಣರು, ದಾರ್ಶನಿಕರು ಮತ್ತು ಆಧುನಿಕ ಕವಿಗಳ ಕೃತಿಗಳನ್ನು, ಅವರ ಚಿಂತನೆಯನ್ನು ವೈಜ್ಞಾನಿಕವಾಗಿ ಮತ್ತು ವೈಚಾರಿಕವಾಗಿ ಸಮಾಜಕ್ಕೆ ಪರಿಚಯಿಸುವ ಕೆಲಸವನ್ನು ಲೇಖಕರು ಮಾಡುತ್ತಿರುವುದು ನಿಜಕ್ಕೂ ಶ್ಲಾಘನೀಯವಾದದ್ದು. ಸಮಾಜ ನೈತಿಕ ತಳಹದಿಯ ಮೇಲೆ ನಿಲ್ಲಬೇಕಾದರೆ ಸೃಜನಶೀಲ ಬರವಣಿಗೆ ಸದಾ ದಾರಿ ದೀವಿಗೆಯಾಗುತ್ತದೆ ಎಂಬುದರಲ್ಲಿ ಎರಡು ಮಾತಿಲ್ಲ. ಸಂಪಾದಕರಿಗೆ ಸಲಹಾ ಮಂಡಳಿಗೆ ಮತ್ತು ಲೇಖಕರಿಗೆ ಕೃತಜ್ಞತಾ ಪೂರ್ವಕ ಧನ್ಯವಾದಗಳು.

– ಡಾ.. ಗೋವಿಂದರಾಯ ಎಂ

ಪರಿವಿಡಿ INDEX

1. ವರ್ತಮಾನದ ಬೆಳಗು
– **ಡಾ. ಎ. ರಘುರಾಂ** **01**

2. 'ಗೊಲ್ಲ' ಸಮುದಾಯದ ವ್ಯಕ್ತಿನಾಮಗಳು
– **ಡಾ. ನಟರಾಜು ಜೆ. ಆರ್.** **07**

3. ರನ್ನನ ಕಾವ್ಯದಲ್ಲಿ 'ಸ್ತ್ರೀ' ರೂಪಕ ದ್ರೌಪದಿ
– **ಕಾವ್ಯ ಕೆ.** **13**

4. ತಂತ್ರಜ್ಞಾನ ಕ್ಷೇತ್ರದಲ್ಲಿ ಕನ್ನಡದ ಪ್ರಸ್ತುತತೆ
– **ನವೀನ್ ಕುಮಾರ್ ಸಿ.** **20**

5. ನಾಗತಿಹಳ್ಳಿ ಚಂದ್ರಶೇಖರರ ಕಥೆಗಳಲ್ಲಿ ಪ್ರೀತಿ ಪ್ರೇಮ ಪ್ರಣಯ–ಕಾಮ
– **ಡಾ. ಬಸಯ್ಯ ಸ್ವಾಮಿ** **25**

6. ಪಂಪನು ನಿರೂಪಿಸುವ ಅಧಿಕಾರ ಚಿಂತನೆ
– **ಡಾ. ರತ್ನಮಂಜರಿ ಕೆ.ಜಿ** **43**

7. ಆಧುನಿಕ ವಚನಗಳ ಸಾಂಸ್ಕೃತಿಕ ಅಧ್ಯಯನ
– **ಡಾ. ಜಿ. ಬಿ. ಮಹೇಶ್ವರಿ** **56**

8. ಜೀತಗಾರಿಕೆಯ ಕತ್ತಲಿಗೆ, ಸಂವಿಧಾನ ತತ್ವವೇ ಬೆಳಕು
– **ಕೆ.ಎನ್. ನಂದೀಶ** **63**

9. ಭುವನದ ಭಾಗ್ಯವಿದು
– **ಕುಸುಮ ಬಿ.ಎಂ.** **68**

10. ಚಿತ್ರದುರ್ಗ ನಾಯಕರ ತೆರಿಗೆ ವ್ಯವಸ್ಥೆ : ಚಾರಿತ್ರಿಕ ನೋಟ
– **ಡಾ. ಕುಮಾರ ಎನ್.** **73**

11. ತತ್ವಪದ : ಪೂರ್ವ ಚಿಂತನೆಗಳು
– **ಡಾ. ರವಿಶಂಕರ್ ಎ.ಕೆ.** **88**

12. ಮಹಿಳಾ ತತ್ವಪದಗಳಲ್ಲಿ ಪ್ರಭುತ್ವದ ವಿಡಂಬನೆ
– **ಡಾ. ಈರಪ್ಪ ಪೂಜಾರ** **109**

13. ಸಾಲೋಟಗಿ ಶಿವಯೋಗಿಶ್ವರರ ಸಾಂಸ್ಕೃತಿಕ ಸ್ವರೂಪ
– **ಡಾ.ಪ್ರಹ್ಲಾದ ಡಿ.ಎಂ.** **120**

14. ಬಸವಣ್ಣನವರ ವಚನಗಳಲ್ಲಿ ಪ್ರಾಣಿ ಪ್ರತಿಮೆಗಳು: ಒಂದು ತಾತ್ವಿಕ ವಿಶ್ಲೇಷಣೆ – **ಡಾ. ಸುಮಂಗಲಾ ಎನ್. ರೆಡ್ಡಿ** **138**

15. ಪಶುಪಾಲನೆ ನಿರ್ವಹಣೆಯಲ್ಲಿ ಪಶುಸಖಿಯರ ಪಾತ್ರ
– ಡಾ. ಮೇಘನ ಜಿ. **143**

16. ಸಾಮಾಜಿಕ ಪ್ರಜ್ಞೆಯ ಹಿನ್ನಲೆಯಲ್ಲಿ 'ಪುರಂದರದಾಸರು'
– ಅಭಿಜಿತ್ ಬಿ. **156**

17. ವಚನ ಸಾಹಿತ್ಯದಲ್ಲಿ ಕಾಯಕದ ಪರಿಕಲ್ಪನೆ
– ಕವನ ಕೆ. **160**

18. 'ಹೊಸಗನ್ನಡ ನುಡಿಗನ್ನಡಿ ಎಂಬ ಹೊಸಗನ್ನಡ ವ್ಯಾಕರಣವು' ಅವಲೋಕನ
– ಸುಂದ್ರೇಶ್ ಕೆ.ಎಸ್. **164**

19. ಉನ್ನತ ಶಿಕ್ಷಣದಲ್ಲಿ ಖಿನ್ನತೆಯ ಪ್ರವೃತ್ತಿಗಳು: ವಯಸ್ಸು, ಲಿಂಗ ಮತ್ತು ಶೈಕ್ಷಣಿಕ ಪ್ರಮುಖ ಪಾತ್ರಗಳು
– ಡಾ. ವಿಜಯಾ ಯು. ಪಾಟೀಲ **169**

20. ತಂತ್ರಜ್ಞಾನ ಕ್ಷೇತ್ರದಲ್ಲಿ 'ಕನ್ನಡದ ಪ್ರಸ್ತುತತೆ' ಒಂದು ವಿವೇಚನೆ
– ಡಾ. ಗುರುಸ್ವಾಮಿ ಹಿರೇಮಠ **182**

21. Cross-Cultural Identity and Cultural Conflict in the Novels of Chinua Achebe: Things Fall Apart and No Longer at Ease
- Shivanand Bande, Shrujala R 191

22. The Migrant's Gaze and Translated Urbanity: Reinterpreting Mumbai in Jayant Kaikini's No Presents Please
- Shrujala R 199

23. Cultural Translation and Intercultural Exchange in Ngugi wa Thiong'o's Petals of Blood and Wizard of the Crow
- Shivanand Bande 206

24. Narratives Of Control: Psychoanalysis, Power, And Language In The Crime Fiction Writings Of Thomas Harris
- Naveen Kumar Gowda Y E, Dr. Pritha Sanyal 213

ವರ್ತಮಾನದ ಬೆಳಗು

ಡಾ.ಎ.ರಘುರಾಂ
ಪ್ರಾಧ್ಯಾಪಕರು, ಕನ್ನಡ ವಿಭಾಗ,
ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ,
ಶೇಷಾದ್ರಿರಸ್ತೆ, ಬೆಂಗಳೂರು
– 560 001

1

ಪ್ರಮುಖ ಪದಗಳು
ವಚನಗಳು, ಸೃಷ್ಟಿ,
ಆಚಾರ ಸಂಹಿತೆ, ರೂಪಕ,
ಸಾಮಾಜಿಕ ಮೌಲ್ಯಗಳು.

ಭಾರತೀಯ ಸಾಹಿತ್ಯದಲ್ಲಿ 'ವಚನ ಕ್ರಾಂತಿ'ಗೆ ತನ್ನದೇ ಆದ ಮಹತ್ವವಿದೆ. ವಚನಗಳು ಬರೀ ಸಾಹಿತ್ಯ ಮಾತ್ರವಲ್ಲ. ಆಂದೋಲನವನ್ನು ಹುಟ್ಟು ಹಾಕುತ್ತಲೇ ಒಂದು ಸ್ವಚ್ಛ ಸಮಾಜ ನಿರ್ಮಾಣದ ಕಾಳಜಿಯನ್ನು ಹೊಂದಿದ ಕಾರಣದಿಂದಲೇ ಇಂದಿಗೂ ಜನ ಮನ್ನಣೆಯನ್ನು ಪಡೆದಿವೆ. ಬದುಕನ್ನು ಮುನ್ನಡೆಸುವ ಅಂಕುಶಗಳಾಗಿವೆ. ಪ್ರೀತಿ, ಭಕ್ತಿ, ಆತ್ಮವಿಶ್ವಾಸ, ನೈತಿಕತೆ, ವೈಚಾರಿಕತೆ ಹೀಗೆ ಹತ್ತಾರು ಅಂಶಗಳು ವಚನಕಾರರಲ್ಲಿವೆ. ಪರಮಾತ್ಮನೇ ಸರ್ವಸ್ವ. ಅವನಿಗೆ ಎಲ್ಲ ರೀತಿಯಿಂದ ಅರ್ಪಿಸಿಕೊಂಡ ನಿಜಭಕ್ತನೇ ಶರಣ. 'ಶರಣು' ಎಂಬ ಪದ ವಿನಯವಂತಿಕೆಯನ್ನು ಪ್ರಕಟಿಸುತ್ತದೆ. ದೈವ ಪೂರ್ಣ, ತಾನು ಅಪರಿಪೂರ್ಣ ಎಂಬ ಭಾವನೆ ಇಲ್ಲಿದೆ. ಅನುಕ್ಷಣವೂ ಪೂರ್ಣತ್ವಕ್ಕಾಗಿ ಹಂಬಲಿಸುವವ ಶರಣ. ತನ್ನ ಆತ್ಮದ ಅನುಸಂಧಾನದ ನುಡಿಗಳೇ ವಚನಗಳು. 'ವಚನ' ಎಂದರೆ ಬರೀ ಮಾತಲ್ಲ. ಅದೊಂದು ದಿಬ್ಯ. 'ವಚನಕೊಡು' ಎಂಬ ಸಾಮಾನ್ಯ ಆಡುಮಾತಿನ ಸಂದರ್ಭವನ್ನು ಕಾಯಾ, ವಾಚಾ, ಮನಸಾ ಪರಿಭಾವಿಸಿದವರು ವಚನಕಾರರು.

ವಚನಗಳು ಸಾಮಾಜಿಕ ಬದುಕನ್ನು ಅರ್ಥವಾಡಿಕೊಳ್ಳಲು ವ್ಯಾಖ್ಯಾನಿಸಿದ ಬದುಕಿನ ರೂಪಕಗಳಾಗಿವೆ. ಕವಿಗಳನ್ನು

ದ್ರಷ್ಟಾರರು ಎಂದು ಕರೆದಿರುವುದು ಈ ಅರ್ಥದಲ್ಲಿಯೇ. ಅರವಿಂದರು 'The greatest poetry gives expression to the realization of the divine in the world and in man' ಎಂದಿದ್ದಾರೆ. ವಚನಗಳು ಜೀವನದ ಬೆಳಗನ್ನು ಅರಿಯವ ಸಾಧನಗಳಾಗಿವೆ. ಭಾವ, ತರ್ಕ, ವಿಡಂಬನೆ ಹೀಗೆ ಅನೇಕ ಸಂಗತಿಗಳನ್ನು ತಮ್ಮಲ್ಲಿಟ್ಟುಕೊಂಡು ಬದುಕಿನ ಪರಮಸತ್ಯಗಳನ್ನು ಅರಿಯುವುದೇ ವಚನಕಾರರ ನಿಲುವಾಗಿತ್ತು. ವಚನಗಳು ತತ್ಕಾಲೀನ ಬಿಕ್ಕಟ್ಟುಗಳಿಗೆ ನೀಡಿದ ಪ್ರತಿಕ್ರಿಯೆಗಳಾದರೂ ಎಲ್ಲ ಕಾಲಕ್ಕೂ ದಾರಿದೀಪವಾಗಬಲ್ಲವು. ವಚನಗಳ ಮೂಲಕ ಅಧ್ಯಾತ್ಮದ ಅನುಸಂಧಾನ ಬಯಸಿದರಾದರೂ ಸೃಷ್ಟಿ ಹಾಗೂ ಸೃಷ್ಟಿಯ ಜೊತೆಗಿನ ಬದುಕನ್ನು ಮರೆಯಲಿಲ್ಲ. ವಚನ ಸಾಹಿತ್ಯದ ದೈತ್ಯ ಪ್ರತಿಭೆಯಾದ ಅಲ್ಲಮ ಸೃಷ್ಟಿ ಹಾಗೂ ಸೃಷ್ಟಿಕರ್ತನ ಸಂಬಂಧವನ್ನು ಬಹು ಮಾರ್ಮಿಕವಾಗಿ ಕಟ್ಟಿದ್ದಾನೆ.

ಸಮುದ್ರದೊಳಗೆ ನೆರೆದೊರೆಗಳು ನೆಗಳ್ದವೆಂದರೆ
ಸಮುದ್ರದಿಂದನ್ಯವಪ್ಪವೇ?
ನಿರ್ವಿಕಾರ ನಿತ್ಯ ನಿರಂಜನ ನಿರ್ಗುಣ ಪರಿಪೂರ್ಣ ನಿರ್ವಿಕಲ್ಪ
ಪರಬ್ರಹ್ಮ ಶಿವನಿಂದ ಜಗತ್ತುದಯಿಸಿತ್ತೆಂದಡೆ
ಶಿವನಿಂದನ್ಯವೆನ್ನಬಹುದೇ?
ಇಂತಪ್ಪ ಅರಿವ ನೀವು ಕೊಟ್ಟು
ಸಂಯಜ್ಞಾನಕಂದೆದಿಪ್ಪುದಯ್ಯಾ ಗುಹೇಶ್ವರಾ.

ಸಮುದ್ರದಿಂದ ತೆರೆಗಳೆದ್ದರೂ ವಾಸ್ತವದಲ್ಲಿ ಸಮುದ್ರದ ಭಾಗವೇ ಆಗಿರುತ್ತವೆ. ಸಮುದ್ರದ ತರಂಗಗಳನ್ನೆಲ್ಲ ತನ್ನಲ್ಲಿ ಸುಪ್ತವಾಗಿರಿಸಿಕೊಂಡು ನಿರ್ವಿಕಲ್ಪವಾಗಿರುತ್ತದೆ. ಶಬ್ದ ಮತ್ತು ನಿಶ್ಯಬ್ದದ ಸಂಬಂಧ ಸೃಷ್ಟಿ ಮತ್ತು ಸೃಷ್ಟಿಕರ್ತನ ಸಂಬಂಧ ಎಂದಿದ್ದಾನೆ.

ಮರೀಚಿಯೊಳಗಣ ಬಿಸಿಲಿನಂತೆ ಇದ್ದಿತ್ತು
ಕ್ಷೀರದೊಳಗಣ ತುಪ್ಪದಂತೆ ಇದ್ದಿತ್ತು
ಚಿತ್ರಕನೊಳಡಗಿದ ಚಿತ್ರದಂತೆ ಇದ್ದಿತ್ತು
ಆಲಿಯೊಳಡಗಿದ ತೇಜದಂತೆ ಇದ್ದಿತ್ತು
ನುಡಿಯೊಳಡಗಿದ ಅರ್ಥದಂತೆ ಇದ್ದಿತ್ತು
ಕೂಡಲ ಚಿನ್ನಸಂಗಯ್ಯ ನಿಮ್ಮ ನಿಲವು.

ಅವ್ಯಕ್ತವಾಗಿರುವ ದೈವ ಸ್ವರೂಪವನ್ನು ಅರ್ಥಮಾಡಿಕೊಳ್ಳುವ ಸಾಹಸ ಇಂದು ನೆನ್ನೆಯದಲ್ಲ. ನುಡಿಯೊಳಗಿನ ಅರ್ಥದಂತೆ, ಕ್ಷೀರದೊಳಗಿನ ತುಪ್ಪದಂತೆ

ಎಂದು ಹೇಳುತ್ತ ಮನುಷ್ಯನ ವ್ಯರ್ಥ ಹುಡುಕಾಟಕ್ಕೆ ಉತ್ತರಿಸಿದ್ದಾನೆ ಚೆನ್ನಬಸವಣ್ಣ.

ವಚನಗಳು ಧಾರ್ಮಿಕ, ಸಾಮಾಜಿಕ, ಆರ್ಥಿಕ, ರಾಜಕೀಯ, ವೈಚಾರಿಕ ಹೀಗೆ ಹತ್ತಾರು ನೆಲೆಗಳನ್ನು ಪಡೆದಿವೆ. ಪ್ರಸ್ತುತ ನಾವು ಎದುರಿಸುತ್ತಿರುವ ಜಾತಿಭೇದ, ವರ್ಣಭೇದ, ವರ್ಗಸಂಘರ್ಷ, ಲಿಂಗಭೇದ, ದೀನ ದಲಿತರ ಶೋಷಣೆ, ಧಾರ್ಮಿಕ ಕಲಹ, ಆರ್ಥಿಕ ಸಂಘರ್ಷ, ರಾಜಕೀಯ ವೈಷಮ್ಯ, ಬೌದ್ಧಿಕ ದಾಸ್ಯ, ನೈತಿಕ ಅಧಃಪತನ ಇತ್ಯಾದಿ ನಮ್ಮ ಸಂದರ್ಭದ ತಲ್ಲಣಗಳಿಗೆ ಕಾರಣವಾಗಿರುವ ಸಮಸ್ಯೆಗಳಿಗೆ ವಚನಗಳು ಪರಿಹಾರ ಸೂಚಿಸುವ ಸನ್ನೆಗೋಲುಗಳಾಗಿವೆ. ಅವುಗಳನ್ನು ಅರಿಯುವ ತಾಳ್ಮೆ ನಮಗಿರಬೇಕಷ್ಟೆ. ನಮ್ಮ ಬದುಕು ಎಷ್ಟು ಅಸಹನೀಯವಾಗಿದೆಯೆಂದರೆ ಪರಸ್ಪರ ಗುಮಾನಿಯಿಂದ ಬದುಕುತ್ತಿದ್ದೇವೆ. ದಯೆ, ಕರುಣೆ, ಅನುಕಂಪಗಳನ್ನು ಕಳೆದುಕೊಂಡು ಯಂತ್ರಗಳಾಗಿದ್ದೇವೆ. ಮನುಷ್ಯ ಮನುಷ್ಯನನ್ನೇ ಕೊಲ್ಲುವ ಮಾರ್ಗದತ್ತ ಹೋಗುತ್ತಿರುವುದು ವಿಪರ್ಯಾಸದ ಸಂಗತಿ. ಈಗ ನಮ್ಮೆದುರು ನಡೆಯುತ್ತಿರುವ ಮಧ್ಯ ಏಷ್ಯಾದ ಮಾರಣಹೋಮ ನೋಡಿದರೆ ಗೊತ್ತಾದೀತು ಸಾಮ್ರಾಜ್ಯಶಾಹಿ ಮನಸ್ಸು ಎಂಥದ್ದು ಎಂದು. ಆದರ್ಶವಾದಿಗಳು ಎಂದು ಹೇಳುತ್ತಲೇ ಜನವಿರೋಧಿಗಳಾಗುತ್ತಿದ್ದೇವೆ. ಸಾಮಾಜಿಕ ಮೌಲ್ಯಗಳನ್ನು ಕ್ಷಣಕ್ಷಣಕ್ಕೂ ಉಸಿರುಗಟ್ಟಿ ಸಾಯಿಸುತ್ತಿದ್ದೇವೆ. ವಿಜ್ಞಾನ ಯುಗದಲ್ಲಿ ಎಲ್ಲವನ್ನು ಗೆಲ್ಲಲು ಹೊರಟಿದ್ದೇವೆ. ಆದರೆ ಏನೆಲ್ಲ ಗೆದ್ದರೂ ಸಾವನ್ನು ಮಾತ್ರ ಗೆಲ್ಲಲಾಗಲಿಲ್ಲ. ಸತ್ಯ, ಶಾಂತಿ, ಸಹನೆ, ಸಹಬಾಳ್ವೆ, ತ್ಯಾಗ ಎಂಬ ಶಬ್ದಗಳು ಅರ್ಥ ಕಳೆದುಕೊಳ್ಳತೊಡಗಿವೆ. ಇಂದು ಇರುವುದಕ್ಕಿಂತ ಹೆಚ್ಚೇ ತಲ್ಲಣಗಳು ಅಂದು ಇದ್ದವು. ಇಂದು ನಮ್ಮನ್ನು ನಿಯಂತ್ರಿಸಿಕೊಳ್ಳಲು ಕಾನೂನುಗಳಾದರೂ ಇಂದು ಇವೆ. ವಚನಕಾರರು 'ಅನುಭವಮಂಟಪ' ಎಂಬ ಚರ್ಚಾ ವೇದಿಕೆಯೊಂದನ್ನು ಕಟ್ಟಿಕೊಂಡು ಪೂರ್ಣಸತ್ಯವನ್ನರಸಲು ಕಾಯಾ, ವಾಚಾ, ಮನಸಾ ಮುನ್ನುಗ್ಗಿದರು. ತಮಗೆ ತಾವೇ ಆಚಾರ ಸಂಹಿತೆಯನ್ನು ರೂಪಿಸಿಕೊಂಡು ಮುನ್ನಡೆದರು. 'ಆಚಾರ ಸಂಹಿತೆ'ಯನ್ನು ರೂಪಿಸಿ ಅದರಂತೆ ನಡೆಯುವುದು ಸುಲಭದ ಮಾತೇನಲ್ಲ ಎಂದು ಎಲ್ಲರಿಗೂ ಗೊತ್ತಿರುವ ಸಂಗತಿಯೇ ಆಗಿದೆ. ನಮ್ಮ ಸ್ವಾಸ್ಥ್ಯವನ್ನು ಅಷ್ಟಮದಗಳು ಹದಗೆಡಿಸುತ್ತವೆ ಎಂದಿದ್ದಾರೆ. ಇಂದೂ ಕೂಡ ಈ ಮದಗಳೇ ರಾಡಿ ಮಾಡುತ್ತಿಲ್ಲವೆ? ಮನುಷ್ಯನು 'ಕಾಮ'ವೆಂಬ ವ್ಯಾಮೋಹಕ್ಕೆ ಸಿಲುಕಿ 'ಏಯ್ಡ್ಸ್'ನಂತಹ ಮಹಾಮಾರಿಯನ್ನು ತಂದುಕೊಂಡು ವಿಜ್ಞಾನ ಯುಗದಲ್ಲೂ ಕೂಡ ಅಸಹಾಯಕನಾಗಿ ಕೈಚೆಲ್ಲಿ ಕುಳಿತಿದ್ದಾನೆ. ಈ ಶರೀರ ಒಂದು ವ್ಯಾಮೋಹಕ್ಕೆ ಒಳಗಾಯಿತೆಂದರೆ ಅದರ ಬೆನ್ನ ಹಿಂದೆ ಇನ್ನೂ ಅನೇಕ ಹಿಂಡು ಹಿಂಡು ಖಾಯಿಲೆಗಳು ಹಿಂಬಾಲಿಸಿಬಿಡುತ್ತವೆ.

ಇದನ್ನು ಅಲ್ಲಮ ಸೊಗಸಾಗಿ ಹೇಳಿದ್ದಾನೆ.

ಎಸೆಯದಿರು ಎಸೆಯದಿರು ಕಾಮ
ನಿನ್ನ ಬಾಣ ಹುಸಿಯಲೇಕೋ
ಕಾಮ ಕ್ರೋಧ ಲೋಭ ಮೋಹ
ಮದ ಮತ್ಸರ ಇವು ಸಾಲದೇ ನಿನಗೆ?
ಗುಹೇಶ್ವರ ಲಿಂಗದ ವಿರಹದಲ್ಲಿ ಬೆಂದವರ
ಮರಳಿ ಸುಡಲುಂಟೆ ಮರುಳ ಕಾಮ

ಯಾವುದೇ ವ್ಯಾಮೋಹ ದೂರವಾಗಬೇಕಾದರೆ 'ಮನಸ್ಸು' ಮುಖ್ಯ. ಮನಸ್ಸು ಬಹುದೊಡ್ಡ ಶಕ್ತಿ. ಅದನ್ನು ಸದಾಚಾರವೆಂಬ ಸೋಪಾನದಲ್ಲಿ ಬಂಧಿಸಬೇಕು. ಹೀಗೆ ಸೋಪಾನದಲ್ಲಿರಿಸುವ ಬಗೆಯನ್ನು ಅಲ್ಲಮ ಬಹು ಚೆನ್ನಾಗಿ ಹೇಳಿದ್ದಾನೆ.

ತನುವೆಂಬ ಏರಿಗೆ ಮನವೆಂಬ ಕಟ್ಟೆ
ಆಚಾರವೆಂಬ ಸೋಪಾನ
ಪರಮಾನಂದವೆಂಬ ಜಲವ ತುಂಬಿ
ಕೆರೆಯ ಕಟ್ಟಬಲ್ಲವರನಾರನೂ ಕಾಣೆ
ನಾ ಕಟ್ಟಿದ ಕೆರೆ ಸ್ಥಿರವಾಯಿತ್ತು ಗುಹೇಶ್ವರಾ ನಿಮ್ಮಾಣೆ

'ಕೆರೆ' ಸ್ಥಿರವಾಗುವ ರೂಪಕ. ಬಸವಣ್ಣನು 'ಸುಬುದ್ಧಿ' ಎಂಬ ಉದಕವನ್ನೆರೆದು ವಿಷಯ ದೂರಮಾಡಬೇಕು ಎನ್ನುತ್ತಾನೆ.

ವಿಷಯವೆಂಬ ಹಸುರೆನ್ನ ಮುಂದೆ ಪಸರಿಸಿದಿರಯ್ಯಾ
ಪಶುವೇನಬಲ್ಲದು ಹಸುರೆಂದೆಳಸುವುದು
ವಿಷಯರಹಿತನಮಾಡಿ ಭಕ್ತಿರಸವ ದಣಿಯ ಮೇಯಿಸಿ
ಸುಬುದ್ಧಿಯೆಂಬುದಕವನೆರೆದು
ನೋಡಿ ಸಲಹಯ್ಯಾ ಕೂಡಲಸಂಗಮದೇವಾ

ವಿಷಯರಹಿತನಾಗುವುದು ಅಷ್ಟು ಸುಲಭವಲ್ಲ. ಮನಸ್ಸಿನ ನಿಯಂತ್ರಣ ಸುಲಭ ಸಾಧ್ಯವಲ್ಲ ಎಂದು ಬಸವಣ್ಣನಿಗೆ ಗೊತ್ತಿದೆ. ಅದರ ಪ್ರಯತ್ನ ಮತ್ತೂ ಮುಂದುವರೆಯುತ್ತದೆ. ಆ ವಚನ ಹೀಗಿದೆ.

ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯಾ ತಂದೆ
ಸುತ್ತಿ ಸುಳಿದು ನೋಡದಂತೆ ಅಂಧಕನ ಮಾಡಯ್ಯಾ ತಂದೆ
ಮತ್ತೊಂದ ಕೇಳದಂತೆ ಕಿವುಡನ ಮಾಡಯ್ಯಾ ತಂದೆ

ನಿಮ್ಮ ಶರಣರ ಪಾದವಲ್ಲದೆ
ಅನ್ಯ ವಿಷಯಕ್ಕೆಳಸದಂತೆ ಇರಿಸು ಕೂಡಲಸಂಗಮದೇವಾ

'ಮನಸ್ಸು' ಮರ್ಕಟವಿದ್ದಂತೆ. ಅಲ್ಲಮ, ಬಸವಣ್ಣ 'ಮನಶುದ್ಧಿ'ಯೂ ಒಂದು ಆಚಾರವಾಗಬೇಕು ಎಂದಿದ್ದಾರೆ. ಮಡಿವಾಳ ಮಾಚಯ್ಯ ವಚನ ರಚನೆ ತಿಳಿದ ಮಾತ್ರಕ್ಕೆ ರಂಜಕರೆಲ್ಲ ಭಕ್ತರಾಗಲು ಸಾಧ್ಯವೆ ಎಂದು ಪ್ರಶ್ನಿಸಿದ್ದಾರೆ. ವಚನ ರಚನೆಯ ನುಡಿವ ಬಯಲು ರಂಜಕರೆಲ್ಲ ಭಕ್ತರಪ್ಪರೆ

ಅಯ್ಯಾ ವಚನ ತನ್ನಂತಿರದು, ತಾನು ವಚನದಂತಿರೆ
ಅದೆಂತೆಂದೆಡೆ ತನುಮನಧನವನೆಲ್ಲ ಹಿಂದಿಟ್ಟುಕೊಂಡು
ಮಾತಿನ ಬಣವೆಯ ಮುಂದಿಟ್ಟುಕೊಂಡು
ಒಡೆಯನ ಕಂಡು ನಾಯಿ ಬಾಲವ ಬಡಿದುಕೊಂಬಂತೆ
ಆ ತೆರನಾಯಿತೆಂದು ಕಲಿದೇವರ ದೇವಯ್ಯ

'ವಚನ ತನ್ನಂತಿರದು, ತಾನು ವಚನದಂತಿರೆ' ಎಂಬ ಮಾತು ಇಡೀ ವಚನ ಪರಂಪರೆಯನ್ನು ಪ್ರತಿನಿಧಿಸುತ್ತದೆ. 'ಬಾಳೆಗೆ ಒಂದು ಗೊನೆ, ಬಾಳುವವನಿಗೆ ಒಂದು ಮಾತು' ಎಂಬ ನಾಣ್ಣುಡಿಯನ್ನು ಮತ್ತೆ ಮತ್ತೆ ನೆನಪಿಸುತ್ತದೆ. ನಾವು ಬದುಕುವ ಬದುಕು ಇನ್ನೊಬ್ಬರನ್ನು ಮೆಚ್ಚಿಸುವುದಕ್ಕಲ್ಲ. ನಮ್ಮ ಬದುಕು 'ತನು ಮನ ಧನ'ವನ್ನು ಹಿಂದೆ ಸರಿಸಿ ಬರೀ ಮಾತಿನ ಬಣವೆ ಕಟ್ಟುವ ಪರಿ ಇಲ್ಲಿ ವಿಡಂಬಿಸಲ್ಪಟ್ಟಿದೆ. ಮಾತಿನ ಬಗ್ಗೆ ಬಸವಣ್ಣ 'ನುಡಿದರೆ ಮುತ್ತಿನ ಹಾರದಂತಿರಬೇಕು, ಮಾಣಿಕ್ಯದ ದೀಪ್ತಿಯಂತಿರಬೇಕು, ಸ್ಫಟಿಕದ ಸಲಾಕೆಯಂತಿರಬೇಕು' ಎಂದು ಹೇಳಿರುವುದು ಕೂಡ ನಮ್ಮ ನುಡಿ ಲಜ್ಜೆಯಿಲ್ಲದಂತೆ ಇರುವುದನ್ನೇ ಪ್ರಶ್ನೆಸುತ್ತಿದೆ. ಬಿಜ್ಜಳ ಮತ್ತು ಬಸವಣ್ಣ ಇವರ ನಡುವೆ ನಡೆಯುವ ಮಾತುಗಳನ್ನು ರಾಜಕೀಯಗೊಳಿಸಿ ಇಡೀ ವ್ಯವಸ್ಥೆಯನ್ನು ಭ್ರಷ್ಟಗೊಳಿಸುವುದನ್ನು ಬಸವಣ್ಣ ವಿರೋಧಿಸಿದ್ದಾನೆ. ಇದೊಂದು ಆತ್ಮ ಪರೀಕ್ಷೆಯ ನೆಲೆಯೂ ಆಗಿದೆ. ದುಡಿಯಲು ಬಿಜ್ಜಳನ ಮಂತ್ರಿ ಪದವಿಯೇ ಬೇಕಿಲ್ಲ. ಹೊಲೆಯರ ಮನೆಯಲ್ಲಿ ಕೈಕೂಲಿ ಮಾಡಿಯಾದರೂ ಬದುಕುವೆ ಎನ್ನುತ್ತಾನೆ ಬಸವಣ್ಣ.

ಭವಿ ಬಿಜ್ಜಳನ ಗದ್ದುಗೆಯ ಕೆಳಗೆ ಕುಳ್ಳಿರ್ದು
ಓಲೈಸಿಹನೆಂದು ನುಡಿವರಯ್ಯ ಪ್ರಮಥರು
ಕೊಡುವೆನುತ್ತರವನವರಿಗೆ ಕೊಡಲಮ್ಮೆ
ಪ್ರತ್ಯುತ್ತರ ನಾಯಕ ನರಕವೆಂಬುದಾಗಿ
ಹೊಲೆ ಹೊಲೆಯರ ಮನೆಯ ಹೊಕ್ಕಾದರೆಯು

ಸಲೆ ಕೈಕೂಲಿಯ ಮಾಡಿಯಾದರೆಯು
ನಿಮ್ಮ ನಿಲವಿಂಗೆ ಕುದಿವೆನಲ್ಲದೆ
ಎನ್ನ ಒಡಲವಸರಕ್ಕೆ ಕುದಿವೆನಲ್ಲದೆ
ಎನ್ನ ಒಡಲವಸರಕ್ಕೆ ಕುದಿದೆನಾದರೆ
ತಲೆದಂಡ ಕೂಡಲಸಂಗಮದೇವಾ.

ಮಂತ್ರಿಗಿರಿಯನ್ನು ಉಳಿಸಿಕೊಳ್ಳಲು ಬಿಜ್ಜಳನನ್ನು ಓಲೈಸುವ ಪ್ರಶ್ನೆಯೇ ಇಲ್ಲ. ನನ್ನ ನಿಲವು ಎಂದೂ ಮಲಿನವಲ್ಲ. ನಿಮ್ಮ ನಿಲವು ಎಂಥದ್ದು ಎಂದು ಪ್ರಶ್ನಿಸಿಕೊಳ್ಳಿ ಎಂದು ಹೇಳುತ್ತ ರಾಜಕಾರಣಿಯಾದವನ ನಿಲವು ಹೇಗಿರಬೇಕು ಎಂಬುದನ್ನು ಸ್ಪಷ್ಟವಾಗಿ ಹೇಳಿದ್ದಾರೆ. 'ಒಡಲವಸರಕ್ಕೆ'ಕುದಿವ ಬಗೆಯ ರಾಜಕಾರಣಿ ನಾನಲ್ಲ ಎಂಬುದನ್ನು ಸಾರ್ವಜನಿಕರಿಗೆ ಸ್ಪಷ್ಟವಾಗಿ ಹೇಳುತ್ತಾರೆ.

ಹೊತ್ತಾರೆಯೆದ್ದು ಕಣ್ಣ ಹೊಸೆಯುತ್ತ
ಎನ್ನ ಒಡಲಿಂಗೆ, ಎನ್ನ ಒಡವೆಗೆ,
ಎನ್ನ ಮಡದಿ ಮಕ್ಕಳಿಗೆ ಕುದಿದೆನಾದರೆ
ಎನ್ನ ಮನಕ್ಕೆ ಮನವೇ ಸಾಕ್ಷಿ ಕೂಡಲಸಂಗಮದೇವಾ

ಎಂದು ಬಸವಣ್ಣ ಸದಾ ಸಂಪತ್ತಿನ ಗಳಿಕೆಯ ಬಗ್ಗೆ ಯೋಚನೆ ಮಾಡುವ ಬಗೆಗೆ ಕೂಡ ಚಿಂತನೆ ಮಾಡಿದ್ದಾರೆ. ವಚನಗಳು ಕಾಯಾ, ವಾಚಾ, ಮನಸಾ ಪ್ರತಿಜ್ಞೆಯಾಗಿ ಬಳಕೆಯಾಗಿವೆ. ಇವು ಬರೀ ಸಾಲುಗಳಲ್ಲ. ಅವು ಬದುಕನ್ನು ಶುದ್ಧಗೊಳಿಸಲು ಮಾಡಿದ ಸಂವಾದಗಳಾಗಿವೆ. ಈ ಕಾರಣಕ್ಕಾಗಿಯೇ ನಾವು ವಚನ ಪರಂಪರೆಯನ್ನು 'ನಡೆ–ನುಡಿ' ಸಿದ್ಧಾಂತ ಎಂದು ಕರೆಯಲು ಸಾಧ್ಯವಾಗಿದೆ.

***

'ಗೊಲ್ಲ' ಸಮುದಾಯದ ವ್ಯಕ್ತಿನಾಮಗಳು

ಡಾ. ನಟರಾಜು ಜೆ. ಆರ್.
ಕನ್ನಡ ಅಧ್ಯಾಪಕರು, ಕನ್ನಡ ವಿಭಾಗ,
ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು,
ತುಮಕೂರು ವಿಶ್ವವಿದ್ಯಾನಿಲಯ,
ತುಮಕೂರು

1

ಪ್ರಮುಖ ಪದಗಳು
ಗೊಲ್ಲ ಸಮುದಾಯ, ಅಸ್ಮಿತೆ, ಬುಡಕಟ್ಟು, ಪುರುಷವಾಚಿ, ಸ್ತ್ರೀವಾಚಿ

ಹೆಸರು ಮನುಷ್ಯನ ಅಸ್ಮಿತೆಯನ್ನು ಕಟ್ಟಿಕೊಡುವ ಸಾಧನ. ಹಾಗಾಗಿ ಈ ಹೆಸರನ್ನು ಮನುಷ್ಯ ಉದ್ದೇಶ ಪೂರ್ವಕವಾಗಿಯೆ ಬಳಕೆ ಮಾಡುತ್ತಿದ್ದಾನೆ. ಹೆಸರನ್ನು ಆರಂಭದಲ್ಲಿ ಗುರುತಿಸಲು ಮಾತ್ರ ಬಳಸುತ್ತಿದ್ದರೆ, ಇಂದು ಹೆಸರು ಹಲವು ಹಿನ್ನೆಲೆಗಳನ್ನು ಒಳಗೊಂಡು ಬಳಕೆಯಾಗುತ್ತಿದೆ. ಹೆಸರು ಭಾವನಾತ್ಮಕ ಸಂಬಂಧವನ್ನು ಹೊಂದಿದ್ದು, ಧಾರ್ಮಿಕ ನಂಬಿಕೆಯ ಭಾಗವಾಗಿಯೂ ಬಳಕೆಯಾಗುತ್ತಿದೆ. ಜೊತೆಗೆ ವ್ಯಕ್ತಿ ಸಾಮಾಜಿಕವಾಗಿ ತನ್ನ ಅಸ್ಮಿತೆಯನ್ನು ಉಳಿಸಿಕೊಳ್ಳಲು ಬಳಸುತ್ತಿದ್ದಾನೆ. ಈ ಎಲ್ಲಾ ಹಿನ್ನೆಲೆಯಲ್ಲಿ ಹೆಸರು ಬಳಕೆಯಾಗುತ್ತಿದ್ದು, ಎಲ್ಲಾ ಜಾತಿಗಳಲ್ಲಿಯೂ ಈ ಪ್ರಕ್ರಿಯೆ ಕಂಡುಬರುತ್ತದೆ. ಪ್ರಸ್ತುತ ಅಧ್ಯಯನದಲ್ಲಿ ಗೊಲ್ಲ ಸಮುದಾಯದ ವ್ಯಕ್ತಿನಾಮಗಳನ್ನು ಕುರಿತು ವಿಶ್ಲೇಷಣೆ ಮಾಡಲಾಗುತ್ತಿದೆ. ಹಾಗೂ ತುಮಕೂರು ಮತ್ತು ಚಿತ್ರದುರ್ಗ ಪರಿಸರವನ್ನು ವ್ಯಾಪ್ತಿಯೆನ್ನಾಗಿ ಗುರುತಿಸಿಕೊಳ್ಳಲಾಗಿದೆ.

ಕರ್ನಾಟಕದ ಬುಡಕಟ್ಟು ಸಮುದಾಯಗಳಲ್ಲಿ ಗೊಲ್ಲ ಸಮುದಾಯ ಪ್ರಮುಖವಾದುದು. ಈ ಸಮುದಯವು ಆಧುನಿಕ ಸಂದರ್ಭದಲ್ಲಿ ಇತರೆ ಸಮುದಾಯಗಳೊಂದಿಗೆ ಬೆರೆತು

ಜೀವಿಸುತ್ತಿದ್ದರು. ಇವರು ಮೂಲ ಸಂಸ್ಕೃತಿಯನ್ನು ಇಂದಿಗೂ ಉಳಿಸಿಕೊಂಡು ಬಂದಿದೆ. ಈ ಸಮುದಾಯದವರು ತುಮಕೂರು ಪರಿಸರದಲ್ಲಿ ಬಹುಸಂಖ್ಯಾತರಾಗಿದ್ದು ರಾಜಕೀಯವಾಗಿಯೂ ನಿರ್ಣಾಯತ ಪಾತ್ರ ವಹಿಸಿದ್ದಾರೆ. ಈ ಸಮುದಾಯದ ಹೆಸರುಗಳು ಇತರೆ ಸಮುದಾಯದ ವ್ಯಕ್ತಿನಾಮಗಳಿಗಿಂತ ಭಿನ್ನವಾಗಿವೆ. ಅವರ ಹೆಸರುಗಳಿಂದ ಸುಲಭವಾಗಿ ಅವರನ್ನು ಗೊಲ್ಲ ಸಮುದಾಯಕ್ಕೆ ಸೇರಿದವರೆಂದು ಗುರುತಿಸಬಹುದು. ಅಷ್ಟೊಂದು ವಿಶೇಷತೆಯಿಂದ ಕೂಡಿದೆ. ಈ ಬುಡಕಟ್ಟು ಸಮುದಾಯದ ಪ್ರಮುಖ ದೈವ ಶ್ರೀಕೃಷ್ಣ. ಶ್ರೀಕೃಷ್ಣನನ್ನು ವಿವಿಧ ಹೆಸರುಗಳಿಂದ ವಿವಿಧ ದೇವರನ್ನು ಮಾಡಿಕೊಂಡು ಆರಾಧಿಸುತ್ತಾ ಬಂದಿದ್ದಾರೆ. ಹಾಗೆಯೇ ಈ ಸಮುದಾಯದ ಮತ್ತೊಂದು ವಿಶೇಷವೆಂದರೆ ಈ ಸಮುದಾಯದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಸಾಂಸ್ಕೃತಿಕ ವೀರರನ್ನು ಕಾಣಬಹುದು. ಈ ಸಮುದಾಯದಲ್ಲಿದ್ದಷ್ಟು ಸಾಂಸ್ಕೃತಿಕ ವೀರರು ತುಮಕೂರು ಪರಿಸರದ ಬೇರಾವ ಸಮುದಾಯಗಳಲ್ಲಿಯೂ ಕಾಣಲಾಗದು. ಹಾಗಾಗಿ ಇವರ ಹೆಸರುಗಳು ಹೆಚ್ಚಾಗಿ ಈ ಸಾಂಸ್ಕೃತಿಕ ವೀರರ ಹೆಸರುಗಳಿಂದಲೇ ಕೂಡಿರುತ್ತವೆ. ಈ ಸಮುದಾಯಗಳಲ್ಲಿ ಸ್ತ್ರೀದೇವತೆಗಳು ಕಡಿಮೆ ಎಂದೇ ಹೇಳಬಹುದು. ಇವರ ವ್ಯಕ್ತಿನಾಮಗಳಲ್ಲಿ ಸಾಂಸ್ಕೃತಿಕ ವೀರರ ಹೆಸರುಗಳನ್ನೇ ಪುರುಷವಾಚಿಯಾಗಿ ಮತ್ತು ಸ್ತ್ರೀವಾಚಿಯಾಗಿಯೂ ಬಳಕೆಯಾಗುತ್ತಿವೆ. ಆದರೆ ಈ ರೀತಿಯ ಎಲ್ಲಾ ಹೆಸರುಗಳು ಎರಡನೇ ತಲೆಮಾರಿನವರೆಗೆ ಹೆಚ್ಚು ಬಳಕೆಯಲ್ಲಿದ್ದು ಮೊದಲನೇ ತಲೆಮಾರಿನ ಹೆಸರುಗಳಲ್ಲಿ ಆಧುನಿಕತೆಯ ಪ್ರಭಾವವಾಗಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಅಂದರೆ ಮೂರನೆಯ ತಲೆಮಾರಿನ ವ್ಯಕ್ತಿನಾಮಗಳಲ್ಲಿ ಹೆಚ್ಚು ಭಾವನಾಮ ಸಂಬಂಧಿ ಹೆಸರುಗಳೇ ಬಳಕೆಯಾಗುತ್ತಿದ್ದು ಹಿಂದಿನ ಸಾಂಸ್ಕೃತಿಕ ವೀರರ, ದೈವದ ಹೆಸರುಗಳ ಬಳಕೆ ಕಡಿಮೆಯಾಗಿವೆ ಎಂದು ಹೇಳಬಹುದು. ಈ ಸಮುದಾಯದಲ್ಲಿ ಎರಡನೆಯ ತಲೆಮಾರಿನವರೆಗೆ ಬಳಕೆಯಲ್ಲಿರುವ ವ್ಯಕ್ತಿನಾಮಗಳನ್ನು ಈ ಕೆಳಕಂಡಂತೆ ತಿಳಿಯಬಹುದಾಗಿದೆ.

ಚಿಕ್ಕಣ್ಣಸ್ವಾಮಿ : ತುಮಕೂರು ಪರಿಸರದಲ್ಲಿ ಚಿಕ್ಕಣ್ಣ ಎಂಬ ಹೆಸರಿನ ದೇವರು ಆರಾಧಿಸಲ್ಪಡುತ್ತಿದ್ದು, ಈ ದೇವರನ್ನು ಗೊಲ್ಲ ಸಮುದಾಯವು ಆರಾಧ್ಯ ದೈವವೆಂದು, ತಮ್ಮ ಸಾಂಸ್ಕೃತಿಕ ವೀರ ಪುರುಷನೆಂದು ಗುರುತಿಸಿಕೊಂಡಿದೆ. ಚಿಕ್ಕಣ್ಣ ಎಂಬುವರು ಸಾಮಾನ್ಯ ವ್ಯಕ್ತಿಯಾಗಿದ್ದು ಕಾಲಾನಂತರದಲ್ಲಿ ದೈವತ್ವ ಪಡೆದಿರುವ ಸಾಧ್ಯತೆಯಿದೆ. ಈಗಾಗಿ ಈ ಹೆಸರಿನ ಪ್ರಭಾವ ಹಲವು ವ್ಯಕ್ತಿಗಳ ಮೇಲಾಗಿರುವುದನ್ನು ಕಾಣಬಹುದು. ಆದರೆ ಈ ಹೆಸರನ್ನು ತುಮಕೂರು ಪರಿಸರದಲ್ಲಿ ಬೇರೆ ಬೇರೆ ಸಮುದಾಯಗಳು

ಬಳಸುತ್ತಾರೆ. ಅವರ ಹೆಸರು ನಿರ್ದೇಶನ ಮಾಡುವಲ್ಲಿ ಈ ದೇವರ ಪ್ರಭಾವವೇ ಕಾರಣ ಎಂದು ಅಲ್ಲಿನ ಭಕ್ತರು ಹೇಳುವುದನ್ನು ಇಂದಿಗೂ ಕಾಣಬಹುದು. ಈ ಹೆಸರನ್ನು ಪುರುಷವಾಚಿ ಹಾಗೂ ಸ್ತ್ರೀವಾಚಿಯಾಗಿಯೂ ಬಳಸುತ್ತಾರೆ.

ಉದಾ:

ಪುರುಷವಾಚಿ : ಚಿಕ್ಕಣ್ಣ, ಚಿಕ್ಕಪ್ಪ, ಚಿಕ್ಕೀರಪ್ಪ, ಚಿಕ್ಕಯ್ಯ, ಚಿಕ್ಕಪ್ಪಯ್ಯ, ಚಿಕ್ಕರಾಯ, ಚಿಕ್ಕರಾಯಪ್ಪ, ಚಿಕ್ಕರಾಜ

ಸ್ತ್ರೀವಾಚಿ : ಚಿಕ್ಕಮ್ಮ, ಚಿಕ್ಕೀರಮ್ಮ

ಜುಂಜಪ್ಪ : ಈ ಹೆಸರು ತುಮಕೂರು ಪರಿಸರದ ಎಲ್ಲಾ ತಾಲ್ಲೂಕುಗಳಲ್ಲಿಯೂ ಬಳಕೆಯಲ್ಲಿದೆ. ಈ ಹೆಸರುಗಳನ್ನು ಚಿತ್ರದುರ್ಗ ಪರಿಸರದಲ್ಲಿಯೂ ಕಾಣಬಹುದು. ಈ ಹೆಸರನ್ನು ಸಾಮಾನ್ಯವಾಗಿ 'ಗೊಲ್ಲ' ಸಮುದಾಯದವರು ಹೆಚ್ಚು ಬಳಸುತ್ತಾರೆ. ಏಕೆಂದರೆ ಈ ಸಮುದಾಯದವರು ಅವರ ಸಾಂಸ್ಕೃತಿಕ ವೀರ 'ಜುಂಜಪ್ಪ' ಎಂದು ನಂಬಿದ್ದಾರೆ. ಈ ಕಾರಣದಿಂದಾಗಿ 'ಜುಂಜಪ್ಪ' ಎಂಬ ಪುರುಷವಾಚಕ ವ್ಯಕ್ತಿನಾಮವು ಈ ಸಮುದಾಯದಲ್ಲಿ ದೈವತ್ವವನ್ನು ಪಡೆದುಕೊಂಡಿದೆ. ಈ ಕಾರಣದಿಂದ 'ಗೊಲ್ಲ' ಸಮುದಾಯದ ಮೇಲೆ ಈ ದೈವದ ಪ್ರಭಾವವಾಗಿದ್ದು, ಪರಿಣಾಮ ಈ ಸಮುದಾಯದ ವ್ಯಕ್ತಿನಾಮಗಳ ಮೇಲಾಗಿರುವುದನ್ನು ಕಾಣಬಹುದಾಗಿದೆ. ಈ ಹೆಸರನ್ನು ಗೊಲ್ಲ ಸಮುದಾಯವರನ್ನು ಹೊರತುಪಡಿಸಿ ಇತರ ಸಮುದಾಯಗಳಾದ ಕುರುಬ ಮತ್ತು ಕುಂಚಿಟಿಗ ಸಮುದಾಯಗಳು ವಿರಳವಾಗಿ ಬಳಸುತ್ತಿದ್ದಾರೆ. ಇದಕ್ಕೆ ಕಾರಣವಾದ ಅಂಶಗಳನ್ನು ತಿಳಿಯುವ ಅಧ್ಯಯನ ನಡೆಯಬೇಕಿದೆ. ಈ ಹೆಸರನ್ನು ಪುರುಷವಾಚಿ ಮತ್ತು ಸ್ತ್ರೀವಾಚಿಗಳಾಗಿ ಬಳಕೆಯಾಗುತ್ತಿರುವುದನ್ನು ಕಾಣಲಾಗಿದೆ.

ಉದಾ:–

ಪುರುಷವಾಚಿ : ಜುಂಜಣ್ಣ, ಜುಂಜಪ್ಪ, ಜುಂಜಯ್ಯ

ಸ್ತ್ರೀವಾಚಿ : ಜುಂಜಮ್ಮ, ಜುಂಜಕ್ಕ

ಕ್ಯಾತಪ್ಪ : ತುಮಕೂರು ಪರಿಸರ ಹಾಗೂ ಗಡಿಭಾಗವಾದ ಚಿತ್ರದುರ್ಗ ಪರಿಸರದಲ್ಲಿ ಹೆಚ್ಚಾಗಿ ಪ್ರಸಿದ್ಧಿ ಪಡೆದಿರುವ 'ಕ್ಯಾತಪ್ಪ' ಎಂಬ ಸಾಂಸ್ಕೃತಿಕ ವೀರ ದೈವತ್ವವನ್ನು ಪಡೆದು ದೇವರಾಗಿ ಆರಾಧಿಸಲ್ಪಡುತ್ತಿದ್ದಾನೆ. ಕ್ಯಾತಪ್ಪ ಎಂಬ ದೇವರು ಗೊಲ್ಲಸಮುದಾಯದ ದೇವರಾಗಿದ್ದಾನೆ. ಈ ದೇವರನ್ನು ಕುಂಚಿಟಿಗ, ಕುರುಬರು ಸಹ ತಮ್ಮ ಸಾಂಸ್ಕೃತಿಕ ವೀರನೆಂದು ಪೂಜಿಸುತ್ತಾ ಬಂದಿದ್ದಾರೆ. ಒಟ್ಟಾರೆಯಾಗಿ ಈ ದೈವತ್ವ ಪಡೆದಿರುವ 'ಕ್ಯಾತಪ್ಪ' ಎಂಬ ಹೆಸರಿನ ಪ್ರಭಾವವು ಈ ಪರಿಸರದ ಕೆಲವು

ಸಮುದಾಯಗಳ ಮೇಲಾಗಿರುವುದನ್ನು ಗುರ್ತಿಸಲಾಗಿದೆ. ಈ ಹೆಸರು ಪುರುಷವಾಚಿ ಆಗಿದ್ದರೂ ಸ್ತ್ರೀವಾಚಿ ರೂಪದಲ್ಲಿ ಬಳಕೆಯಲ್ಲಿದೆ.

ಉದಾ:

ಪುರುಷವಾಚಿ : ಕ್ಯಾತಪ್ಪ, ಕ್ಯಾತಯ್ಯ, ಕ್ಯಾತರಾಜು, ಕ್ಯಾತರಾಯ, ಕ್ಯಾತೇಶ್

ಸ್ತ್ರೀವಾಚಿ : ಕ್ಯಾತಮ್ಮ

ಚಿತ್ತಪ್ಪ : ಚಿತ್ತಪ್ಪ ಎಂಬುದು ಗೊಲ್ಲ ಸಮುದಾಯದ ಕುಲದೈವವಾಗಿದೆ. ಈ ದೇವರನ್ನು ಈ ಸಮುದಾಯವು ತಮ್ಮ ಸಮುದಾಯದ ಸಾಂಸ್ಕೃತಿಕ ವೀರನೆಂದು ಗುರ್ತಿಸಿಕೊಂಡಿದ್ದಾರೆ. ಚಿತ್ತಪ್ಪ ಎಂಬ ದೇವರ ಹೆಸರನ್ನು ಹಲವು ಬೇರೆ ಬೇರೆ ಹೆಸರುಗಳಿಂದ ಬಳಸುತ್ತಿರುವುದನ್ನು ಕಾಣಬಹುದಾಗಿದೆ. ಅಂದರೆ ಚಿತ್ತಪ್ಪ, ಚಿತ್ರಲಿಂಗ ಎಂಬುದಾಗಿ ಇಂದಿಗೂ ಬಳಕೆಯಲ್ಲಿರುವ ದೇವರಾಗಿದೆ. ಈ ಹೆಸರನ್ನು ಪುರುಷವಾಚಿ ಮತ್ತು ಸ್ತ್ರೀವಾಚಿಯಾಗಿ ಬಳಸುತ್ತಿದ್ದಾರೆ. ಈ ಹೆಸರು ಬಳಸುವವರು ಬಹುತೇಕ ಗೊಲ್ಲ ಸಮುದಾಯಕ್ಕೆ ಸೇರಿದವರೇ ಆಗಿರುತ್ತಾರೆ. ಇತರೆ ಸಮುದಾಯದವರಲ್ಲಿ ಈ ಹೆಸರು ತುಂಬಾ ವಿರಳ. ಪ್ರಸ್ತುತ ಅಧ್ಯಯನದ ಸಂದರ್ಭದಲ್ಲಿ ಇತರೆ ಸಮುದಾಯಗಳಲ್ಲಿ ಈ ಹೆಸರಿನ ವ್ಯಕ್ತಿಗಳು ಕಂಡುಬಂದಿರುವುದಿಲ್ಲ.

ಉದಾ:

ಪುರುಷವಾಚಿ : ಚಿತ್ತಪ್ಪ, ಚಿತ್ತಣ್ಣ, ಚಿತ್ತಯ್ಯ, ಚಿತ್ತೇಶ, ಚಿತ್ತರಾಜು, ಚಿತ್ರಲಿಂಗ, ಚಿತ್ರಲಿಂಗಯ್ಯ, ಚಿತ್ರಲಿಂಗಣ್ಣ

ಸ್ತ್ರೀವಾಚಿ: ಚಿತ್ತಮ್ಮ, ಚಿತ್ರಲಿಂಗಮ್ಮ

ಈ ಮೇಲಿನ ರೂಪಗಳ ಜೊತೆಗೆ ಗೊಲ್ಲ ಸಮುದಾಯವು ತುಮಕೂರು ಪರಿಸರದಲ್ಲಿ ತಮ್ಮ ಸಮುದಾಯದ ನಾಮನಿರ್ದೇಶನದಲ್ಲಿ ಇನ್ನೂ ಹಲವು ರೂಪಗಳಲ್ಲಿ ಬಳಕೆ ಮಾಡುತ್ತಿರುವುದನ್ನು ಗುರ್ತಿಸಲಾಗಿದೆ. ಈ ಎಲ್ಲಾ ಹೆಸರುಗಳು ಆ ಸಮುದಾಯದ ಸಾಂಸ್ಕೃತಿಕ ವೀರರೆಂದು ನಂಬಲಾಗಿದ್ದು, ದೈವತ್ವವನ್ನು ಪಡೆದುಕೊಂಡಿವೆ. ಹಾಗಾಗಿ ಈ ಎಲ್ಲಾ ಹೆಸರುಗಳು ಆ ಸಮುದಾಯದ ವ್ಯಕ್ತಿನಾಮಗಳ ಮೇಲೆ ಪ್ರಭಾವ ಬೀರಿವೆ. ಈ ಸ್ವರೂಪದ ವ್ಯಕ್ತಿನಾಮಗಳು ಈ ಸಮುದಾಯದಲ್ಲಿ ಮಾತ್ರ ಹೆಚ್ಚಾಗಿ ಕಾಣಬಹುದು. ಈ ಹೆಸರುಗಳನ್ನು ಪುರುಷವಾಚಿಯಾಗಿ ಮತ್ತು ಸ್ತ್ರೀವಾಚಿಯಾಗಿಯೂ ಬಳಸಲಾಗುತ್ತಿದೆ.

ಉದಾ:

ಪುರುಷವಾಚಿ : ಎಳೆಯಪ್ಪ, ಜಡೆಯಪ್ಪ, ಸಿರಿಯಣ್ಣ, ವೀರಗಾರ, ಕಾಟಯ್ಯ, ಹೀರಣ್ಣ,

ಹೀರಯ್ಯ ಕಾಟಹೀರಯ್ಯ, ಯತ್ತಪ್ಪ, ಯತ್ತಣ್ಣ, ಕಾಟಲಿಂಗಣ್ಣ, ಕಾಟಲಿಂಗಯ್ಯ, ಪಾತಲಿಂಗಯ್ಯ, ಪಾತಲಿಂಗ, ಪಾತಣ್ಣ, ಪಾತೇಶ, ಕಾಟೇಶ, ಜಡೆಯಣ್ಣ, ಕಾಟಪ್ಪ ಮುಂತಾದವು.

ಸ್ತ್ರೀವಾಚಿ : ಎಳೆಯಮ್ಮ, ಜಡೆಯಮ್ಮ, ಸಿರಿಯಮ್ಮ, ವೀರಮ್ಮ, ಕಾಟಮ್ಮ, ಹೀರಮ್ಮ, ಕಾಟಹೀರಮ್ಮ, ಕಾಟಲಿಂಗಮ್ಮ, ಪಾತಮ್ಮ, ಪಾತಲಿಂಗಮ್ಮ, ಪಾತಕ್ಕ, ಕಾಟಮ್ಮ ಮುಂತಾದವು.

ಹೀಗೆ ತುಮಕೂರು, ಚಿತ್ರದುರ್ಗ ಪರಿಸರದಲ್ಲಿ ಗೊಲ್ಲ ಸಮುದಾಯದಲ್ಲಿ ಬಹುತೇಕ ದೈವ ಸಂಬಂಧಿ ವ್ಯಕ್ತಿನಾಮಗಳು ಬಳಕೆಯಾಗಿದ್ದು, ಈ ವ್ಯಕ್ತಿನಾಮಗಳು ಪ್ರಾಚೀನ ಕಾಲದಿಂದ ಇಂದಿನ ಎರಡನೇ ತಲೆಮಾರಿನವರೆಗೆ ಹೆಚ್ಚಾಗಿ ಕಂಡು ಬರುತ್ತವೆ. ಆದರೆ ಮೂರನೇ ತಲೆಮಾರಿನಲ್ಲಿ ದೈವಸಂಬಂಧಿ ವ್ಯಕ್ತಿನಾಮಗಳಿಗಿಂತ ಹೆಚ್ಚಾಗಿ ಭಾವನಾಮಗಳು ವ್ಯಾಪಕವಾಗಿ ಬಳಕೆಯಾಗುತ್ತಿವೆ. ಈ ಭಾವನಾಮಗಳಿಗೆ ಯಾವುದೇ ದೈವದ ಹೆಸರಾಗಲೀ ಚರಿತ್ರಾಕಾರರ ಹೆಸರಾಗಲಿ, ಪರಂಪರಾನುಗತವಾಗಿ ಬಂದ ಹಿರಿಯರ ಹೆಸರುಗಳಾಗಲೀ ಅಥವಾ ಇತರೆ ಯಾವುದೇ ವಸ್ತುವಿನ ಹೆಸರುಗಳಾಗಲೀ ಪ್ರಭಾವ ಬೀರಿರುವುದಿಲ್ಲ. ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಗಮನಿಸುವುದಾದರೆ ಆಧುನಿಕ ಸಂದರ್ಭದ ವ್ಯಕ್ತಿನಾಮಗಳಲ್ಲಿ ಪ್ರಾಚೀನ ಕಾಲದಿಂದ ಇದ್ದಂತಹ ಬಂಧುವಾಚಿ, ವೃತ್ತಿವಾಚಿ, ಅಧಿಕಾರವಾಚಿ, ಗೌರವವಾಚಿ, ಜಾತಿವಾಚಿ ವಾರ್ಗಿಕಗಳಾಗಲೀ, ಗುಣವಿಶೇಷಣಗಳಿಂದ ಕೂಡಿದ ಅನ್ವರ್ಥ ನಾಮಗಳಾಗಲೀ ಬಳಕೆಯಾಗುತ್ತಿಲ್ಲ. ಈ ಭಾವನಾಮಗಳು ಇಂದು ನಗರ ಪ್ರದೇಶ, ಅಕ್ಷರಸ್ಥ ಸಮುದಾಯದಲ್ಲಷ್ಟೇ ಕಂಡುಬರದೇ ಗ್ರಾಮೀಣ ಪ್ರದೇಶದ ಅನಕ್ಷರಸ್ಥ ಕುಟುಂಬಗಳಲ್ಲಿಯೂ ಕೂಡ ಕಂಡುಬರುತ್ತಿವೆ. ಇದಕ್ಕೆಲ್ಲ ಮುಖ್ಯ ಕಾರಣ ಆಧುನಿಕತೆಯ ಪ್ರಭಾವ ಮತ್ತು ನವಮಾಧ್ಯಮಗಳು ಸಮಾಜದ ಅಂತಿಮ ಹಂತದ ಜನಸಮುದಾಯವನ್ನು ತಲುಪಿರುವುದಾಗಿದೆ.

ಪರಾಮರ್ಶನ ಗ್ರಂಥಗಳು :

1. ಆರ್ಕೆ ಮಣಿಪಾಲ, 1989, ಹೆಸರಿನಲ್ಲೇನಿದೆ, ನ್ಯೂಸ್ಟಾರ್ ಪಬ್ಲಿಕೇಶನ್, ಸಾರಕ್ಕಿ ಬೆಂಗಳೂರು
2. ಕಲಬುರ್ಗಿ ಎಂ.ಎಂ., 2010, ಮಾರ್ಗ, ಸಪ್ನ ಬುಕ್‌ಹೌಸ್, ಬೆಂಗಳೂರು, ಸಂಪುಟ–1 ರಿಂದ 9
3. ಚಿದಾನಂದ ಮೂರ್ತಿ ಎಂ., 2002, ಕರ್ನಾಟಕ ವ್ಯಕ್ತಿನಾಮಗಳು, ವಾಗರ್ಥ, ಸಪ್ನ ಬುಕ್‌ಹೌಸ್ ಗಾಂಧಿನಗರ, ಬೆಂಗಳೂರು
4. ನಟರಾಜು ಜೆ.ಆರ್., 2016, ಆಧುನಿಕ ನೆಲೆಯಲ್ಲಿ ವ್ಯಕ್ತಿನಾಮಗಳು, ಕನ್ನಡ ಅಂದು–ಇಂದು,(ಸಂ) ಸುರೇಂದ್ರ ಸ್ವಾಮಿ., ಎಸ್.ಎಸ್.ಪುರಂ, ತುಮಕೂರು.
5. ನಾಗರಾಜು ಎಂ.ಎಚ್., 2003, ಕುಂಚಿಟಿಗರ ಸಾಂಸ್ಕೃತಿಕ ಇತಿಹಾಸ, ಅನಿಕೇತನ ಪ್ರಕಾಶನ, ತುಮಕೂರು
6. ಬಸವರಾಜ ಕೆ.ಪಿ., 2007, ಸಿರಾ ಸೀಮೆಯ ಸಾಸ್ಕೃತಿಕ ವೀರರು, (ಅಪ್ರಕಟಿತ ಪಿಎಚ್.ಡಿ ಮಹಾ ಪ್ರಬಂಧ), ಅಧ್ಯಯನಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
7. ಸಣ್ಣಪಾಪಯ್ಯ, 2010, ಚಿತ್ರದುರ್ಗ ಪರಿಸರದ ವ್ಯಕ್ತಿನಾಮಗಳು,(ಪ್ರಕಟಿತ ಪಿಎಚ್.ಡಿ ಪ್ರಬಂಧ), ಬಂಡಾರ ಪ್ರಕಾಶನ, ಮಸ್ಕಿ.
8. ಹೆಗ್ಡಾಳ್ ಹುಲುಗಪ್ಪ, 2016, ದೈವಸಂಬಂಧಿ ವ್ಯಕ್ತಿನಾಮಗಳು ಮತ್ತು ಸ್ಥಳನಾಮಗಳು(ಅಪ್ರಕಟಿತ ಪಿಎಚ್.ಡಿ ಮಹಾ ಪ್ರಬಂಧ), ಅಧ್ಯಯನಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

***

ರನ್ನನ ಕಾವ್ಯದಲ್ಲಿ 'ಸ್ತ್ರೀ' ರೂಪಕ ದ್ರೌಪದಿ

ಕಾವ್ಯ ಕೆ.
ಎಂ.ಎ, ಕನ್ನಡ ವಿಭಾಗ
ಜೈನ್ ಡೀಮ್ಡ್ ಟು ಬಿ
ವಿಶ್ವವಿದ್ಯಾಲಯ
ಬೆಂಗಳೂರು

1

ಪ್ರಮುಖ ಪದಗಳು
ರನ್ನ, ದ್ರೌಪದಿ, ಸ್ತ್ರೀ ರೂಪಕ,
ಗದಾಯುದ್ಧ, ಪ್ರತಿರೋಧ

ರನ್ನನ 'ಸಾಹಸಭೀಮ ವಿಜಯಂ' ಕಾವ್ಯದಲ್ಲಿ ದ್ರೌಪದಿಯ ಪಾತ್ರವು ಕೇವಲ ಒಂದು ಪೌರಾಣಿಕ ಪಾತ್ರವಾಗಿ ಉಳಿಯದೆ, ಅಧಿಕಾರ, ಅಪಮಾನ ಮತ್ತು ಪ್ರತಿರೋಧದ ಮಹಾನ್ 'ಸ್ತ್ರೀ ರೂಪಕ'ವಾಗಿ ಹೊರಹೊಮ್ಮಿದೆ. ಈ ಸಂಶೋಧನಾ ಲೇಖನವು ರನ್ನನು ದ್ರೌಪದಿಯನ್ನು ಕೇವಲ ದುಃಖಿತೆಯನ್ನಾಗಿ ಚಿತ್ರಿಸದೆ, ಯುದ್ಧದ ಪ್ರೇರಕ ಶಕ್ತಿಯನ್ನಾಗಿ ಮತ್ತು ಧರ್ಮದ ಸಂಕೇತವನ್ನಾಗಿ ಹೇಗೆ ರೂಪಿಸಿದ್ದಾನೆ ಎಂಬುದನ್ನು ವಿಶ್ಲೇಷಿಸುತ್ತದೆ. ದ್ರೌಪದಿಯ ಮುಕ್ತ ಕೇಶಪಾಶವು ಕೇವಲ ವ್ಯಕ್ತಿಗತ ಪ್ರತಿಜ್ಞೆಯಲ್ಲ, ಅದು ಇಡೀ ಸಾಮ್ರಾಜ್ಯದ ಅಧಿಕಾರಶಾಹಿಯ ಅಧರ್ಮದ ವಿರುದ್ಧದ ಪ್ರತಿಭಟನೆಯಾಗಿದೆ. ಈ ಲೇಖನವು ರನ್ನನ ಕಾವ್ಯದಲ್ಲಿ ದ್ರೌಪದಿಯು ಸ್ತ್ರೀ ಅಸ್ಮಿತೆಯ ಮತ್ತು ಘನತೆಯ ಉತ್ತುಂಗವನ್ನು ಹೇಗೆ ಪ್ರತಿನಿಧಿಸುತ್ತಾಳೆ ಎಂಬುದನ್ನು ಶೋಧಿಸುತ್ತದೆ. ಅಂತಿಮವಾಗಿ, ರನ್ನನ ದ್ರೌಪದಿಯು ಕೇವಲ ಪತಿಯರ ನೆರಳಲ್ಲ, ಬದಲಾಗಿ ಭೀಮನ ಶೌರ್ಯಕ್ಕೆ ತಳಹದಿಯಾದ ವೈಚಾರಿಕ ಮತ್ತು ಭಾವನಾತ್ಮಕ ಶಕ್ತಿಯಾಗಿದ್ದಾಳೆ ಎಂಬ ಸತ್ಯವನ್ನು ಈ ಅಧ್ಯಯನವು ಸ್ಥಾಪಿಸುತ್ತದೆ.

ರನ್ನನ ಕಾವ್ಯದಲ್ಲಿನ ಸ್ತ್ರೀ ಸಂವೇದನೆ ಮತ್ತು ದ್ರೌಪದಿಯ ಪಾತ್ರದ

ಕುರಿತು ಕನ್ನಡದ ಮಹಾನ್ ವಿದ್ವಾಂಸರು ಆಳವಾದ ಸಂಶೋಧನೆ ನಡೆಸಿದ್ದಾರೆ. ಬಿ.ಎಂ. ಶ್ರೀಕಂಠಯ್ಯನವರ 'ಗದಾಯುದ್ಧ ನಾಟಕಂ' (1926) ಕೃತಿಯು ದ್ರೌಪದಿಯ ಪಾತ್ರಕ್ಕೆ ಒಂದು ನಾಟಕೀಯ ಘನತೆಯನ್ನು ನೀಡಿದೆ. ಡಿ.ಎಲ್. ನರಸಿಂಹಾಚಾರ್ ಅವರ 'ಶಬ್ದಮಣಿ ದರ್ಪಣ' ಮತ್ತು ಇತರ ಲೇಖನಗಳು ರನ್ನನ ಭಾಷಾ ಪ್ರೌಢಿಮೆಯಲ್ಲಿ ದ್ರೌಪದಿಯ ವೀರತ್ವ ಹೇಗೆ ಅಡಗಿದೆ ಎಂಬುದನ್ನು ವಿವರಿಸುತ್ತವೆ. ಎಂ. ಚಿದಾನಂದಮೂರ್ತಿಯವರ 'ಸಂಶೋಧನಾ ತರಂಗ'ದಲ್ಲಿ ರನ್ನನ ಕಾಲದ ಸಾಮಾಜಿಕ ಹಿನ್ನೆಲೆಯಲ್ಲಿ ದ್ರೌಪದಿಯ ಅಸ್ಮಿತೆಯನ್ನು ಚರ್ಚಿಸಲಾಗಿದೆ. ಇತ್ತೀಚಿನ ದಶಕಗಳಲ್ಲಿ ಡಾ. ಎಲ್. ಬಸವರಾಜು ಅವರ 'ಸಾಹಸಭೀಮ ವಿಜಯಂ' ಸಂಪಾದನೆಯು ರನ್ನನ ದ್ರೌಪದಿಯ ಸಂಕೀರ್ಣತೆಯನ್ನು ಅರ್ಥಮಾಡಿಕೊಳ್ಳಲು ಹೊಸ ದೃಷ್ಟಿಕೋನ ನೀಡಿದೆ. ಈ ಎಲ್ಲಾ ಅಧ್ಯಯನಗಳು ದ್ರೌಪದಿಯನ್ನು ಕೇವಲ ಒಂದು ಪಾತ್ರವಾಗಿ ನೋಡದೆ, ಒಂದು ಸಾಂಸ್ಕೃತಿಕ ರೂಪಕವನ್ನಾಗಿ ಗುರುತಿಸಿವೆ.

ಕನ್ನಡ ಸಾಹಿತ್ಯದ ರತ್ನತ್ರಯರಲ್ಲಿ ಒಬ್ಬನಾದ ರನ್ನನು ತನ್ನ 'ಸಾಹಸಭೀಮ ವಿಜಯಂ' ಕಾವ್ಯವನ್ನು ಕೇವಲ ಭೀಮ ಮತ್ತು ದುರ್ಯೋಧನರ ಗದಾಯುದ್ಧಕ್ಕೆ ಸೀಮಿತಗೊಳಿಸದೆ, ಅದರ ಅಂತರಂಗದಲ್ಲಿ ದ್ರೌಪದಿಯ ನೋವು ಮತ್ತು ಹಠವನ್ನು ಒಂದು ಮಹಾನ್ ಶಕ್ತಿಯಾಗಿ ಪ್ರತಿಷ್ಠಾಪಿಸಿದ್ದಾನೆ. ದ್ರೌಪದಿಯು ರನ್ನನ ಕಾವ್ಯದಲ್ಲಿ ಕೇವಲ ಐವರು ಪಾಂಡವರ ಪತ್ನಿಯಲ್ಲ, ಅವಳು ಇಡೀ ಮಹಾಭಾರತ ಯುದ್ಧದ 'ಸೂತ್ರಧಾರಿ'. ಕಾವ್ಯದ ಆರಂಭದಿಂದ ಅಂತ್ಯದವರೆಗೂ ದ್ರೌಪದಿಯ ಮುಕ್ತ ಕೇಶಪಾಶವು ಒಂದು ನಿರಂತರ ಜ್ವಾಲೆಯಂತೆ ಉರಿಯುತ್ತಲೇ ಇರುತ್ತದೆ. ಈ ಕೇಶಪಾಶವು ಕೇವಲ ಕೂದಲಲ್ಲ, ಅದು ಅಧರ್ಮದ ವಿರುದ್ಧ ಸ್ತ್ರೀ ಕುಲವು ತೋರಿದ ಅತ್ಯುಗ್ರ ಪ್ರತಿಭಟನೆಯ ರೂಪಕ. ರನ್ನನು ದ್ರೌಪದಿಯನ್ನು ಚಿತ್ರಿಸುವಾಗ ಅವಳಲ್ಲಿರುವ 'ಸತ್ವ'ಕ್ಕೆ ಹೆಚ್ಚಿನ ಒತ್ತು ನೀಡಿದ್ದಾನೆ. ಸಭೆಯಲ್ಲಿ ಅವಮಾನಿತಳಾದಾಗ ಅವಳು ಅನುಭವಿಸಿದ ಆಕ್ರೋಶವು ಕೇವಲ ವೈಯಕ್ತಿಕವಲ್ಲ, ಅದು ಅಧಿಕಾರದ ಮದವೇರಿದ ಸಮಾಜಕ್ಕೆ ಹೆಣ್ಣೊಬ್ಬಳು ನೀಡಿದ ಎಚ್ಚರಿಕೆಯಾಗಿದೆ.

ರನ್ನನ ದ್ರೌಪದಿಯು ಭೀಮನನ್ನು ಯುದ್ಧಕ್ಕೆ ಪ್ರೇರೇಪಿಸುವ ರೀತಿ ಅತ್ಯಂತ ವಿಶಿಷ್ಟವಾದುದು. ಭೀಮನು ಶಾಂತನಾಗಲು ಬಯಸುವ ಕ್ಷಣಗಳಲ್ಲೂ ದ್ರೌಪದಿಯು ತನ್ನ ಅವಮಾನವನ್ನು ನೆನಪಿಸುವ ಮೂಲಕ ಅವನ ಒಳಗಿನ ವೀರತ್ವವನ್ನು ಜಾಗೃತಗೊಳಿಸುತ್ತಾಳೆ. ಇಲ್ಲಿ ದ್ರೌಪದಿಯು ಕೇವಲ ಕಣ್ಣೀರು ಸುರಿಸುವ ಅಬಲೆಯಲ್ಲ, ಅವಳು ರಣಕಾಳಿಯಂತೆ ಯುದ್ಧದ ಅನಿವಾರ್ಯತೆಯನ್ನು ಪ್ರತಿಪಾದಿಸುತ್ತಾಳೆ. ರನ್ನನು

ಬಳಸುವ 'ದ್ರೌಪದಿ ದೇವಿಯ ಮುಕ್ತ ಕೇಶಪಾಶಂ' ಎಂಬ ವರ್ಣನೆಯು ಕಾವ್ಯದ ಕೇಂದ್ರಬಿಂದುವಾಗಿದೆ. ಅಧರ್ಮದ ಸಂಹಾರವಾಗುವವರೆಗೂ ಈ ಮುಡಿ ಕಟ್ಟುವುದಿಲ್ಲ ಎಂಬ ಅವಳ ಹಠವು, ಸಮಾಜದಲ್ಲಿ ನ್ಯಾಯ ಸ್ಥಾಪನೆಯಾಗುವವರೆಗೂ ಶಾಂತಿ ಅಸಾಧ್ಯ ಎಂಬ ಸತ್ಯವನ್ನು ಸಾರುತ್ತದೆ. ಅಧಿಕಾರವು ಯಾವಾಗ ಸ್ತ್ರೀಯ ಗೌರವವನ್ನು ಕಾಯುವುದಿಲ್ಲವೋ ಆಗ ಆ ಅಧಿಕಾರವು ರಕ್ತದ ಕೆಸರಿನಲ್ಲಿ ಮುಳುಗಲೇಬೇಕು ಎಂಬುದನ್ನು ರನ್ನನು ದ್ರೌಪದಿಯ ಮೂಲಕ ನಿರೂಪಿಸಿದ್ದಾನೆ.

ದ್ರೌಪದಿಯ ರೂಪಕವು ರನ್ನನ ಕಾವ್ಯದಲ್ಲಿ 'ಮಾನ' ಮತ್ತು 'ಅಭಿಮಾನ'ಗಳ ಪ್ರತೀಕವಾಗಿದೆ. ಭೀಮನು ದುರ್ಯೋಧನನ ತೊಡೆಯನ್ನು ಸೀಳಿ, ಆ ರಕ್ತದಿಂದ ದ್ರೌಪದಿಯ ಮುಡಿಯನ್ನು ಕಟ್ಟುವ ಪ್ರಸಂಗವು ಕಾವ್ಯದ ಅತ್ಯಂತ ಭಾವನಾತ್ಮಕ ಮತ್ತು ಭಯಾನಕ ಘಟ್ಟ. ಇಲ್ಲಿ ರನ್ನನು ರೌದ್ರ ಮತ್ತು ಕರುಣ ರಸಗಳನ್ನು ಸಮ್ಮಿಲನಗೊಳಿಸಿದ್ದಾನೆ. ರಕ್ತದಿಂದ ಮುಡಿ ಕಟ್ಟಿಸಿಕೊಳ್ಳುವ ದ್ರೌಪದಿಯು ನಮಗೆ ಕ್ರೌರ್ಯದ ಸಂಕೇತವಾಗಿ ಕಾಣುವುದಿಲ್ಲ, ಬದಲಾಗಿ ಅವಳು 'ಸೇಡಿನ ನ್ಯಾಯ'ದ ಸಂಕೇತವಾಗಿ ಕಾಣುತ್ತಾಳೆ. ರನ್ನನ ದೃಷ್ಟಿಯಲ್ಲಿ, ಒಬ್ಬ ಹೆಣ್ಣಿನ ಗೌರವವನ್ನು ಮರುಸ್ಥಾಪಿಸುವುದೇ ಪರಮ ಧರ್ಮ. ಅಧಿಕಾರ ಎನ್ನುವುದು ಕೇವಲ ಸಾಮ್ರಾಜ್ಯವನ್ನು ಆಳುವುದಲ್ಲ, ಅದು ದ್ರೌಪದಿಯಂತಹ ಸ್ತ್ರೀಯರ ಘನತೆಯನ್ನು ರಕ್ಷಿಸುವುದಾಗಿದೆ. ಈ ಚಿಂತನೆಯು ರನ್ನನ ಕಾವ್ಯಕ್ಕೆ ಒಂದು ನೈತಿಕ ಭದ್ರತೆಯನ್ನು ಒದಗಿಸಿಕೊಟ್ಟಿದೆ. ರನ್ನನು ದ್ರೌಪದಿಯ ಪಾತ್ರದ ಮೂಲಕ ಅಂದಿನ ಕಾಲದ ಕ್ಷತ್ರಿಯ ಸಂವೇದನೆಯನ್ನು ಕಟ್ಟಿಕೊಟ್ಟಿದ್ದಾನೆ. ದ್ರೌಪದಿಯು ಕೇವಲ ಅರಮನೆಯ ಸುಕುಮಾರಿ ಅಲ್ಲ, ಅವಳು ಯುದ್ಧದ ತಂತ್ರಗಾರಿಕೆಯನ್ನು ಬಲ್ಲವಳು. ಅವಳ ಮಾತುಗಳಲ್ಲಿ ಕಾವ್ಯದ ಸೌಂದರ್ಯಕ್ಕಿಂತಲೂ ಹೆಚ್ಚಾಗಿ ನ್ಯಾಯದ ಕಠೋರತೆಯಿದೆ. ರನ್ನನು ದ್ರೌಪದಿಯನ್ನು ಚಿತ್ರಿಸುವಾಗ ಅವಳ ಅಂತರಂಗದ ತಳಮಳಗಳನ್ನು ಅತ್ಯಂತ ಸೂಕ್ಷ್ಮವಾಗಿ ದಾಖಲಿಸಿದ್ದಾನೆ. ತನ್ನ ಮಕ್ಕಳನ್ನು ಕಳೆದುಕೊಂಡ ತಾಯಿಯಾಗಿ, ಪತಿಯರ ಅಸಹಾಯಕತೆಯನ್ನು ಕಂಡ ಪತ್ನಿಯಾಗಿ ಅವಳು ಪಡುವ ಸಂಕಟವು ಓದುಗರ ಕಣ್ಣಿನಲ್ಲಿ ನೀರು ತರಿಸುತ್ತದೆ. ಆದರೆ ಈ ಸಂಕಟವು ಅವಳನ್ನು ಕುಗ್ಗಿಸುವುದಿಲ್ಲ, ಬದಲಾಗಿ ಅವಳ ಪ್ರತಿಜ್ಞೆಯನ್ನು ಮತ್ತಷ್ಟು ಗಟ್ಟಿಗೊಳಿಸುತ್ತದೆ. ಇದೇ ರನ್ನನ ದ್ರೌಪದಿಯ ವೈಶಿಷ್ಟ್ಯ.

ದ್ರೌಪದಿಯ ರೂಪಕವು ಕೇವಲ ಪಾಂಡವರ ಪಕ್ಷಕ್ಕೆ ಸೀಮಿತವಾಗದೆ, ಇಡೀ ಕಾವ್ಯದ ದಾರ್ಶನಿಕ ಚೌಕಟ್ಟನ್ನು ವಿಸ್ತರಿಸುತ್ತದೆ. ಅಧಿಕಾರವು ಮದವೇರಿದಾಗ

ಮತ್ತು ಜ್ಞಾನಿಗಳು ಮೌನವಾದಾಗ, ಸಮಾಜವನ್ನು ರಕ್ಷಿಸಲು ಒಬ್ಬ ಸ್ತ್ರೀಯೇ ಮುಂದೆ ಬರಬೇಕಾಗುತ್ತದೆ ಎಂಬ ಸತ್ಯವನ್ನು ರನ್ನನು ಇಲ್ಲಿ ತೋರಿಸಿದ್ದಾನೆ. ದ್ರೌಪದಿಯ ಪ್ರಶ್ನೆಗಳು ಕೇವಲ ಭೀಷ್ಮ ಅಥವಾ ದ್ರೋಣರಿಗಲ್ಲ, ಅವು ಇತಿಹಾಸದ ಕನ್ನಡಿಯ ಮುಂದೆ ನಿಂತಿರುವ ಪ್ರತಿಯೊಬ್ಬ ಆಡಳಿತಗಾರನಿಗೂ ಅನ್ವಯಿಸುತ್ತವೆ. ರನ್ನನ ಕಾವ್ಯದಲ್ಲಿ ದ್ರೌಪದಿಯು ಕೇವಲ ಒಂದು ಪಾತ್ರವಲ್ಲ, ಅವಳು 'ಪ್ರತಿರೋಧದ ಕಂಠ'. ಈ ಸ್ತ್ರೀ ರೂಪಕವು ಕನ್ನಡ ಸಾಹಿತ್ಯಕ್ಕೆ ಒಂದು ಹೊಸ ಆಯಾಮವನ್ನು ನೀಡಿದೆ. ಅಂತಿಮವಾಗಿ, ರನ್ನನು ದ್ರೌಪದಿಯನ್ನು ಯುದ್ಧದ ವಿಜಯದ ಸಂಕೇತವಾಗಿ ಮತ್ತು ಶಾಂತಿಯ ಸ್ಥಾಪಕಿಯಾಗಿ ಚಿತ್ರಿಸುವ ಮೂಲಕ ಸ್ತ್ರೀ ಶಕ್ತಿಯ ಉದಾತ್ತೀಕರಣವನ್ನು ಮಾಡಿದ್ದಾನೆ.

ರನ್ನನು ತನ್ನ ಕಾವ್ಯದಲ್ಲಿ ದ್ರೌಪದಿಯನ್ನು ಕೇವಲ ಒಂದು ಪಾತ್ರವಾಗಿ ಮಂಡಿಸದೆ, ಅದನ್ನು 'ಪ್ರತಿಜ್ಞೆಯ ಅಗ್ನಿಕುಂಡ'ವಾಗಿ ಮಾರ್ಪಡಿಸಿದ್ದಾನೆ. ದ್ರೌಪದಿಯ ರೂಪಕವು ಹಳೆಯ ಮೌಲ್ಯಗಳ ಪತನ ಮತ್ತು ಹೊಸ ನ್ಯಾಯದ ಉದಯದ ನಡುವಿನ ಸಂಕೇತವಾಗಿದೆ. ಕಾವ್ಯದ ಆರಂಭದ ದೃಶ್ಯಗಳಲ್ಲಿ ಭೀಮನು ಶಾಂತಿಯನ್ನು ಬಯಸುವ ಸುಳಿವು ನೀಡಿದಾಗ, ದ್ರೌಪದಿಯು ತನ್ನ ಬಿಚ್ಚಿದ ಮುಡಿಯನ್ನು ಅವನ ಮುಂದೆ ಪ್ರದರ್ಶಿಸುವ ಮೂಲಕ 'ಅಧಿಕಾರವು ಅಧರ್ಮದ ಮಡಿಲಲ್ಲಿ ಮಲಗಿರುವಾಗ ಶಾಂತಿ ಎಂಬುದು ಕೇವಲ ಹೇಡಿತನ' ಎಂಬ ಕಟು ಸತ್ಯವನ್ನು ಸಾರುತ್ತಾಳೆ. ರನ್ನನು ಇಲ್ಲಿ ದ್ರೌಪದಿಯನ್ನು 'ಕಾಲದ ಸಾಕ್ಷಿ'ಯನ್ನಾಗಿ ನಿಲ್ಲಿಸುತ್ತಾನೆ. ಅವಳ ಮುಕ್ತ ಕೇಶಪಾಶವು ಕೇವಲ ಕೂದಲಲ್ಲ, ಅದು ಹಸ್ತಿನಾವತಿಯ ರಾಜಸಭೆಯಲ್ಲಿ ಹೆಣ್ಣಿನ ಘನತೆ ಹರಾಜಾದಾಗ ಸಮಾಜವು ಅನುಭವಿಸಿದ ನೈತಿಕ ಶೂನ್ಯತೆಯ ರೂಪಕ. ಈ ಶೂನ್ಯವನ್ನು ತುಂಬಲು ರಕ್ತದ ಅಭಿಷೇಕವೇ ಆಗಬೇಕು ಎಂಬುದು ದ್ರೌಪದಿಯ ಹಠದ ಹಿಂದಿನ ತಾತ್ವಿಕತೆ.

ರನ್ನನ ಕಾವ್ಯದಲ್ಲಿ ದ್ರೌಪದಿಯು 'ಶಕ್ತಿ' ದೇವತೆಯ ಮಾನವ ರೂಪವಾಗಿ ಕಾಣಿಸಿಕೊಳ್ಳುತ್ತಾಳೆ. ಭೀಮನು ದುರ್ಯೋಧನನನ್ನು ಸಂಹರಿಸಲು ಹೊರಡುವಾಗ ದ್ರೌಪದಿಯು ನೀಡುವ ಪ್ರೇರಣೆಯು ಕೇವಲ ಯುದ್ಧದ ಉತ್ತೇಜನವಲ್ಲ, ಅದು 'ಸಮಾಜದ ಶುದ್ಧೀಕರಣ'ದ ಪ್ರಕ್ರಿಯೆ. ರನ್ನನು ದ್ರೌಪದಿಯ ಮುಡಿಯನ್ನು "ಧೂಮಕೇತು"ವಿಗೆ ಹೋಲಿಸುತ್ತಾನೆ. ಆಕಾಶದಲ್ಲಿ ಧೂಮಕೇತು ಕಾಣಿಸಿಕೊಂಡರೆ ಹೇಗೆ ವಿನಾಶ ಸನ್ನಿಹಿತವೋ, ಹಾಗೆಯೇ ದ್ರೌಪದಿಯ ಬಿಚ್ಚಿದ ಮುಡಿಯು ಕೌರವ ವಂಶದ ನಾಶದ ಮುನ್ಸೂಚನೆಯಾಗಿದೆ. ಇಲ್ಲಿ ದ್ರೌಪದಿಯು ವೈಯಕ್ತಿಕ ಸೇಡನ್ನು ಮೀರಿದ ಒಂದು 'ಸಾಂಸ್ಕೃತಿಕ ಶುದ್ಧೀಕರಣ'ದ ಪ್ರತೀಕವಾಗುತ್ತಾಳೆ. ಎಂ.

ಚಿದಾನಂದಮೂರ್ತಿಯವರು ತಮ್ಮ 'ಸಂಶೋಧನಾ ತರಂಗ'ದಲ್ಲಿ ವಿವರಿಸುವಂತೆ, ದ್ರೌಪದಿಯ ಪ್ರತಿಭಟನೆಯು ಅಂದಿನ ಕಾಲದ ಪುರುಷ ಪ್ರಧಾನ ಅಧಿಕಾರಶಾಹಿಗೆ ನೀಡಿದ ಅತ್ಯಂತ ದೊಡ್ಡ ಸವಾಲಾಗಿದೆ.

ಕಾವ್ಯದ ಮಹೋನ್ನತ ಘಟ್ಟವಾದ ಭೀಮ–ದುರ್ಯೋಧನರ ಗದಾಯುದ್ಧದ ಸಮಯದಲ್ಲಿ, ದ್ರೌಪದಿಯ ರೂಪಕವು 'ವಿಜಯದ ಆಕಾಂಕ್ಷೆ'ಯಾಗಿ ಬದಲಾಗುತ್ತದೆ. ಭೀಮನು ದುರ್ಯೋಧನನ ತೊಡೆಯನ್ನು ಸೀಳಿ, ಆ ಬಿಸಿಯಾದ ರಕ್ತವನ್ನು ತಂದು ದ್ರೌಪದಿಯ ಮುಡಿಗೆ ಹಚ್ಚುವ ದೃಶ್ಯವು ರನ್ನನ ಕಾವ್ಯದ ಜೀವನಾಡಿ. ಇದು ಕೇವಲ ರೌದ್ರ ರಸದ ಪರಾಕಾಷ್ಠೆಯಲ್ಲ; ಇದು 'ನ್ಯಾಯದ ಮರುಸ್ಥಾಪನೆ'ಯ ಸಂಕೇತ. ರಕ್ತದಿಂದ ಮುಡಿ ಕಟ್ಟಿಸಿಕೊಳ್ಳುವ ದ್ರೌಪದಿಯು ಇಲ್ಲಿ 'ಧರ್ಮದ ಅಸ್ಮಿತೆ'ಯಾಗಿ ನಿಲ್ಲುತ್ತಾಳೆ. ಅಧಿಕಾರವು ಯಾವಾಗ ಹಾದಿ ತಪ್ಪುತ್ತದೆಯೋ ಆಗ ಅದು ರಕ್ತಪಾತಕ್ಕೆ ದಾರಿ ಮಾಡಿಕೊಡುತ್ತದೆ ಮತ್ತು ಆ ರಕ್ತಪಾತದ ನಂತರವಷ್ಟೇ ಶಾಂತಿ ಎಂಬ ಮುಡಿ ಕಟ್ಟಲು ಸಾಧ್ಯ ಎಂಬುದು ರನ್ನನ ಕಾವ್ಯದ ಗಂಭೀರ ಸಂದೇಶ. ಇಲ್ಲಿ ದ್ರೌಪದಿಯ ಸ್ತ್ರೀತ್ವವು ಅಬಲತೆಯಿಂದ ಸಬಲತೆಯ ಕಡೆಗೆ ಪಯಣಿಸುತ್ತದೆ.

ದ್ರೌಪದಿಯ ರೂಪಕದಲ್ಲಿ ರನ್ನನು 'ವೈರಾಗ್ಯ' ಮತ್ತು 'ಕರ್ತವ್ಯ'ಗಳ ದ್ವಂದ್ವವನ್ನು ತರುತ್ತಾನೆ. ಕೃಷ್ಣನ ಸಂಧಾನ ವಿಫಲವಾದಾಗ ದ್ರೌಪದಿಯು ತೋರುವ ದೃಢತೆ, ಅಧಿಕಾರವು ಕೇವಲ ರಾಜಿಗೆ ಸೀಮಿತವಾಗಬಾರದು ಎಂಬುದನ್ನು ಸಾರುತ್ತದೆ. ಅವಳು ಭೀಮನಿಗೆ ಹೇಳುವ ಮಾತುಗಳಲ್ಲಿ 'ನೀನು ಗದೆಯನ್ನು ಹಿಡಿದಿರುವುದು ಕೇವಲ ರಾಜ್ಯಕ್ಕಾಗಿ ಅಲ್ಲ, ನನ್ನ ಮುಡಿಯನ್ನು ಕಟ್ಟಲು' ಎಂಬ ಒಳಾರ್ಥವಿದೆ. ಅಂದರೆ, ರಾಜ್ಯದ ಅಧಿಕಾರಕ್ಕಿಂತಲೂ ಒಬ್ಬ ಸ್ತ್ರೀಯ ಘನತೆಯೇ ಸಾರ್ವಭೌಮವಾದುದು. ಈ ಚಿಂತನೆಯು ರನ್ನನ ಕಾವ್ಯವನ್ನು ಕೇವಲ ಒಂದು ಯುದ್ಧ ಕಾವ್ಯವಾಗಿ ಉಳಿಸದೆ, ಅದನ್ನು 'ಮಾನವ ಹಕ್ಕುಗಳ ಮಹಾಕಾವ್ಯ'ವಾಗಿ ಪರಿವರ್ತಿಸುತ್ತದೆ. ದ್ರೌಪದಿಯ ರೂಪಕವು ಹತ್ತನೇ ಶತಮಾನದ ಕನ್ನಡ ಸಮಾಜಕ್ಕೆ ಹೆಣ್ಣಿನ ಸ್ಥಾನಮಾನದ ಬಗ್ಗೆ ನೀಡಿದ ದೊಡ್ಡ ಎಚ್ಚರಿಕೆಯಾಗಿದೆ.

ಈ ಲೇಖನದ ಪ್ರಮುಖ ಅಂಶವೆಂದರೆ ದ್ರೌಪದಿಯ 'ಮೌನ'. ಸಭೆಯಲ್ಲಿ ಅವಮಾನಿತಳಾದಾಗ ಅವಳು ಅನುಭವಿಸಿದ ಮೌನವು, ಯುದ್ಧದ ಘರ್ಜನೆಗಿಂತಲೂ ಭಯಾನಕವಾದುದು. ಆ ಮೌನವೇ ನಂತರದಲ್ಲಿ ಯುದ್ಧದ ಕಿಚ್ಚಾಗಿ ಬದಲಾಗುತ್ತದೆ. ರನ್ನನು ದ್ರೌಪದಿಯ ಮೌನವನ್ನು ಅಧಿಕಾರದ ಅಧಃಪತನದ ಮುನ್ಸೂಚನೆಯಾಗಿ ಬಳಸುತ್ತಾನೆ. ಜಿ.ಎಸ್. ಶಿವರುದ್ರಪ್ಪನವರು ತಮ್ಮ 'ಪಂಪ ರನ್ನರ ಕಾವ್ಯ ಚಿಂತನೆ'ಯಲ್ಲಿ

ಹೇಳುವಂತೆ, ರನ್ನನ ದ್ರೌಪದಿಯು ಕೇವಲ ಒಂದು ಪಾತ್ರವಲ್ಲ, ಅವಳು 'ಇತಿಹಾಸದ ಕಣ್ಣೀರು'. ಈ ಕಣ್ಣೀರು ಅಧಿಕಾರದ ಸಿಂಹಾಸನವನ್ನು ತೊಳೆಯುವ ಗಂಗೆಯಂತೆ ಕಾರ್ಯನಿರ್ವಹಿಸುತ್ತದೆ. ದ್ರೌಪದಿಯ ರೂಪಕವು ಸ್ತ್ರೀವಾದಿ ನೆಲೆಗಟ್ಟಿನಲ್ಲಿ ನೋಡಿದಾಗ, ಅಧಿಕಾರದ ವಿರುದ್ಧ ಹೆಣ್ಣು ನಡೆಸುವ ಅತಿದೊಡ್ಡ ವೈಚಾರಿಕ ಯುದ್ಧವಾಗಿ ಗೋಚರಿಸುತ್ತದೆ.

ಅಂತಿಮವಾಗಿ, ದ್ರೌಪದಿಯ ಮುಡಿ ಕಟ್ಟುವಿಕೆಯು ಒಂದು ಯುಗದ ಅಂತ್ಯ ಮತ್ತು ಮತ್ತೊಂದು ಯುಗದ ಆರಂಭವನ್ನು ಸೂಚಿಸುತ್ತದೆ. ದ್ರೌಪದಿಯು ತನ್ನ ಮುಡಿಯನ್ನು ಕಟ್ಟಿದಾಗ ಹಸ್ತಿನಾವತಿಯ ಅಧಿಕಾರವು ಪವಿತ್ರಗೊಳ್ಳುತ್ತದೆ. ರನ್ನನು ದ್ರೌಪದಿಯ ಸ್ತ್ರೀ ರೂಪಕದ ಮೂಲಕ ಜಗತ್ತಿಗೆ ಸಾರುವ ಸತ್ಯವೇನೆಂದರೆ: "ಯಾವ ಸಾಮ್ರಾಜ್ಯದಲ್ಲಿ ಸ್ತ್ರೀಯ ಕಣ್ಣೀರು ಹರಿಯುತ್ತದೆಯೋ ಆ ಸಾಮ್ರಾಜ್ಯದ ಅಧಿಕಾರವು ಸ್ಮಶಾನಕ್ಕೆ ಸಮಾನ." ಆದ್ದರಿಂದ, ಸಮಾಜದ ಶಾಂತಿ ಮತ್ತು ಅಧಿಕಾರದ ಸ್ಥಿರತೆಯು ಸ್ತ್ರೀಯ ಗೌರವದ ಮೇಲೆ ನಿಂತಿದೆ. ದ್ರೌಪದಿಯ ಈ ರೂಪಕವು ಸಾವಿರ ವರ್ಷಗಳ ನಂತರವೂ ಇಂದಿನ ಸಮಾಜಕ್ಕೆ ತನ್ನ ಪ್ರಸ್ತುತತೆಯನ್ನು ಉಳಿಸಿಕೊಂಡಿದೆ.

ಫಲಿತಗಳು :

1. ಸ್ತ್ರೀ ರೂಪಕ ವೆಂಬುದು ಮಹಾಭಾರತದಲ್ಲಿಯೇ ಒಂದು ಶಕ್ತಿ, ತಾಳ್ಮೆ, ಮೌನದ ಮೂಲಕ ಆಕರ್ಷಿತ ಪಾತ್ರವಾಗಿ ಕಾಣಿಸುತ್ತದೆ.
2. ದ್ರೌಪದಿಯ ಮುಕ್ತ ಕೇಶಪಾಶವು ಸಾಮಾಜಿಕ ಅಧರ್ಮದ ವಿರುದ್ಧದ 'ದೃಶ್ಯ ರೂಪಕ'ವಾಗಿ ಕಾರ್ಯನಿರ್ವಹಿಸುತ್ತದೆ.
3. ರನ್ನನ ಕಾವ್ಯದಲ್ಲಿ ಸ್ತ್ರೀ ಘನತೆಯೇ ಅಧಿಕಾರದ ಪರಮೋಚ್ಚ ಅಳತೆಗೋಲಾಗಿದೆ.
4. ಭೀಮನ ವೀರತ್ವಕ್ಕೆ ದ್ರೌಪದಿಯ ನೋವು ಮತ್ತು ಪ್ರತಿಜ್ಞೆಯೇ ಮೂಲ ಪ್ರೇರಣೆಯಾಗಿದೆ.
5. ರಕ್ತದಿಂದ ಮುಡಿ ಕಟ್ಟುವ ಕ್ರಿಯೆಯು 'ಸೇಡಿನ ನ್ಯಾಯ' ಮತ್ತು 'ನೈತಿಕ ಶುದ್ಧೀಕರಣ'ವನ್ನು ಸಂಕೇತಿಸುತ್ತದೆ.
6. ದ್ರೌಪದಿಯು ಕೇವಲ ಪತ್ನಿಯಾಗಿರದೆ, ಅಧರ್ಮದ ಸಂಹಾರದ 'ನಿಮಿತ್ತ ಮಾತ್ರ' ಶಕ್ತಿಯಾಗಿ ರನ್ನನ ಕಾವ್ಯದಲ್ಲಿ ಮೂಡಿಬಂದಿದ್ದಾಳೆ.

ಉಪಸಂಹಾರ

ರನ್ನನ 'ಸಾಹಸಭೀಮ ವಿಜಯಂ'ನಲ್ಲಿ ದ್ರೌಪದಿಯು ಸ್ತ್ರೀ ಅಸ್ಮಿತೆಯ ಮಹಾನ್ ಜ್ವಾಲೆಯಾಗಿದ್ದಾಳೆ. ಅವಳ ರೂಪಕವು ಕಾವ್ಯಕ್ಕೆ ಗಾಂಭೀರ್ಯವನ್ನು, ಭೀಮನಿಗೆ

ಶಕ್ತಿಯನ್ನು ಮತ್ತು ದುರ್ಯೋಧನನಿಗೆ ಅಂತ್ಯವನ್ನು ತರುತ್ತದೆ. ರನ್ನನು ದ್ರೌಪದಿಯ ಮೂಲಕ ಕೇವಲ ಒಂದು ಕಥೆಯನ್ನು ಹೇಳುತ್ತಿಲ್ಲ, ಬದಲಾಗಿ ಸ್ತ್ರೀ ಸಂವೇದನೆಯು ಅಧಿಕಾರದ ಗತಿಯನ್ನು ಹೇಗೆ ಬದಲಿಸಬಲ್ಲದು ಎಂಬುದನ್ನು ತೋರಿಸಿದ್ದಾನೆ. ದ್ರೌಪದಿಯ ಮುಡಿ ಕಟ್ಟುವಿಕೆಯೊಂದಿಗೆ ಕಾವ್ಯವು ಮುಕ್ತಾಯವಾಗುವುದು, ಹೆಣ್ಣಿನ ಗೌರವ ಮರುಸ್ಥಾಪನೆಯೇ ಲೋಕದ ಅಂತಿಮ ವಿಜಯ ಎಂಬ ಸತ್ಯವನ್ನು ಎತ್ತಿ ಹಿಡಿಯುತ್ತದೆ.

ಆಕರಗಳು ಮತ್ತು ಪರಾಮರ್ಶನ ಗ್ರಂಥಗಳು :

1. ಗದಾಯುದ್ಧ ನಾಟಕಂ., ಬಿ.ಎಂ. ಶ್ರೀಕಂಠಯ್ಯ., 1926, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
2. ರನ್ನನ ಸರಳ ಗದಾಯುದ್ಧ., ಎಲ್. ಬಸವರಾಜು, 2017, ಸಪ್ನ ಬುಕ್ ಹೌಸ್, ಬೆಂಗಳೂರು.
3. ಸಂಶೋಧನಾ ತರಂಗ., ಎಂ. ಚಿದಾನಂದಮೂರ್ತಿ., 1970, ಸಂಯುಕ್ತ ಕರ್ನಾಟಕ ಪ್ರಕಾಶನ, ಬೆಂಗಳೂರು.
4. ಕನ್ನಡ ಸಾಹಿತ್ಯ ಚರಿತ್ರೆ., ರಂ.ಶ್ರೀ. ಮುಗಳಿ., 1953, ಉಷಾ ಸಾಹಿತ್ಯ ಮಾಲೆ, ಮೈಸೂರು.

***

ತಂತ್ರಜ್ಞಾನ ಕ್ಷೇತ್ರದಲ್ಲಿ ಕನ್ನಡದ ಪ್ರಸ್ತುತತೆ

ನವೀನ್ ಕುಮಾರ್ ಸಿ.
ಕನ್ನಡ ಸಹಾಯಕ ಪ್ರಾಧ್ಯಾಪಕರು
ಕ್ರೈಸ್ಟ್ ಅಕಾಡೆಮಿ ಇನ್ಸ್ಟಿಟ್ಯೂಟ್
ಫಾರ್ ಅಡ್ವಾನ್ಸ್ಡ್ ಸ್ಟಡೀಸ್
ಬೆಂಗಳೂರು–560083

1

ಪ್ರಮುಖ ಪದಗಳು
ತಂತ್ರಜ್ಞಾನ, ಸಂಶೋಧನೆ, ಬುದ್ಧಿಮತ್ತೆ, ವೆಬ್‌ಸೈಟ್‌ಗಳು, ಡಿಜಿಟಲ್, ಪಾಡ್‌ಕಾಸ್

ಭಾಷೆ ಎನ್ನುವುದು ಕೇವಲ ಸಂವಹನದ ಸಾಧನವಲ್ಲ; ಅದು ಒಂದು ಸಂಸ್ಕೃತಿ, ಅಸ್ಮಿತೆ ಮತ್ತು ಜ್ಞಾನ ಪರಂಪರೆಯ ಪ್ರತಿಬಿಂಬವಾಗಿದೆ. ಇಂದಿನ ಡಿಜಿಟಲ್ ಯುಗದಲ್ಲಿ ತಂತ್ರಜ್ಞಾನ ಮಾನವ ಜೀವನದ ಅವಿಭಾಜ್ಯ ಅಂಗವಾಗಿದ್ದು, ಈ ಕ್ಷೇತ್ರದಲ್ಲಿ ಭಾಷೆಗಳ ಪಾತ್ರವೂ ಅತ್ಯಂತ ಮಹತ್ವ ಪಡೆದುಕೊಂಡಿದೆ. ಈ ಹಿನ್ನೆಲೆಯಲ್ಲಿ ತಂತ್ರಜ್ಞಾನ ಕ್ಷೇತ್ರದಲ್ಲಿ ಕನ್ನಡದ ಪ್ರಸ್ತುತತೆ ಎಂಬ ವಿಚಾರ ವಿಶ್ಲೇಷಣೆಗೆ ಅರ್ಹವಾಗಿದೆ.

ಮೊದಲನೆಯದಾಗಿ, ಮಾಹಿತಿ ತಂತ್ರಜ್ಞಾನ ಮತ್ತು ಡಿಜಿಟಲ್ ಮಾಧ್ಯಮಗಳಲ್ಲಿ ಕನ್ನಡದ ಬಳಕೆ ದಿನೇದಿನೇ ವಿಸ್ತರಿಸುತ್ತಿದೆ. ಮೊಬೈಲ್ ಅಪ್ಲಿಕೇಶನ್‌ಗಳು, ವೆಬ್‌ಸೈಟ್‌ಗಳು, ಸಾಮಾಜಿಕ ಜಾಲತಾಣಗಳು ಹಾಗೂ ಸರ್ಕಾರಿ ಡಿಜಿಟಲ್ ಸೇವೆಗಳು ಕನ್ನಡ ಭಾಷೆಯನ್ನು ಅಳವಡಿಸಿಕೊಳ್ಳುತ್ತಿರುವುದು ಗಮನಾರ್ಹವಾಗಿದೆ. ಕರ್ನಾಟಕ ಸರ್ಕಾರದ ಇ-ಗವರ್ನನ್ಸ್ ಯೋಜನೆಗಳು, ಆನ್‌ಲೈನ್ ಅರ್ಜಿಗಳು ಮತ್ತು ಸಾರ್ವಜನಿಕ ಸೇವೆಗಳು ಕನ್ನಡದಲ್ಲಿ ಲಭ್ಯವಾಗುತ್ತಿರುವುದರಿಂದ ಸಾಮಾನ್ಯ ಜನರಿಗೆ ತಂತ್ರಜ್ಞಾನ ಸುಲಭವಾಗಿ ತಲುಪುತ್ತಿದೆ.

ಎರಡನೆಯದಾಗಿ, ಯುನಿಕೋಡ್ ತಂತ್ರಜ್ಞಾನ ಹಾಗೂ ಭಾರತೀಯ ಭಾಷೆಗಳಿಗಾಗಿ ಅಭಿವೃದ್ಧಿಪಡಿಸಿದ

ಫಾಂಟ್‌ಗಳು ಕನ್ನಡವನ್ನು ಡಿಜಿಟಲ್ ಲೋಕದಲ್ಲಿ ದೃಢವಾಗಿ ಸ್ಥಾಪಿಸಿವೆ. ಹಿಂದಿನ ಕಾಲದಲ್ಲಿ ಲಿಪಿ ಸಮಸ್ಯೆಯಿಂದ ಕನ್ನಡ ಬಳಕೆ ಸೀಮಿತವಾಗಿದ್ದರೆ, ಇಂದಿನ ದಿನಗಳಲ್ಲಿ ಯಾವುದೇ ಸಾಧನದಲ್ಲೂ ಕನ್ನಡ ಬರವಣಿಗೆ, ಓದು ಮತ್ತು ಸಂವಹನ ಸುಲಭವಾಗಿದೆ. ಇದರಿಂದ ಶಿಕ್ಷಣ, ಸಂಶೋಧನೆ ಮತ್ತು ಸೃಜನಶೀಲ ಬರವಣಿಗೆಯಲ್ಲಿ ಕನ್ನಡದ ಬಳಕೆ ಹೆಚ್ಚಾಗಿದೆ.

ಮೂರನೆಯದಾಗಿ, ಕೃತಕ ಬುದ್ಧಿಮತ್ತೆ, ಯಂತ್ರ ಭಾಷಾಂತರ, ಧ್ವನಿ ಗುರುತಿಸುವಿಕೆ ಮತ್ತು ಚಾಟ್‌ಜಿಪಿಟಿಗಳಂತಹ ಆಧುನಿಕ ತಂತ್ರಜ್ಞಾನಗಳಲ್ಲಿ ಕನ್ನಡ ಪ್ರವೇಶಿಸುತ್ತಿರುವುದು ಸಂತಸದ ವಿಷಯ. ಗೂಗಲ್, ಮೈಕ್ರೋಸಾಫ್ಟ್ ಮುಂತಾದ ತಂತ್ರಜ್ಞಾನ ಕಂಪನಿಗಳು ಕನ್ನಡವನ್ನು ತಮ್ಮ ಉತ್ಪನ್ನಗಳಲ್ಲಿ ಸೇರಿಸುತ್ತಿರುವುದರಿಂದ ಕನ್ನಡ ಭಾಷೆಯ ಭವಿಷ್ಯ ಮತ್ತಷ್ಟು ಬಲಿಷ್ಠವಾಗುತ್ತಿದೆ.

ಇನ್ನೊಂದೆಡೆ, ತಂತ್ರಜ್ಞಾನ ಕ್ಷೇತ್ರದಲ್ಲಿ ಕನ್ನಡದ ಸಂಪೂರ್ಣ ಬಳಕೆಗೆ ಇನ್ನೂ ಸವಾಲುಗಳಿವೆ. ತಾಂತ್ರಿಕ ಪದಕೋಶದ ಕೊರತೆ, ಉನ್ನತ ತಾಂತ್ರಿಕ ಶಿಕ್ಷಣದಲ್ಲಿ ಇಂಗ್ಲಿಷ್‌ನ ಪ್ರಾಬಲ್ಯ, ಹಾಗೂ ಕನ್ನಡದಲ್ಲಿ ತಾಂತ್ರಿಕ ವಿಷಯಗಳ ಸಂಶೋಧನೆ ಕಡಿಮೆ ಇರುವುದರಿಂದ ಅಭಿವೃದ್ಧಿಗೆ ಅಡೆತಡೆ ಉಂಟಾಗಿದೆ. ಆದರೆ ಈ ಸವಾಲುಗಳನ್ನು ಅವಕಾಶಗಳಾಗಿ ಪರಿವರ್ತಿಸಲು ಶೈಕ್ಷಣಿಕ ಸಂಸ್ಥೆಗಳು, ಸರ್ಕಾರ ಮತ್ತು ತಂತ್ರಜ್ಞಾನ ತಜ್ಞರು ಒಟ್ಟಾಗಿ ಕಾರ್ಯನಿರ್ವಹಿಸಬೇಕಾಗಿದೆ.

ಒಟ್ಟಿನಲ್ಲಿ, ತಂತ್ರಜ್ಞಾನ ಕ್ಷೇತ್ರದಲ್ಲಿ ಕನ್ನಡದ ಪ್ರಸ್ತುತತೆ ಇಂದು ಪ್ರಶ್ನೆಯಲ್ಲ; ಅದು ಅವಶ್ಯಕತೆ. ಕನ್ನಡವನ್ನು ತಂತ್ರಜ್ಞಾನಕ್ಕೆ ಹೊಂದಿಸುವುದರೊಂದಿಗೆ, ತಂತ್ರಜ್ಞಾನವನ್ನು ಕನ್ನಡೀಕರಿಸುವ ಪ್ರಯತ್ನಗಳು ನಡೆದಾಗ ಮಾತ್ರ ಭಾಷೆಯ ಸಮಗ್ರ ಅಭಿವೃದ್ಧಿ ಸಾಧ್ಯ. ಡಿಜಿಟಲ್ ಯುಗದಲ್ಲಿ ಕನ್ನಡದ ಅಸ್ತಿತ್ವವನ್ನು ಉಳಿಸಿ ಬೆಳೆಸುವ ಜವಾಬ್ದಾರಿ ಪ್ರತಿಯೊಬ್ಬ ಕನ್ನಡಿಗನ ಮೇಲಿದೆ.

ಭಾಷೆ ಎನ್ನುವುದು ಕೇವಲ ಸಂವಹನದ ಸಾಧನವಲ್ಲ; ಅದು ಒಂದು ಜನಾಂಗದ ಸಂಸ್ಕೃತಿ, ಅಸ್ಮಿತೆ, ಜ್ಞಾನಪರಂಪರೆ ಮತ್ತು ಬೌದ್ಧಿಕ ಇತಿಹಾಸದ ಜೀವಂತ ದಾಖಲೆ. 21ನೇ ಶತಮಾನದ ಡಿಜಿಟಲ್ ಯುಗದಲ್ಲಿ ತಂತ್ರಜ್ಞಾನ ಮಾನವ ಜೀವನದ ಪ್ರತಿಯೊಂದು ಕ್ಷೇತ್ರವನ್ನೂ ಆವರಿಸಿಕೊಂಡಿದ್ದು, ಈ ಬದಲಾವಣೆಯೊಂದಿಗೆ ಭಾಷೆಗಳ ಪಾತ್ರವೂ ಹೊಸ ಆಯಾಮಗಳನ್ನು ಪಡೆದುಕೊಂಡಿದೆಸಿ. ಇಂತಹ ಸಂದರ್ಭದಲ್ಲಿ ತಂತ್ರಜ್ಞಾನ ಕ್ಷೇತ್ರದಲ್ಲಿ ಕನ್ನಡದ ಪ್ರಸ್ತುತತೆ ಎಂಬ ವಿಷಯವು ಕೇವಲ ಭಾಷಾ ಚರ್ಚೆಯಲ್ಲ, ಅದು ಸಾಮಾಜಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಪ್ರಶ್ನೆಯಾಗಿ ನಮ್ಮ ಮುಂದಿದೆ.

ಜಾಗತೀಕರಣ ಮತ್ತು ಇಂಗ್ಲಿಷ್ ಭಾಷೆಯ ಪ್ರಾಬಲ್ಯದಿಂದಾಗಿ ತಂತ್ರಜ್ಞಾನ ಕ್ಷೇತ್ರವು ಬಹುಕಾಲ ಸ್ಥಳೀಯ ಭಾಷೆಗಳಿಂದ ದೂರವಿದ್ದರೂ, ಇತ್ತೀಚಿನ ವರ್ಷಗಳಲ್ಲಿ ಭಾರತೀಯ ಭಾಷೆಗಳ, ವಿಶೇಷವಾಗಿ ಕನ್ನಡದ, ಮಹತ್ವ ಪುನಃ ಗುರುತಿಸಲ್ಪಡುತ್ತಿದೆ. ಈ ಲೇಖನವು ತಂತ್ರಜ್ಞಾನ ಕ್ಷೇತ್ರದಲ್ಲಿ ಕನ್ನಡದ ಇಂದಿನ ಸ್ಥಿತಿ, ಅದರ ಸಾಧನೆಗಳು, ಸವಾಲುಗಳು ಹಾಗೂ ಭವಿಷ್ಯದ ಸಾಧ್ಯತೆಗಳನ್ನು ವಿಶ್ಲೇಷಣಾತ್ಮಕವಾಗಿ ಚರ್ಚಿಸುತ್ತದೆ.

1. ತಂತ್ರಜ್ಞಾನ ಮತ್ತು ಭಾಷೆ: ಪರಸ್ಪರ ಸಂಬಂಧ

ತಂತ್ರಜ್ಞಾನವು ಮಾನವನ ಜ್ಞಾನವನ್ನು ವೇಗವಾಗಿ ಹರಡಿಸುವ ಶಕ್ತಿಶಾಲಿ ಮಾಧ್ಯಮವಾಗಿದೆ. ಆದರೆ ಯಾವುದೇ ತಂತ್ರಜ್ಞಾನವು ಜನಸಾಮಾನ್ಯರಿಗೆ ತಲುಪಬೇಕಾದರೆ, ಅದು ಅವರ ಮಾತೃಭಾಷೆಯಲ್ಲಿ ಲಭ್ಯವಾಗಬೇಕು. ಭಾಷೆಯಿಲ್ಲದೆ ತಂತ್ರಜ್ಞಾನ ಅರ್ಥಹೀನ, ತಂತ್ರಜ್ಞಾನವಿಲ್ಲದೆ ಭಾಷೆ ಸೀಮಿತ.

ಭಾರತದಂತಹ ಬಹುಭಾಷಾ ದೇಶದಲ್ಲಿ ಡಿಜಿಟಲ್ ವಿಭಜನೆ ಮುಖ್ಯವಾಗಿ ಭಾಷೆಯ ಕಾರಣದಿಂದ ಉಂಟಾಗುತ್ತದೆ. ತಂತ್ರಜ್ಞಾನವು ಕನ್ನಡದಲ್ಲಿ ಲಭ್ಯವಾದಾಗ ಮಾತ್ರ ಗ್ರಾಮೀಣ ಹಾಗೂ ಅರೆಶಿಕ್ಷಿತ ಸಮುದಾಯಗಳಿಗೂ ಅದು ತಲುಪಲು ಸಾಧ್ಯವಾಗುತ್ತದೆ.

2. ಕನ್ನಡದ ಡಿಜಿಟಲೀಕರಣದ ಇತಿಹಾಸ

ಕನ್ನಡದ ಡಿಜಿಟಲ್ ಪಯಣವು 1990ರ ದಶಕದಲ್ಲಿ ಪ್ರಾರಂಭವಾಯಿತು. ಆರಂಭದಲ್ಲಿ ನಾನ್–ಯುನಿಕೋಡ್ ಫಾಂಟ್‌ಗಳಾದ ಬರಹ, ನುಡಿ ಮುಂತಾದವುಗಳ ಬಳಕೆ ಹೆಚ್ಚಾಗಿತ್ತು. ಇವು ತಾಂತ್ರಿಕವಾಗಿ ಸೀಮಿತವಾಗಿದ್ದರೂ, ಕನ್ನಡವನ್ನು ಕಂಪ್ಯೂಟರ್ ಲೋಕಕ್ಕೆ ಪರಿಚಯಿಸುವಲ್ಲಿ ಮಹತ್ವದ ಪಾತ್ರ ವಹಿಸಿವೆ.

ಯುನಿಕೋಡ್ ವ್ಯವಸ್ಥೆಯ ಅಳವಡಿಕೆಯಿಂದ ಕನ್ನಡಕ್ಕೆ ಜಾಗತಿಕ ಮಾನ್ಯತೆ ದೊರಕಿತು. ಇದರಿಂದ ವೆಬ್‌ಸೈಟ್‌ಗಳು, ಇ–ಮೇಲ್, ಮೊಬೈಲ್ ಅಪ್ಲಿಕೇಶನ್‌ಗಳು ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಕನ್ನಡ ಬಳಕೆ ಸುಲಭವಾಯಿತು. ಯುನಿಕೋಡ್ ನಂತರ ಕನ್ನಡವು ಡಿಜಿಟಲ್ ಲೋಕದಲ್ಲಿ ಸ್ಥಿರ ಸ್ಥಾನ ಪಡೆದಿತು.

3. ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಕನ್ನಡ

ಇಂದಿನ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಕನ್ನಡದ ಬಳಕೆ ಹಲವು ಹಂತಗಳಲ್ಲಿ ಕಂಡುಬರುತ್ತದೆ. ಕರ್ನಾಟಕ ಸರ್ಕಾರದ ಇ–ಗವರ್ನನ್ಸ್ ಯೋಜನೆಗಳಾದ ಭೂಮಿ, ಕಾವೇರಿ, ಸೇವಾ ಸಿಂಧು ಮುಂತಾದ ಪೋರ್ಟಲ್‌ಗಳು ಕನ್ನಡವನ್ನು ಬಳಸುತ್ತಿರುವುದು ಗಮನಾರ್ಹವಾಗಿದೆ. ಇದರಿಂದ ಆಡಳಿತ ವ್ಯವಸ್ಥೆ ಜನಸಾಮಾನ್ಯರಿಗೆ ಇನ್ನಷ್ಟು ಹತ್ತಿರವಾಗಿದೆ.

ಶಿಕ್ಷಣ ಕ್ಷೇತ್ರದಲ್ಲಿಯೂ ಡಿಜಿಟಲ್ ಪಠ್ಯಪುಸ್ತಕಗಳು, ಇ–ಲರ್ನಿಂಗ್ ಪ್ಲಾಟ್‌ಫಾರ್ಮ್‌ಗಳು ಮತ್ತು ಆನ್‌ಲೈನ್ ತರಗತಿಗಳಲ್ಲಿ ಕನ್ನಡ ವಿಷಯಗಳು ಹೆಚ್ಚಾಗುತ್ತಿವೆ. ಜೊತೆಗೆ, ಆನ್‌ಲೈನ್ ಪತ್ರಿಕೆಗಳು, ಬ್ಲಾಗ್‌ಗಳು, ಯೂಟ್ಯೂಬ್ ಚಾನೆಲ್‌ಗಳು ಮತ್ತು ಪಾಡ್‌ಕಾಸ್ಟ್‌ಗಳ ಮೂಲಕ ಕನ್ನಡವು ಡಿಜಿಟಲ್ ಮಾಧ್ಯಮದಲ್ಲಿ ವ್ಯಾಪಕವಾಗಿ ಬಳಕೆಯಾಗುತ್ತಿದೆ.

4. ಕೃತಕ ಬುದ್ಧಿಮತ್ತೆ ಮತ್ತು ಕನ್ನಡ

ಕೃತಕ ಬುದ್ಧಿಮತ್ತೆ ಮತ್ತು ಯಂತ್ರ ಅಧ್ಯಯನ ಕ್ಷೇತ್ರಗಳಲ್ಲಿ ಕನ್ನಡದ ಪ್ರವೇಶ ಇತ್ತೀಚಿನ ಮಹತ್ವದ ಬೆಳವಣಿಗೆಯಾಗಿದೆ. ಧ್ವನಿ ಗುರುತಿಸುವಿಕೆ, ಪಠ್ಯದಿಂದ ಧ್ವನಿ, ಧ್ವನಿಯಿಂದ ಪಠ್ಯ ಮತ್ತು ಯಂತ್ರ ಭಾಷಾಂತರ ತಂತ್ರಜ್ಞಾನಗಳಲ್ಲಿ ಕನ್ನಡವನ್ನು ಅಳವಡಿಸಲಾಗುತ್ತಿದೆ.

ಗೂಗಲ್ ಅನುವಾದ, ವಾಯ್ಸ್ ಅಸಿಸ್ಟೆಂಟ್‌ಗಳು ಮತ್ತು ಚಾಟ್‌ಜಿಪಿಟಿಗಳಲ್ಲಿ ಕನ್ನಡ ಬಳಕೆಯು ಸಾಮಾನ್ಯವಾಗುತ್ತಿರುವುದು, ಭವಿಷ್ಯದಲ್ಲಿ ಕನ್ನಡವು ಉನ್ನತ ತಂತ್ರಜ್ಞಾನ ಕ್ಷೇತ್ರದಲ್ಲಿಯೂ ತನ್ನ ಸ್ಥಾನವನ್ನು ಪಡೆಯಲಿದೆ ಎಂಬುದನ್ನು ಸೂಚಿಸುತ್ತದೆ.

5. ತಂತ್ರಜ್ಞಾನ ಕ್ಷೇತ್ರದಲ್ಲಿ ಕನ್ನಡ ಎದುರಿಸುವ ಸವಾಲುಗಳು

ತಂತ್ರಜ್ಞಾನ ಕ್ಷೇತ್ರದಲ್ಲಿ ಕನ್ನಡದ ಬೆಳವಣಿಗೆಗೆ ಕೆಲವು ಪ್ರಮುಖ ಸವಾಲುಗಳಿವೆ. ಅನೇಕ ತಾಂತ್ರಿಕ ಪದಗಳಿಗೆ ಸಮರ್ಪಕ ಹಾಗೂ ಏಕಸ್ವರೂಪ ಕನ್ನಡ ಪದಕೋಶದ ಕೊರತೆ ಇದೆನಿಸಿ. ಜೊತೆಗೆ, ಉನ್ನತ ತಾಂತ್ರಿಕ ಶಿಕ್ಷಣದಲ್ಲಿ ಇಂಗ್ಲಿಷ್ ಭಾಷೆಯ ಪ್ರಾಬಲ್ಯ ಹೆಚ್ಚಿರುವುದರಿಂದ ಕನ್ನಡದ ಬಳಕೆ ಸೀಮಿತವಾಗುತ್ತಿದೆ.

ಕನ್ನಡದಲ್ಲಿ ತಂತ್ರಜ್ಞಾನ ಸಂಬಂಧಿತ ಸಂಶೋಧನಾ ಲೇಖನಗಳು, ಪಠ್ಯಸಾಮಗ್ರಿ ಮತ್ತು ತಾಂತ್ರಿಕ ಕೈಪಿಡಿಗಳು ಕಡಿಮೆ ಪ್ರಮಾಣದಲ್ಲಿರುವುದು ಇನ್ನೊಂದು ಅಡ್ಡಿಯಾಗಿದೆನಿಸಿ. ಈ ಸಮಸ್ಯೆಗಳನ್ನು ನಿವಾರಿಸಲು ಸರ್ಕಾರ, ವಿಶ್ವವಿದ್ಯಾಲಯಗಳು ಮತ್ತು ತಂತ್ರಜ್ಞರು ಸಮನ್ವಯದಿಂದ ಕಾರ್ಯನಿರ್ವಹಿಸಬೇಕಾಗಿದೆ.

6. ಭವಿಷ್ಯದ ಸಾಧ್ಯತೆಗಳು

ರಾಷ್ಟ್ರೀಯ ಶಿಕ್ಷಣ ನೀತಿ ಮಾತೃಭಾಷಾ ಆಧಾರಿತ ಶಿಕ್ಷಣಕ್ಕೆ ಒತ್ತು ನೀಡುತ್ತಿರುವುದು ಕನ್ನಡಕ್ಕೆ ಹೊಸ ಅವಕಾಶಗಳನ್ನು ಸೃಷ್ಟಿಸಿದೆ. ಡಿಜಿಟಲ್ ಇಂಡಿಯಾ ಯೋಜನೆಯಡಿಯಲ್ಲಿ ಸ್ಥಳೀಯ ಭಾಷೆಗಳ ಬಳಕೆಯನ್ನು ಉತ್ತೇಜಿಸಲಾಗುತ್ತಿದೆ. ಭವಿಷ್ಯದಲ್ಲಿ ಕನ್ನಡದಲ್ಲಿ ಸಾಫ್ಟ್‌ವೇರ್ ಅಭಿವೃದ್ಧಿ, ತಾಂತ್ರಿಕ ಬರವಣಿಗೆ, ಡೇಟಾ ಸಂಗ್ರಹ ಮತ್ತು ಡಿಜಿಟಲ್ ಸಂರಕ್ಷಣೆ ಹೆಚ್ಚಾದರೆ, ಕನ್ನಡವು ಕೇವಲ ಸಾಹಿತ್ಯ

ಭಾಷೆಯಲ್ಲದೆ ಜ್ಞಾನ ಮತ್ತು ತಂತ್ರಜ್ಞಾನ ಭಾಷೆಯಾಗಿ ರೂಪುಗೊಳ್ಳಲಿದೆ.

ಉಪಸಂಹಾರ

ಒಟ್ಟಿನಲ್ಲಿ, ತಂತ್ರಜ್ಞಾನ ಕ್ಷೇತ್ರದಲ್ಲಿ ಕನ್ನಡದ ಪ್ರಸ್ತುತತೆ ಇಂದು ಅನಿವಾರ್ಯವಾಗಿದೆ. ಭಾಷೆ ಮತ್ತು ತಂತ್ರಜ್ಞಾನ ಪರಸ್ಪರ ಬೆಳೆಸಿಕೊಂಡಾಗ ಮಾತ್ರ ಸಮಗ್ರ ಸಮಾಜದ ಅಭಿವೃದ್ಧಿ ಸಾಧ್ಯ. ಕನ್ನಡವನ್ನು ತಂತ್ರಜ್ಞಾನಕ್ಕೆ ಹೊಂದಿಸುವುದರ ಜೊತೆಗೆ, ತಂತ್ರಜ್ಞಾನವನ್ನು ಕನ್ನಡೀಕರಿಸುವ ಪ್ರಯತ್ನಗಳು ನಿರಂತರವಾಗಿ ನಡೆಯಬೇಕು. ಡಿಜಿಟಲ್ ಯುಗದಲ್ಲಿ ಕನ್ನಡದ ಅಸ್ತಿತ್ವವನ್ನು ಉಳಿಸಿ ಬೆಳೆಸುವ ಜವಾಬ್ದಾರಿ ಪ್ರತಿಯೊಬ್ಬ ಕನ್ನಡಿಗನ ಮೇಲಿದೆ.

ಪರಾಮರ್ಶನ ಗ್ರಂಥಗಳು :

1. ಜವರೇಗೌಡ, ಡಿ. (2016). ಕನ್ನಡ ಭಾಷೆ ಮತ್ತು ತಂತ್ರಜ್ಞಾನ. ಮೈಸೂರು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ.
2. ಚಿದಾನಂದಮೂರ್ತಿ, ಎಂ. (2012). ಭಾಷೆ, ಸಂಸ್ಕೃತಿ ಮತ್ತು ಆಧುನಿಕತೆ. ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ.
3. ಅನಂತಮೂರ್ತಿ, ಯು.ಆರ್. (2008). ಭಾರತೀಯ ಸಂಸ್ಕೃತಿ ಮತ್ತು ಭಾಷಾ ಚಿಂತನೆ. ನವದೆಹಲಿ: ಸಾಹಿತ್ಯ ಅಕಾಡೆಮಿ.
4. ನಾಯಕ್, ಎಚ್.ಎಂ. (2019). ಡಿಜಿಟಲ್ ಯುಗದಲ್ಲಿ ಭಾರತೀಯ ಭಾಷೆಗಳು. ಹುಬ್ಬಳ್ಳಿ: ಅಕ್ಷರ ಪ್ರಕಾಶನ.

***

ನಾಗತಿಹಳ್ಳಿ ಚಂದ್ರಶೇಖರರ ಕಥೆಗಳಲ್ಲಿ ಪ್ರೀತಿ ಪ್ರೇಮ ಪ್ರಣಯ–ಕಾಮ

ಡಾ. ಬಸಯ್ಯ ಸ್ವಾಮಿ
ಸಹಾಯಕ ಪ್ರಾಧ್ಯಾಪಕ
ಕನ್ನಡ ವಿಭಾಗ,
ಜೈನ್ ವಿಶ್ವವಿದ್ಯಾಲಯ ಬೆಂಗಳೂರು
bassayya.s@jainuniversity.ac.in

"ಪ್ರೀತಿ ಇಲ್ಲದ ಮೇಲೆ
ಹೂವು ಅರಳಿತು ಹೇಗೆ?
ಮೋಡ ಕಟ್ಟಿತು ಹೇಗೆ?
ಹನಿಯೊಡೆದು ಕೆಳಗಿಳಿದು
ನೆಲಕ್ಕೆ ಹಸಿರು ಮೂಡಿತು ಹೇಗೆ?
ಪ್ರೀತಿ ಇಲ್ಲದ ಮೇಲೆ
ಮಾತಿಗೆ ಮಾತು ಕೂಡಿತು ಹೇಗೆ?
ಅರ್ಥ ಹುಟ್ಟಿತು ಹೇಗೆ?"
– ಜಿ.ಎಸ್. ಶಿವರುದ್ರಪ್ಪ

1

ಪ್ರಮುಖ ಪದಗಳು
ಪ್ರೀತಿ, ಪ್ರೇಮ, ಪ್ರಣಯ,
ಕಾಮ, ತತ್ವಜ್ಞಾನ

ಕವಿ ಜಿ.ಎಸ್. ಶಿವರುದ್ರಪ್ಪನವರ ಈ ಕವನದ ಸಾಲುಗಳು ಪ್ರೀತಿಯ ಮಹತ್ವವನ್ನು ಸಾರುತ್ತವೆ. ಪ್ರೀತಿ ಇಲ್ಲದ ಮೇಲೆ ಏನನ್ನೂ ಸಾಧಿಸಲು ಸಾಧ್ಯವಿಲ್ಲ ಎಂಬ ಸತ್ಯವನ್ನು ಇದು ಎತ್ತಿ ತೋರುತ್ತದೆ. ಚೆಲುವು ನೋಡುವ ಕಣ್ಣಿನಲ್ಲಿರುತ್ತದೆ; ಪ್ರೀತಿ ತುಂಬಿದ ಹೃದಯದಲ್ಲಿರುತ್ತದೆ. ಪ್ರೀತಿ ಮನಸ್ಸಿಟ್ಟು ನೋಡಿದಾಗ, ಆಸಕ್ತಿಯಿಂದ ಗಮನಿಸಿದಾಗ ಪ್ರತಿಯೊಂದು ವಸ್ತುವಿನಲ್ಲೂ ಪ್ರೀತಿ ಕಾಣಿಸಿಕೊಳ್ಳುತ್ತದೆ. ಪ್ರೀತಿ–ಪ್ರೇಮ–ಪ್ರಣಯ

ಎಂದೆಂದಿಗೂ ಹಚ್ಚ ಹಸಿರಾಗಿರುವಂತಹದ್ದು. ಪ್ರೀತಿ–ಪ್ರೇಮದಲ್ಲಿ ಪ್ರತಿಯೊಂದು ಜೀವಿಗಳು ಕೂಡ ತಮ್ಮ ಜೀವನದ ಸಾರ್ಥಕತೆಯನ್ನು ಕಂಡುಕೊಳ್ಳುತ್ತವೆ. ಒಳ್ಳೆಯ ಮನಸ್ಸಿನಿಂದ, ನಿಸ್ವಾರ್ಥದಿಂದ ಪ್ರಯತ್ನಿಸಿದರೆ ಎಂತಹ ಪ್ರೀತಿಯನ್ನಾದರೂ ಗಳಿಸಬಹುದು. ಪ್ರೀತಿ ಇದ್ದಾಗಲೇ ಚೆಲುವಿಗೆ ಅರ್ಥ ಬರುತ್ತದೆ.

ನಾಗತಿಹಳ್ಳಿ ಚಂದ್ರಶೇಖರರ ಸಾಹಿತ್ಯದಲ್ಲಿ ಪ್ರೀತಿ–ಪ್ರೇಮ–ಪ್ರಣಯ ಮತ್ತು ಕಾಮದ ವಿಷಯವು ನಮ್ಮ ಭಾರತೀಯ ಸಾಹಿತ್ಯದ ಒಂದು ಪ್ರಮುಖ ಭಾಗವಾಗಿದೆ. ಅವರ ಕತೆಗಳು, ಕಾದಂಬರಿಗಳು ಮತ್ತು ಚಿತ್ರಕಥೆಗಳಲ್ಲಿ ಮಾನವೀಯ ಪ್ರೀತಿಯ ಭಾವನೆಗಳನ್ನು ಸಮರ್ಥವಾಗಿ ಒಳಗೊಂಡಿವೆ. ಪ್ರೀತಿ–ಪ್ರೇಮ ಎಂಬುದು ಮನುಷ್ಯ ಜೀವನದ ಕೇಂದ್ರಬಿಂದುವಾಗಿದ್ದು, ಸಾಹಿತ್ಯದಲ್ಲೂ ಬಹಳ ಪ್ರಾಮುಖ್ಯತೆ ಹೊಂದಿದೆ. ಅವರ ಸಾಹಿತ್ಯದಲ್ಲಿ ಈ ವಿಷಯವು ಉತ್ಕೃಷ್ಟತೆಯಿಂದ ಚಿತ್ರಿತಗೊಂಡಿದೆ. ನಾಗತಿಹಳ್ಳಿ ಅವರು ತಮ್ಮ ಕೃತಿಗಳಲ್ಲಿ ಪ್ರೀತಿಯ ಆವಿರ್ಭಾವವನ್ನು ಪ್ರತಿಪಾದಿಸುತ್ತಾರೆ. ಪ್ರೀತಿ ಇಲ್ಲದರೆ ಬದುಕು ಬಿಕೋಚಾಗುತ್ತದೆ ಎಂಬುದು ಅವರ ಬರಹಗಳಲ್ಲಿ ಎದ್ದು ಕಾಣುತ್ತದೆ. ಅವರ ಸಾಹಿತ್ಯದಲ್ಲಿ ಪ್ರೀತಿ, ಪ್ರಣಯ ಮತ್ತು ಕಾಮವು ಅತಿಯಾದ ವೈಯಕ್ತಿಕತೆಗೆ ಎತ್ತರವಿಟ್ಟಿದೆ. ಕವಿಯ ಎಳವೆಯ ಭಾವನೆಗಳು ಪ್ರೀತಿಯ ಮೂಲಕವೇ ಜೀವವಂತಿಕೆಯನ್ನು ಅರಿಯುವ ಪ್ರಯತ್ನಕ್ಕೆ ನಾಂದಿ ಹಾಡುವಂತೆ ಕಾಣಿಸುತ್ತವೆ. ನಾಗತಿಹಳ್ಳಿ ಚಂದ್ರಶೇಖರರ ಕಾದಂಬರಿಗಳಾದ **"ಬಾ ನಲ್ಲೆ ಮಧು ಚಂದ್ರಕೆ"** ಮತ್ತು **"ಚುಕ್ಕಿ ಚಂದ್ರಮ ನಾಡಿನಲ್ಲಿ"** ಮುಖ್ಯವಾಗಿ ಪ್ರೀತಿಯ ವಸ್ತುಗಳೇ. ಈ ಕೃತಿಗಳಲ್ಲಿ ಪ್ರೇಮದಲ್ಲಿ ವ್ಯಕ್ತಿಗಳ ನಡುವಿನ ಸಂಬಂಧಗಳು, ಅವರ ನೈಜತೆ ಮತ್ತು ಮಾನವೀಯತೆಯ ಸುತ್ತಮುತ್ತ ನಡೆಯುವ ಪ್ರತಿಸ್ಪರ್ಧೆಗಳು ಕಥಾವಸ್ತುವಾಗಿ ಸ್ಪಷ್ಟವಾಗಿವೆ. ಅವರ ಸಾಹಿತ್ಯವು ಒಂದು ವ್ಯಕ್ತಿಯ ಏಕಾಂಗತೆಯ ಅನುಭವಗಳ ಪಯಣವನ್ನು ಆಳವಾಗಿ ಪೂರೈಸುತ್ತದೆ. ಉದಾಹರಣೆಗೆ, 'ಇರುವುದೆಲ್ಲವ ಬಿಟ್ಟು' ಎಂಬ ಕಥೆಯಲ್ಲಿ ಪ್ರೊಫೆಸರ್‌ನ ಬದ್ಧತೆಯ ಬಗೆಗಿನ ಆವೃತ್ತಿಗಳು ಮತ್ತು ಅವರ ಜೀವನ ಸಿದ್ಧಾಂತಗಳ ಕುರಿತು ದಾರ್ಶನಿಕ ಚಿಂತನೆಗಳು ವ್ಯಕ್ತವಾಗಿವೆ. ಚಂದನ, ಪ್ರೀತಿ ಮತ್ತು ಕಲಾತ್ಮಕ ಮುಕ್ತ ಚಿಂತನೆಗಳು ಈ ಕಥೆಯಲ್ಲಿ ಅನುಸರಿಸಿದ ಪ್ರಮುಖ ಅಂಶಗಳಾಗಿವೆ.

ಅವರ ಕಥೆಗಳಲ್ಲಿ ನಾವು ಕಂಡಂತೆ, 'ನನಗೆ ಈ ಜೀವನ ಹೇಗಿದೆ?' ಎಂಬ ಪ್ರಶ್ನೆಗಳು ನಿರಂತರವಾಗಿ ಜೀವಂತವಾಗಿವೆ. ಸಾಹಿತ್ಯದಲ್ಲಿ ಹುಟ್ಟುವ ಈಚಿನ ಯೋಗ, ತತ್ವಜ್ಞಾನ ಮತ್ತು ಪ್ರೀತಿಯ ಅವಿಭಜ್ಯ ಸಂಬಂಧಗಳು ನಾಗತಿಹಳ್ಳಿ ಅವರ ಸಾಹಿತ್ಯದಲ್ಲಿ ವಿಶೇಷವಾಗಿ ಬೆಳಕಿಗೆ ಬರುತ್ತವೆ. ಪ್ರೀತಿ–ಪ್ರಣಯ ಮತ್ತು ಕಾಮವನ್ನು

ಅನ್ವಯಿಸುವ ಪ್ರಕಾರ, ನಾಗತಿಹಳ್ಳಿ ಅವರ ಕಥೆಗಳಲ್ಲಿ ಸಾಮಾನ್ಯವಾಗಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಭಿವ್ಯಕ್ತಿಯ ವಿಶ್ಲೇಷಣೆ ಕಂಡುಬರುತ್ತದೆ. ಉದಾಹರಣೆಗೆ, 'ನನ್ನ ಪ್ರೀತಿಯ ಹುಡುಗನಿಗೆ' ಎಂಬ ಕಥೆಯಲ್ಲಿ ಸಮಾಜದ ವರ್ಗೀಕರಣ ಮತ್ತು ಜಾತಿ ವೈಪರೀತ್ಯಗಳು ಬಹಳ ಸಮರ್ಥವಾಗಿ ವಿಶ್ಲೇಷಣೆಗೊಳ್ಳುತ್ತವೆ. ಜಾತಿಯ ಮಿತಿಗಳು ಹೇಗೆ ಪ್ರೀತಿಯಲ್ಲಿಯೂ, ಭಾವನೆಯಲ್ಲಿಯೂ ಅಡಚಣೆ ತರುತ್ತವೆ ಎಂಬುದನ್ನು ಸೂಕ್ಷ್ಮವಾಗಿ ನಿರೂಪಿಸುತ್ತಾರೆ. ವತ್ಸಲ ಮತ್ತು ರವಿಯ ನಡುವೆ ನಡೆಯುವ ಈ ದ್ವಂದ್ವವು ಜಾತೀಯತೆಯ ಬಗೆಗಿನ ಸಾಮಾಜಿಕ ದೃಷ್ಟಿಕೋನವನ್ನು ಕುತೂಹಲಕಾರಿ ರೀತಿಯಲ್ಲಿ ಕುತೂಹಲಕ್ಕೆ ಒಳಪಡಿಸುತ್ತದೆ. ಜಾತಿ, ಧರ್ಮ ಮತ್ತು ಜಾತಿ ವೈಷಮ್ಯಗಳು ಪೀಡಿತ ಸಾಮಾಜಿಕ ಗುಂಪುಗಳ ಮೇಲೆ ಹೇಗೆ ದುಷ್ಪರಿಣಾಮ ಬೀರುತ್ತವೆ ಎಂಬುದನ್ನು ನಾಗತಿಹಳ್ಳಿ ಚಂದ್ರಶೇಖರ ಸಾಂಸ್ಕೃತಿಕವಾಗಿ ವಿಶ್ಲೇಷಿಸುತ್ತಾರೆ.

ಪ್ರೇಮದ ದ್ರೋಹವನ್ನು ಅವರು ತಮ್ಮ ಕತೆಗಳಲ್ಲಿ ತೀವ್ರವಾಗಿ ಚಿತ್ರಿಸುತ್ತಾರೆ. 'ನನಗೆ ಪತಿರಾಯನ ಜೊತೆ ಮಲಗಿದಾಗ ನನಗೆ ಸೂಳೆ ಅನಿಸುತ್ತೆ' ಎಂಬ ಉಮಾಳ ಮಾತುಗಳು ಪ್ರೇಮ ಮತ್ತು ಕಾಮದ ಅಂತರಂಗವನ್ನು ಅರ್ಥಮಾಡಿಕೊಳ್ಳಲು ಗಮನಾರ್ಹವಾಗಿವೆ. ಪ್ರೀತಿ ಮತ್ತು ಕಾಮದ ನಡುವಿನ ದ್ವಂದ್ವ ಭಾವನೆಗಳನ್ನು ಅವರು ತೀವ್ರವಾಗಿ ಪೀಠಿಕೆಗೆ ತರುತ್ತಾರೆ. ಪ್ರೀತಿಗೆ ಮತ್ತು ಕಾಮಕ್ಕೆ ಇರುವ ವಿಶಿಷ್ಟ ಅನುಬಂಧವನ್ನು ಅವರು ಸ್ವಾರಸ್ಯಕರವಾಗಿ ನಿರೂಪಿಸುತ್ತಾರೆ. ಉಮಾಳ ಪರಿಸ್ಥಿತಿಯಲ್ಲಿ ಕಾಣಿಸಿಕೊಳ್ಳುವ ದ್ವಂದ್ವಗಳು ಮತ್ತು ಅವಳ ಮನಸ್ಸಿನ ಕಲಹಗಳು ಅಳವಡಿಸಿರುವ ಸಾಮಾಜಿಕ ಸಂಕೋಲೆಗಳ ಮೂಲಕ ಅವರ ಬರಹದಲ್ಲಿ ಬಿಂಬಿತವಾಗಿವೆ. ಇಲ್ಲಿ ಕಾಮವನ್ನು ಕೇವಲ ದೈಹಿಕ ಆಕರ್ಷಣೆಯಾಗಿ ಮಾತ್ರವಲ್ಲದೆ, ಪ್ರೀತಿಯ ಭಾಗವಾಗಿ ಮತ್ತು ಸಮಾಜದ ನಿಯಂತ್ರಣಕ್ಕೆ ಒಳಪಟ್ಟಂತೆ ಚಿತ್ರಿಸಲಾಗಿದೆ, ಇದು ಭಾರತೀಯ ಸಾಂಸ್ಕೃತಿಕ ಸಂದರ್ಭದಲ್ಲಿ ಪ್ರಣಯದ ಸಂಕೀರ್ಣತೆಯನ್ನು ಎತ್ತಿ ತೋರುತ್ತದೆ.

ನಾಗತಿಹಳ್ಳಿ ಚಂದ್ರಶೇಖರ ಅವರು ಪ್ರೀತಿಯನ್ನು ಕೇವಲ ವೈಯಕ್ತಿಕ ವಿಷಯವಷ್ಟೇ ಅಲ್ಲ, ಅದು ಸಮಾಜದ ಒಂದು ನಿರ್ದಿಷ್ಟ ಭಾಗವಾಗಿದೆ ಎಂದು ಅಭಿಪ್ರಾಯಿಸುತ್ತಾರೆ. ಅವರು ಬರೆದ ಕಥೆಗಳಲ್ಲಿ ಸಾಮಾನ್ಯ ಮನುಷ್ಯನ ಜೀವನದ ಜೊತೆಗೆ ಪ್ರೀತಿ ಮತ್ತು ಪ್ರೇಮದ ಸಾಂಸ್ಕೃತಿಕ ಭಾವನೆಗಳು ಸಹಜವಾಗಿ ನಿರೂಪಿತವಾಗಿವೆ. ಅವರು ತಮ್ಮ ಸಾಹಿತ್ಯದಲ್ಲಿ ಬೇರೂರಿರುವ ಜಾತ್ಯಾತೀತ, ಜಾತಿ ವೈಷಮ್ಯ ಮತ್ತು ಧರ್ಮಗಳ ಪರಸ್ಪರ ಸಂಬಂಧಗಳನ್ನು ಬಹಳ ಸಮರ್ಥವಾಗಿ ವಿಶ್ಲೇಷಿಸುತ್ತಾರೆ. ನಾಗತಿಹಳ್ಳಿ ಚಂದ್ರಶೇಖರರ ಕಥೆಗಳು ಪ್ರೀತಿ ಮತ್ತು ಪ್ರಣಯವನ್ನು ಮನುಷ್ಯನ ನಿರ್ಭೀತಿಯಾದ

ಮತ್ತು ಪ್ರಾಮಾಣಿಕ ಜೀವನದ ಅಂತಃಪರಿಣಾಮಗಳು ಎಂಬುದಾಗಿ ಚಿತ್ರಿಸುತ್ತವೆ. ನಾಗತಿಹಳ್ಳಿ ಚಂದ್ರಶೇಖರ ಅವರು ಬರೆದ ಕಥೆ, ಕಾದಂಬರಿಗಳಲ್ಲಿ ಪ್ರೇಮ ಮುಖ್ಯವಾದವುಗಳೇ ಹೆಚ್ಚು. "ಬಾ ನಲ್ಲೆ ಮಧು ಚಂದ್ರಕೆ", "ಚುಕ್ಕಿ ಚಂದ್ರಮ ನಾಡಿನಲ್ಲಿ" ಈ ಕಾದಂಬರಿಗಳು ಪ್ರೀತಿ–ಪ್ರೇಮ–ಪ್ರಣಯಗಳ ಅಂಶಗಳನ್ನು ಒಳಗೊಂಡಿವೆ. ಹಾಗೆಯೇ "ಮಲೆನಾಡಿನ ಹುಡುಗಿ ಬಯಲು ಸೀಮೆಯ ಹುಡುಗ", "ನನ್ನ ಪ್ರೀತಿಯ ಹುಡುಗನಿಗೆ", "ಯಶೋಧರ ಚರಿತೆ", "ಭೂಮಿ ಗುಂಡಾಗಿದೆ", "ಸನ್ನಿದಿ" ಇತ್ಯಾದಿ ಹಲವಾರು ಪ್ರೇಮ ಕಥೆಗಳು ಇವರ ಕೃತಿಗಳಲ್ಲಿ ಬರುತ್ತವೆ. ಇವರ ಕಥೆ ಕಾದಂಬರಿಗಳಲ್ಲಿ ನೈತಿಕ ಪ್ರೇಮ ಪ್ರಣಯ ಕಾಮದೊಂದಿಗೆ ಅನೈತಿಕ ಪ್ರೇಮ ಕಾಮವು ವ್ಯಕ್ತವಾಗಿದೆ. ಉದಾಹರಣೆಗೆ, 'ಇರುವುದೆಲ್ಲವ ಬಿಟ್ಟು' ಕಥೆಯಲ್ಲಿ ನಿಜ ಬದುಕನ್ನು ಶೋಧಿಸಿ ಪ್ರೀತಿಸುವ ಹಂಬಲದಲ್ಲಿ ಪ್ರೊಫೆಸರ್ ಈ ಕೃತಕ ಬದುಕು, ಜೀವನದಿಂದ ಪಲಾಯನಗೊಂಡು ಕಡಲಿನ ಎದುರು ಏಕಾಂಗಿಯಾಗಿ ಬದುಕನ್ನು ಶೋಧಿಸುತ್ತಿದ್ದಾನೆ.

"ಅಂಟದ ಈ ಮರುಳು ರಾಶಿಯ ಮೇಲೆ ನಾನು ಬರಿಯ ಕಪ್ಪು ಚಿಪ್ಪುಗಳನ್ನು ಶೋಧಿಸುತ್ತಿಲ್ಲ; ಬದುಕಿನ ಅಂತರಂಗವನ್ನು, ಬದುಕನ್ನು ಶೋಧಿಸುವುದು ನನಗೀಗ ಉಳಿದಿರುವ ಏಕೈಕ ಉದ್ದೇಶ" (ಚಂದ್ರಮಾನ, ಪು–139) ಹೀಗೆ ಬದುಕಿನ ಹುಡುಕಾಟ ನಡೆಸುವ ಆತನ ಜೀವನ ಸಿದ್ಧಾಂತಗಳು ಮತ್ತು ಬದುಕಿನ ಪ್ರೀತಿ ಈ ಕಥೆಯಲ್ಲಿ ಒಡಮೂಡುತ್ತ ಸಾಗಿದೆ. ಕೇವಲ ಈ ಜಗತ್ತು ಕೃತಕ ಬದುಕಿನೊಂದಿಗೆ ಸಾಗಿದೆ ಎಂದು ಪ್ರೊಫೆಸರ್ ಮಾತನಾಡುವ ತಮ್ಮ ಈ ವೃತ್ತಿಯನ್ನು ದ್ವೇಷಿಸುತ್ತು ತಾನು ಪಾಠ ಮಾಡುತ್ತಿದ್ದಾಗ ಕಲಿಯುತ್ತಿದ್ದ ಮುಖಗಳಲ್ಲಿ ಜೀವಗಳೇ ಇರುತ್ತಿರಲಿಲ್ಲ. ನಾಳಿನ ಬದುಕಿನ ಬೀತಿಯಿತ್ತು. ಇಂದಿನ ಬದುಕಿನ ತಿರಸ್ಕಾರವಿತ್ತು. ಹುಡುಗರು ತಣ್ಣಗೆ ಕುದಿಯುತ್ತಿದ್ದರು. ಹುಡುಗಿಯರು ತಮ್ಮ ವೇದನೆಯನ್ನು ಮುಗುಳ್ನಗೆಯಿಂದ ಮುಚ್ಚಿಡಲು ಪ್ರಯತ್ನಿಸುತ್ತಿದ್ದರು. ನಾನು ತತ್ತ್ವಜ್ಞಾನ ಬೋಧಿಸುತ್ತಿದ್ದೆ ಎಂದು ನೆನಪಿಸಿಕೊಳ್ಳುತ್ತಿದ್ದರು. ಈ ಸಮಾಜದಲ್ಲಿ ಬದುಕುವ ಜನರ ಬದುಕಿಗಿಂತ ಬಿನ್ನವಾದ ಬದುಕನ್ನು ಪ್ರೀತಿಸುತ್ತಾ ಹುಡುಕ ಹೊರಟ ಪ್ರೊಫೆಸರ್ ತಾನು ಹುಡುಕ ಹೊರಟ ಬದುಕನ್ನು ಈ ಜಗತ್ತಿನಾಚೆ ಎಲ್ಲೂ ಸಿಗದ ನಿತ್ಯ ಉದುರುತ್ತಿರುವ ಶಿಶುಗಳ ಚೀರಾಟದಲ್ಲಿ, ಕಗ್ಗೊಲೆಗಳಲ್ಲಿ, ಸಾವುಗಳಲ್ಲಿ, ವ್ಯಭಿಚಾರಗಳಲ್ಲಿ, ಕಣ್ಣೀರುಗಳಲ್ಲಿ, ರಕ್ತದ ಮಡುಗಳಲ್ಲಿ ಇವುಗಳನ್ನು ಹರಸಬೇಕು ಎಂದು ಪ್ರೊಫೆಸರನ್ನು ಹುಡುಕಿ ಬಂದ ಅವರ ವಿದ್ಯಾರ್ಥಿನಿ ಪ್ರೇಮಳ ಬದುಕನ್ನು ಹರಸುವ ದಿಟ್ಟ ಹೆಜ್ಜೆಯಿಟ್ಟಿದ್ದು ಕಾಣುತ್ತದೆ. ಕೃತಕ ಮಾನವರ ಕೃತಕ

ಭಾವಗಳಿಗೆ ಜಿಗುಪ್ಸೆ ಹೊಂದಿ ಎಲ್ಲೊ ಕಾಣದ ಬದುಕನ್ನು ಹರಸುತ್ತಾ ಹೊರಟ ಪ್ರೊಫೆಸರ್‌ನ್ನು ಮತ್ತೆ ಜೀವಂತ ಸಮಾಜಕ್ಕೆ ಕರೆತಂದು ಅವರನ್ನು ಪ್ರೀತಿಸುತ್ತಾಳೆ. ಕಡಲ ಬೋರ್ಗರೆತದಿಂದ, ಗಿಟಾರ್‌ನ ಸಂಗೀತದಿಂದ ಹಾಗೂ ಕತ್ತಲಲ್ಲಿ ಕಾಣುವ ಚುಕ್ಕಿಗಳಿಂದ ಬದುಕು ಕಟ್ಟಿಕೊಳ್ಳುವುದು, ಕೊನೆಗೊಳಿಸುವುದು ಸಾಧ್ಯವಿಲ್ಲ. ಅದು ಜನ ಸಮುದಾಯಗಳ ಪ್ರೀತಿ, ದ್ವೇಷ, ಅಸೂಯೆ, ಹಿಂಸೆಗಳ ಮಧ್ಯೆ ಕಟ್ಟಿಕೊಂಡು ಬದುಕಲು ಸಾಧ್ಯ ಎಂಬುದನ್ನು ಹೇಳಿಕೊಡುವ ಪ್ರೇಮಳ ಪ್ರೀತಿ ಈ ಕಥೆಯಲ್ಲಿ ಗೆಲ್ಲುತ್ತದೆ. ಸಹಜೀವನ ಸಹಬಾಳ್ವೆಯ ಮಹತ್ವ ಅರಿವಿಗೆ ಬರುತ್ತದೆ. ಈ ಕಥೆಯ ಮೂಲಕ ನಾಗತಿಹಳ್ಳಿ ಅವರು ಪ್ರೀತಿಯನ್ನು ಕೇವಲ ರೊಮ್ಯಾಂಟಿಕ್ ಭಾವನೆಯಾಗಿ ಮಾತ್ರವಲ್ಲದೆ, ಸಮಾಜದ ವಾಸ್ತವಿಕತೆಯೊಂದಿಗೆ ಸಂಯೋಜಿಸಿ ದಾರ್ಶನಿಕ ಮಟ್ಟಕ್ಕೆ ಏರಿಸುತ್ತಾರೆ. ಇದು ಕನ್ನಡ ಸಾಹಿತ್ಯದಲ್ಲಿ ಪ್ರೀತಿಯನ್ನು ಸಾಂಸ್ಕೃತಿಕ ಸಂದರ್ಭದಲ್ಲಿ ವಿಶ್ಲೇಷಿಸುವ ಒಂದು ಮಹತ್ವದ ಉದಾಹರಣೆಯಾಗಿದೆ.

ಬೀದಿ ದೀಪಗಳಲ್ಲದ ಹದಿನಾಲ್ಕನೆ ಮೈಲಿನಲ್ಲಿ ಮೊನ್ನೆ ಮರ್ಡರ್ ಆಗಿದೆ. ಸರಸ್ವತಿಪುರದ ಪೋಲಿಸ್ ಠಾಣೆಯಲ್ಲಿ ಬರೀ ರೇಪ್ ಕೇಸುಗಳೇ ದಾಖಲಾಗುತ್ತಿವೆ. ಇರಾನಿ ಹುಡುಗರ ಬೈಕಿನ ಹಿಂದೆ ಕೂತು ಇಲ್ಲಿನ ಹುಡುಗಿಯರು ಮಜಮಾಡ್ತರೆ, ತಮ್ಮ ಜಾತಿ ಹುಡುಗನಿಗೆ ನಂಬರ್ ಜಾಸ್ತಿ ಹಾಕಿದ್ದಾನೆ ಅಂತ ಪ್ರೊಫೆಸರ್ ಸಾಹೇಬ್ರು ಸಸ್ಪೆಂಡ್ ಆಗಿದ್ದಾರೆ. ಸರ್ಕ್ಯುಲೇಟಿಂಗ್ ಲೈಬ್ರರಿಯಲ್ಲಿ ಬ್ಲೂಫಿಲ್ಮ್ ತೋರಿಸ್ತಾರೆ ಅಂತ ಮೊನ್ನೆ ರೈಡ್ ಆಯ್ತಂತೆ. ಸಮಾಜ ಸೇವಾಸಕ್ತರೊಬ್ಬರ ಸೊಸೆ ಬೇರೆ ಬೆಂಕಿ ಹಚ್ಚಿಕೊಂಡು ಸತ್ತಿದ್ದು ಕೂಡ ಆತ್ಮಹತ್ಯೆ ಅಲ್ಲವಂತೆ. ಗಂಗೋತ್ರಿಗೆ ಮುಸ್ಸಂಜೆಯಲ್ಲಿ ಹೋಗಿ ಸಾವಿರ ಕ್ಯಾಂಡಲ್‌ನ ದೀಪ ಹಾಕಿ ಹುಡುಕಿದರೆ ಮರಗಿಡಗಳಡಿಯಲ್ಲಿ ಬೆತ್ತಲಾಗಿ ಹೆಣೆದುಕೊಂಡಿರುವ ಎಷ್ಟೊಂದು ಜೋಡಿಗಳು ಸಿಗುತ್ವೆ? ಸಿಗುವವರಲ್ಲಿ ಗಂಡನನ್ನುಳ್ಳ ಗರತಿಯರೆಷ್ಟು? ಕಲ್ಯಾಣವಿಲ್ಲದ ಕುಮಾರಿಯರೆಷ್ಟು? ಈ ದೇಶ ಜಾತ್ಯಾತೀತ ಆಗಿರೋದು ಅನೈತಿಕ ಸಂಬಂಧಗಳಲ್ಲಿ ಮಾತ್ರ. ಈಗ ಹೇಳಿ ಸರಸ್ವತಿಪುರಕ್ಕೆ ಯಾವ ಹೆಸರಿಡಬಹುದಂತ?

ಲೇಖಕರು ಸರಸ್ವತಿಪುರ ಹೆಸರು ಹಾಗೂ ಅದರ ಹೆಸರಿಗೆ ತಕ್ಕಂತೆ ಹೊಂದಿರುವ ವೈರುಧ್ಯಗಳನ್ನು ವಿಡಂಬನಾತ್ಮಕವಾಗಿ ಪ್ರಶ್ನಿಸುತ್ತಾರೆ. ಲೇಖಕರು ಈ ಸರಸ್ವತಿಪುರ ಅನ್ನೋದು ಒಂದು ಗ್ರಾಮವಲ್ಲ; ಅದು ತನ್ನ ವ್ಯಾಪ್ತಿಯನ್ನು ಹೆಚ್ಚಿಸಿಕೊಂಡು ಇಡೀ ಭಾರತವನ್ನು ವ್ಯಾಪಿಸುವ ಅನುಮಾನವಿದೆ. ಜಾತೀಯತೆ, ಅಸ್ಪೃಶ್ಯತೆ, ಹಿಂಸೆಯ ಪ್ರಕರಣಗಳು ಸಮಾಜ ಸಮುದಾಯ ಸಂಸ್ಕೃತಿಗಳ ಹೆಸರಲ್ಲಿ ಹೇಗೆ ಪೋಷಿಸಿಕೊಂಡು

ಬಂದಿವೆ ಎಂಬುದು ಇಲ್ಲಿ ಕಂಡುಬರುವ ಮುಖ್ಯ ಸಂಗತಿ. ಈ ದೃಷ್ಟಿಯಿಂದ ಚಂದ್ರಶೇಖರರ ಅವರ ಈ ಕಥೆಯಲ್ಲಿ ರವಿ, ವತ್ಸಲ ಹಾಗೂ ರಾಜಕಾರಣಿಗಳ ಪಾತ್ರಗಳನ್ನು ನೋಡಬಹುದು. ಸ್ವಾತಂತ್ರ್ಯವೆನ್ನುವುದು ಹೇಗೆ ಜನರ ಬದುಕಿನಲ್ಲಿ ತಿರುವುಗಳಿಗೆ ಸಾಕ್ಷಿಯಾಗುತ್ತದೆ. ಸ್ವಚ್ಛಂದ ಬದುಕನ್ನು ಕಟ್ಟಿಕೊಳ್ಳಲು ಹೆಣ್ಣು ಗಂಡು ಈ ಸ್ವಾತಂತ್ರ್ಯ ಎನ್ನುವ ಹಡಗಿನ ಹುಟ್ಟನ್ನು ಹಾಕಬೇಕು. ಆದರೆ ದಿಕ್ಕು ಚಲನೆ ಒಳ್ಳೆಯ ಕಡೆಗೆ ಇರಬೇಕು; ಇದ್ದಾಗಲೇ ಸರಿಯಾದ ಬದುಕಿಗೆ ಅರ್ಥ ಬರುತ್ತದೆ. ಜಾತಿಯ ಪ್ರಜ್ಞೆ ಹೇಗೆ ಮನುಷ್ಯರ ನಡುವೆ ಕಂದರವನ್ನುಂಟುಮಾಡಿದೆ ಮತ್ತು ಮನುಷ್ಯರೇ ಮನುಷ್ಯನ್ನು ಕೊಲ್ಲುವಷ್ಟರ ಮಟ್ಟಿಗೆ ದ್ವೇಷಗಳನ್ನು ಸಾಧಿಸಲು ಪ್ರಯತ್ನಿಸುತ್ತಾರೆ. ಅವರ ಮನಸ್ಥಿತಿ ಅಷ್ಟೊಂದು ಮಲಿನವಾಗಿ ರೂಪಿತವಾಗಿವೆ. ಸಮಾಜದಲ್ಲಿ ಬೇರೂರಿರುವ ಈ ಜಾತಿಯಂತಹ ಕೆಟ್ಟ ಕ್ರೂರ ಪದ್ಧತಿಯಿಂದ ತಪ್ಪಿಸಿಕೊಂಡು ಪ್ರೇಮಿಸುತ್ತ ಹೊಸದಾದ ಬದುಕನ್ನು ಬದುಕಬೇಕೆಂಬ ಅನೇಕ ಯುವಕಯುವತಿಯರು ಕನಸು ಕಾಣುತ್ತಿರುತ್ತಾರೆ. ಅಂತಹವರ ಬದುಕು ಈ ಜಾತಿ ಎಂಬ ಮುಳ್ಳಿಗೆ ಸಿಲುಕಿ ಹರಿದುಹೋಗುತ್ತದೆ. ಅವರ ಕನಸುಗಳು ಅವರ ಕೊಲೆಯಲ್ಲಿ ನಾಶಹೊಂದುತ್ತವೆ. ಕೊಲೆಯಲ್ಲಿ ಮತ್ತೆ ಚಿಗುರುತ್ತ ಬೆಳೆಯುತ್ತವೆ. ಅಂತಹ ಒಂದು ದುರಂತ ಕಥೆಯ ವಸ್ತು ಈ ಕಥೆಯಲ್ಲಿದೆ. ಈ ಗ್ರಾಮದಲ್ಲಿನ ವೈರುಧ್ಯಗಳು ಅಮಾನವೀಯ ನೆಲೆಗಳಲ್ಲಿ ಕೂಡ ಅಪರೂಪದ ಮನಸ್ಥಿತಿಯ ಜನರಿರುತ್ತಾರೆ ಎನ್ನುವುದರ ಮೂಲಕ ಈ ವ್ಯವಸ್ಥೆಯಲ್ಲಿ ಅವರ ಬದುಕಿನ ಚಿತ್ರಣವನ್ನು ಈ ಕಥೆಯಲ್ಲಿ ಕತೆಗಾರ ಚಿತ್ರಿಸುತ್ತ ರವಿಯ ಜೀವ ಹೋಗುವದರ ಮೂಲಕ ವತ್ಸಲಳ ಬದುಕು ಕಮರಿಹೋಗುತ್ತದೆ. ಈ ಸಮಾಜದಲ್ಲಿ ನಮ್ಮ ಸೃತಿಗಳು ಇನ್ನೂ ಬೇರೆ ಬೇರೆ ಮುಖವಾಡಗಳನ್ನು ಧರಿಸಿ ಶೋಷಿಸುತ್ತಿವೆ ಎನ್ನುವುದು ಈ ಕಥೆಯಲ್ಲಿ ಕಂಡುಬರುತ್ತದೆ.

ರವಿ ಗೌಡರ ಹುಡುಗ, ವತ್ಸಲ ಬ್ರಾಹ್ಮಣ ಹುಡುಗಿ ಇವರು ಪ್ರತಿಭಾವಂತ ವಿದ್ಯಾರ್ಥಿಗಳು. ರವಿಯು ಬ್ರಾಹ್ಮಣಿಕೆಯನ್ನು ಕಟುವಾಗಿ ವಿರೋಧಿಸುವನಾಗಿ ವೈಚಾರಿಕ ನೆಲೆಯಲ್ಲಿ ನಿಂತ ವ್ಯಕ್ತಿ. ವತ್ಸಲಳೂ ಅಷ್ಟೇ. ಇಬ್ಬರಿಗೂ ಅಮಾನವೀಯ ಕೆಲಸಗಳಲ್ಲಿ ಅಸಮಾಧಾನ. ರವಿ ಮತ್ತು ವತ್ಸಲ ವಿದ್ಯಾವಂತರು. ಧರ್ಮ, ಜಾತಿಗಳಲ್ಲಿ ನಂಬಿಕೆ ಇಲ್ಲದೆ ಅದರಲ್ಲಿ ಅಮಾನುಷ ಕ್ರೂರತೆಗಳನ್ನು ವಿರೋಧಿಸುವವರು. ಇಂತಹ ವೈಚಾರಿಕ ಚಿಂತನೆಗಳಲ್ಲಿ ಸಮಾನ ಮನಸ್ಥಿತಿಯವರು.

ಏಕ ಮನೋಭಾವದ ವಿದ್ಯಾರ್ಥಿಗಳಾದ ನಾಗರಿಕ ಸಮಾಜದ ನಿರ್ಮಾಣದ ಕನಸುಗಳನ್ನು ಕಾಣುವ ರವಿ–ವತ್ಸಲ ಪ್ರೀತಿಸತೋಡಗುತ್ತಾರೆ. ವಿಚಾರ ತಿಳಿದ ರಾಜಕಾರಣಿಯಾದ ರವಿಯ ಅಪ್ಪ ಹೆಮ್ಮೆ ಎಂಬಂತೆ ಸುಮ್ಮನಿರುತ್ತಾನೆ. ಪ್ರೀತಿಸುವಾಗ ಜಾತಿಯು ಹೇಗೆ ತನ್ನ ಗೌರವ ಮಾನ ಮರ್ಯಾದೆ ಹೆಸರಲ್ಲಿ ಕ್ರೌರ್ಯವನ್ನು ಮೆರೆಯುತ್ತದೆ ಎಂಬುದನ್ನು ಸೂಕ್ಷ್ಮವಾಗಿ ಈ ಕಥೆ ಶೋಧಿಸುತ್ತದೆ. ಗೌರವ ಮರ್ಯಾದೆ ಎಂಬ ಮಾತು ಬಂದಾಗ ನಿಜವಾದ ಮುಖವಾಡ ಹೇಗೆ ಬಯಲಿಗೆ ಬರುತ್ತದೆ ಎಂಬುದು ರಾಜಕಾರಣಿ ರವಿಯ ತಂದೆಯ ಪಾತ್ರದ ಮೂಲಕ ತಿಳಿಸುತ್ತದೆ. ತನ್ನ ಮಗ ಬ್ರಾಹ್ಮಣರ ಹುಡುಗಿಯನ್ನು ಪ್ರೀತಿಸುತ್ತಾನೆ ಎಂದು ತಿಳಿದ ರಾಜಕಾರಣಿ ಹಮ್ಮೆ ಪಟ್ಟುಕೊಳ್ಳುತ್ತಾನೆ. ಮದುವೆ ಎಂಬ ವಿಚಾರ ಬಂದಾಗ ಒಪ್ಪಿಕೊಳ್ಳದೆ ಬ್ರಾಹ್ಮಣರನ್ನು ವಿರೋಧಿಸುತ್ತಾನೆ. ಶೋಷಿತರಿಗಾಗಿ ಪ್ರೀತಿಸಬೇಕು ಅನ್ನುವ ಅಪ್ಪ ಬ್ರಾಹ್ಮಣರನ್ನು ಕೀಳಾಗಿ ಕಂಡು ಕಿಡಿಗೇಡಿಗಳನ್ನು ಕಳಿಸಿ ವತ್ಸಲಳ ಮನೆಯವರಿಗೆ ಬೆದರಿಕೆಯನ್ನು ಕೂಡ ಹಾಕಿಸುವ ಕೆಲಸಕ್ಕೆ ಮುಂದಾಗುತ್ತಾನೆ. ತನ್ನ ಸಣ್ಣತನಗಳನ್ನು ತೋರಿಸುತ್ತಾನೆ. ಈ ರಾಜಕಾರಣಿಗಳು ಸಿದ್ಧಾಂತಗಳ ಹೆಸರಲ್ಲಿ ಸ್ವಾರ್ಥಕ್ಕಾಗಿ ಬದುಕುವ, ಯಾವ ಸಮಾಜಿಕ ಕಾಳಜಿ ಇಲ್ಲದೆ ಇಂತಹ ರಾಜಕಾರಣಿಗಳಿಂದ ಹೇಗೆ ಒಂದು ಉತ್ತಮ ವೈಚಾರಿಕ ಮನಸ್ಸಿನ ಪ್ರೇಮಿಗಳನ್ನು ಕೊನೆಗಾಣುತ್ತದೆ ಎಂದು ಸೂಚ್ಯವಾಗಿ ಹೇಳುತ್ತದೆ. ಶಾಲಾ ಕಾಲೇಜು ವಿಶ್ವವಿದ್ಯಾಲಯಗಳಲ್ಲಿ ಉನ್ನತ ಮಟ್ಟದ ಶಿಕ್ಷಣ ಸಂಸ್ಥೆಗಳಲ್ಲಿ ಇಂತಹ ಸಾಮಾಜಿಕ ಪಿಡುಗಗಳನ್ನು ಹೋಗಲಾಡಿಸುವ ಕೆಲಸವಾಗಬೇಕು. ಇದು ಚಿಂತಕರ, ಬುದ್ಧಿಜೀವಿಗಳ, ಪ್ರಾಧ್ಯಾಪಕರ ಜವಾಬ್ದಾರಿ. ಇವು ಸಂಸ್ಥೆಗಳ ಅವುಗಳ ಗುರಿಗಳಲ್ಲಿ ಒಂದು. ಆದರೆ ಇಂತಹ ಕ್ರೂರ ಪದ್ಧತಿಗಳನ್ನು ಕಿತ್ತು ಹಾಕದೆ ಅವರೇ ತಮ್ಮ ಸ್ವಾರ್ಥಕ್ಕಾಗಿ ಬಳಸಿಕೊಳ್ಳುತ್ತ ಮಕ್ಕಳ ಮನಸ್ಸಿನಲ್ಲಿ ಬೆಳೆಸುತ್ತಿದ್ದಾರೆ ಎಂಬುದಕ್ಕೆ ಈ ಕಥೆಯಲ್ಲಿ ಬರುವ ಒಬ್ಬ ಪ್ರಾಧ್ಯಾಪಕ ಪಾತ್ರ ಉದಾಹರಣೆಯಾಗಿ ನಿಲ್ಲುತ್ತದೆ. ಅಂತರಜಾತೀಯ ವಿವಾಹ ಕುರಿತು ತಮ್ಮ ಲೇಖನಗಳ ಸಂಗ್ರಹಕ್ಕೆ ಪ್ರಶಸ್ತಿ ಪಡೆದ ಪ್ರೊಫೆಸರ್ ರವಿ–ವತ್ಸಲಗಳಲ್ಲಿ ಕುದ್ದಾಗಿ ಬೇಟಿ ಮಾಡಿ ಹಂದಿ ತಿನ್ನುವ ಜಾತಿ ರವಿದು ನಿನ್ನದು ಮೇಲ್ ಜಾತಿ ಎಂದು ವತ್ಸಲಳಿಗೆ, ನಮಗಿಂತ ಬ್ರಾಹ್ಮಣದವರು ಕೀಳು ಧರ್ಮದವರು ಎಂದು ರವಿಗೆ ಹೇಳಿ ಬೇರ್ಪಡಿಸುವ ದಲ್ಲಾಳಿಯ ಕೆಲಸ ಮಾಡುವ ಪ್ರೊಫೆಸರ್‌ನಂತಹ ಡಾಂಭಿಕ ಪ್ರೊಫೆಸರ್‌ಗಳು, ಲೇಖಕರು, ಸಾಹಿತಿಗಳು, ರಾಜಕಾರಣಿಗಳು ಇದ್ದಾರೆ ಎಂದು ಕಥೆಗಾರ ಸೂಚ್ಯವಾಗಿ ತಿಳಿಸುತ್ತಿದ್ದಾರೆ. ಈ ಮೂಲಕ ನಾಗತಿಹಳ್ಳಿ ಅವರು ಸಾಹಿತ್ಯವನ್ನು ಸಮಾಜದ ಕನ್ನಡಿಯಾಗಿ ಬಳಸಿ,

ಪ್ರೀತಿಯನ್ನು ಸಾಂಸ್ಕೃತಿಕ ವೈರುಧ್ಯಗಳೊಂದಿಗೆ ಸಂಯೋಜಿಸಿ ವಿಶ್ಲೇಷಿಸುತ್ತಾರೆ, ಇದು ಅವರ ಬರಹಗಳನ್ನು ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟಗೊಳಿಸುತ್ತದೆ.

ರವಿಯು ತನ್ನ ತಂದೆ, ಜಾತಿ ಮತ್ತು ಧರ್ಮದ ಒತ್ತಡಗಳನ್ನು ಎದುರಿಸಿ ಊರು ಬಿಟ್ಟು ವತ್ಸಲಳನ್ನು ಕರೆದುಕೊಂಡು ಪಟ್ಟಣಕ್ಕೆ ಸೇರುತ್ತಾನೆ. ಅಲ್ಲಿಯೂ ಕೂಡ ಕಿತ್ತುತಿನ್ನುವ ಜನರ ಪರಿಚಯವಾಗಿ ಈ ಸಮಾಜದ ಮೇಲೆ ಕೋಪಗೊಂಡು ಬೇಸರಗೊಳ್ಳುತ್ತಾನೆ. ಕತೆಗಾರನಿಗೆ ಪತ್ರ ಬರೆಯುತ್ತಾನೆ. ಸಂಸಾರ ನಡೆಸುವುದು ಕಷ್ಟವಾಗುತ್ತದೆ. ಹೆಂಡತಿ ವತ್ಸಲಳು ಕೂಡ ಕೆಲಸಕ್ಕೆ ಸೇರುತ್ತಾಳೆ. ಅವಳು ಗರ್ಭಿಣಿಯೂ ಆಗಿರುತ್ತಾಳೆ. ಬದುಕುವ ಛಲದ ಕಷ್ಟದ ನಡುವೆ "ನಾನು ಬಡವಿ ಆತ ಬಡವ, ಒಲವೆ ನಮ್ಮ ಬದುಕು, ಅದನ್ನು ಬಳಸಿಕೊಂಡೆವು ನಾವು ಅದಕೂ ಇದಕೂ ಎದಕೂ, ತೋಳುಗಳಿಗೆ ತೋಳ ಬಂದಿ, ಕೆನ್ನೆತುಂಬ" ಹೀಗೆ ಸಾಗುತ್ತಿರಲು ಬದುಕು ರವಿಯು ಕಾಯಿಲೆಗೆ ತುತ್ತಾಗಿ ಆಸ್ಪತ್ರೆ ಸೇರಿ ಮರಣ ಹೊಂದುತ್ತಾನೆ. ಸುದ್ದಿ ತಿಳಿದ ರವಿಯ ಅಪ್ಪ ಹೋಗಿ ಹೆಣವನ್ನು ತಂದು ಅದ್ಧೂರಿಯಾಗಿ ಡೊಳ್ಳು ಹಲಗೆಯೊಂದಿಗೆ ತಾನು ದುಃಖದಿಂದ ಅಂತ್ಯಸಂಸ್ಕಾರ ಮಾಡುತ್ತಾನೆ.

ತನ್ನ ವಂಶದ ಕುಡಿ ಹೊತ್ತ ವತ್ಸಲಳನ್ನು ಬಿಟ್ಟು ಅವಳಿಗೆ ಐದು ನೂರು ರೂಪಾಯಿ ಬಿಸಾಡಿ ಬಂದೆ ಎನ್ನುವ ರವಿಯ ಅಪ್ಪನಂತಹವರು ಈ ಸಮಾಜದಲ್ಲಿ ಹೆಣ್ಣು–ಗಂಡುಗಳಿಬ್ಬರ ಕಡೆಯೂ ಇದ್ದಾರೆ. ಈ ಸವಮಾಜಕ್ಕೆಲ್ಲಾ ಇದು ಉದಾಹರಣೆಯಾಗಿದೆ. "ನನ್ನ ಪ್ರೀತಿಯ ಹುಡುಗನಿಗೆ" ಕಥೆ ಪ್ರೀತಿ, ಪ್ರೇಮ, ಕಾಮಗಳೊಂದಿಗೆ "ಹುಡುಗಾ ನೀ ಹೆಣ್ಣಾಗಿ ಹುಟ್ಟಬೇಕಾಗಿತ್ತು" ಎನ್ನುವ ಮೂಲಕ ವಾಸ್ತವ ಬದುಕಿನಲ್ಲಿ ಹೆಣ್ಣಿನ ಮನಸ್ಥಿತಿಯಲ್ಲಿ ಅವಳ ಬಯಕೆಗಳನ್ನು, ತುಮುಲಗಳನ್ನು, ಎಲ್ಲವನ್ನು ಉಮಾ ಎಂಬ ಹೆಣ್ಣು ಪಾತ್ರ ತನ್ನ ಪ್ರಿಯಕರನಿಗೆ ಸ್ವಗತದಲ್ಲಿ ಹೇಳುತ್ತಾ, ಅವಳು ತನ್ನ ಪ್ರೀತಿಯನ್ನು ವ್ಯಕ್ತಪಡಿಸುವ ಬಗೆ ತುಸು ದ್ವಂದ್ವಾತ್ಮಕವಾಗಿದೆ. ಮಾಜಿ ಪ್ರಿಯಕರನನ್ನು ಇನ್ನೂ ಮನಸಲ್ಲೇ ಪ್ರೀತಿಸುತ್ತಾ ಗಂಡನನ್ನು ಕಾಮಿಸುತ್ತಾ ತನ್ನ ಪ್ರೇಮ ಕಾಮಗಳನ್ನು ತನ್ನ ಸ್ವತಂತ್ರದಂತೆ ಪ್ರೀತಿ ರಹಿತ ಆಕ್ರಮಣತೆಯನ್ನು ತನ್ನ ಪ್ರಿಯಕರನ ಪವಿತ್ರ ಪ್ರೀತಿಗೆ ಹೋಲಿಕೆ ಮಾಡುತ್ತಾ ಮನದಲ್ಲಿ ಪ್ರಿಯಕರನನ್ನೇ ನೆನೆಯುತ್ತಾಳೆ. ಅನಿವಾರ್ಯತೆಯ ಪರಿಸ್ಥಿತಿಯಿಂದ ದೂರ ಮಾಡಿಕೊಂಡ ಉಮಾ ನಿತ್ಯವೂ ಅವನಂತಹ ಪ್ರೀತಿ ಗಂಡನಲ್ಲಿ ಕಾಣಲು ಯತ್ನಿಸಿ ಸೋತು ಸೋಲು ಸ್ವೀಕರಿಸಿ ಪ್ರಿಯಕರನನ್ನೇ ಅಂತರಂಗದಲ್ಲಿ ಪ್ರೇಮಿಸುವಳಾಗಿ ಕಂಡುಬರುತ್ತಾಳೆ.

"ನೀ ನನ್ನ ಲೂಟಿ ಮಾಡಬೇಕಿತ್ತು ಯಾಕೆ ನೀ ನನ್ನ ಲೂಟಿ ಮಾಡಲಿಲ್ಲ" ಎನ್ನುವ ಪ್ರಿಯಕರನನ್ನು ನಿಂದಿಸುವ ಅವಳ ಮಾತಿನಲ್ಲಿ ಅತೃಪ್ತಿ, ಪ್ರೀತಿ, ಅತ್ಯಾಶೆ, ಭಾವನೆ, ಕೋಪ ಎಲ್ಲವನ್ನು ಒಟ್ಟೊಟ್ಟಿಗೆ ವ್ಯಕ್ತಪಡಿಸುವಳು. ಹಾಗೆಯೇ ತನ್ನನ್ನು ತಾನೇ ಸಮಾಧಾನಪಡಿಸಿಕೊಳ್ಳಲು ತನ್ನತನವನ್ನು ಸಮರ್ಥಿಸಿಕೊಳ್ಳಲು "ಪ್ರೇಮ–ಕಾಮಗಳೆರಡು ಒಬ್ಬನಲ್ಲಿ ಸಿಗೋದು ಕಷ್ಟ" ಎಂಬ ಅಮೃತಮತಿಯ ಮನೋಭಾವನೆಯ ಮಾತುಗಳು ಉಮಾಳಿಂದ ಬರುತ್ತವೆ. ಮತ್ತು ಇದು ಅವಳ ಮನಸ್ಸಿನ ಕನ್ನಡಿಯಾಗಿದೆ. ಪ್ರತಿ ಹೆಣ್ಣಿಗೆ ಕಾಮಕೊಬ್ಬ ಬೇಕೆ ಬೇಕು. ಪ್ರೇಮಕ್ಕೆ ನೀನಿದ್ದಿ ಕಾಮಕ್ಕೆ ಮತ್ತು ಅದರ ಇತರ ಮುಖಗಳಾದ ಕಾಮ–ಪ್ರೇಮ ಭೌತಿಕ ಕಾಮಗಳಂತ ಎಲ್ಲವನ್ನು ಅನುಭವಿಸುವ ಅಪೇಕ್ಷೆ ಮನೋಭಾವವವಳು. ಆದರೆ ಮನುಷ್ಯ ಬಯಸಿದ್ದು ಪಡೆಯಲು ಅನ್ಯಮಾರ್ಗವನ್ನು ಹಿಡಿದು ಪಡೆದುಕೊಂಡರೆ ಅದು ಎಂತಹ ಬದುಕು? ಎನ್ನುವಂತೆ "ನನಗೆ ಪತಿರಾಯನ ಜೊತೆ ಮಲಗಿದಾಗ ನನಗೆ ಸೂಳೆ ಅನಿಸುತ್ತೆ, ನನ್ನನ್ನು ರೇಪ್ ಮಾಡ್ತಿದ್ದಾರೆ ಅನಿಸುತ್ತೆ" ಇಂತಹ ಸ್ಥಿತಿಗೆ ಯಾಕೆ ಬಂದೆ ಎಂದು ದ್ವಂದ್ವ ಮನಸಿನ ಸಂಕಟದ ವಿಚಾರಗಳಿಂದ ಅವಳ ಅಂತರಾತ್ಮ ಪಶ್ಚಾತ್ತಾಪ ಪಡುತ್ತಿದೆ. ಜೊತೆಗೆ ತನ್ನ ಪ್ರೇಮಿಯ ಪ್ರೀತಿಗಾಗಿ ಹಂಬಲಿಸುತ್ತಾ, ಪ್ರೀತಿಸುತ್ತಿದ್ದಾಳೆ.

ಈ ಕಥೆಯಲ್ಲಿ ಪ್ರೇಮ, ಕಾಮ, ದಾಂಪತ್ಯದಲ್ಲಿ ಕಂಡುಬರುವಂತೆ ಮೇಲ್ನೋಟಕ್ಕೆ ಕಂಡುಬಂದರೂ ಆ ಪಾತ್ರಗಳ ಅಂತರಂಗಗಳ ಮೂಲ ಬೇರೆ ಏನೋ ಹೇಳಲು ಶೋಧಿಸಲು ಈ ಕಥೆ ಪ್ರಯತ್ನಿಸುತ್ತಿದೆ. ಉಮಾ ತನ್ನ ಸಾಮಾಜಿಕ ಕೌಟುಂಬಿಕ ಚೌಕಟ್ಟಿನ ಎಲ್ಲ ಹಂಚಿಕೆಗಳನ್ನು ಮೀರಿ ಬಂದಿರುವ ಹೆಣ್ಣು. ತಾನು ದಾಟಿದ ಸ್ತ್ರೀಮಾನಗಳ ಚೌಕಟ್ಟನ್ನು ಸಂಪೂರ್ಣ ಬಿಡಿಸಿಕೊಂಡಿದ್ದಾಳೆ ಎಂದರೂ ತಾನು ದಾಟಿದ ಮೀರಿದ ಕಟ್ಟಳೆಗಳ ಸರಿ ತಪ್ಪುಗಳ ಗೊಂದಲದೊಳಗೆ ಅವಳ ಮನಸ್ಸು ಹರಿದು ಹೊಯ್ದಾಡುತ್ತಿದೆ. ತನ್ನ ಪ್ರೇಮ ಕಾಮಗಳನ್ನು ಕೌಟುಂಬಿಕ ನೆಲೆಯಲ್ಲಿಯೇ ಕಾಣದೆ ಒಬ್ಬರಲ್ಲಿ ಪ್ರೇಮವನ್ನು ಮತ್ತೊಬ್ಬರಲ್ಲಿ ಕಾಮವನ್ನು ತೀರಿಸಿಕೊಳ್ಳುವ ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಲುಕಿ ನರಳುತ್ತಿದ್ದಾಳೆ. ಮನಸ್ಸಿಗೆ ಹೃದಯಕ್ಕೆ ಪ್ರೇಮದಷ್ಟೇ ದೈಹಿಕವಾಗಿ ಅದರದ್ದೇ ಬಯಕೆಗಳನ್ನು ಕೂಡ ಹೊಂದಿಸುವುದು ಒಳ್ಳೆಯ ಆರೋಗ್ಯಕ್ಕೆ ಕಾರಣ. ಆದರೆ ಉಮಾಳ ಈ ಮನಸ್ಸಿನ ಎಲ್ಲ ಲಹರಿಗಳು ಸಮಾಜ ಬಾಹಿರವಾದ ಮತ್ತು ಅನೈತಿಕ ಎಂಬ ಭಾವನೆಯನ್ನು ಅವಳಲ್ಲಿ ಕಾಡತೊಡಗಿವೆ. ಆ ಕಾರಣಕ್ಕಾಗಿಯೇ ಉಮಾಳ ಮನಸ್ಸಲ್ಲಿ 'ನನಗೆ ಪತಿರಾಯನ ಜೊತೆ ಮಲಗಿದಾಗ ನನಗೆ ಸೂಳೆ ಅನಿಸುತ್ತೆ, ನನ್ನನ್ನು ರೇಪ್ ಮಾಡ್ತಿದ್ದಾರೆ ಅನಿಸುತ್ತೆ'

ಎನ್ನುವ ಮಾನಸಿಕ ಪ್ರಜ್ಞೆಯೊಳಗೆ ಜಿಜ್ಞಾಸೆಯನ್ನು ನಡೆಸಿದ್ದಾಳೆ. ಈ ಮೂಲಕ ನಾಗತಿಹಳ್ಳಿ ಅವರು ಹೆಣ್ಣಿನ ಮನಸ್ಸಿನ ಸಂಕೀರ್ಣತೆಯನ್ನು, ಪ್ರೇಮ ಮತ್ತು ಕಾಮದ ನಡುವಿನ ದ್ವಂದ್ವವನ್ನು ಸಾಂಸ್ಕೃತಿಕ ಮತ್ತು ಮಾನಸಿಕ ನೆಲೆಯಲ್ಲಿ ವಿಶ್ಲೇಷಿಸುತ್ತಾರೆ. ಉಮಾಳ ಪಾತ್ರವು ಭಾರತೀಯ ಸಮಾಜದಲ್ಲಿ ಹೆಣ್ಣುಗಳು ಎದುರಿಸುವ ಸಾಮಾಜಿಕ ಸಂಕೋಲೆಗಳನ್ನು ಮತ್ತು ಅಂತರಂಗದ ಹೋರಾಟಗಳನ್ನು ಪ್ರತಿನಿಧಿಸುತ್ತದೆ, ಇದು ಕಥೆಯನ್ನು ಕೇವಲ ಪ್ರಣಯ ಕಥೆಯಾಗಿ ಮಾತ್ರವಲ್ಲದೆ ಸಾಮಾಜಿಕ ವಿಮರ್ಶೆಯಾಗಿ ಏರಿಸುತ್ತದೆ.

"ಮಲೆನಾಡಿನ ಹುಡುಗಿ ಬಯಲು ಸೀಮೆಯ ಹುಡುಗ" ಈ ಕಥೆಯು ಪ್ರೀತಿ ಪ್ರಣಯದ ಕಥೆಯಾಗಿದೆ. ಮಲೆನಾಡಿನ ಹುಡುಗಿ ಉಷಾ ಬಯಲು ಸೀಮೆಯ ಹುಡುಗ ದೇವರಾಜ. ಅಕ್ಕನೊಂದಿಗೆ ಮಲೆನಾಡಿಗೆ ಬಂದ ದೇವರಾಜ ಇಲ್ಲೇ ಕಾಲೇಜಿಗೆ ಸೇರುತ್ತಾನೆ. ಮಲೆನಾಡು ಅಂದ ಮೇಲೆ ಯಾವಗಲೂ ಮಳೆ. ಒಂದು ದಿನ ದೇವರಾಜ ಸೈಕಲ್ ಮೇಲೆ ರಸ್ತೆಯಲ್ಲಿ ಹೋಗುವಾಗ ಸೈಕಲ್ ಸ್ಲಿಪ್ ಆಗಿ ರಸ್ತೆ ಪಕ್ಕಕ್ಕೆ ಹೋಗುವ ಹುಡುಗಿಗೆ ಹಾಯಿಸುತ್ತಾನೆ. ಆ ಹುಡುಗಿ ಅಲ್ಲಿನ ಹುಡುಗರ ಕೋತಿಚೇಷ್ಟೆ ಗೊತ್ತಿದ್ದು ಇವನು ಬೇಕು ಬೇಕಂತಲೇ ಡಿಕ್ಕಿ ಹೊಡಿದಿದ್ದಾನೆ ಎಂದು ಕಪಾಳಮೋಕ್ಷ ಮಾಡುತ್ತಾಳೆ. ಅವಮಾನಗೊಂಡು ಮನೆಗೆ ಬರುತ್ತಾನೆ. ಆ ಹುಡುಗಿ ಅಷ್ಟಕ್ಕೆ ಬಿಡದೆ ಪ್ರಿನ್ಸಿಪಲ್‌ಗೆ ಕಂಪ್ಲೇಂಟ್ ಮಾಡುತ್ತಾಳೆ. ಪ್ರಿನ್ಸಿಪಲ್ ದೇವರಾಜನನ್ನು ಕರೆಸಿ ನಿನ್ನ ತಂದೆ ತಾಯಿಗಳನ್ನು ಕರೆತರು ಎಂದು ಹೇಳುತ್ತಾರೆ. ದೇವರಾಜ ತಮ್ಮ ಬಾವನನ್ನು ಕರೆತರುತ್ತಾನೆ. ದೇವರಾಜನ ಬಾವನಿಗೆ ಆ ಹುಡುಗಿ ಪರಿಚಯವಿರುತ್ತದೆ. ಅವರ ಬಾವನೇ ಉಷಾ ಇವನು ನನ್ನ ಅಳಿಯ ಕಣಮ್ಮ ಎಂದು ಪರಿಚಯ ಮಾಡಿಕೊಡುತ್ತಾನೆ. ಉಷಾ ದೇವರಾಜನಲ್ಲಿ ಕ್ಷಮೆ ಕೇಳುತ್ತಾಳೆ. ಆದರೂ ದೇವರಾಜ ಕಪಾಳಮೋಕ್ಷ ಮರೆಯದೆ ಮನಸ್ಸಿನಲ್ಲಿ ಇಟ್ಟಿಕೊಂಡಿದ್ದನು. ದೇವರಾಜ ಅವಳನ್ನು ಕ್ಷಮಿಸದೆ ಇದ್ದಾಗ ಅವಳೇ ಅವನ ಕೈಯನ್ನು ತೆಗೆದುಕೊಂಡು ಕೆನ್ನೆಗೆ ಹೊಡೆದುಕೊಂಡು ಪರಿಪರಿಯಾಗಿ ಬೇಡಿಕೊಳ್ಳುತ್ತಾಳೆ. ಆಗ ಅವನ ಮನಸ್ಸಲ್ಲಿ ಏನಾಯಿತೋ ತಿಳಿಯದೆ ಉಷಳನ್ನು ಗಟ್ಟಿಯಾಗಿ ತಬ್ಬಿಕೊಂಡು ಚುಂಬಿಸುತ್ತಾನೆ. ಅಲ್ಲಿಂದ ಅವರಲ್ಲಿ ಪ್ರೇಮಾಂಕುರವಾಗುತ್ತದೆ ಪ್ರೀತಿ ಬೆಳೆಯುತ್ತದೆ. ದೇವರಾಜ ಮನೆಗೆ ಬಂದು ಉಷಾ ನಾಯಕ ತುಂಬಾ ಒಳ್ಳೆಯ ಹುಡುಗಿ ಎಂದು ಕಾಪಿಯಲ್ಲಿ ಬರೆಯೋದು ನೋಡಿ ಅಕ್ಕ ಬಾವ ಉಷಾಳನ್ನು ಕಂಡರೆ ಸಿಡುಕುತ್ತಿದ್ದವನು ಅವಳ ಬಗ್ಗೆ ಅಭಿಮಾನ ಬಂದಿದೆ ಎಂದು ನಗೆಯಾಡುತ್ತಾರೆ. ಅವಳ ರೂಪವನ್ನೇ ಮನಸಾರೆ ತುಂಬಿಕೊಂಡಿದ್ದಾನೆ. ಅವರ ಮನದಲ್ಲಿ ಅವರವರ ರೂಪ ಬಿಟ್ಟರೆ ಮತ್ತಾರ

ರೂಪಗಳಿಲ್ಲ. ಅಕ್ಕ ಬಾವನ ಜೊತೆ ದೇವರಾಜ ಉಷಾಳ ಮನೆಗೆ ಬಂದಾಗ ಉಷಳು ಪ್ರೀತಿಯ ಸ್ವಾಗತವನ್ನು ಲವಲವಿಕೆಯಿಂದ ಮಾಡಿಕೊಂಡಳು.

ದೇವರಾಜ ಉಷಾಳ ಪ್ರೀತಿಗೆ ಮಲೆನಾಡಿನ ಪರಿಸರ, ಮಳೆ ಆ ವಯಸ್ಸು ಎಲ್ಲವೂ ಅವರನ್ನು ಆಕಾಶದಲ್ಲಿ ಹಾರಾಡುವ ಪಕ್ಷಿಗಳಂತೆ ಮಾಡಿದವು. ಮಲೆನಾಡಿನ ಬೀಚಿನಲ್ಲಿ ಎಳೆಯ ಮನಸ್ಸಗಳು ಒಬ್ಬರಿಗೊಬ್ಬರು ಐ ಲವ್ ಯು ಎಂದು ಹೇಳಿಕೊಳ್ಳುವುದು, ಅಲ್ಲಿ ತಿರುಗಾಡುವ ಜನರಿಗೆ ಕೇಳಿಸುತ್ತಿತ್ತು. ಈಗ ಉಷಾ ಹಾಗೂ ದೇವರಾಜನ ನಡುವೆ ಪ್ರೀತಿ, ಪ್ರಣಯ, ಕಾಲೇಜು, ಬೀಚಗಳಲ್ಲಿ ಕಂಡ ಸ್ನೇಹಿತರು ಆಡಿಕೊಳ್ಳತೊಡಗಿದರು. ಕಾಲೇಜಿನಲ್ಲಿ ಟೂರ್ ಹೋದರು. ಅಲ್ಲಿ ಅವರ ಸಂತೋಷಕ್ಕೆ ಪರಾವಧಿ ಇರಲಿಲ್ಲ. ಅಕ್ಕಪಕ್ಕ ಕೂತು ಫೋಟೋ ತೆಗೆಸಿಕೊಳ್ಳುವುದು, ಅಪ್ಪಿಕೊಂಡ ಕುಳಿತು ಹೀಗೆ ಅವರು ಪ್ರವಾಸ ಮುಗಿಸಿದರು. ಪ್ರವಾಸದಲ್ಲಿನ ಫೋಟೋಗಳನ್ನು ನೋಡಿ ನೋಡಿ ಪ್ರಣಯದ ಕ್ಷಣಗಳನ್ನು ನೆನೆಸಿಕೊಳ್ಳುತ್ತಿದ್ದರು. ಅವರಿಬ್ಬರ ಪ್ರೀತಿ ಮನೆಯಲ್ಲಿ ತಿಳಿದು ಬಾವ ಅವನನ್ನು ಮನೆಯಿಂದ ಹೊರಹಾಕಿ ಅವರ ಊರು ಬಯಲು ಸೀಮೆಗೆ ಕಳಿಸುವುದರ ಕುರಿತು ಕೋಪದಲ್ಲಿ ಅಕ್ಕನೊಂದಿಗೆ ಮಾತನಾಡುವುದನ್ನು ಕೇಳಿಸಿಕೊಂಡ. ದೇವರಾಜ ನೊಂದುಕೊಂಡು ಹಾಗೆಯೇ ಮನೆಯೊಳಗೆ ಹೋಗದೆ ನೇರವಾಗಿ ಮಳೆಯಲ್ಲಿಯೇ ಉಷಾಳ ಮನೆಗೆ ಹೋಗುತ್ತಾನೆ. ಅಲ್ಲಿಗೆ ಹೋಗಿ ಉಷಾಳನ್ನು ಕೂಗತೊಡಗುತ್ತಾನೆ, ಹೊರಬಂದ ಅವರ ತಂದೆ ತಾಳ್ಮೆ ಕಳೆದುಕೊಳ್ಳದೆ ಒಳಗೆ ಕರೆದು ಕೇಳಿದ "ನನ್ನ ಮಗಳನ್ನು ಮರೆತು ಬಿಡು, ನಿನಗೆ ಎಷ್ಟು ದುಡ್ಡು ಬೇಕು ಕೇಳು" ಎಂದರು. ದೇವರಾಜನ ಪ್ರೀತಿ ಅಕ್ಷರಶಃ ನಲುಗಿತು. ಗೋಪಾಲನಾಯಕರ ಹಣದ ಆಮಿಷಕ್ಕೆ ಬಾವ, ಅಕ್ಕರ ಕೋಪಗಳ ನಡುವೆ ಉಷಾ ದೇವರಾಜನ ಪ್ರೀತಿ ಬಾಡುವ ಹಂತಕ್ಕೆ ಬಂದು ನಿಲ್ಲುತ್ತದೆ.

ದೇವರಾಜ "ಎಷ್ಟು ಬೇಕಾದರೂ ಕೊಡ್ತಿರಾ" ಎಂದು ಕೇಳಿದ. ಒಪ್ಪಿದ ಗೋಪಾಲನಾಯಕರು ಕೊನೆಗೆ ಒಂದು ಹೇಳುವುದು ಎಂದು ಕೇಳಿಕೊಂಡು, ಉಷಾಳ ಹಣೆಗೆ ಮುತ್ತಿಟ್ಟು "ಸರ್ ಮೂರು ದಿನ ಬಿಟ್ಟು ಬರ್ತಿನಿ ಹಣ ಸಿದ್ಧಮಾಡಿ" ಎಂದು ಕಡಲ ತೀರಕ್ಕೆ ನಡೆಯುತ್ತಾನೆ. ತನ್ನ ಉಷಾಳ ದುಃಖದಲ್ಲೇ ಕಡಲ ತೀರದಲ್ಲಿ ಮಲಗಿಕೊಳ್ಳುತ್ತಾನೆ. ಕಡಲು ತನ್ನ ತೆಕ್ಕೆಯಲ್ಲಿ ಮಲಗಿಸಿಕೊಳ್ಳುತ್ತದೆ. ಈಗ ಎಳೆಯ ಮಕ್ಕಳ ನಿಶ್ಕಲ್ಮಷ ಪ್ರೀತಿ ಜಾತಿ, ಹಣ, ಅಂತಸ್ತು, ಬಡತನ, ನೀರುದ್ಯೋಗ ಕಾರಣಗಳಿಂದ ದೇವರಾಜನ ಮರಣದೊಂದಿಗೆ ಅವರ ಪ್ರೀತಿ ದುರಂತ ಕಾಣುತ್ತದೆ. ಆದರೆ ಮುಗ್ಧ ಹೆಣ್ಣು ಉಷಾ ತನ್ನ ದೇವು ನಾಳೆ ಬರುತ್ತಾನೆ, ಇವತ್ತು ಬರುತ್ತಾನೆಂದು ದಾರಿ

ಕಾಯುತ್ತಾ ಇದ್ದಾಳೆ. ಈ ಕಥೆಯ ಮೂಲಕ ನಾಗತಿಹಳ್ಳಿ ಅವರು ಪ್ರೀತಿಯ ನಿಷ್ಕಪಟತೆಯನ್ನು ಮತ್ತು ಸಮಾಜದ ಅಡೆತಡೆಗಳನ್ನು ತೀವ್ರವಾಗಿ ಚಿತ್ರಿಸುತ್ತಾರೆ. ಮಲೆನಾಡಿನ ಪರಿಸರವು ಪ್ರಣಯದ ಸಂಕೇತವಾಗಿ ಬಳಸಲಾಗಿದ್ದು, ಮಳೆ ಮತ್ತು ಬೀಚ್‌ಗಳು ಪಾತ್ರಗಳ ಭಾವನೆಗಳನ್ನು ಪ್ರತಿಬಿಂಬಿಸುತ್ತವೆ. ಇದು ಕನ್ನಡ ಸಾಹಿತ್ಯದಲ್ಲಿ ಪ್ರಾದೇಶಿಕ ಸಾಂಸ್ಕೃತಿಕ ಅಂಶಗಳನ್ನು ಪ್ರಣಯದೊಂದಿಗೆ ಸಂಯೋಜಿಸುವ ಉದಾಹರಣೆಯಾಗಿದೆ, ಇಲ್ಲಿ ಪ್ರೀತಿಯು ಸಮಾಜದ ವೈರುಧ್ಯಗಳಿಂದಾಗಿ ದುರಂತಕ್ಕೆ ತಿರುಗುತ್ತದೆ.

"ವಸ್ತುಗಳನ್ನು ಉಪಯೋಗಿಸಬೇಕು ಮನುಷ್ಯರನ್ನು ಪ್ರೀತಿಸಬೇಕು" ನಮ್ಮನ್ನು ಯಾರು ಪ್ರೀತಿಸುತ್ತಾರೋ ಅವರನ್ನು ನಾವು ಪ್ರೀತಿಸಬೇಕು" ಅನ್ನೋ ಆಶಯದ ಭೂಮಿ ಗುಂಡಾಗಿದೆ ಕಥೆಯಲ್ಲಿ ಬಾಲು ಮತ್ತು ರುಕ್ಮಿಣಿ ತಮ್ಮ ಕಾಲೇಜು ಜೀವನದಲ್ಲಿ ಪ್ರೀತಿಸಿತ್ತಿದ್ದ ಜೋಡಿಗಳು. ಸಹವಾಸದೋಷ ಬಡತನ ದುರ್ಬುದ್ಧಿಯಿಂದ ತಾನು ಪ್ರೀತಿಸುತ್ತಿದ್ದ ತನ್ನ ರುಕ್ಮಿಣಿಯನ್ನು ದೂರಮಾಡಿಕೊಂಡ ಬಾಲು ಕೊನೆಗೆ ಪದ್ಮನಾಭನ ಮನೆಯಾಳು ಬುದ್ಧಿಗೊತ್ತಾಗಿ ರುಕ್ಮಿಣಿಗೆ ನಾನು ಮಾಡಿದ್ದು ಮೋಸ ಎಂದು ಪಶ್ಚಾತ್ತಾಪ ಪಟ್ಟುಕೊಳ್ಳುತ್ತಾನೆ. ಎಷ್ಟೋ ವರ್ಷಗಳ ನಂತರ ರುಕ್ಮಿಣಿ ಕಷ್ಟಪಟ್ಟು ಬಾಲುವಿನ ವಿಳಾಸ ಹುಡುಕಿ ಕಾಗದ ಬರೆಯುತ್ತಾಳೆ. ಸಂತೋಷದಿಂದ ಉತ್ತರವಾಗಿ ಹಲವಾರು ಕನಸುಗಳನ್ನು ಹೊತ್ತು ರುಕ್ಮಿಣಿಯನ್ನು ಕಾಣಲು ಹೋಗುತ್ತಾನೆ. ಆದರೆ ರುಕ್ಮಿಣಿ ಬಸುರಿ, ಅದರಲ್ಲೂ ಬಡಗಂಡನೊಂದಿಗೆ ಬಾಳು ಸಾಗಿಸುವ ಚಿತ್ರಣ ಕಂಡು ಬಾಲುವಿನ ಮನಸ್ಸು ವ್ಯಥೆಗೆ ಒಳಗಾಗುತ್ತದೆ. ರುಕ್ಮಿಣಿಗೆ, ಕಾಲೇಜು ದಿನಗಳಲ್ಲಿ ಬೇಡವೆಂದರೂ ಸ್ವಾಭಿಮಾನಿಯಾದ ಬಾಲು ತೆಗೆದುಕೊಂಡ ಹಣದ ಲೆಕ್ಕ ಬರೆದಿಡಲು ಹೇಳುತ್ತಿದ್ದ. ಈಗ ಆ ಲೆಕ್ಕ ಮೂರುಸಾವಿರ ರೂಪಾಯಿಗಳು. ನನ್ನ ಗಂಡನ ಮನೆಯವರು ಮೊದಲ ಹೆರಿಗೆಗಾಗಿ ತವರಿಗೆ ಕಳಿಸಿದ್ದಾರೆ. ಅಪ್ಪನ ಹತ್ತಿರ ದುಡ್ಡಿಲ್ಲ ನೀನು ಪಡೆದ ಮೂರುಸಾವಿರ ರೂಪಾಯಿಗಳು ಮರಳಿ ಕೊಟ್ಟು ಸಹಾಯ ಮಾಡು ಎಂದು ಬೇಡಿಕೊಳ್ಳುತ್ತಾಳೆ. ಇಗಾಗಲೇ ಪಶ್ಚಾತ್ತಾಪ ಪಟ್ಟ ಬಾಲು ಅವಳಿಗೆ ಹಣ ಕೊಟ್ಟು ಬರುತ್ತಾನೆ. ಇದಿಷ್ಟು ಈ ಕಥೆಯ ವಸ್ತು.

ಪ್ರೀತಿ ನಿಶ್ಕಲ್ಮಷವಾದುದ್ದು ಅದು ಹುಟ್ಟುವಾಗಲು ಅಷ್ಟೇ ಪವಿತ್ರತೆಯಿಂದ ಮನಸ್ಸುಗಳಲ್ಲಿ ಉದಯಿಸುತ್ತದೆ. ಹಾಗೆಯೇ ಮೊದಲು ಬಾಲು ರುಕ್ಮಿಣಿಯರಲ್ಲಿಯೂ ನಿಜವಾದ ಪ್ರೀತಿ ಹುಟ್ಟಿರುತ್ತದೆ. ಅದರಲ್ಲಿಯೂ ಮುಗ್ಧಳಾದ ರುಕ್ಮಿಣಿಯಲ್ಲಿ ನಿಜವಾದ ನಿಶ್ಕಲ್ಮಷವಾದ ಪ್ರೇಮ. ಇವರಲ್ಲಿ ಬಾಲು ಬಡಕುಟುಂಬದಲ್ಲಿ ಬಂದಿದ್ದ ಹಣದ

ಕೊರತೆ ಇದ್ದರೂ ರುಕ್ಮಿಣಿಯು ತನ್ನ ಪ್ರೀತಿಗೋಸ್ಕರ ಅವನೆಲ್ಲ ಖರ್ಚುಗಳಿಗೆ ಅವಳ ಅಪ್ಪನಿಂದ ಹಣವನ್ನು ಕದ್ದು ಕೊಡುತ್ತಿದ್ದಳು. ಬಾಲು ಬಡವನಾದರೂ ರುಕ್ಮಿಣಿಯನ್ನು ಬಹಳ ಪ್ರೀತಿಸುತ್ತಿದ್ದನು. ಪ್ರೀತಿಗೇನು ಕೊರತೆ ಇರಲಿಲ್ಲ. ಆದರೆ ಸಹವಾಸದೋಷ ಅನ್ನೋ ಬಿರುಗಾಳಿಗೆ ಸಿಲುಕಿ ರುಕ್ಮಿಣಿಯ ಹಣ, ಪ್ರೀತಿ ಎಲ್ಲವನ್ನು ತೆಗೆದುಕೊಂಡು ಹೋಯಿತು.

ಬಾಲು, "ರುಕ್ಕು ನನಗೆ ಗಂಡಸಾಗಿ ನಾಚಿಕೆ ಆಗುತ್ತಿದೆ. ನಿನ್ನ ಹತ್ತಿರ ಎಷ್ಟೋ ದುಡ್ಡು ಕೇಳಿ, ಪ್ರತಿದಿನ ನಿನ್ನ ಹತ್ತಿರ ಕೈಚಾಚಬೇಕು. ನಿನ್ನ ಹುಟ್ಟಹಬ್ಬಕ್ಕೆ ಸಣ್ಣ ಗ್ರೀಟಿಂಗ್ಸ್ ಕೊಡೋಕು ನನಗೆ ತಾಕತ್ ಇಲ್ಲ. ನಿನ್ನ ಋಣ ಹೇಗೆ ತೀರಿಸಲಿ." ಎಂದು ಕೊರಗುತ್ತ, ಸ್ವಾಭಿಮಾನಕ್ಕೆ ಧಕ್ಕೆ ಬಂದಂತೆ ಮಾತಾಡಿ ಅಷ್ಟೇ ಪ್ರೀತಿಯನ್ನು ಕೂಡ ತೋರಿಸುತ್ತಿದ್ದ. ಅವರಪ್ಪ ಇಲ್ಲದ ಸಮಯದಲ್ಲಿ ಅವರ ಪ್ರೀತಿ, ಪ್ರಣಯದ ಆಟಗಳು ನಡೆಯುತ್ತಿದ್ದವು. ರುಕ್ಮಿಣಿಯ ದುರಂತವೋ, ಬಾಲುವಿನ ದುರಾದೃಷ್ಟವೋ ಪದ್ಮನಾಭನೆಂಬ ಮನೆಮುರುಕನ ಸಹವಾಸಕ್ಕೆ ಸಿಲುಕಿ ಅವನಾಡುವ ಡಾಂಭಿಕ ಮಾತುಗಳು, ಬದುಕಿನ ಬಗ್ಗೆ ಪೋಳ್ಳು ಸಂದೇಶದ ಮಾತುಗಳಿಗೆ ಸಿಲುಕಿ 'ಥೂ, ನಿನ್ನ ಬುದ್ಧಿಗಿಷ್ಟಕ್ಕು ಬೆಂಕಿಹಾಕ! ಆ ಕರಕಿನ ಏನಂತ ಮದುವೆ ಆಗ್ತಿ. ಸುಖ ಅನುಭವಿಸಬೇಕು. ಮದುವೆ ಆಗಬಾರದು' ಎಂಬೆಲ್ಲ ಮಾತುಗಳಿಗೆ ಮಾರುಹೋದ ಬಾಲು, ಪದ್ಮನಾಭನ ಮನೆಯಾಳು ಸಿದ್ಧಾಂತಗಳಿಗೆ ಬದ್ಧನಾಗಿ ರುಕ್ಮಿಣಿಯನ್ನು ಅವಳ ಹಣವನ್ನು ಉಪಯೋಗಿಸಿಕೊಂಡು, ಮಜಾ ಮಾಡಿ ಕೊನೆಗೆ ಹೇಳದೆ ಕೇಳದೆ ರುಕ್ಮಿಣಿಯನ್ನು ಬಿಟ್ಟು ಓಡಿಹೋಗುತ್ತಾನೆ. ಆದರೆ ರುಕ್ಮಿಣಿ ಮಾತ್ರ ಬಾಲು ಬರುವ ದಾರಿ ಕಾಯ್ದು ಕೊನೆಗೆ ಅಪ್ಪ ತೋರಿದ ಹುಡುಗನನ್ನು ಮದುವೆಯಾಗುತ್ತಾಳೆ. ಓಡಿಹೋದ ಬಾಲು ಲೈಬ್ರರಿಯಲ್ಲಿ ಸಿಕ್ಕ ಹುಡುಗಿಯನ್ನು ಪ್ರೀತಿಸತೊಡಗಿದ. ಅವಳಿಗಾಗಿ ಪಾರ್ಕ್, ಸಿನಿಮಾ ಎಲ್ಲವೂ ತೋರಿಸಿ ತನ್ನಲ್ಲಿರುವ ಹಣ ಖರ್ಚು ಮಾಡಿಕೊಳ್ಳುತ್ತಾನೆ. ಕೊನೆಗೆ ಆ ಹುಡುಗಿ ಪರೀಕ್ಷೆ ಮುಗಿಸಿಕೊಂಡು ಬಾಲುವಿಗೆ ಟಾಟಾ ಮಾಡಿ ಹೋಗಿಬಿಡುತ್ತಾಳೆ. ತನ್ನನ್ನು ಪ್ರೀತಿಸುವ ಹುಡುಗಿಯನ್ನು ಬಿಟ್ಟು ತಾನು ಪ್ರೀತಿಸುವ ಹುಡುಗಿಯನ್ನು ಕಳೆದುಕೊಂಡು, ಬಾಲು ಏಕಾಂಗಿ ಜೀವನ ಸಾಗಿಸುತ್ತಾನೆ.

ಮನುಷ್ಯ ಮನುಷ್ಯರನ್ನು ಪ್ರೀತಿಸಬೇಕು. ಆದರೆ ಮನುಷ್ಯ ವಸ್ತುಗಳನ್ನು ಪ್ರೀತಿಸಿ ಮನುಷ್ಯರನ್ನು ಉಪಯೋಗಿಸಿಕೊಳ್ಳುತ್ತಾರೆ. ಅದಕ್ಕೆ ತಕ್ಕ ಪ್ರತಿಫಲವಾಗಿ ಪಶ್ಚಾತ್ತಾಪ, ಅನಾಥ ಪ್ರಜ್ಞೆ ಬದುಕಿನಲ್ಲಿ ಅನುಭವಿಸುತ್ತಾರೆ. ವಸ್ತುಗಳನ್ನು ಬಳಸಬೇಕು ಮನುಷ್ಯರನ್ನು ಪ್ರೀತಿಸಬೇಕು ಅನ್ನೋದರೊಂದಿಗೆ ನಮ್ಮನ್ನು ಯಾರು ಪ್ರೀತಿಸುತ್ತಾರೋ

ಅವರನ್ನೇ ನಾವು ಪ್ರೀತಿಸಬೇಕು ಎನ್ನುವ ನಿಲುವಿನಲ್ಲಿ ಕಥೆ ಮುಕ್ತಾಯವಾಗುತ್ತದೆ. ಈ ಕಥೆಯಲ್ಲಿ ನಾಗತಿಹಳ್ಳಿ ಅವರು ಪ್ರೀತಿಯ ನಿಶ್ಕಪಟತೆಯನ್ನು ಮತ್ತು ಸಹವಾಸದೋಷದಿಂದ ಉಂಟಾಗುವ ಪರಿಣಾಮಗಳನ್ನು ತೀವ್ರವಾಗಿ ವಿಶ್ಲೇಷಿಸುತ್ತಾರೆ. ಬಾಲುವಿನ ಪಾತ್ರವು ಸಮಾಜದಲ್ಲಿ ಸಹವಾಸದಿಂದ ಬದಲಾಗುವ ಮನಸ್ಸಿನ ಸ್ವಭಾವವನ್ನು ಪ್ರತಿನಿಧಿಸುತ್ತದೆ, ಆದರೆ ರುಕ್ಮಿಣಿಯ ಪಾತ್ರವು ನಿಷ್ಕಪಟ ಪ್ರೀತಿಯ ದುರಂತವನ್ನು ಎತ್ತಿ ತೋರುತ್ತದೆ. ಇದು ಕನ್ನಡ ಸಾಹಿತ್ಯದಲ್ಲಿ ಪ್ರೀತಿಯನ್ನು ಸಾಮಾಜಿಕ ಮತ್ತು ಮಾನಸಿಕ ನೆಲೆಯಲ್ಲಿ ಪರೀಕ್ಷಿಸುವ ಮಹತ್ವದ ಕೃತಿಯಾಗಿದೆ.

'ಬಾ ನಲ್ಲೆ ಮಧು ಚಂದ್ರಕೆ' ಈ ಕಾದಂಬರಿ ಬರೆಯುದರ ಹಿನ್ನೆಲೆಯ ಕಾರಣವೊಂದನ್ನು ಲೇಖಕರು ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ. ಅವರ ಗೆಳೆಯರು ಪೋಲಿಸ್ ಅಧಿಕಾರಿ ಆಗಿದ್ದ ಜೇಬರ ಅವರು ಕೇಸು ಕೊಡಲು ಬಂದು ಮುದಕನ್ನು ತಡಕಿದ ಪ್ರಸಂಗವದು. ಸತ್ಯ ಎಲ್ಲಿರುತ್ತದೆ ಎಂದು ಹೇಳುವುದು ಕಷ್ಟ. ಬರಿಗಣ್ಣಿಗೆ ಸತ್ಯದಂತೆ ಕಾಣುವುದು ಒಳಗಣ್ಣಿಗೆ ಸುಳ್ಳಾಗಿರುತ್ತದೆ. ಎಂಬ ಸಂದೇಶವನ್ನು ಹೊತ್ತೆ ಕಾದಂಬರಿಯನ್ನು ಕುತೂಹಲದಾಯಕ ಹಾಗೂ ನೀಗೂಢ ರೂಪದಲ್ಲಿ ಸೆರೆಹಿಡಿದಿದ್ದಾರೆ. ಆದರೆ ಈ ಕಾದಂಬರಿಯಲ್ಲಿ ಬರುವ ಮನುಷ್ಯರ ನಡುವಿನ ಪ್ರೀತಿ ಪ್ರೇಮ ಸಂಬಂಧಗಳನ್ನು ಅದ್ಭುತವಾಗಿ ಕಟ್ಟಿಕೊಟ್ಟಿದ್ದಾರೆ. ವಿವೇಕ ಒಬ್ಬ ಸುಸಂಸ್ಕೃತ ಕುಟುಂಬದ ಶ್ರೀಮಂತನ ಮಗ. ವಿವೇಕ ಅಂತೆಯೇ ಒಳ್ಳೆಯ ಮನಸ್ಸಿನವನು. ಅಂತರಮುಖಿ ಭಾವನಾ ಜೀವಿ. ಹಾಗೆಯೇ ಕವಿಯೂ ಆಗಿದ್ದಾನೆ. ವಿವೇಕನು ಪ್ರೀತಿಸುವ ಹುಡುಗಿ ಪ್ರೀತಿ ಕೂಡ ಸುಸಂಸ್ಕೃತ ಕುಟುಂಬದ ಶ್ರೀಮಂತನ ಮಗಳು. ಇವಳು ಅರ್ಥಶಾಸ್ತ್ರದ ವಿದ್ಯಾರ್ಥಿನಿ. ಇವರ ಮಧ್ಯೆ ಅನನ್ಯವಾದ ಪ್ರೇಮ, ಪ್ರೀತಿ ಬೆಳೆದಿತ್ತು. ಇಬ್ಬರೂ ಕೂಡ ಪ್ರೀತಿಸುತ್ತಿದ್ದರು.

ವಿವೇಕ ತನ್ನ ಪ್ರೀತಿಯ ಮೇಲಿನ ಅಗಾದ ಪ್ರೀತಿಯನ್ನು ಗೆಳೆಯ ಡೇವಿಡ್‌ನ ಮುಂದೆ "ವಿವಾಹಕ್ಕೆ ಮುನ್ನ ನಾನೇನು ಅವಳ ದೇಹದ ಬಯಕೆಗಳಿಗೆ ಆಹಾರ ಮಾಡಿದ್ದಿಲ್ಲವೇ. ಪಾದಕ್ಕೆ ಹೂ ಎರಚುವ ಭಕ್ತನಾದನೇ ಹೊರತು ಕಾಮಿಯಂತೆ ಕ್ರೂರವಾಗಿ ವರ್ತಿಸಲಿಲ್ಲ. ಜೋರಾಗಿ ಮುತ್ತಿಟ್ಟರೂ ನಲುಗಿ ಹೋದಾಳೆಂಬ ಅಳುಕಿನಲ್ಲಿ ರಕ್ಷಿಸಿದೆ. ಪ್ರೀತಿಯಂಬುವುದೊಂದು ಹೂ" ಎಂದು ಅವಳ ಬಗ್ಗೆ ವಿವೇಕ ಇಟ್ಟುಕೊಂಡ ಪ್ರೀತಿಯನ್ನು ಮಧುರ ಭಾವನೆಯನ್ನು ಹಂಚಿಕೊಳ್ಳುತ್ತಿದ್ದ.

ವಿವೇಕ ಪ್ರೀತಿಯನ್ನು ಎಷ್ಟು ಗಾಢವಾಗಿ ಪ್ರೀತಿಸುತ್ತಿದ್ದ ಎಂಬುದನ್ನು ಈ ಮೇಲಿನ ಮಾತುಗಳಿಂದ ಸ್ಪಷ್ಟವಾಗುತ್ತದೆ. ವಿವೇಕನು ಪ್ರತಿನಿತ್ಯ ಪ್ರೀತಿಯನ್ನು ಕಾಲೇಜಿಗೆ

ಕರೆದುಕೊಂಡು ಹೋಗುವುದು ಬರುವುದರ ಜೊತೆಗೆ ಅವಳೊಂದಿಗೆ ತಮಾಷೆಯಾಗಿ ಜಗಳವಾಡುತ್ತಿದ್ದರು. ಪ್ರೀತಿ ಪ್ರವಾಸಕ್ಕೆ ಹೋಗುವಾಗ ಅವಳನ್ನು ಬಸ್ಸಿಗೆ ಕಳಿಸಲು ಬಂದ ವಿವೇಕ ತನ್ನ ಪ್ರೀತಿಯನ್ನು ಕಳಿಸಲು ಮನಸ್ಸಿಲ್ಲದೆ ಅವಳ ಬಸ್ಸನ್ನು ಹಿಂಬಾಲಿಸಿ ಅವಳ ಸ್ನೇಹಿತರ ಹಾಸ್ಯಕ್ಕೆ ತುತ್ತಾಗುತ್ತಾನೆ. ಆದರೆ ಅವಳ ಮೇಲಿನ ಪ್ರೀತಿಯೂ ಈ ತಮಾಷೆ ಅವಮಾನಕ್ಕೆ ಒಳಗಾಗದಂತೆ ನೋಡಿಕೊಂಡಿದೆ. ಹೀಗೆ ಅವಳನ್ನು ಗಾಢವಾಗಿ ಪ್ರೀತಿಸುತ್ತಿದ್ದ.

ಮದುವೆಯಾದ ಪ್ರೀತಿಯನ್ನು ಹನಿಮೂನ್‌ಗಾಗಿ ಕುಲು ಮನಾಲಿಗೆ ಕರೆದುಕೊಂಡು ಹೋಗುತ್ತಾನೆ. ಪ್ರಯಾಣದ ಮಧ್ಯೆ ಬಸ್ಸು, ಟ್ರೈನ್‌ಗಳಲ್ಲಿ ಅವನು ಪ್ರಣಯದ ಚೇಷ್ಟೆಯನ್ನು ಮಾಡುತ್ತಾ ತನ್ನ ಪ್ರೀತಿಯನ್ನು ಪ್ರೀತಿಸುತ್ತಿದ್ದನ್ನು. ಅಕ್ಕಪಕ್ಕದಲ್ಲಿ ಕುಳಿತ ಜನ ಅವರ ದಾಂಪತ್ಯ ಬೆಸುಗೆ ಕಂಡು ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದರು.

ರೋಹ್ಟಾಂಗ್ ಪಾಸ್‌ನಲ್ಲಿ ಹಿಮಪರ್ವತದ ಮೇಲೆ ನಿಂತು ನೋಡುವಾಗ ಆಕಸ್ಮಿಕವಾಗಿ ಕಾಲು ಜಾರಿ ಬಿದ್ದು ಪ್ರಾಣ ಕಳೆದುಕೊಳ್ಳುತ್ತಾಳೆ. ತನ್ನ ಪ್ರೀತಿಯನ್ನು ಕಳೆದುಕೊಂಡ ವಿವೇಕನ ರೋದನ ಮುಗಿಲು ಮುಟ್ಟಿತು. ದುಃಖ ಹೇಳತೀರದು. ಅವೆಲ್ಲವನ್ನು ಗಮನಿಸಿದಾಗ ವಿವೇಕ ಪ್ರೀತಿಯ ಮೇಲೆ ಪ್ರಾಣವನ್ನೇ ಇಟ್ಟಿದ್ದನ್ನು ಕಾಣಬಹುದು. ಅವಳು ಕಾಲು ಜಾರಿ ಬಿದ್ದು ಸತ್ತಳು ಎಂಬುದು ಇಲ್ಲಿ ವಿವೇಕ ಸೃಷ್ಟಿಸಿದ ಒಂದು ಕಟ್ಟುಕಥೆ. ನಿಜವಾದ ಕೊಲೆಗಾರ ಅವನೇ. ಆದರೆ ಇಲ್ಲಿ ಬಲವಾಗಿ ಪ್ರೀತಿಸುತ್ತಿದ್ದ ಅವನು ತನ್ನ ಪ್ರೇಮವನ್ನು ಹೀಗೆ ಮೋಸಮಾಡಿದ್ದಕ್ಕೆ ಮಾನಸಿಕ ಸ್ಥಿಮಿತತೆಯನ್ನು ಕಳೆದುಕೊಂಡು ಕೊಲ್ಲುವ ಅವನ ಮಾನಸಿಕತೆ ತನ್ನಲ್ಲಿನ ನಿಜವಾದ ಪ್ರೇಮಕ್ಕೆ ಮೋಸ ಮತ್ತು ಧಕ್ಕೆಯಾದದ್ದಕ್ಕೆ ಸೇಡು ಎಂಬಂತೆ ಕಂಡುಬರುತ್ತದೆ.

ರೋಹ್ಟಾಂಗ್ ಪಾಸ್‌ನ ಪೋಲಿಸ್ ಅಧಿಕಾರಿ ಕರ್ನಾಟಕಕ್ಕೆ ಬಂದು ವಿವೇಕನ ಗೆಳೆಯ ಡೇವಿಡ್‌ನನ್ನು ಪ್ರೀತಿಯ ಅಪ್ಪ, ಅಮ್ಮನನ್ನು ಮತ್ತು ಸುತ್ತಮುತ್ತಲಿನ ಜನರಲ್ಲಿ ವಿಚಾರಣೆ ಮಾಡುತ್ತಾನೆ. ಎಲ್ಲರೂ ಪ್ರೀತಿ ಮತ್ತು ವಿವೇಕನ ನಡುವಿನ ಬಾಂಧವ್ಯದ ಬಗ್ಗೆ ಒಳ್ಳೆಯ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆ. ಇದು ವಿವೇಕ ಮತ್ತು ಪ್ರೀತಿಯ ನಡುವಿನ ಪ್ರೀತಿ, ಪ್ರೇಮಕ್ಕೆ ಸಾಕ್ಷಿಯಾಗಿದೆ. ಹೀಗೆ ಪ್ರೀತಿ ಮತ್ತು ವಿವೇಕನ ನಡುವಿನ ಪ್ರೀತಿ, ಪ್ರೇಮ, ಕಾಮ, ಸರಸ–ಸಲ್ಲಾಪಗಳು ಕಾದಂಬರಿಯುದ್ದಕ್ಕೂ ಸಾಗುತ್ತಲೇ ಇದ್ದವು.

ಇಲ್ಲಿ ವಿಶೇಷವಾಗಿ ಕಾಮ ಪ್ರೇಮಕ್ಕೆ ಸಂಬಂಧಿಸಿದಂತಹ ಮನಸ್ಸುಗಳೆರಡನ್ನು ಲೇಖಕರು ವಿವೇಕ ಮತ್ತು ಪ್ರೀತಿಯ ಪಾತ್ರಗಳಲ್ಲಿ ಶೋಧಿಸಲೆತ್ನಿಸಿದ್ದಾರೆ. ಬಹಳ

ಪ್ರೀತಿಸುವ ವಿವೇಕ ಅಷ್ಟೇ ತನ್ನನ್ನು ಅವಳು ಪ್ರೀತಿಸುತ್ತಾಳೆ ಎಂಬ ನಂಬಿಕೆ ಅವನದ್ದು. ಇದು ಪ್ರೀತಿಸುವವರಲ್ಲಿ ಇರಬೇಕಾದ್ದು ಮುಖ್ಯ. ಆದರೆ ಅವರ ನಡುವೆ ಅನೇಕ ತಿರುವುಗಳು ಪ್ರಾರಂಭವಾಗುತ್ತವೆ. ವಿವೇಕ ಪ್ರೀತಿಯ ಅನೇಕ ನಡತೆಗಳಲ್ಲಿ, ಮಾತುಗಳಲ್ಲಿ, ಮನಸ್ಥಿತಿಗಳಲ್ಲಿ ಕಂಡುಬರುವ ಭಿನ್ನತೆಗಳನ್ನು ಮೌನವಾಗಿಯೇ ಅವುಗಳನ್ನು ಅವಲೋಕಿಸುತ್ತಾನೆ. ಯಾವಾಗ ತನ್ನ ಪ್ರೀತಿ ಇನ್ಯಾರದ್ದೋ ಹಾಸಿಗೆಯಲ್ಲಿ ಹರಳುತ್ತಿದೆ ಎಂದು ಗೊತ್ತಾದಾಗ ಅವನಲ್ಲಿ ಗುಪ್ತಗತವಾಗಿ ಅವಳ ಮೇಲೆ ದ್ವೇಷಭಾವನೆಗಳು ಮೂಡುತ್ತವೆ. ಎಷ್ಟರ ಮಟ್ಟಿಗೆ ಅವನಲ್ಲಿ ಅವಳನ್ನು ಪ್ರೀತಿಸುತ್ತಿದ್ದನೋ ಅಷ್ಟೇ ವಿರುದ್ಧವಾಗಿ ದ್ವೇಷ ಅವನೊಳಗೆ ಇಳಿದು ಅವಳನ್ನು ದ್ವೇಷದ ಕಣ್ಣಿನಿಂದಲೇ ಕಾಮಿಸುತ್ತ ಎಲ್ಲಿಯೂ ಅವಳಿಗೆ ಗೊತ್ತಾಗದ ಹಾಗೇ ಸಂಚಿನಿಂದ ಕೊಲ್ಲುವ ತನಕ ಅವನ ಮನಸ್ಸು ಪ್ರೇರಿತವಾಗುತ್ತದೆ. ಮತ್ತು ಆ ದ್ವೇಷದಲ್ಲಿ ಅವನು ಯಶಸ್ಸನ್ನು ಪಡೆಯುತ್ತಾನೆ. ಕೊಲ್ಲುವುದರಲ್ಲಿ ಯಾವ ಪ್ರೇಮದ ಉತ್ಕಟತೆಯನ್ನು ನಾವು ಕಾಣಲು ಸಾಧ್ಯವಿಲ್ಲ. ಆದರೆ ಮುಗ್ಧ ಪ್ರೇಮಿಯೊಬ್ಬನಿಗೆ ಮೋಸ ಮಾಡಿದ್ದು ಕೂಡ ಒಂದು ಅಪರಾಧವೇ ಎಂಬುದು ಇಲ್ಲಿ ನಾವು ಮರೆಯಬಾರದು. ಅವನದು ಅಪರಾಧವಾದರೂ ಪ್ರೇಮವೆಂಬ ನಂಬಿಕೆ ಬಂಧನಕ್ಕೆ ಉಂಟುಮಾಡಿದ ಮೋಸವಲ್ಲ. ಇದು ಅತಿಯಾದ ನಂಬಿಕೆಯಲ್ಲಿ ಒಬ್ಬರನ್ನು ನಂಬಿ ಪ್ರೀತಿಸಿದಾಗ, ಆ ಪ್ರೀತಿ ಮೋಸದಾಟದಲ್ಲಿ ಕಳೆದುಹೋದಾಗ, ಆ ಪ್ರೀತಿಸುವ ವ್ಯಕ್ತಿ ಮೃಗವಾಗುತ್ತಾನೆ ಎಂಬುದನ್ನು ವಿವೇಕನ ಪಾತ್ರದಲ್ಲಿ ತಿಳಿಸಲು ಪ್ರಯತ್ನಿಸಿದ್ದಾರೆ. ಇಲ್ಲಿ ನಾವು ವಿವೇಕ ಕೊಲೆ ಮಾಡಬಾರದಿತ್ತು, ಅವಳ ವಿಚಾರವನ್ನು ತಿಳಿದ ನಂತರ ಅವಳನ್ನು ಬಿಟ್ಟು ಬಿಡಬಹುದಿತ್ತು ಎಂಬ ಮಧ್ಯಮವನ್ನು ನಾವು ಕೈಗೆತ್ತಿಕೊಂಡು ನೋಡಿದರೆ, ಇಲ್ಲಿ ಅವನು ಗೌರವಯುತವಾದ ಮನೆತನದಿಂದ ಬಂದವನು, ಮತ್ತು ತಾನೂ ಇಷ್ಟಪಟ್ಟು ಮನೆಯವರೆಲ್ಲರನ್ನು ಒಪ್ಪಿಸಿ ಮದುವೆಯಾದವನು. ಹೀಗಿದ್ದಾಗ ಅವಳ ಚಾರಿತ್ರ್ಯ ಗುಣಗಳ ಬಗ್ಗೆ ಎರಡೂ ಕುಟುಂಬ ಮತ್ತು ಸಮಾಜಕ್ಕೆ ಗೊತ್ತಾದರೆ? ಹೇಗೆ ಎಂಬುದು ಮನಸಲ್ಲಿ ಕಾಡಿರಬೇಕು. ಇಂತಹ ಸಂದರ್ಭದಲ್ಲಿಯೇ ಮನುಷ್ಯ ಮನಸ್ಸಿನೊಳಗೆ ಮೃಗತ್ವವನ್ನು ಹೊಂದಿ, ಹೊರಗಡೆ ಮನುಷ್ಯತ್ವದ ಮುಖವಾಡವನ್ನು ಧರಿಸುತ್ತ ತನ್ನ ಕಾರ್ಯವನ್ನು ಪೂರೈಸಿಕೊಳ್ಳುತ್ತಾನೆ. ಇಂತಹ ಸಂದರ್ಭದಲ್ಲಿಯೇ ಈ ಮನೋವ್ಯಾಕುಲತೆಗಳು ಉಂಟಾಗುತ್ತವೆ ಎಂಬುದನ್ನು ನಾವು ಗುರುತಿಸಲು ಸಾಧ್ಯವಿದೆ. ಈ ಕಾದಂಬರಿಯ ಮೂಲಕ ನಾಗತಿಹಳ್ಳಿ ಅವರು ಪ್ರೀತಿಯ ಗಾಢತೆಯನ್ನು ಮತ್ತು ಮೋಸದಿಂದ ಉಂಟಾಗುವ ಮಾನಸಿಕ ಆಘಾತವನ್ನು ಸಾಂಸ್ಕೃತಿಕ ಮತ್ತು ಮನೋವೈಜ್ಞಾನಿಕ ನೆಲೆಯಲ್ಲಿ ವಿಶ್ಲೇಷಿಸುತ್ತಾರೆ, ಇದು ಕನ್ನಡ

ಸಾಹಿತ್ಯದಲ್ಲಿ ಪ್ರಣಯದ ಗುಪ್ತ ಮುಖಗಳನ್ನು ಬೆಳಕಿಗೆ ತರುವ ಮಹತ್ವದ ಕೃತಿಯಾಗಿದೆ. ಈ ಸಾಹಿತ್ಯ ವಿಮರ್ಶೆಯ ಅಂಕಿ–ಚಿಂತನದಲ್ಲಿ, ಪ್ರೀತಿ, ಪ್ರೇಮ ಮತ್ತು ಕಾಮದ ಸಾರ್ಥಕತೆಯ ಬಗ್ಗೆ ಹಾಗೂ ನಾಗತಿಹಳ್ಳಿ ಚಂದ್ರಶೇಖರರ ಸಾಹಿತ್ಯದಲ್ಲಿ ಈ ವಿಷಯಗಳ ಪ್ರತಿಬಿಂಬವನ್ನು ಚರ್ಚಿಸಲಾಗಿದೆ. ಕವಿ ಜಿ.ಎಸ್. ಶಿವರುದ್ರಪ್ಪನವರ ಕವನವು ಪ್ರೀತಿಯ ಮಹತ್ವವನ್ನು ಸ್ಪಷ್ಟವಾಗಿ ತೋರಿಸುತ್ತದೆ. ಪ್ರೀತಿ ಇಲ್ಲದಂತೆ ನಮ್ಮ ಜೀವನವು ಏನೂ ಸಾಧಿಸಲು ಸಾಧ್ಯವಿಲ್ಲ; ಹೀಗಾಗಿ, ಪ್ರೀತಿಯ ಹೃದಯದಲ್ಲಿ ಮಾತ್ರ ಚಲನೆಯನ್ನು ಕಾಣಬಹುದು.

ನಾಗತಿಹಳ್ಳಿ ಚಂದ್ರಶೇಖರರ ಕತೆಗಳಲ್ಲಿ ಪ್ರೀತಿ ಮತ್ತು ಪ್ರೇಮದ ಅಧ್ಯಯನವು ಬಹಳ ಪ್ರಮುಖವಾಗಿದೆ. ಅವರ ಬರಹದಲ್ಲಿ ಮಾನವೀಯ ಭಾವನೆಗಳನ್ನು ಸಮರ್ಥವಾಗಿ ಚಿತ್ರಿಸಲಾಗಿದೆ, ಮತ್ತು ಪ್ರೀತಿ–ಪ್ರಣಯವು ಎಲ್ಲ ಜೀವನದ ಕೇಂದ್ರ ಭಾಗವಾಗಿದೆ. ಈ ಕತೆಗಳಲ್ಲಿ ಸಮಾಜದ ಸಾಂಸ್ಕೃತಿಕ ಚಟುವಟಿಕೆಗಳ ಅಭಿವ್ಯಕ್ತಿಯು ಸಮರ್ಥವಾಗಿ ಇದೆ, ಮತ್ತು ಪ್ರೀತಿ–ಕಾಮದ ನಡುವಿನ ಪಾರದರ್ಶಕ ಸಂಬಂಧವನ್ನು ಅವರು ವಿಶ್ಲೇಷಿಸಿದ್ದಾರೆ.

ಉದಾಹರಣೆಗೆ, 'ನನ್ನ ಪ್ರೀತಿಯ ಹುಡುಗನಿಗೆ' ಮತ್ತು 'ಇರುವುದೆಲ್ಲವ ಬಿಟ್ಟು' ಮುಂತಾದ ಕತೆಗಳಲ್ಲಿ ಅವರು ಜಾತಿ, ಧರ್ಮ ಮತ್ತು ಸಾಮಾಜಿಕ ಅಸಮಾನತೆಗಳ ನಡುವಿನ ಸಂಬಂಧವನ್ನು ಸೂಕ್ಷ್ಮವಾಗಿ ಶೋಧಿಸುತ್ತಾರೆ. ಇವರ ಕತೆಗಳು ಪ್ರೀತಿಯಲ್ಲಿನ ದ್ವಂದ್ವವನ್ನು ಮತ್ತು ಆ ದ್ವಂದ್ವದ ಪರಿಣಾಮವನ್ನು ತೀವ್ರವಾಗಿ ಚಿತ್ರಿಸುತ್ತವೆ, ಬಲವಾದ ಸಾಮಾಜಿಕ ದೃಷ್ಟಿಕೋನವನ್ನು ಕಟ್ಟಿ ಹಾಕುತ್ತವೆ.

ಚಂದ್ರಶೇಖರರ ಸಾಹಿತ್ಯವು ವೈಯಕ್ತಿಕ ಮತ್ತು ಸಾಮಾಜಿಕ ಜೀವನವನ್ನು ಅನ್ವಯಿಸುವ ಮೂಲಕ, ಪ್ರೀತಿ ಮತ್ತು ಪ್ರಣಯವನ್ನು ಮಾನವೀಯ ಸಂಬಂಧಗಳ ಸ್ವರೂಪದಲ್ಲಿ ವಿವರಿಸುತ್ತದೆ. ಅವರ ಬರಹಗಳು ಪ್ರೀತಿಯ ಸ್ಥಿತಿಗತಿಯನ್ನು ಮತ್ತು ಕಾಮದ ಸಾಮರಸ್ಯವನ್ನು ವಿವರಿಸುತ್ತವೆ, ಮತ್ತು ಪ್ರೀತಿಯ ನೈಸರ್ಗಿಕ ಸ್ವಭಾವವನ್ನು ಹಾಗೂ ಅದರ ವಿರುದ್ಧದ ತಂತ್ರಗಳನ್ನು ಒಳಗೊಂಡಿವೆ. ಕಡೆಯಾಗಿ, ಪ್ರೀತಿ, ಪ್ರೇಮ, ಮತ್ತು ಕಾಮವನ್ನು ಮಾತ್ರವಲ್ಲದೆ, ಸಮಾಜದಲ್ಲಿ ಇವುಗಳ ಪ್ರಭಾವವನ್ನು ವಿಶ್ಲೇಷಿಸುವ ಮೂಲಕ, ನಾಗತಿಹಳ್ಳಿ ಚಂದ್ರಶೇಖರರ ಕತೆಗಳು ಮಾನವೀಯ ಸಹಜತೆಯನ್ನು ಮತ್ತು ಸಂಬಂಧಗಳ ಕಂಪನವನ್ನು ಪ್ರತಿಬಿಂಬಿಸುತ್ತವೆ. ಅವರ ಕಥೆಗಳಲ್ಲಿ ಕಾಣುವ ಮಾನವೀಯ ಭಾವನೆಗಳು ಹಾಗೂ ಸಂಬಂಧಗಳ ಗಂಭೀರತೆ, ಶ್ರೇಷ್ಠ ಪಠಣೀಯತೆಗೆ ಪ್ರೇರಣೆಯನ್ನು ನೀಡುತ್ತವೆ.

ಇಂತಹ ಸಂಕೀರ್ಣ ಮನಸ್ಥಿತಿಯ ಪಾತ್ರಗಳನ್ನು ಸಮಾಜದಲ್ಲಿ ಇವೆ ಎಂಬುದನ್ನು ಲೇಖಕರು ಶೋಧಿಸಿದ್ದಾರೆ ಈ ಕಾದಂಬರಿಯ ಮೂಲಕ. ಹಾಗೂ ಈ ಪಾತ್ರಗಳ ಮನಸ್ಥಿತಿಗಳನ್ನು ನೋವೈಜ್ಞಾನಿಕ ನೆಲೆಯಲ್ಲಿಯೂ ಕೂಡ ಈ ಸಂಬಂಧವನ್ನು ನೋಡಿದ್ದಾರೆ.

ಆಕರ ಗ್ರಂಥಗಳು :

1. ಚಂದ್ರಶೇಖರ ನಾಗತಿಹಳ್ಳಿ. 2010. ಕಥಾಯಾತ್ರೆ [41 ಪ್ರಾತಿನಿಧಿಕ ಕಥೆಗಳು], ಅಭಿವ್ಯಕ್ತಿ ಒಂದು ಸಾಂಸ್ಕೃತಿಕ ವೇದಿಕೆ, ಬೆಂಗಳೂರು

ಪರಾಮರ್ಶನ ಗ್ರಂಥಗಳು:

1. ಆಮೂರ ಜಿ. ಎಸ್. 2003. ಕನ್ನಡ ಕಥನ ಸಾಹಿತ್ಯ: ಸಣ್ಣಕಥೆ. ಪ್ರಿಯದರ್ಶಿನಿ ಪ್ರಕಾಶನ ಬೆಂಗಳೂರು.
2. ಉಪಾಧ್ಯಾಯ ಭಗವತ್ ಶರಣ. (ಅನುವಾದ) ಗುರುದತ್ತ ಪ್ರಧಾನ್. 1986. ಭಾರತೀಯ ಸಮಾಜದ ಐತಿಹಾಸಿಕ ವಿಶ್ಲೇಷಣೆ. ನವ ಕರ್ನಾಟಕ ಪ್ರಕಾಶನ ಬೆಂಗಳೂರು.
3. ಉಷಾರಾಣಿ ಟಿ. ಎಂ. 2016. ಮಹಿಳಾ ಸಾಹಿತ್ಯ ಅಭಿವ್ಯಕ್ತಿವಾದ ತಾತ್ವಿಕ ಸ್ವರೂಪ. ಪಲ್ಲವ ಪ್ರಕಾಶನ ಚನ್ನಪಟ್ಟಣ.
4. ಗೋವಿಂದರಾಜ ಗಿರಡ್ಡಿ. 2015. ಕಾದಂಬರಿ: ವಸ್ತು ಮತ್ತು ತಂತ್ರ. ಹೇಮಂತ ಸಾಹಿತ್ಯ ಬೆಂಗಳೂರು.
5. ಜಗದೀಶಕೊಪ್ಪ ಎಸ್. 2008. ಜಾಗತೀಕರಣ ಮತ್ತು ಗ್ರಾಮಭಾರತ. ಸಿಂಚನ ಗ್ರಂಥಮಾಲೆ ಹಾವೇರಿ.
6. ಗಂಗನಾಯಕ್ ಕೆ. ಎನ್. 2012. ಸಮಾಜಶಾಸ್ತ್ರ. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯ ಮಾನಸಗಂಗೋತ್ರಿ ಮೈಸೂರು.
7. ಕಲ್ಗುಡಿ ಬಸವರಾಜ. (ಸಂಪಾದಕರು) 2006. ಸುವರ್ಣ ವಿಚಾರ ಸಾಹಿತ್ಯ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ. ಬೆಂಗಳೂರು.

***

ಪಂಪನು ನಿರೂಪಿಸುವ ಅಧಿಕಾರ ಚಿಂತನೆ

ಡಾ. ರತ್ನಮಂಜರಿ ಕೆ. ಜಿ
ಪ್ರಾಂಶುಪಾಲರು, ಪ್ರಾಧ್ಯಾಪಕರು
ಶ್ರೀ ಸಿದ್ಧಗಂಗಾ ಕಲಾ ಮತ್ತು ವಾಣಿಜ್ಯ ಸಂಜೆ ಕಾಲೇಜು
ತುಮಕೂರು – 572102

1

ಪ್ರಮುಖ ಪದಗಳು
ಪಂಪ, ಅಧಿಕಾರ ಚಿಂತನೆ, ವಿಕ್ರಮಾರ್ಜುನ ವಿಜಯ, ಆದಿಪುರಾಣ, ಧರ್ಮಬದ್ಧ ರಾಜಕಾರಣ

ಹತ್ತನೇ ಶತಮಾನದ ಕನ್ನಡ ಸಾಹಿತ್ಯದ ಚಕ್ರವರ್ತಿ ಎನಿಸಿಕೊಂಡ ಪಂಪನು ತನ್ನ ಕೃತಿಗಳ ಮೂಲಕ ಮಂಡಿಸಿದ 'ಅಧಿಕಾರ ಚಿಂತನೆ'ಯು ಕೇವಲ ರಾಜಕೀಯ ಸಿದ್ಧಾಂತವಲ್ಲ, ಅದು ಮನುಷ್ಯನ ಅಸ್ತಿತ್ವದ ಮತ್ತು ನೈತಿಕತೆಯ ತಲಸ್ಪರ್ಶಿ ವಿಶ್ಲೇಷಣೆಯಾಗಿದೆ. ಈ ಸಂಶೋಧನಾ ಲೇಖನವು ಪಂಪನ ಎರಡು ಪ್ರಮುಖ ಕೃತಿಗಳಾದ 'ವಿಕ್ರಮಾರ್ಜುನ ವಿಜಯ' ಮತ್ತು 'ಆದಿಪುರಾಣ'ಗಳ ಹಿನ್ನೆಲೆಯಲ್ಲಿ ಅಧಿಕಾರದ ವಿವಿಧ ಆಯಾಮಗಳನ್ನು ಶೋಧಿಸುತ್ತದೆ. ಲೌಕಿಕ ಜಗತ್ತಿನಲ್ಲಿ ಅಧಿಕಾರವು ಹೇಗೆ 'ಛಲ' ಮತ್ತು 'ಘನತೆ'ಯ ಸಂಕೇತವಾಗುತ್ತದೆ ಎಂಬುದನ್ನು 'ಪಂಪ ಭಾರತ'ದಲ್ಲಿ ವಿವರಿಸುವ ಕವಿಯು, ಅದೇ ಅಧಿಕಾರವು ಪರಮ ಸತ್ಯದ ಹಾದಿಯಲ್ಲಿ ಹೇಗೆ ಒಂದು ತೊಡಕಾಗಬಹುದು ಎಂಬುದನ್ನು 'ಆದಿಪುರಾಣ'ದಲ್ಲಿ ಎಚ್ಚರಿಸುತ್ತಾನೆ. ಅಧಿಕಾರ ಎನ್ನುವುದು ಕೇವಲ ಸಿಂಹಾಸನಕ್ಕೆ ಸೀಮಿತವಾದುದಲ್ಲ; ಅದು ನಿಷ್ಠೆ, ಗೆಳೆತನ, ತ್ಯಾಗ ಮತ್ತು ವೈರಾಗ್ಯಗಳ ನಡುವಿನ ಒಂದು ಸಂಕೀರ್ಣ ಸಮತೋಲನ. ಈ ಲೇಖನವು ಪಂಪನ ಕಾವ್ಯದಲ್ಲಿನ ಅಧಿಕಾರದ ಲೌಕಿಕ ಮತ್ತು ಅಲೌಕಿಕ ದ್ವಂದ್ವಗಳನ್ನು ವಿವರಿಸುತ್ತಾ, ಮನುಷ್ಯ ಜಾತಿಯ ಏಕತೆಯ ಸಂದೇಶದೊಂದಿಗೆ ಅಧಿಕಾರವು ಹೇಗೆ

ಸಮಾಜದ ಹಿತಕ್ಕೆ ಪೂರಕವಾಗಿರಬೇಕು ಎಂಬುದನ್ನು ಪ್ರತಿಪಾದಿಸುತ್ತದೆ. ಪಂಪನ ಪ್ರಕಾರ ಅಧಿಕಾರವು ಜವಾಬ್ದಾರಿಯ ಕುರುಹೇ ಹೊರತು ಕೇವಲ ದರ್ಪದ ಸಾಧನವಲ್ಲ ಎಂಬುದು ಈ ಅಧ್ಯಯನದ ಮುಖ್ಯ ಆಶಯವಾಗಿದೆ.

ಕನ್ನಡ ಸಾಹಿತ್ಯ ಚರಿತ್ರೆಯ ಸುದೀರ್ಘ ಪಯಣದಲ್ಲಿ ಹತ್ತನೇ ಶತಮಾನವು 'ಸುವರ್ಣ ಯುಗ'ವೆಂದೇ ಗುರುತಿಸಲ್ಪಟ್ಟಿದೆ. ಈ ಕಾಲಘಟ್ಟವು ಕೇವಲ ರಾಜಕೀಯವಾಗಿ ರಾಷ್ಟ್ರಕೂಟರ ವೈಭವದ ಕಾಲ ಮಾತ್ರವಲ್ಲ, ಸಾಹಿತ್ಯಿಕವಾಗಿ ಪಂಪನಂತಹ ಮಹಾಪ್ರಜ್ಞೆಯ ಉದಯದ ಕಾಲವೂ ಹೌದು. ಪಂಪನು ತನ್ನ 'ಆದಿಕವಿ' ಎಂಬ ಬಿರುದಿಗೆ ನ್ಯಾಯ ಒದಗಿಸುವುದು ಕೇವಲ ಅವನು ಮೊದಲಿಗ ಎನ್ನುವ ಕಾರಣಕ್ಕಲ್ಲ, ಬದಲಾಗಿ ಅವನು ಕನ್ನಡದ ಮಣ್ಣಿನಲ್ಲಿ ಬಿತ್ತಿದ ವೈಚಾರಿಕತೆ ಮತ್ತು ಅಧಿಕಾರದ ಬಗೆಗಿನ ಅವನ ನಿರ್ದಾಕ್ಷಿಣ್ಯ ನಿಲುವಿನಿಂದಾಗಿ ಎನ್ನಬಹುದು. ಪಂಪನ ಕಾಲದ ಸಮಾಜವು ಯುದ್ಧ ಮತ್ತು ಶಾಂತಿ ಎಂಬ ಎರಡು ಪರಸ್ಪರ ವಿರೋಧಾಭಾಸಗಳ ನಡುವೆ ತೂಗಾಡುತ್ತಿತ್ತು. ಒಂದೆಡೆ ಸಾಮ್ರಾಜ್ಯ ವಿಸ್ತರಣೆಯ ಹಸಿವು, ಮತ್ತೊಂದೆಡೆ ಜೈನ ಧರ್ಮದ ಅಹಿಂಸಾ ತತ್ವ ಮತ್ತು ವೈರಾಗ್ಯದ ಸೆಳೆತ. ಈ ಎರಡು ತುದಿಗಳ ನಡುವೆ ಪಂಪನು ತನ್ನ 'ಅಧಿಕಾರ ಚಿಂತನೆ'ಯನ್ನು ರೂಪಿಸಿಕೊಂಡಿದ್ದಾನೆ.

ಪಂಪನಿಗೆ ಅಧಿಕಾರ ಎಂಬುದು ಕೇವಲ ಭೌಗೋಳಿಕ ಗಡಿಗಳನ್ನು ವಿಸ್ತರಿಸುವ ಕ್ರಿಯೆಯಲ್ಲ. ಅದು ಮನುಷ್ಯನ ಅಂತರಂಗದ ಅಹಂಕಾರ ಮತ್ತು ಬಹಿರಂಗದ ಕರ್ತವ್ಯಗಳ ನಡುವಿನ ಸಂಘರ್ಷ. ಪಂಪನು ಕ್ಷತ್ರಿಯ ಸಂವೇದನೆಯನ್ನು ಹೊಂದಿದ್ದ ಜೈನ ಕವಿ. ಕತ್ತಿಯನ್ನು ಹಿಡಿದು ರಣರಂಗದಲ್ಲಿ ಹೋರಾಡಿದ ಅನುಭವವಿದ್ದವನಿಗೆ, ಲೇಖನಿಯನ್ನು ಹಿಡಿದು ಕಾವ್ಯ ರಚಿಸುವಾಗ ಅಧಿಕಾರದ ಸುಖ ಮತ್ತು ದುಃಖಗಳೆರಡೂ ಕಣ್ಣಿಗೆ ಕಟ್ಟಿದಂತೆ ಕಾಣುತ್ತವೆ. ಅವನ 'ವಿಕ್ರಮಾರ್ಜುನ ವಿಜಯ'ವು ಲೌಕಿಕ ಅಧಿಕಾರದ ಉತ್ತುಂಗವನ್ನು ಚಿತ್ರಿಸಿದರೆ, 'ಆದಿಪುರಾಣ'ವು ಆ ಅಧಿಕಾರದ ಅಸಹಾಯಕತೆಯನ್ನು ಮತ್ತು ಅನಿತ್ಯತೆಯನ್ನು ದರ್ಶಿಸುತ್ತದೆ. ಅಧಿಕಾರವು ಮನುಷ್ಯನನ್ನು ದೈವತ್ವಕ್ಕೆ ಏರಿಸಬಲ್ಲದು ಅಥವಾ ದಾನವತ್ವಕ್ಕೆ ಇಳಿಸಬಲ್ಲದು ಎಂಬ ಸತ್ಯವನ್ನು ಪಂಪನು ತನ್ನ ಪಾತ್ರಗಳ ಮೂಲಕ ನಿರೂಪಿಸಿದ್ದಾನೆ.

ಅಧಿಕಾರದ ಕೇಂದ್ರಬಿಂದುವಾಗಿ ಪಂಪನು ಕಾಣುವುದು 'ಘನತೆ'ಯ ತಾತ್ವಿಕತೆ. ರಾಜನೊಬ್ಬನಿಗೆ ರಾಜ್ಯಕ್ಕಿಂತ ಅವನ ವ್ಯಕ್ತಿತ್ವದ ಘನತೆ ಮುಖ್ಯ ಎಂಬುದು ಪಂಪನ ನಿಲುವು. ಇದನ್ನೇ ಅವನು 'ಸಂಸಾರ ಸಾರೋದಯಂ' ಎಂದು ಕರೆದಿದ್ದಾನೆ. ಬದುಕಿನ ಸಾರವೇ ಕೀರ್ತಿ ಮತ್ತು ಅಧಿಕಾರ ಎಂದು ನಂಬಿದ್ದರೂ, ಆ ಅಧಿಕಾರವು

ಧರ್ಮಬದ್ಧವಾಗಿರಬೇಕು ಎಂಬ ಎಚ್ಚರ ಅವನಲ್ಲಿತ್ತು. ಪಂಪನ ಈ ಚಿಂತನೆಯು ಕೇವಲ ಅರಿಕೇಸರಿಯನ್ನು ಮೆಚ್ಚಿಸಲಿಕ್ಕಷ್ಟೇ ಸೀಮಿತವಾಗಿರಲಿಲ್ಲ, ಅದು ಅಂದಿನ ಕಾಲದ ರಾಜಕೀಯ ವ್ಯವಸ್ಥೆಗೆ ಬರೆದ ಒಂದು 'ನೈತಿಕ ಸಂವಿಧಾನ'ದಂತಿತ್ತು. ಶಕ್ತಿಯು ದರ್ಪವಾಗಿ ಬದಲಾಗಬಾರದು, ಬದಲಾಗಿ ಅದು ದಯೆಯಾಗಿ ಪರಿಣಮಿಸಬೇಕು ಎಂಬುದು ಪಂಪನ ಅಧಿಕಾರ ಚಿಂತನೆಯ ಮೂಲ ಆಶಯವಾಗಿದೆ.

ಪಂಪನ ಕಾವ್ಯ ಮತ್ತು ಅವನ ರಾಜಕೀಯ ದೃಷ್ಟಿಕೋನದ ಮೇಲೆ ಕಳೆದ ಒಂದು ಶತಮಾನದಿಂದಲೂ ಗಂಭೀರವಾದ ಅಧ್ಯಯನಗಳು ನಡೆದಿವೆ. ಈ ಅಧ್ಯಯನಗಳು ಪಂಪನನ್ನು ಕೇವಲ ಒಬ್ಬ ಪುರಾಣ ಕಥೆಗಾರನನ್ನಾಗಿ ನೋಡದೆ, ಒಬ್ಬ ಪ್ರಬುದ್ಧ ರಾಜಕೀಯ ಚಿಂತಕನನ್ನಾಗಿ ಗುರುತಿಸಿವೆ.

ಡಿ.ಎಲ್.ಎನ್. ಅವರ 'ಪಂಪ ಭಾರತ ದೀಪಿಕೆ' ಕೃತಿಯಲ್ಲಿ ಪಂಪನ ಭಾಷೆ ಮತ್ತು ಶೈಲಿಯನ್ನು ವಿಶ್ಲೇಷಿಸುವುದರ ಜೊತೆಗೆ, ಪಂಪನು ತನ್ನ ಆಶ್ರಯದಾತ ಅರಿಕೇಸರಿಯನ್ನು ಅರ್ಜುನನಲ್ಲಿ ಹೇಗೆ ಅವತರಿಸಿದ್ದಾನೆ ಎಂಬುದನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿದ್ದಾರೆ. ಅಧಿಕಾರ ಮತ್ತು ನಿಷ್ಠೆಯ ನಡುವಿನ ಸಂಬಂಧವನ್ನು ಗುರುತಿಸುವಲ್ಲಿ ಇವರ ಅಧ್ಯಯನವು ಅಡಿಪಾಯದಂತಿದೆ. ಪಂಪನು ತನ್ನ ಸ್ವಾಮಿ ನಿಷ್ಠೆಯನ್ನು ಕಾವ್ಯ ಧರ್ಮದೊಂದಿಗೆ ಹೇಗೆ ಬೆಸೆದಿದ್ದಾನೆ ಎಂಬುದನ್ನು ಡಿ.ಎಲ್.ಎನ್. ಅವರು ಪ್ರಮಾಣೀಕರಿಸಿದ್ದಾರೆ. ಚಿದಾನಂದಮೂರ್ತಿಯವರ 'ಸಂಶೋಧನಾ ತರಂಗ' ಕೃತಿಯಲ್ಲಿ ಪಂಪನ ಕಾಲದ ಶಾಸನಗಳು ಮತ್ತು ಕಾವ್ಯಗಳ ನಡುವಿನ ಸಂಬಂಧವನ್ನು ಚರ್ಚಿಸಲಾಗಿದೆ. ಪಂಪನ ಅಧಿಕಾರ ಚಿಂತನೆಯು ಕೇವಲ ಕಲ್ಪನೆಯಲ್ಲ, ಅದು ಅಂದಿನ ರಾಷ್ಟ್ರಕೂಟರ ಕಾಲದ 'ಸಾಮಂತ' ಪದ್ಧತಿಯ ಪ್ರತಿಫಲನ ಎಂದು ಅವರು ವಾದಿಸುತ್ತಾರೆ. ಅಧಿಕಾರವು ಹೇಗೆ ಶ್ರೇಣೀಕೃತವಾಗಿತ್ತು ಮತ್ತು ಕವಿಯು ಆ ಅಧಿಕಾರದ ಭಾಗವಾಗಿ ಹೇಗೆ ಕಾರ್ಯನಿರ್ವಹಿಸುತ್ತಿದ್ದ ಎಂಬುದನ್ನು ಇವರ ಲೇಖನಗಳು ಸ್ಪಷ್ಟಪಡಿಸುತ್ತವೆ. ತೀ.ನಂ.ಶ್ರೀ. ಅವರು ತಮ್ಮ 'ಪಂಪ' ಕೃತಿಯಲ್ಲಿ ಪಂಪನ ಲೌಕಿಕ ಮತ್ತು ಅಲೌಕಿಕ ದ್ವಂದ್ವಗಳನ್ನು ಗುರುತಿಸಿದ್ದಾರೆ. ಅಧಿಕಾರವು 'ವಿಕ್ರಮಾರ್ಜುನ ವಿಜಯ'ದಲ್ಲಿ ಲೌಕಿಕ ಯಶಸ್ಸಿನ ಸಂಕೇತವಾದರೆ, 'ಆದಿಪುರಾಣ'ದಲ್ಲಿ ಅದು ಮೋಕ್ಷಕ್ಕೆ ಅಡ್ಡಿಯಾಗುವ 'ಪರಿಗ್ರಹ'ವಾಗಿ ಕಾಣಿಸಿಕೊಳ್ಳುತ್ತದೆ. ಪಂಪನ ಈ ವಿರೋಧಾಭಾಸದ ನಿಲುವುಗಳೇ ಅವನ ಅಧಿಕಾರ ಚಿಂತನೆಯನ್ನು ಅನನ್ಯವಾಗಿಸಿವೆ ಎಂದು ಅವರು ವಿವರಿಸುತ್ತಾರೆ. ಶಂ.ಬಾ. ಜೋಶಿಯವರು ಪಂಪನ ಕಾವ್ಯದ ಮೂಲಕ ಕನ್ನಡಿಗರ ಮೂಲ ಅಸ್ಮಿತೆಯನ್ನು ಮತ್ತು ಅಧಿಕಾರ ಸಂಸ್ಕೃತಿಯನ್ನು ಶೋಧಿಸಿದ್ದಾರೆ. ಅಧಿಕಾರ

ಎನ್ನುವುದು ಕನ್ನಡಿಗರಿಗೆ 'ಛಲ' ಮತ್ತು 'ಮಾನ'ದ ಪ್ರಶ್ನೆಯಾಗಿತ್ತು ಎಂಬುದನ್ನು ಪಂಪನ ಪದ್ಯಗಳ ಮೂಲಕ ಅವರು ನಿರೂಪಿಸಿದ್ದಾರೆ. ಎಲ್. ಬಸವರಾಜು ಅವರು ಸಂಪಾದಿಸಿದ ಪಂಪನ ಕೃತಿಗಳು, ಕವಿಯು ರಾಜಧರ್ಮದ ಸೂಕ್ಷ್ಮಗಳನ್ನು ಹೇಗೆ ನಿರ್ವಹಿಸಿದ್ದಾನೆ ಎಂಬುದನ್ನು ತಿಳಿಸುತ್ತವೆ. ವಿಶೇಷವಾಗಿ 'ಕರ್ಣ'ನ ಪಾತ್ರದ ಮೂಲಕ ಅಧಿಕಾರ ಮತ್ತು ತ್ಯಾಗದ ವಿಶ್ಲೇಷಣೆಯನ್ನು ಇವರ ಅಧ್ಯಯನಗಳಲ್ಲಿ ಕಾಣಬಹುದು. ಪಂಪನ ಅಧಿಕಾರ ಚಿಂತನೆಯನ್ನು ಅರ್ಥಮಾಡಿಕೊಳ್ಳಲು ಮೊದಲು ನಾವು ಅವನು ಬದುಕಿದ್ದ ಕಾಲದ ರಾಜಕೀಯ ಪರಿಸರವನ್ನು ಗಮನಿಸಬೇಕು. ರಾಷ್ಟ್ರಕೂಟರ ಸಾಮಂತನಾಗಿದ್ದ ಅರಿಕೇಸರಿಯ ಆಶ್ರಯದಲ್ಲಿದ್ದ ಪಂಪನಿಗೆ ಅಧಿಕಾರದ ನೇರ ಅನುಭವವಿತ್ತು. ಅವನು ಕೇವಲ ಅರಮನೆಯ ಕವಿಯಾಗಿರಲಿಲ್ಲ, ರಣರಂಗದಲ್ಲಿ ಕತ್ತಿ ಬೀಸಿದ ವೀರನೂ ಆಗಿದ್ದನು. ಈ ಕಾರಣಕ್ಕಾಗಿಯೇ ಅವನ ಕಾವ್ಯದಲ್ಲಿ ಅಧಿಕಾರದ ಮಾತುಗಳು ಕೇವಲ ಕಲ್ಪನೆಯಾಗಿರದೆ, ರಕ್ತ–ಮಾಂಸಗಳ ವಾಸ್ತವತೆಯಿಂದ ಕೂಡಿವೆ. 'ವಿಕ್ರಮಾರ್ಜುನ ವಿಜಯ'ದಲ್ಲಿ ಪಂಪನು ಅರ್ಜುನನನ್ನು ನಾಯಕನನ್ನಾಗಿ ಮಾಡಿ, ಅವನಲ್ಲಿ ತನ್ನ ದೊರೆ ಅರಿಕೇಸರಿಯನ್ನು ಕಂಡಿದ್ದಾನೆ. ಇಲ್ಲಿ ಅಧಿಕಾರವು 'ವಿಜಯ'ದ ಸಂಕೇತ. ಆದರೆ ಪಂಪನು ವಿಜಯವನ್ನು ಕೇವಲ ಶತ್ರುಗಳ ಸಂಹಾರವೆಂದು ಭಾವಿಸುವುದಿಲ್ಲ. ಅವನಿಗೆ ಅಧಿಕಾರವು 'ಧರ್ಮ'ದ ರಕ್ಷಣೆಯ ಹಾದಿ. ಅರ್ಜುನನು ಅಧಿಕಾರವನ್ನು ಪಡೆಯುವುದು ಕೇವಲ ರಾಜ್ಯದ ಆಸೆಗಾಗಿ ಅಲ್ಲ, ಬದಲಾಗಿ ಕಳೆದುಹೋದ ಘನತೆಯನ್ನು ಮರಳಿ ಪಡೆಯಲು. ಪಂಪನ ದೃಷ್ಟಿಯಲ್ಲಿ, ಒಬ್ಬ ರಾಜನಿಗೆ ರಾಜ್ಯಕ್ಕಿಂತಲೂ ಅವನ 'ಮಾನ' ಅಥವಾ 'ಗೌರವ' ಮುಖ್ಯ. ಅಧಿಕಾರವಿದ್ದವನು ತನ್ನ ಗೌರವವನ್ನು ಕಾಪಾಡಿಕೊಳ್ಳಲಾಗದಿದ್ದರೆ ಆ ಅಧಿಕಾರಕ್ಕೆ ಅರ್ಥವಿಲ್ಲ ಎಂಬುದು ಪಂಪನ ಬಲವಾದ ನಂಬಿಕೆಯಾಗಿತ್ತು.

ಅಧಿಕಾರದ ಮತ್ತೊಂದು ಮುಖವನ್ನು ಪಂಪನು ಕರ್ಣನ ಪಾತ್ರದ ಮೂಲಕ ಅತ್ಯಂತ ಭಾವನಾತ್ಮಕವಾಗಿ ಕಟ್ಟಿಕೊಡುತ್ತಾನೆ. ಕರ್ಣನಿಗೆ ರಾಜ್ಯದ ಅಧಿಕಾರವನ್ನು ಕೃಷ್ಣನು ಆಮಿಷವೊಡ್ಡಿದಾಗ, ಕರ್ಣನು ಅದನ್ನು ನಿರಾಕರಿಸುತ್ತಾನೆ. ಇಲ್ಲಿ ಪಂಪನು "ಚಲದೊಳ್ ದುರ್ಯೋಧನಂ, ನನ್ನಿಯೊಳ್ ಇನತನಯಂ" ಎಂದು ಹೇಳುವ ಮೂಲಕ, ಅಧಿಕಾರಕ್ಕಿಂತಲೂ ಹೆಚ್ಚಾಗಿ ಕೊಟ್ಟ ಮಾತಿಗೆ ಮತ್ತು ತೋರಿದ ನಿಷ್ಠೆಗೆ ಬೆಲೆ ಕೊಡುತ್ತಾನೆ. ಇದು ಪಂಪನ ಅಧಿಕಾರ ಚಿಂತನೆಯ ಒಂದು ಪ್ರಮುಖ ಭಾಗ. ಅಂದರೆ, ಅಧಿಕಾರವು ನೈತಿಕ ಮೌಲ್ಯಗಳನ್ನು ಬಲಿಗೊಟ್ಟು ಪಡೆಯುವ ವಸ್ತುವಲ್ಲ. ಒಬ್ಬ ವ್ಯಕ್ತಿಯು ಎಷ್ಟೇ ದೊಡ್ಡ ಅಧಿಕಾರವನ್ನು ಕಳೆದುಕೊಂಡರೂ ಪರವಾಗಿಲ್ಲ,

ಆದರೆ ಅವನು ತನ್ನ ನೈತಿಕತೆಯನ್ನು ಬಿಡಬಾರದು ಎಂಬುದು ಪಂಪನ ನಿಲುವು. ಇಂದಿನ ರಾಜಕಾರಣದಲ್ಲಿ ಅಧಿಕಾರಕ್ಕಾಗಿ ಪಕ್ಷಾಂತರ ಮಾಡುವ ಮತ್ತು ಮೌಲ್ಯಗಳನ್ನು ಗಾಳಿಗೆ ತೂರುವ ವ್ಯವಸ್ಥೆಗೆ ಪಂಪನ ಈ ಕರ್ಣನ ನಿಷ್ಠೆಯ ಚಿಂತನೆ ಒಂದು ದೊಡ್ಡ ಎಚ್ಚರಿಕೆಯಾಗಿದೆ.

ಪಂಪನು ಅಧಿಕಾರವನ್ನು ಕೇವಲ ವ್ಯಕ್ತಿಕೇಂದ್ರಿತವಾಗಿ ನೋಡದೆ, ಅದನ್ನು ಸಮಾಜದ ವ್ಯಾಪಕ ಹಿತದೃಷ್ಟಿಯಿಂದ ನೋಡುತ್ತಾನೆ. 'ಮನುಷ್ಯ ಜಾತಿ ತಾನೊಂದೆ ವಲಂ' ಎಂಬ ಅವನ ಘೋಷಣೆಯು ಅಧಿಕಾರದ ಮೂಲ ಸತ್ವವನ್ನು ಒಳಗೊಂಡಿದೆ. ಅಧಿಕಾರವು ಮನುಷ್ಯರನ್ನು ಜಾತಿ, ಮತ ಅಥವಾ ವರ್ಗಗಳ ಆಧಾರದ ಮೇಲೆ ವಿಭಜಿಸಬಾರದು. ಒಬ್ಬ ಯೋಗ್ಯ ಆಡಳಿತಗಾರನು ತನ್ನ ಅಧಿಕಾರವನ್ನು ಎಲ್ಲರನ್ನೂ ಸಮಾನವಾಗಿ ಕಾಣಲು ಬಳಸಬೇಕು. ಪಂಪನ ಪ್ರಕಾರ, ರಾಜ್ಯದ ಪ್ರತಿಯೊಬ್ಬ ಪ್ರಜೆಯೂ ರಾಜನಿಗೆ ಸಮಾನವಾಗಿ ಕಾಣಬೇಕು. ಅಧಿಕಾರವು ದುರ್ಬಲರನ್ನು ಶೋಷಿಸುವ ಸಾಧನವಾಗದೆ, ಅವರಿಗೆ ರಕ್ಷಣೆ ನೀಡುವ ಕವಚವಾಗಬೇಕು. ಪಂಪನು ತನ್ನ ಕಾವ್ಯದಲ್ಲಿ ಚಿತ್ರಿಸುವ ಯುದ್ಧಗಳು ಕೇವಲ ಭೂಮಿಗಾಗಿ ನಡೆದವುಗಳಲ್ಲ, ಅವು ನೈತಿಕ ಹಕ್ಕುಗಳಿಗಾಗಿ ನಡೆದ ಹೋರಾಟಗಳು. ಅಧಿಕಾರವು ಯಾವಾಗ ಅಧರ್ಮದ ಕೈ ಸೇರುತ್ತದೆಯೋ ಆಗ ವಿನಾಶ ಅನಿವಾರ್ಯ ಎಂಬುದನ್ನು ದುರ್ಯೋಧನನ ಅಂತ್ಯದ ಮೂಲಕ ಪಂಪನು ನಿರೂಪಿಸುತ್ತಾನೆ.

ಪಂಪನ ಅಧಿಕಾರ ಚಿಂತನೆಯು ಕೇವಲ ಲೌಕಿಕ ಜಯಕ್ಕೆ ಸೀಮಿತವಾಗಿಲ್ಲ. ಅವನ 'ಆದಿಪುರಾಣ'ವು ಅಧಿಕಾರದ ವಿಭಿನ್ನ ಮಗ್ಗುಲನ್ನು ಪರಿಚಯಿಸುತ್ತದೆ. ಇಲ್ಲಿ ಭರತನು ಚಕ್ರವರ್ತಿಯಾಗಿ ಆರು ಖಂಡಗಳನ್ನು ಗೆದ್ದು ಬರುತ್ತಾನೆ. ಅವನಿಗೆ ಜಗತ್ತಿನ ಮೇಲೆ ಅಧಿಕಾರ ಸಿಗುತ್ತದೆ, ಆದರೆ ಅವನ ಅಂತರಂಗದಲ್ಲಿ ಶಾಂತಿಯಿರುವುದಿಲ್ಲ. ತನ್ನ ತಮ್ಮನಾದ ಬಾಹುಬಲಿಯು ತನ್ನ ಅಧಿಕಾರವನ್ನು ಒಪ್ಪುತ್ತಿಲ್ಲ ಎಂಬ ಅಹಂಕಾರ ಅವನನ್ನು ಕಾಡುತ್ತದೆ. ಇಲ್ಲಿ ಪಂಪನು ಅಧಿಕಾರ ಮತ್ತು ಅಹಂಕಾರದ ನಡುವಿನ ತೆಳು ಗೆರೆಯನ್ನು ತೋರಿಸುತ್ತಾನೆ. ಅಧಿಕಾರವು ಮನುಷ್ಯನನ್ನು ಎಷ್ಟು ಕುರುಡನನ್ನಾಗಿ ಮಾಡುತ್ತದೆ ಎಂದರೆ, ಅವನು ತನ್ನ ರಕ್ತಸಂಬಂಧವನ್ನೂ ಮರೆತು ಯುದ್ಧಕ್ಕೆ ನಿಲ್ಲುತ್ತಾನೆ. ಆದರೆ ಬಾಹುಬಲಿಯು ಅಧಿಕಾರವನ್ನು ತ್ಯಜಿಸಿ ವೈರಾಗ್ಯದ ಹಾದಿ ಹಿಡಿದಾಗ, ಪಂಪನು ಅಲ್ಲಿ 'ತ್ಯಾಗದ ಅಧಿಕಾರ'ವನ್ನು ಎತ್ತಿ ಹಿಡಿಯುತ್ತಾನೆ. ಅಧಿಕಾರವನ್ನು ಅನುಭವಿಸುವುದಕ್ಕಿಂತ ಅದನ್ನು ಬಿಟ್ಟುಕೊಡುವುದು ದೊಡ್ಡ ಸಾಧನೆ ಎಂಬುದು ಪಂಪನ ಜೈನ ದರ್ಶನದ ಹಿನ್ನೆಲೆಯ ಚಿಂತನೆ.

ಪಂಪನ ಪ್ರಕಾರ ಅಧಿಕಾರ ಎನ್ನುವುದು ಒಂದು ಹೊಣೆಗಾರಿಕೆ. ರಾಜನಾದವನು ಪ್ರಜೆಗಳ ಕಣ್ಣೀರು ಒರೆಸುವವನಾಗಿರಬೇಕು. ಅವನ ಅಧಿಕಾರವು ಪ್ರಜೆಗಳ ಪ್ರೀತಿಯ ಮೇಲೆ ನಿಂತಿರಬೇಕೇ ಹೊರತು ಭಯದ ಮೇಲಲ್ಲ. ಅರಿಕೇಸರಿಯನ್ನು ಬಣ್ಣಿಸುವಾಗ ಪಂಪನು ಅವನನ್ನು 'ದಾನಗುಣ' ಮತ್ತು 'ತ್ಯಾಗ'ದ ರೂಪಕವಾಗಿ ಚಿತ್ರಿಸುತ್ತಾನೆ. ಅಂದರೆ, ಅಧಿಕಾರವಿದ್ದವನು ಎಷ್ಟು ಕೊಡುತ್ತಾನೆ ಎಂಬುದು ಮುಖ್ಯವೇ ಹೊರತು ಎಷ್ಟು ಸಂಗ್ರಹಿಸುತ್ತಾನೆ ಎಂಬುದಲ್ಲ. ಈ ರೀತಿಯ ಅಧಿಕಾರ ಚಿಂತನೆಯು ಪಂಪನನ್ನು ಕೇವಲ ಒಬ್ಬ ಹಳೆಯ ಕವಿಯಾಗಿ ಉಳಿಸದೆ, ಒಬ್ಬ ಸಾರ್ವಕಾಲಿಕ ರಾಜಕೀಯ ದಾರ್ಶನಿಕನನ್ನಾಗಿ ಮಾಡಿದೆ. ಅವನ ಕಾವ್ಯದ ಉದ್ದಕ್ಕೂ ಅಧಿಕಾರವು ಒಂದು ಸವಾಲಾಗಿ, ಒಂದು ಪರೀಕ್ಷೆಯಾಗಿ ಮತ್ತು ಅಂತಿಮವಾಗಿ ಒಂದು ಆತ್ಮಶೋಧನೆಯ ಮಾರ್ಗವಾಗಿ ಕಾಣಿಸಿಕೊಳ್ಳುತ್ತದೆ.

ಪಂಪನ ಭಾರತದಲ್ಲಿ ದ್ರೌಪದಿಯ ವಸ್ತ್ರಾಪಹರಣದ ಪ್ರಸಂಗವು ಅಧಿಕಾರದ ದುರ್ಬಳಕೆಯ ಪರಮಾವಧಿಯನ್ನು ತೋರಿಸುತ್ತದೆ. ಸಭೆಯಲ್ಲಿ ಹಿರಿಯರಿದ್ದರೂ, ಅಧಿಕಾರವು ಅಧರ್ಮದ ಪರವಾಗಿದ್ದಾಗ ಮೌನ ತಾಳುವುದು ಎಂತಹ ಅನಾಹುತಕ್ಕೆ ಕಾರಣವಾಗುತ್ತದೆ ಎಂಬುದನ್ನು ಪಂಪನು ವಿಷಾದದ ಧ್ವನಿಯಲ್ಲಿ ಚಿತ್ರಿಸಿದ್ದಾನೆ. ಅಧಿಕಾರವು ಸ್ತ್ರೀಯರ ಮತ್ತು ದುರ್ಬಲರ ಘನತೆಯನ್ನು ಕಾಪಾಡದಿದ್ದರೆ ಆ ರಾಜ್ಯಕ್ಕೆ ಭವಿಷ್ಯವಿಲ್ಲ ಎಂಬುದು ಕವಿಯ ಸ್ಪಷ್ಟ ಸಂದೇಶ. ಇದೇ ಕಾರಣಕ್ಕೆ ಅರ್ಜುನನ ಅಧಿಕಾರ ಸ್ಥಾಪನೆಯನ್ನು ಪಂಪನು ಒಂದು ಸುಂದರ ಭವಿಷ್ಯದ ಆರಂಭವೆಂದು ಕರೆಯುತ್ತಾನೆ. ಅಧಿಕಾರವು ಯಾವಾಗ ಸತ್ಯದ ಹಾದಿಯಲ್ಲಿ ನಡೆಯುತ್ತದೆಯೋ ಆಗಲೇ ರಾಜ್ಯವು 'ಸುಭಿಕ್ಷ'ವಾಗುತ್ತದೆ.

ಪಂಪನು ಅಧಿಕಾರವನ್ನು ಸಾವಿನ ಅಂಚಿನಲ್ಲಿಟ್ಟು ನೋಡುವ ಪರಿ. ಯುದ್ಧದ ನಂತರ ಪಾಂಡವರು ಹಿಮಾಲಯಕ್ಕೆ ತೆರಳಿ ರಾಜ್ಯವನ್ನು ತ್ಯಜಿಸುವುದು ಪಂಪನಿಗೆ ಬಹಳ ಮುಖ್ಯವಾದ ಘಟ್ಟ. ಎಷ್ಟೇ ದೊಡ್ಡ ಅಧಿಕಾರವಿದ್ದರೂ, ಎಷ್ಟೇ ಸಾಮ್ರಾಜ್ಯಗಳನ್ನು ಗೆದ್ದಿದ್ದರೂ ಮನುಷ್ಯನು ಅಂತಿಮವಾಗಿ ಎಲ್ಲವನ್ನೂ ಬಿಟ್ಟು ಹೋಗಬೇಕು. ಈ 'ಅರಿವು' ಅಧಿಕಾರದಲ್ಲಿರುವವರಿಗೆ ಇರಬೇಕು. ಅಧಿಕಾರದ ನಶ್ವರತೆಯನ್ನು ಅರಿತವನು ಮಾತ್ರ ಅದನ್ನು ಅತ್ಯಂತ ಜಾಗರೂಕತೆಯಿಂದ ಮತ್ತು ನಿಸ್ವಾರ್ಥದಿಂದ ನಿರ್ವಹಿಸಲು ಸಾಧ್ಯ. ಪಂಪನು ತನ್ನ ಕಾವ್ಯದ ಮೂಲಕ ರಾಜರಿಗೆ ಮತ್ತು ಅಧಿಕಾರಸ್ಥರಿಗೆ ನೀಡುವ ದೊಡ್ಡ ಎಚ್ಚರಿಕೆ ಇದೇ ಆಗಿದೆ. ಬದುಕು ಕ್ಷಣಿಕ, ಆದರೆ ಆ ಬದುಕಿನಲ್ಲಿ ಮಾಡುವ ಧರ್ಮ ಮತ್ತು ಗಳಿಸುವ ಕೀರ್ತಿ ಮಾತ್ರ ಶಾಶ್ವತ.

ಪಂಪನ ಸಾಹಿತ್ಯ ಸೃಷ್ಟಿಯ ಮೂಲದ್ರವ್ಯವೇ ಅಧಿಕಾರದ ಸಂಘರ್ಷ ಮತ್ತು ಅದರ ಪರಿಣಾಮಗಳ ಸುತ್ತ ಹೆಣೆಯಲ್ಪಟ್ಟಿದೆ. ಹತ್ತನೇ ಶತಮಾನದ ಕರ್ನಾಟಕದ ರಾಜಕೀಯ ಸ್ಥಿತ್ಯಂತರಗಳನ್ನು ಹತ್ತಿರದಿಂದ ಕಂಡ ಪಂಪನಿಗೆ, ಅಧಿಕಾರ ಎಂಬುದು ಕೇವಲ ಒಂದು ಸಿಂಹಾಸನದ ಮೇಲಿನ ಆಸೀನತೆಯಾಗಿರಲಿಲ್ಲ. ಅದು ಪರಂಪರೆ, ಪ್ರತಿಷ್ಠೆ ಮತ್ತು ನೈತಿಕ ಹೊಣೆಗಾರಿಕೆಗಳ ಒಂದು ಸಂಕೀರ್ಣ ಹೆಣಿಗೆಯಾಗಿತ್ತು. ಪಂಪನು ತನ್ನ 'ವಿಕ್ರಮಾರ್ಜುನ ವಿಜಯ'ದಲ್ಲಿ ಅರ್ಜುನನ ವ್ಯಕ್ತಿತ್ವದ ಮೂಲಕ ಅಧಿಕಾರವನ್ನು ವೈಭವೀಕರಿಸುತ್ತಾನೆ ಎನ್ನುವುದು ಮೇಲ್ನೋಟದ ಸತ್ಯ. ಆದರೆ ಅದರ ಆಳದಲ್ಲಿ, ಅವನು ಅಧಿಕಾರವು ಮನುಷ್ಯನ ಅಸ್ಮಿತೆಯನ್ನು ಹೇಗೆ ರೂಪಿಸುತ್ತದೆ ಅಥವಾ ಕೆಡಿಸುತ್ತದೆ ಎಂಬುದನ್ನು ಚರ್ಚಿಸುತ್ತಾನೆ. ರಾಜಕಾರಣವು ಕೇವಲ ಗೆಲುವಿನ ಹಾದಿಯಲ್ಲ, ಅದು ಸೋಲುಗಳ ನಡುವೆ ಕಂಡುಕೊಳ್ಳುವ ನೈತಿಕತೆಯ ಹಾದಿ ಎಂಬುದು ಪಂಪನ ನಿಲುವು. ಡಿ.ಎಲ್. ನರಸಿಂಹಾಚಾರ್ ಅವರು ತಮ್ಮ 'ಪಂಪ ಭಾರತ ದೀಪಿಕೆ' ಕೃತಿಯಲ್ಲಿ ಉಲ್ಲೇಖಿಸುವಂತೆ, 'ಪಂಪನು ತನ್ನ ಆಶ್ರಯದಾತ ಅರಿಕೇಸರಿಯನ್ನು ಕಾವ್ಯದ ನಾಯಕನನ್ನಾಗಿ ಮಾಡಿಕೊಂಡಾಗ, ಅಲ್ಲಿ ಕೇವಲ ಹೊಗಳಿಕೆಯಿರಲಿಲ್ಲ, ಬದಲಾಗಿ ಒಬ್ಬ ಆದರ್ಶ ರಾಜನಿಗೆ ಇರಬೇಕಾದ ಅಧಿಕಾರ ಪ್ರಜ್ಞೆಯ ಮಾದರಿಯಿತ್ತು.'

ಅಧಿಕಾರ ಚಿಂತನೆಯಲ್ಲಿ ಪಂಪನು ತರುವ 'ಚಲ' ಅಥವಾ 'ಛಲ' ಎಂಬ ಪರಿಕಲ್ಪನೆ ಅತ್ಯಂತ ಮಹತ್ವದ್ದು. ದುರ್ಯೋಧನನ ಪಾತ್ರದ ಮೂಲಕ ಪಂಪನು ಅಧಿಕಾರದ ಅಂಧತೆಯನ್ನು ವಿಶ್ಲೇಷಿಸುತ್ತಾನೆ. ದುರ್ಯೋಧನನಿಗೆ ಅಧಿಕಾರ ಎಂಬುದು ಕೇವಲ 'ಹಕ್ಕು'. ಅವನ ಪಾಲಿಗೆ ಅಧಿಕಾರವು ನ್ಯಾಯಕ್ಕಿಂತ ಹೆಚ್ಚಾಗಿ ಅಹಂಕಾರದ ತೃಪ್ತಿಯ ಸಾಧನವಾಗಿತ್ತು. ಆದರೆ ಅದೇ ಪಂಪ, ದುರ್ಯೋಧನನ ಸಾವಿನ ಸಂದರ್ಭದಲ್ಲಿ ಅವನನ್ನು ಒಬ್ಬ 'ಅಭಿಮಾನಧನ' ಎಂದು ಕರೆಯುವ ಮೂಲಕ, ಅಧಿಕಾರದ ಬೆನ್ನೇರಿದ ವ್ಯಕ್ತಿಯಲ್ಲಿರುವ ಸ್ವಾಭಿಮಾನದ ಉತ್ತುಂಗವನ್ನು ತೋರಿಸುತ್ತಾನೆ. ಅಧಿಕಾರಕ್ಕಾಗಿ ಹಂಬಲಿಸುವ ಮನುಷ್ಯ ತನ್ನ ಸರ್ವಸ್ವವನ್ನೂ ಕಳೆದುಕೊಂಡರೂ ತನ್ನ ಛಲವನ್ನು ಬಿಡುವುದಿಲ್ಲ ಎಂಬುದು ಇಲ್ಲಿನ ವಿರೋಧಾಭಾಸ. ಅಧಿಕಾರವು ಮನುಷ್ಯನನ್ನು ಎಷ್ಟು ಗಟ್ಟಿಗೊಳಿಸುತ್ತದೆ ಎಂದರೆ, ಅವನು ಸಾವಿನ ಮುಂದೆಯೂ ಬಾಗದಂತಹ ಒಂದು ಹುಸಿ ಘನತೆಯನ್ನು ಮೈಗೂಡಿಸಿಕೊಳ್ಳುತ್ತಾನೆ. ಇದನ್ನು ಪಂಪನು ಅತ್ಯಂತ ಭಾವನಾತ್ಮಕವಾಗಿ ಚಿತ್ರಿಸಿದ್ದಾನೆ.

ಮತ್ತೊಂದೆಡೆ, ಕರ್ಣನ ಪಾತ್ರವು ಅಧಿಕಾರದ ಆಮಿಷವನ್ನು ಮೀರಿದ

'ತ್ಯಾಗ'ದ ಅಧಿಕಾರವನ್ನು ಸಂಕೇತಿಸುತ್ತದೆ. ಕೃಷ್ಣನು ಕರ್ಣನಿಗೆ ರಾಜ್ಯದ ಅರ್ಧಭಾಗವನ್ನು ಮತ್ತು ಪಾಂಡವರಲ್ಲಿ ಅಗ್ರಸ್ಥಾನವನ್ನು ನೀಡುವುದಾಗಿ ಹೇಳಿದಾಗ, ಕರ್ಣನು ಅದನ್ನು ತಿರಸ್ಕರಿಸುತ್ತಾನೆ. ಇಲ್ಲಿ ಅಧಿಕಾರವು ಗೆಳೆತನದ ಮುಂದೆ ಸೋಲುತ್ತದೆ. ಪಂಪನು ಕರ್ಣನ ಮೂಲಕ ನೀಡುವ ಸಂದೇಶವೆಂದರೆ, ಒಬ್ಬ ವ್ಯಕ್ತಿಯ ನೈತಿಕತೆ ಮತ್ತು ನಿಷ್ಠೆಯು ಅವನು ಪಡೆಯಬಹುದಾದ ಯಾವುದೇ ದೊಡ್ಡ ಅಧಿಕಾರಕ್ಕಿಂತ ಶ್ರೇಷ್ಠವಾದುದು. ನೆನೆಯದಿರಣ್ಣ ಭಾರತದೊಳಿಂಪೆಱರಾರುಮ ನೊಂದೆಚಿತ್ತದಿಂ। ನೆನೆವೊಡೆ ಕರ್ಣನಂ ನೆನೆಯ"(ಕರ್ಣಾವಸಾನಂ) ಎನ್ನುವ ಪಂಪನ ಮಾತುಗಳು, ಅಧಿಕಾರ ಕೇಂದ್ರಿತ ಜಗತ್ತಿನಲ್ಲಿ ಮನುಷ್ಯತ್ವದ ಉನ್ನತಿಯನ್ನು ಸಾರುತ್ತವೆ. ತೀ.ನಂ. ಶ್ರೀಕಂಠಯ್ಯನವರು 'ಪಂಪ' ಕೃತಿಯಲ್ಲಿ ವಿಶ್ಲೇಷಿಸಿದಂತೆ, ಪಂಪನಿಗೆ ಅಧಿಕಾರಕ್ಕಿಂತಲೂ ಮನುಷ್ಯನ ಒಳಗಿನ 'ಧರ್ಮ' ಮತ್ತು 'ಋಣ'ದ ಪ್ರಜ್ಞೆ ದೊಡ್ಡದಾಗಿತ್ತು.

ಪಂಪನ ಅಧಿಕಾರ ಚಿಂತನೆಯು ಸ್ತ್ರೀ ಸಂವೇದನೆಯನ್ನೂ ಒಳಗೊಂಡಿದೆ ಎಂಬುದು ಗಮನಾರ್ಹ. ದ್ರೌಪದಿಯ ಅವಮಾನದ ಪ್ರಸಂಗದಲ್ಲಿ, ಅಧಿಕಾರವು ಸಭ್ಯತೆಯನ್ನು ಮರೆತಾಗ ಅದು ಹೇಗೆ ಸ್ತ್ರೀ ಕುಲದ ಘನತೆಗೆ ಧಕ್ಕೆ ತರುತ್ತದೆ ಎಂಬುದನ್ನು ಪಂಪನು ಕಟುವಾಗಿ ಚಿತ್ರಿಸುತ್ತಾನೆ. ಹಿರಿಯರಾದ ಭೀಷ್ಮ ಮತ್ತು ದ್ರೋಣರು ಅಧಿಕಾರದ ಹಂಗಿನಲ್ಲಿ ಮೌನ ತಾಳುವುದನ್ನು ಪಂಪನು ನೈತಿಕ ಪತನವೆಂದು ಪರಿಗಣಿಸುತ್ತಾನೆ. ಅಧಿಕಾರವಿದ್ದಾಗ ಸತ್ಯವನ್ನು ನುಡಿಯದಿದ್ದರೆ ಆ ಅಧಿಕಾರವು ಅಧರ್ಮದ ಭಾಗವಾಗುತ್ತದೆ. ಇಲ್ಲಿ ಅಧಿಕಾರವು ಕೇವಲ ಆಡಳಿತಾತ್ಮಕವಲ್ಲ, ಅದು ನೈತಿಕ ಶಕ್ತಿಯೂ ಹೌದು. ಯಾರು ಅಧಿಕಾರದಲ್ಲಿದ್ದೂ ಅನ್ಯಾಯವನ್ನು ಪ್ರಶ್ನಿಸುವುದಿಲ್ಲವೋ ಅವರು ಇತಿಹಾಸದ ಕಣ್ಣಿನಲ್ಲಿ ಅಪರಾಧಿಗಳಾಗುತ್ತಾರೆ ಎಂಬ ಎಚ್ಚರಿಕೆ ಪಂಪನ ಕಾವ್ಯದಲ್ಲಿದೆ. ಎಂ. ಚಿದಾನಂದಮೂರ್ತಿಯವರ 'ಸಂಶೋಧನಾ ತರಂಗ' ಲೇಖನಗಳು ಈ ಸಾಮಾಜಿಕ ನ್ಯಾಯದ ಹಸಿವನ್ನು ಪಂಪನ ಕಾಲದ ಹಿನ್ನೆಲೆಯಲ್ಲಿ ವಿವರಿಸುತ್ತವೆ. 'ಆದಿಪುರಾಣ'ಕ್ಕೆ ಬಂದಾಗ ಪಂಪನ ಅಧಿಕಾರ ಚಿಂತನೆಯು ಆಧ್ಯಾತ್ಮಿಕ ಆಯಾಮವನ್ನು ಪಡೆಯುತ್ತದೆ. ಭರತ ಚಕ್ರವರ್ತಿಯು ದಿಗ್ವಿಜಯ ಮುಗಿಸಿ ಬಂದಾಗ ಅವನ ಚಕ್ರವು ಅರಮನೆಯ ಒಳಗೆ ಪ್ರವೇಶಿಸುವುದಿಲ್ಲ. ಇದಕ್ಕೆ ಕಾರಣ ಅವನ ಸ್ವಂತ ಸೋದರರಾದ ಬಾಹುಬಲಿ ಮುಂತಾದವರು ಅವನ ಸಾರ್ವಭೌಮತ್ವವನ್ನು ಒಪ್ಪದಿರುವುದು. ಇಲ್ಲಿ ಪಂಪನು ಅಧಿಕಾರ ಮತ್ತು ಅಕ್ಕರೆಯ ನಡುವಿನ ಸಂಘರ್ಷವನ್ನು ತರುತ್ತಾನೆ. ಭೂಮಿಯ ಮೇಲಿನ ಅಧಿಕಾರವು ರಕ್ತಸಂಬಂಧಗಳ ಮೇಲೆ ಪ್ರಹಾರ ಮಾಡುತ್ತದೆ ಎಂಬುದಕ್ಕೆ ಭರತ–ಬಾಹುಬಲಿಯರ ಯುದ್ಧವೇ ಸಾಕ್ಷಿ. ಬಾಹುಬಲಿಯು ಯುದ್ಧದಲ್ಲಿ ಗೆದ್ದರೂ

ಅಧಿಕಾರವನ್ನು ತ್ಯಜಿಸಿ ವೈರಾಗ್ಯ ತಾಳುವುದು ಪಂಪನ ದೃಷ್ಟಿಯಲ್ಲಿ 'ಅಧಿಕಾರದ ಪರಮಾವಧಿ ಜಯ'. ಅಂದರೆ, ಅಧಿಕಾರವನ್ನು ಬಿಟ್ಟುಕೊಡುವವನೇ ನಿಜವಾದ ವಿಜಯಿ. ಅಧಿಕಾರವು ಮನುಷ್ಯನನ್ನು ಬಂಧಿಸುತ್ತದೆ, ಆದರೆ ವೈರಾಗ್ಯವು ಅವನನ್ನು ಮುಕ್ತಗೊಳಿಸುತ್ತದೆ. ಅಧಿಕಾರ ಎನ್ನುವುದು ಒಂದು ಹೊರೆ ಎಂಬ ಸತ್ಯವನ್ನು ಪಂಪನು ಬಾಹುಬಲಿಯ ಪಾತ್ರದ ಮೂಲಕ ಜಗತ್ತಿಗೆ ಸಾರಿದ್ದಾನೆ.

ಪಂಪನ ಪ್ರಕಾರ, ರಾಜ್ಯದ ಅಧಿಕಾರವು ಪ್ರಜಾಹಿತಕ್ಕಾಗಿ ಇರಬೇಕು. 'ಮನುಷ್ಯ ಜಾತಿ ತಾನೊಂದೆ ವಲಂ' ಎಂಬ ಘೋಷಣೆಯು ಅಧಿಕಾರದ ಮೂಲ ತಳಹದಿಯಾಗಬೇಕು. ಯಾವುದೇ ರಾಜ ಅಥವಾ ಆಡಳಿತಗಾರನು ತನ್ನ ಅಧಿಕಾರವನ್ನು ಜಾತಿ ಅಥವಾ ವರ್ಗಗಳ ಹಿತಾಸಕ್ತಿಗಾಗಿ ಬಳಸಬಾರದು. ಸಮಕಾಲೀನ ರಾಜಕಾರಣಕ್ಕೆ ಪಂಪನ ಈ ಚಿಂತನೆ ಬಹಳ ದೊಡ್ಡ ಪಾಠ. ರಾಷ್ಟ್ರಕೂಟರ ವೈಭವೋಪೇತ ಆಳ್ವಿಕೆಯ ನಡುವೆಯೂ ಪಂಪನು ಇಂತಹ ಕ್ರಾಂತಿಕಾರಿ ವಿಚಾರಗಳನ್ನು ಮಂಡಿಸಿದ ಎನ್ನುವುದೇ ಅವನ ವೈಚಾರಿಕ ಪ್ರಬುದ್ಧತೆಗೆ ಸಾಕ್ಷಿ. ಅಧಿಕಾರವು ಕೆಳಮಟ್ಟದ ಪ್ರಜೆಗೂ ನ್ಯಾಯ ಒದಗಿಸಿದಾಗ ಮಾತ್ರ ಅದು ಸಾರ್ಥಕವಾಗುತ್ತದೆ. ಪಂಪನು ಅರಿಕೇಸರಿಯನ್ನು ಹೊಗಳುವಾಗಲೂ ಅವನನ್ನು 'ತ್ಯಾಗದ ರೂವಾರಿ' ಎಂದು ಕರೆಯುತ್ತಾನೆ. ಅಧಿಕಾರವಿದ್ದವನು ಎಷ್ಟು ದಾನ ಮಾಡುತ್ತಾನೆ ಮತ್ತು ಎಷ್ಟು ಜನರಿಗೆ ಆಸರೆಯಾಗುತ್ತಾನೆ ಎಂಬುದೇ ಅವನ ಯೋಗ್ಯತೆಯ ಅಳತೆಗೋಲು.

ಯುದ್ಧದ ನಂತರದ ಪರಿಸ್ಥಿತಿಯನ್ನು ವಿಶ್ಲೇಷಿಸುವಾಗ ಪಂಪನ ಅಧಿಕಾರ ಚಿಂತನೆಯು ವಿಷಾದದ ಛಾಯೆಯನ್ನು ಪಡೆಯುತ್ತದೆ. ಲಕ್ಷಾಂತರ ಜನರ ಸಾವಿನ ಮೇಲೆ ಕಟ್ಟಿದ ಸಾಮ್ರಾಜ್ಯವು ಅರ್ಜುನನಿಗೆ ಸಂತೋಷವನ್ನು ನೀಡಲು ಸಾಧ್ಯವೇ? ಈ ಪ್ರಶ್ನೆಯನ್ನು ಪಂಪನು ತನ್ನ ಕಾವ್ಯದ ಒಳದನಿಯಲ್ಲಿ ಕೇಳುತ್ತಲೇ ಇರುತ್ತಾನೆ. ಅಧಿಕಾರವು ಅಂತಿಮವಾಗಿ ಸ್ಮಶಾನದ ಮೇಲೆ ನಿಂತ ಕಿರೀಟವಾಗಬಾರದು. ಅದಕ್ಕಾಗಿಯೇ ಪಂಪನು ಮಹಾಭಾರತದ ಕಥೆಯನ್ನು ಅರ್ಜುನನ ಪಟ್ಟಾಭಿಷೇಕದೊಂದಿಗೆ ಮುಗಿಸಿದರೂ, ಅದರ ಬೆನ್ನಲ್ಲೇ 'ಆದಿಪುರಾಣ'ದ ವೈರಾಗ್ಯವನ್ನು ತರುತ್ತಾನೆ. ಇದು ಪಂಪನ ಸಮತೋಲಿತ ದೃಷ್ಟಿಕೋನ. ಬದುಕಲು ಅಧಿಕಾರ ಬೇಕು, ಆದರೆ ಆ ಅಧಿಕಾರವು ಅಂತಿಮವಲ್ಲ ಎಂಬ ಅರಿವು ಮನುಷ್ಯನಿಗೆ ಇರಬೇಕು. ಈ ಅರಿವೇ ಪಂಪನ ಅಧಿಕಾರ ಚಿಂತನೆಯ ಹತ್ತನೇ ಪುಟದ ಸಾರಾಂಶವಾಗಿದೆ. ರಂ.ಶ್ರೀ. ಮುಗಳಿಯವರ 'ಕನ್ನಡ ಸಾಹಿತ್ಯ ಚರಿತ್ರೆ' ಕೃತಿಯಲ್ಲಿ ತಿಳಿಸಿರುವಂತೆ, ಪಂಪನು ಲೌಕಿಕ ಮತ್ತು ಅಲೌಕಿಕಗಳ ನಡುವೆ ಸಮತೋಲನ ಸಾಧಿಸಿದ ಅದ್ವಿತೀಯ ಕವಿ.

ಅಧಿಕಾರವು ಒಬ್ಬ ವ್ಯಕ್ತಿಯನ್ನು ಹೇಗೆ ಏಕಾಂಗಿಯನ್ನಾಗಿ ಮಾಡುತ್ತದೆ ಎಂಬುದನ್ನು ಧೃತರಾಷ್ಟ್ರ ಮತ್ತು ಗಾಂಧಾರಿಯರ ಪಾತ್ರಗಳ ಮೂಲಕವೂ ಪಂಪನು ಸೂಚ್ಯವಾಗಿ ತಿಳಿಸುತ್ತಾನೆ. ಅಧಿಕಾರದ ಆಸೆಯು ಮಕ್ಕಳನ್ನು ಕಳೆದುಕೊಳ್ಳುವಂತೆ ಮಾಡುತ್ತದೆ ಮತ್ತು ಅಂತಿಮವಾಗಿ ಮನುಷ್ಯನನ್ನು ಕತ್ತಲೆಯಲ್ಲಿ ನಿಲ್ಲಿಸುತ್ತದೆ. ಅಧಿಕಾರ ಎಂಬುದು ಪ್ರಜ್ವಲಿಸುವ ದೀಪವೂ ಹೌದು, ಸುಡುವ ಬೆಂಕಿಯೂ ಹೌದು. ಅದನ್ನು ಸರಿಯಾಗಿ ನಿರ್ವಹಿಸದಿದ್ದರೆ ಅದು ಆಳುವವನನ್ನೇ ದಹಿಸುತ್ತದೆ. ಪಂಪನು ತನ್ನ ಕಾವ್ಯದ ಮೂಲಕ ಇಂದಿನ ಮತ್ತು ಮುಂದಿನ ಪೀಳಿಗೆಯ ಅಧಿಕಾರಸ್ಥರಿಗೆ ನೀಡುವ ಸಂದೇಶವೆಂದರೆ ಅಧಿಕಾರವನ್ನು ಧರ್ಮದ ಹಾದಿಯಲ್ಲಿ ನಡೆಸಿ, ಘನತೆಯನ್ನು ಉಳಿಸಿಕೊಳ್ಳಿ ಮತ್ತು ಅದು ನಶ್ವರವೆಂಬುದನ್ನು ಮರೆಯಬಾರದು.

ಪಂಪನ ಅಧಿಕಾರ ಚಿಂತನೆಯ ಮಗ್ಗಲಿನಲ್ಲಿ ಭೀಷ್ಮನ ಪಾತ್ರವು 'ಅಧಿಕಾರ' ಮತ್ತು 'ನೈತಿಕತೆ'ಯ ನಡುವಿನ ಧರ್ಮಸಂಕಟಕ್ಕೆ ಹಿಡಿದ ಕನ್ನಡಿಯಾಗಿದೆ. ಭೀಷ್ಮನು ಕೇವಲ ಒಬ್ಬ ಸೇನಾಪತಿಯಲ್ಲ; ಅವನು ಹಸ್ತಿನಾವತಿಯ ಸಿಂಹಾಸನದ ರಕ್ಷಕ. ಪಂಪನು ಭೀಷ್ಮನನ್ನು ಚಿತ್ರಿಸುವಾಗ ಅವನ 'ಅಧಿಕಾರ ನಿಷ್ಠೆ'ಯನ್ನು ಕೇವಲ ಒಬ್ಬ ರಾಜನಿಗೆ ತೋರುವ ನಿಷ್ಠೆಯನ್ನಾಗಿ ನೋಡದೆ, ಅದು ಆತ ತಾನೇ ಹಾಕಿಕೊಂಡ 'ಸಂಕಲ್ಪ'ದ ನಿಷ್ಠೆಯನ್ನಾಗಿ ವಿವರಿಸುತ್ತಾನೆ. ಭೀಷ್ಮನು ಅಧಿಕಾರದ ಕೇಂದ್ರಬಿಂದುವಾಗಿದ್ದರೂ, ಸ್ವತಃ ಅಧಿಕಾರವನ್ನು ಅನುಭವಿಸದವನು. ಆದರೂ, ಅಧಿಕಾರವು ಅಧರ್ಮದ ಹಾದಿ ಹಿಡಿದಾಗಲೂ ಅವನು ಅದರ ಪರವಾಗಿ ನಿಲ್ಲಬೇಕಾದ ಅನಿವಾರ್ಯತೆಯನ್ನು ಪಂಪನು ಅತ್ಯಂತ ವಿಷಾದದ ಧ್ವನಿಯಲ್ಲಿ ಚಿತ್ರಿಸಿದ್ದಾನೆ. ಭೀಷ್ಮನ ಈ ಪರಿಸ್ಥಿತಿಯು "ಅಧಿಕಾರವು ಹೇಗೆ ಸಜ್ಜನರನ್ನು ಕೂಡ ಅಸಹಾಯಕರನ್ನಾಗಿ ಮಾಡಬಲ್ಲದು" ಎಂಬುದಕ್ಕೆ ಸಾಕ್ಷಿಯಾಗಿದೆ.

ಪಂಪನ ಭಾರತದಲ್ಲಿ ಭೀಷ್ಮನು ತಾನು ಉಂಡ ರಾಜನು ನೀಡಿದ ಅನ್ನಕ್ಕೆ ದ್ರೋಹ ಬಗೆಯಲಾರ ಎಂಬ ಸತ್ಯವನ್ನು ಪಂಪನು ಎತ್ತಿ ಹಿಡಿಯುತ್ತಾನೆ. ಅಧಿಕಾರ ಎನ್ನುವುದು ಕೇವಲ ರಾಜನ ಆಜ್ಞೆಯಲ್ಲ, ಅದು ತಾನು ಪಡೆದ ಆಶ್ರಯದ ಋಣ. ಭೀಷ್ಮನಿಗೆ ಗೊತ್ತು ದುರ್ಯೋಧನನ ಹಾದಿ ಸರಿಯಿಲ್ಲವೆಂದು, ಆದರೂ ಅವನು ಅಧಿಕಾರ ನಿಷ್ಠೆಗೆ ಬದ್ಧನಾಗಿ ಯುದ್ಧರಂಗದಲ್ಲಿ ನಿಲ್ಲುತ್ತಾನೆ. ಪಂಪನು ಇದನ್ನು ವಿಶ್ಲೇಷಿಸುವಾಗ, ಅಧಿಕಾರ ನಿಷ್ಠೆಯು ಕೆಲವೊಮ್ಮೆ ವೈಯಕ್ತಿಕ ವಿವೇಕವನ್ನೂ ಮೀರಿ ನಿಲ್ಲುವ ಅನಿವಾರ್ಯತೆಯನ್ನು ತೋರಿಸುತ್ತಾನೆ. 'ತನ್ನೊಳ್ ಈಶ್ವರನಂ ಪೆರತೊಂದೆಡೆಯೊಳ್ ಇರಿಸಿ' ಭೀಷ್ಮನು ಅಧಿಕಾರದ ಪರವಾಗಿ ನಿಲ್ಲುತ್ತಾನೆ. ಇದು

ಪಂಪನ ದೃಷ್ಟಿಯಲ್ಲಿ ಒಬ್ಬ ಮಹಾಪುರುಷನ ಅತಿದೊಡ್ಡ ದುರಂತ.

ಭೀಷ್ಮನ ಶರಶಯ್ಯೆಯ ಪ್ರಸಂಗವು ಪಂಪನ ಅಧಿಕಾರ ಚಿಂತನೆಯ ಉತ್ತುಂಗದ ಕ್ಷಣ. ಅಲ್ಲಿ ಭೀಷ್ಮನು ಅರ್ಜುನನಿಗೆ ಮತ್ತು ಪಾಂಡವರಿಗೆ ರಾಜಧರ್ಮವನ್ನು ಬೋಧಿಸುತ್ತಾನೆ. ಅಧಿಕಾರವು ಎಂದಿಗೂ ವ್ಯಕ್ತಿಯ ಅಹಂಕಾರದ ಸೊತ್ತಾಗಬಾರದು, ಅದು ಕುಲದ ಮತ್ತು ಧರ್ಮದ ರಕ್ಷಣೆಯ ಕವಚವಾಗಬೇಕು ಎಂಬ ಭೀಷ್ಮನ ಮಾತುಗಳು ಪಂಪನ ಸ್ವಂತ ದರ್ಶನವೇ ಆಗಿವೆ. ಪಂಪನು ಭೀಷ್ಮನ ಮೂಲಕ ಹೇಳಿಸುವುದು ಏನೆಂದರೆ, ಅಧಿಕಾರದಲ್ಲಿರುವವರು ಸದಾ ಕಾಲ ಇತಿಹಾಸಕ್ಕೆ ಉತ್ತರದಾಯಿಯಾಗಿರುತ್ತಾರೆ. ಭೀಷ್ಮನು ಅಧರ್ಮದ ಪಕ್ಷದಲ್ಲಿದ್ದರೂ ಅವನ ವ್ಯಕ್ತಿತ್ವದ ಘನತೆ ಕಡಿಮೆಯಾಗದಂತೆ ಪಂಪನು ಎಚ್ಚರ ವಹಿಸಿದ್ದಾನೆ. ಇದಕ್ಕೆ ಕಾರಣ ಭೀಷ್ಮನು ತೋರಿದ 'ನಿಸ್ವಾರ್ಥ ಅಧಿಕಾರ ನಿಷ್ಠೆ'. ಅವನು ಅಧಿಕಾರಕ್ಕಾಗಿ ಏನನ್ನೂ ಬಯಸಲಿಲ್ಲ, ಬದಲಾಗಿ ಅಧಿಕಾರದ ಗೌರವಕ್ಕಾಗಿ ತನ್ನನ್ನೇ ಬಲಿಗೊಟ್ಟುಕೊಂಡನು.

ಎಲ್. ಬಸವರಾಜು ಅವರು 'ವಿಕ್ರಮಾರ್ಜುನ ವಿಜಯ' ಕೃತಿಯ ಸಂಪಾದನೆಯಲ್ಲಿ ವಿವರಿಸುವಂತೆ, ಭೀಷ್ಮನ ಪಾತ್ರವು ಪಂಪನಿಗೆ 'ಅಧಿಕಾರದ ಮಿತಿ'ಯನ್ನು ತೋರಿಸಲು ಇರುವ ಒಂದು ರೂಪಕ. ಎಷ್ಟೇ ಜ್ಞಾನವಿದ್ದರೂ, ಎಷ್ಟೇ ಶಕ್ತಿಯಿದ್ದರೂ ಅಧಿಕಾರದ ಹಂಗಿನಲ್ಲಿರುವ ವ್ಯಕ್ತಿಯು ಹೇಗೆ ಕಟ್ಟುಬೀಳುತ್ತಾನೆ ಎಂಬುದನ್ನು ಭೀಷ್ಮನು ತೋರಿಸುತ್ತಾನೆ. ಪಂಪನು ಅಧಿಕಾರವನ್ನು ಒಂದು 'ಬಂಧನ' ಎಂದು ಕರೆಯುವುದು ಇಂತಹ ಸಂದರ್ಭಗಳಲ್ಲೇ. ಭೀಷ್ಮನು ಯುದ್ಧ ಭೂಮಿಯಲ್ಲಿ ಧರೆಗುರುಳಿದಾಗ, ಅಧಿಕಾರದ ಒಂದು ಮಹಾನ್ ಕಂಬವೇ ಕುಸಿದುಬಿದ್ದಂತೆ ಪಂಪನು ಬಣ್ಣಿಸುತ್ತಾನೆ. ಇದು ಕೇವಲ ಒಬ್ಬ ವ್ಯಕ್ತಿಯ ಸಾವು ಮಾತ್ರವಲ್ಲ, ಒಂದು ಕಾಲದ ನೈತಿಕ ಅಧಿಕಾರ ಪ್ರಜ್ಞೆಯ ಅಂತ್ಯವೂ ಹೌದು.

ಭೀಷ್ಮನ ಅಧಿಕಾರ ನಿಷ್ಠೆಯು ಪಂಪನಿಗೆ ಒಂದು ಪಾಠವಿದ್ದಂತೆ. ಅಧಿಕಾರವಿದ್ದಾಗ ಸತ್ಯದ ಪರವಾಗಿ ನಿಲ್ಲದಿದ್ದರೆ, ಕೊನೆಯಲ್ಲಿ ಆ ಅಧಿಕಾರವೇ ನಮಗೆ ಮುಳ್ಳಾಗಿ ಪರಿಣಮಿಸುತ್ತದೆ ಎಂಬ ಸತ್ಯವನ್ನು ಭೀಷ್ಮನ ಮೌನದ ಮೂಲಕ ಪಂಪನು ಸಾರುತ್ತಾನೆ. ದ್ರೌಪದಿಯ ವಸ್ತ್ರಾಪಹರಣದ ಸಂದರ್ಭದಲ್ಲಿ ಭೀಷ್ಮನು ತೋರಿದ ಅಸಹಾಯಕ ಮೌನವು, ಅಧಿಕಾರ ನಿಷ್ಠೆಯು ಧರ್ಮನಿಷ್ಠೆಗಿಂತ ದೊಡ್ಡದಾದಾಗ ಎಂತಹ ಅನಾಹುತವಾಗುತ್ತದೆ ಎಂಬುದಕ್ಕೆ ನಿದರ್ಶನ.

ಫಲಿತಗಳು :

1. ಪಂಪನ ಅಧಿಕಾರ ಚಿಂತನೆಯು 'ಧರ್ಮ' ಮತ್ತು 'ನೈತಿಕತೆ'ಯನ್ನು ಆಧಾರವಾಗಿಟ್ಟುಕೊಂಡಿದೆ.
2. ಅಧಿಕಾರವು ಅಹಂಕಾರದ ಸಾಧನವಾದರೆ ವಿನಾಶ ನಿಶ್ಚಿತ (ದುರ್ಯೋಧನ).
3. ಗೆಳೆತನ ಮತ್ತು ನೈತಿಕ ನಿಷ್ಠೆಯು ರಾಜ್ಯದ ಅಧಿಕಾರಕ್ಕಿಂತ ದೊಡ್ಡದು (ಕರ್ಣ).
4. ಅಧಿಕಾರವು ಸ್ತ್ರೀಯರ ಮತ್ತು ದುರ್ಬಲರ ರಕ್ಷಣೆಗೆ ಬದ್ಧವಾಗಿರಬೇಕು, ಇಲ್ಲದಿದ್ದರೆ ಅದು ಅಧರ್ಮವೆನಿಸಿಕೊಳ್ಳುತ್ತದೆ.
5. ಮನುಕುಲದ ಸಮಾನತೆ ಅಧಿಕಾರ ನಿರ್ವಹಣೆಯ ಮೂಲ ಮಂತ್ರವಾಗಬೇಕು.
6. ಅಧಿಕಾರವನ್ನು ಅನುಭವಿಸುವುದಕ್ಕಿಂತ, ಅನಿವಾರ್ಯ ಸಮಯದಲ್ಲಿ ಅದನ್ನು ತ್ಯಜಿಸುವುದು ಮಹೋನ್ನತ ಸಾಧನೆ (ಬಾಹುಬಲಿ).
7. ಲೌಕಿಕ ಅಧಿಕಾರವು ಅಂತಿಮವಲ್ಲ; ಸಾವಿನ ಅರಿವು ಮತ್ತು ವೈರಾಗ್ಯದ ಪ್ರಜ್ಞೆ ಅಧಿಕಾರಸ್ಥರಲ್ಲಿ ವಿನಯವನ್ನು ತರುತ್ತದೆ.
8. ಅಧಿಕಾರದ ಹಂಬಲ ಮತ್ತು ವೈರಾಗ್ಯದ ಹಂಬಲ ಈ ಎರಡೂ ಕೂಡ ಮನುಷ್ಯನೊಳಗಿನ ಬೇಡಿಕೆಗಳೇ ಆದರೂ, ವೈರಾಗ್ಯದ ತಳಹದಿಯಲ್ಲಿ ಎಲ್ಲರೂ ಶೂನ್ಯವೆಂಬುದನ್ನು ಪಂಪ ದಾಖಲಿಸಿದ್ದಾನೆ.
9. ಅಂದಿನ ರಾಜಕೀಯ ನೀತಿಯನ್ನು ಅನಂತಗೊಳಿಸುವ ಪಥ್ಯವಾಗಿ ಮಹಾಭಾರತವು ಕಂಡುಬಂದಿದೆ. ಅರ್ಜುನ ಮತ್ತು ದುರ್ಯೋಧನ ಇಲ್ಲಿ ಕಥನ ಪಾತ್ರಗಳಾದರೂ, ಅಧಿಕಾರ ಶೂನ್ಯತೆಯ ಕೇಂದ್ರಬಿಂದುಗಳು.
10. ಶ್ರೀಸಾಮಾನ್ಯ, ರಾಜಮಾನ್ಯತೆ, ದೈವಪ್ರೇರಣೆ ಇವೆಲ್ಲವೂ ಲೌಕಿಕದ ಮುಖಗಳಾಗಿ ದಾಖಲಾಗುತ್ತಲೇ ಅಲೌಕಿಕದ ನೆಲೆಗಳಿಗಾಗಿ ಹಂಬಲಿಸುತ್ತವೆ.

ಉಪಸಂಹಾರ

ಪಂಪನ ಅಧಿಕಾರ ಚಿಂತನೆಯು ಒಂದು ಸಾರ್ವಕಾಲಿಕ ದರ್ಶನ. ಸಾವಿರ ವರ್ಷಗಳ ಹಿಂದೆ ಒಬ್ಬ ಕವಿ ಕಂಡುಕೊಂಡ ಸತ್ಯಗಳು ಇಂದಿಗೂ ಸಮಾಜಕ್ಕೆ ಪ್ರಸ್ತುತವಾಗಿವೆ. ಅಧಿಕಾರವು ಮನುಷ್ಯನನ್ನು ಸಬಲನನ್ನಾಗಿ ಮಾಡುವುದರ ಜೊತೆಗೆ ಅವನನ್ನು ಪರೀಕ್ಷೆಗೂ ಒಡ್ಡುತ್ತದೆ. ಪಂಪನು ತನ್ನ ಕೃತಿಗಳ ಮೂಲಕ ಈ ಪರೀಕ್ಷೆಯಲ್ಲಿ ಗೆಲ್ಲುವ ಮಾರ್ಗೋಪಾಯಗಳನ್ನು ಹೇಳಿಕೊಟ್ಟಿದ್ದಾನೆ. ತ್ಯಾಗ, ನಿಷ್ಠೆ, ಸಮಾನತೆ ಮತ್ತು ಧರ್ಮದ ತಳಹದಿಯ ಮೇಲೆ ನಿಂತ ಅಧಿಕಾರ ಮಾತ್ರ ಇತಿಹಾಸದಲ್ಲಿ ಉಳಿಯುತ್ತದೆ. ಪಂಪನು ಚಿತ್ರಿಸಿದ ಅಧಿಕಾರ ಚಿಂತನೆಯು ಕೇವಲ ರಾಜಕೀಯವಲ್ಲ,

ಅದು ಮಾನವೀಯತೆಯ ಮಹಾಪ್ರಬಂಧ. ಅಧಿಕಾರವಿದ್ದಾಗ ಅತಿಯಾಗಿ ಮೆರೆಯದೆ, ಅದು ಹೋದಾಗ ಕುಗ್ಗದೆ ಬದುಕುವ ಸ್ಥಿತಪ್ರಜ್ಞತೆಯನ್ನು ಪಂಪನ ಕಾವ್ಯ ನಮಗೆ ಕಲಿಸುತ್ತದೆ.

ಪರಾಮರ್ಶನ ಗ್ರಂಥಗಳು :

1. ಪಂಪ ಭಾರತ ದೀಪಿಕೆ., ಡಿ.ಎಲ್. ನರಸಿಂಹಾಚಾರ್., 1971, ಶಾರದಾ ಮಂದಿರ, ಮೈಸೂರು.
2. ಪಂಪ., ತೀ.ನಂ. ಶ್ರೀಕಂಠಯ್ಯ., 1970, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ಸಂಶೋಧನಾ ತರಂಗ., ಎಂ. ಚಿದಾನಂದಮೂರ್ತಿ., 1966, ಸಂಯುಕ್ತ ಕರ್ನಾಟಕ ಪ್ರಕಾಶನ, ಬೆಂಗಳೂರು.
4. ಕನ್ನಡ ಸಾಹಿತ್ಯ ಚರಿತ್ರೆ., ರಂ.ಶ್ರೀ. ಮುಗಳಿ., 1953, ಉಷಾ ಸಾಹಿತ್ಯ ಮಾಲೆ, ಮೈಸೂರು.

***

ಆಧುನಿಕ ವಚನಗಳ ಸಾಂಸ್ಕೃತಿಕ ಅಧ್ಯಯನ

ಡಾ. ಜಿ. ಬಿ. ಮಹೇಶ್ವರಿ
ಕನ್ನಡ ಸಹಾಯಕ ಪ್ರಾಧ್ಯಾಪಕರು
ಶೇಷಾದ್ರಿಪುರಂ ಕಾಲೇಜು,
ಶೇಷಾದ್ರಿಪುರಂ, ಬೆಂಗಳೂರು
maheshwarigb1990@gmail.com

ಪ್ರಮುಖ ಪದಗಳು
ಸಾರ್ಥಕತೆ, ಆಧ್ಯಾತ್ಮಿಕ ಶಕ್ತಿ, ಆತ್ಮಸ್ಥೈರ್ಯ

ಆಧುನಿಕ ವಚನ ಸಾಹಿತ್ಯದ ಮೇಲೆ ಹನ್ನೆರಡನೇಯ ಶತಮಾನದ ವಚನಕಾರರು ಉಂಟುಮಾಡಿರುವ ಪ್ರೇರಣೆ ಮತ್ತು ಪ್ರಭಾವವನ್ನು ಗುರುತಿಸಲಾಗಿದೆ. 12ನೇ ಶತಮಾನದ ವಚನ ಪ್ರಕಾರವು 800 ವರ್ಷಗಳ ನಂತರದಲ್ಲಿಯೂ, ಆಧುನಿಕ ವಚನಗಳು ಎನ್ನುವ ಹೆಸರಿನಲ್ಲಿ ಹೇಗೆ ಕನ್ನಡ ಸಾಹಿತ್ಯ ಲೋಕದಲ್ಲಿ ಪರಿಣಾಮಕಾರಿಯಾಗಿ ಬಳಕೆಯಾಗುತ್ತಿವೆ ಎನ್ನುವುದನ್ನು ಕೃತಿಕಾರರ ಆಧುನಿಕ ವಚನಗಳ ಹಿನ್ನೆಲೆಯಲ್ಲಿ ಗುರುತಿಸಲಾಗಿದೆ.

ಒಬ್ಬ ಮಹಿಳೆ ಕುಟುಂಬದಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳುವ ಮೂಲಕ ಕೌಟುಂಬಿಕ ಚೌಕಟ್ಟಿನಲ್ಲಿ ತನ್ನದೇ ಆದ ಅಸ್ತಿತ್ವವನ್ನು ಗಟ್ಟಿಗೊಳಿಸಿಕೊಳ್ಳುತ್ತಾಳೆ. ಆದರೆ ಕುಟುಂಬಕ್ಕೆ ಮಾತ್ರ ಸೀಮಿತವಾಗದೆ, ಸಮಾಜದ ಇತರೆ ವಲಯಗಳನ್ನು ಸೂಕ್ಷ್ಮ ದೃಷ್ಟಿಯಿಂದ ವಿಮರ್ಷಿಸುವ ಶಕ್ತಿಯನ್ನು ಹೊಂದಿರಬಲ್ಲಳು ಎನ್ನುವುದಕ್ಕೆ ಆಧುನಿಕ ವಚನಕಾರ್ತಿ ಪುಷ್ಪ ಬಣಕಾರ್ ಒಂದು ಉತ್ತಮ ಉದಾಹರಣೆಯಾಗಿದ್ದಾರೆ. ಲೇಖಕಿ ಪುಷ್ಪ ಬಣಕಾರ್ ಅವರು ಮೂಲತಃ ಗೃಹಿಣಿಯಾದರೂ, ಗೃಹ ಕಾರ್ಯಗಳಿಗೆ ಮಾತ್ರ ಸೀಮಿತವಾಗದೆ, ತಮ್ಮನ್ನು ತಾವು ಬರಹದಲ್ಲಿ ತೊಡಗಿಸಿಕೊಳ್ಳುವ ಮೂಲಕ ಸಾಹಿತ್ಯ ಕ್ಷೇತ್ರಕ್ಕೆ ತನ್ನದೇ ಆದ ಕೊಡುಗೆಯನ್ನು ನೀಡುತ್ತಿದ್ದಾರೆ.

ಆಧುನಿಕ ವಚನಗಳ ಮೇಲೆ 12ನೇ ಶತಮಾನದ ವಚನ ಸಾಹಿತ್ಯದ ಪ್ರಭಾವವನ್ನು ಸೂಕ್ಷ್ಮವಾಗಿ ಗುರುತಿಸಬಹುದು. ಅಂತೆಯೇ ಆಧುನಿಕ ವಚನಕಾರ್ತಿ ಪುಷ್ಪ ಬಸವರಾಜ ಬಣಕಾರ ಅವರ ವಿರಚಿತ ಎನ್ನೊಳಗಣ ಬಸವಪ್ರಭು, ವಚನ ಧೀವರಿ, ವಚನ ವಲ್ಲರಿ ಹಾಗೂ ಅವರ ಇತರೆ ಕೃತಿಗಳಲ್ಲಿ ವಚನ ಸಾಹಿತ್ಯದ ಪ್ರಧಾನವಾಗಿ ಬಸವಣ್ಣನವರ ಪ್ರಭಾವದ ಚಹರೆಯನ್ನು ಗುರಿತಿಸಬಹುದು.

ಪುಷ್ಪ ಬಸವರಾಜ ಬಣಕಾರ: ಪ್ರಸ್ತುತ ಕಾಲಘಟ್ಟದಲ್ಲಿ ಆಧುನಿಕ ವಚನ ಸಾಹಿತ್ಯದಲ್ಲಿ ನಿರಂತರವಾಗಿ ತೊಡಗಿಸಿಕೊಂಡಿರುವ ಲೇಖಕಿ. ಇವರು ಆಧುನಿಕ ವಚನ ಪ್ರವರ್ತಕರಾದ ಮಹದೇವ ಬಣಕಾರ ಅವರ ಸೋಸೆಯಾಗಿದ್ದು, ಲೇಖಕಿ ಪುಷ್ಪ ಅವರ ಬರಹಕ್ಕೆ ಸ್ಫೂರ್ತಿದಾಯಕ ವ್ಯಕ್ತಿ. ಬೆಂಗಳೂರಿನಲ್ಲಿ ನೆಲೆಸಿರುವ ಕೃತಿಕಾರರು ಪ್ರಸ್ತುತ ಕರ್ನಾಟಕ ಲೇಖಕಿಯರ ಸಂಘ ಸೇರಿದಂತೆ ಅನೇಕ ಮಹಿಳಾ ಸಾಹಿತ್ಯ ಸಮಾವೇಷಗಳಲ್ಲಿ ಮುಂಚೂಣಿಯಲ್ಲಿದ್ದಾರೆ. ಇವರ ಕೃತಿಗಳು: ಎನ್ನೊಳಗಣ ಬಸವಪ್ರಭು, ವಚನ ಧೀವರಿ, ವಚನ ವಲ್ಲರಿ ಇವು ಇವರ ಆಧುನಿಕ ವಚನ ಕೃತಿಗಳಾಗಿವೆ. ಹಾಗೆಯೇ ಒಳದನಿ, ಅನುವರ ಕವನ ಸಂಕಲನಗಳು. ನೂರೊಸಗೆಗಳು ಸುನೀತಗುಚ್ಛವಾಗಿದೆ. ಅವರ ವಚನಗಳ ಅಂಕಿತ **"ತರಳುಬಾಳು ಸದ್ಗುರುವೇ".**

ವಚನಕಾರ್ತಿ ಪುಷ್ಪ ಅವರು ರಚಿಸಿರು ಆಧುನಿಕ ವಚನಗಳ ವಸ್ತುವನ್ನು ಸಾಂಸ್ಕೃತಿಕ ದೃಷ್ಟಿಕೋನದಿಂದ ಅಧ್ಯಯನ ಮಾಡುವುದು ಈ ಲೇಖನದ ಪ್ರಮುಖ ಉದ್ದೇಶವಾಗಿದೆ. ಹಾಗಿಯೇ ಆಧುನಿಕ ವಚನ ಸಾಹಿತ್ಯದ ಮೇಲೆ ಹನ್ನೆರಡನೇಯ ಶತಮಾನದ ವಚನಕಾರರು ಉಂಟುಮಾಡಿರುವ ಪ್ರೇರಣೆ ಮತ್ತು ಪ್ರಭಾವವನ್ನು ಪ್ರಸ್ತುತ ಲೇಖನದಲ್ಲಿ ಅಧ್ಯಯನ ಮಾಡಲಾಗಿದೆ.

ವ್ಯಾಪ್ತಿ :

ಕೃತಿಕಾರರಾದ ಪುಷ್ಪ ಬಣಕಾರ್ ಅವರ ಎನ್ನೊಳಗಣ ಬಸವಪ್ರಭು, ವಚನ ಧೀವರಿ, ವಚನ ವಲ್ಲರಿ, ಒಳದನಿ, ಅನುವರ ನೂರೊಸಗೆಗಳು ಕೃತಿಗಳ ಆಯ್ದ ವಚನಗಳು ಮತ್ತು ಕಾವ್ಯಗಳನ್ನು ಈ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ವಿಶ್ಲೇಷಣೆ :

ಲೇಖಕಿ ಪುಷ್ಪ ಅವರ ಒಟ್ಟು ಕೃತಿಗಳಲ್ಲಿ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ಆಧ್ಯಾತ್ಮಿಕತೆಯನ್ನು ಒಳಗೊಂಡಂತೆ ವಿಭಿನ್ನ ಕ್ಷೇತ್ರಗಳಿಂದ ವಿಶಿಷ್ಠ ವಸ್ತುಗಳನ್ನು ತಮ್ಮ ಬರಹಕ್ಕೆ ಆಯ್ಕೆ ಮಾಡಿಕೊಂಡಿದ್ದಾರೆ. ಸಮಾಜ ಮತ್ತು ಬದುಕಿಗೆ ಸಂಬಂಧಿಸಿದಂತೆ ಸಮಗ್ರ ವಸ್ತುಗಳ ಆಯ್ಕೆ ಕೃತಿಕಾರರ ಆಲೋಚನಾ ವೈಖರಿಯನ್ನು

ಪರಿಚಯಿಸುತ್ತದೆ. ನಿರೂಪಿಸಲು ತಾವು ಆಯ್ಕೆ ಮಾಡಿಕೊಂಡ ವಿಷಯಗಳ ಬಗ್ಗೆ ಬಹಳ ಚಿಕ್ಕದಾಗಿ ಮತ್ತು ಚೊಕ್ಕವಾಗಿ ಮನಮುಟ್ಟುವಂತೆ ಬರೆದಿರುವುದು ಇವರ ಸಾಹಿತ್ಯದ ಲಕ್ಷಣವಾಗಿದೆ. ಸರಳತೆ ಅವರ ಬರಹದ ಮತ್ತೊಂದು ವಿಶೇಷತೆಯಾಗಿದೆ. ಬದುಕಿನ ನೋವು ನಲಿವು, ಕ್ಷಣಿಕ ಬದುಕು, ಗೆಳೆತನ, ತಂದೆ–ತಾಯಿ ವಾತ್ಸಲ್ಯ, ಅತ್ತೆ–ಮಾವರ ಬಾಂಧವ್ಯ, ಜೀವನದ ಏರಿಳಿತಗಳು, ಪಂಚೇಂದ್ರಿಯಗಳು, ಪ್ರಭಾವ ಬೀರುವ ಮಹನೀಯರು, ಪ್ರಕೃತಿ, ಪಾಪ–ಪುಣ್ಯ, ಸೋಲು–ಗೆಲುವು ಇವೇ ಮೊದಲಾದವು ಅವರ ಬರಹದ ವಸ್ತುಗಳಾಗಿವೆ.

ಕನ್ನಡನಾಡು ಬಸವಣ್ಣನವರಂತಹ ದಾರ್ಶನಿಕರಿಂದ ಶ್ರೇಷ್ಠ ನಾಡಾಗಿದೆ. ಕಾಯಕ ಮತ್ತು ದಾಸೋಹ ಎಂಬ ಎರಡು ಬಹುಮುಖ್ಯ ಕೊಡುಗೆಯನ್ನು ನೀಡಿದಂತಹ ಶ್ರೇಷ್ಠ ಚಿಂತಕ ಬಸವಣ್ಣನವರು. ಅವರು ಒಬ್ಬ ಮಹಾನ್ ಮಾನವತವಾದಿ. ಅಗಾಧ ಜ್ಞಾನವುಳ್ಳ ಸುಜ್ಞಾನ ಭಂಡಾರಿ. ಪೊಳ್ಳು ಪುರಾಣಗಳನ್ನು ಗಾಳಿಗೆ ತೂರಿದವರು ಎನ್ನುವ ನಿಲುವುಗಳನ್ನು ಲೇಖಕಿ ಪುಷ್ಪಬಣಕಾರ್ ಅವರು ತಮ್ಮ ಬರಹದ ಮೂಲಕ ಅಭಿವ್ಯಕ್ತಿ ಪಡಿಸುತ್ತಾರೆ. ಬಸವಣ್ಣ ಅರಿತವರ ಸ್ವತ್ತು. ಅವರು ತಮ್ಮ ವಚನಗಳಲ್ಲಿ ಭೋದಿಸಿದ ಸಾರ ಜಾತ್ಯತೀತವಾದದ್ದು. ವಚನಗಳು ಎಲ್ಲರಿಗೂ ಮುಕ್ತ ಅವಕಾಶವನ್ನು ಹೊಂದಿರುವ ವಿಶ್ವಕೋಶವಾಗಿವೆ. ಹಾಗಾಗಿಯೇ 800 ವರ್ಷಗಳಿಗಿಂತಲೂ ಅಧಿಕವಾದರೂ ಮರು ಓದಿಗೆ, ಮರು ಚಿಂತನೆಗೆ ವಚನ ಸಾಹಿತ್ಯ ಒಳಗಾಗುತ್ತಿರುವುದು. ಆ ಮೂಲಕ ವಚನ ಸಾಹಿತ್ಯದ ಪ್ರಾಮುಖ್ಯತೆಯು ಅರ್ಥವಾಗುತ್ತದೆ. "ಎನ್ನೊಳಗಣ ಬಸವಪ್ರಭು" ಕೃತಿಯೂ ಲೇಖಕಿ ಪುಷ್ಪ ಬಣಕಾರ ಅವರ ಮನದಲ್ಲಿ, 12ನೇ ಶತಮಾನದ ಬಸವಣ್ಣನವರು ಎಷ್ಟು ಆಳವಾಗಿ ಬೇರುರಿದ್ದಾರೆ ಎನ್ನುವ ವಿಚಾರಗಳನ್ನು ತಿಳಿಸುವ ಕೃತಿಯಾಗಿದೆ. ಬಸವಣ್ಣನವರ ಬಗ್ಗೆ ತಳೆದಿರುವ ಅಭಿಪ್ರಾಯಗಳನ್ನು ಬಾಯಿ ಮಾತಿನಲ್ಲಿ ಅವರು ವ್ಯಕ್ತಪಡಿಸುವುದಿಲ್ಲ. ಬದಲಿಗೆ ಆಧುನಿಕ ವಚನಗಳ ಮೂಲಕವೇ ಬಸವಣ್ಣನವರ ಮೇಲಿನ ಅಭಿಮಾನದ ಅಭಿಪ್ರಾಯವನ್ನು ಅಭಿವ್ಯಕ್ತಿ ಪಡಿಸುತ್ತಿರುವುದು ಈ ಕೃತಿಯ ವಿಶೇಷತೆಯಾಗಿದೆ. ವಚನಗಳ ಬಗೆಗೆ ವಿಶೇಷ ನಿಲುವುಗಳನ್ನು ತಳೆಯಲು ಕಾರಣ ತನ್ನ ತಂದೆ ಮತ್ತು ಮಾವನವರು ಎನ್ನುವುದು ಕೃತಿಕಾರರ ಅಭಿಪ್ರಾಯ. ಮನಸ್ಸಿನಲ್ಲಿ ಸದಾ ಬಸವ ಪ್ರಜ್ಞೆಗಳು ನೆಲೆಸಿ, ಬದುಕಿಗೆ ಎಂತಹ ಶಿಕ್ಷಣ ದೊರೆತಿದೆ ಎನ್ನುವುದು ಲೇಖಕಿ "ವಚನಗಳು ನನ್ನ ಬದುಕಿಗೊಂದು ಸಾರ್ಥಕತೆ, ಆಧ್ಯಾತ್ಮಿಕ ಶಕ್ತಿ, ಆತ್ಮಸ್ಥೈರ್ಯವನ್ನು ದೊರಕಿಸಿಕೊಟ್ಟುವು" ಎಂದು ತಮ್ಮ ನಿಲುವನ್ನು ಅಭಿವ್ಯಕ್ತಪಡಿಸುತ್ತಾರೆ.

ಪುಷ್ಪಬಣಕಾರ ಅವರ ಆಧುನಿಕ ವಚನಗಳ ಮತ್ತೊಂದು ಕೃತಿ "ವಚನವಲ್ಲರಿ". ಇದು ಒಟ್ಟು 108 ಆಧುನಿಕ ವಚನಗಳನ್ನು ಹೊಂದಿದೆ. "ಒರ್ವ ಗೃಹಿಣಿಯಾಗಿ, ವಚನ ರಚನೆಯ ಹವ್ಯಾಸ ಹೆಚ್ಚಿಸಿಕೊಂಡು 12ನೆಯ ಶತಮಾನದ ವಚನಕಾರ್ತಿಯರ ಹಾದಿಯಲ್ಲಿ ನಡೆದಿರುವ ಪುಷ್ಪ ಅವರು, ಮನೆಯವರಿಗೆ ನೀಡುವ 'ಒಲೆಯಲಟ್ಟುಂಬ ಅನ್ನದ ಜೊತೆಗೆ, ಲೋಕಕ್ಕೆ 'ತಲೆಯಲಟ್ಟುಂಬ' ಅರಿವಿನ ಪ್ರಸಾದ ನೀಡಿ, ವಚನ ಪ್ರಸಾದಿಯೇ ಆಗಿದ್ದಾರೆ" ಎಂಬುದು ಗೊ. ರು. ಚೆನ್ನಬಸಪ್ಪ ಅವರ ಅಭಿಪ್ರಾಯವಾಗಿದೆ. (ವಚನವಲ್ಲರಿ., ಪುಟ ಸಂಖೆ 14).

ಔದ್ಯೋಗಿಕ ಮಹಿಳೆಗಿಂತಲೂ ಗೃಹಿಣಿಯಲ್ಲಿ ತಾಳ್ಮೆ ಹೆಚ್ಚಾಗಿರುತ್ತದೆ. ಈ ಗುಣಗಳ ಜೊತೆಗೆ ಸಮಯ ಪ್ರಜ್ಞೆಯ ಗುಣವು ಬರಹಗಾತಿ ಪುಷ್ಪ ಅವರಲ್ಲಿ ಕಾಣಿಸುತ್ತದೆ. ಹಾಗಾಗಿ ಅವರ ಬರಹದ ವಿಷಯದ ವ್ಯಾಪ್ತಿ ಸಮಗ್ರತೆಯೆಡೆಗೆ ವಿಸ್ತರಿಸಿದೆ. ಲೌಕಿಕ ಮತ್ತು ಆಧ್ಯಾತ್ಮಿಕ ಪಾರಮತ್ಯದ ಬರಹಗಳಲ್ಲಿ ಮನುಷ್ಯನ ಹುಟ್ಟಿನಿಂದ ಸಾವಿನವರೆಗಿನ ಪಯಣದಲ್ಲಿ, ಬದುಕಿನ ನೈಜ ಅರ್ಥವನ್ನು ವಿವರಿಸುತ್ತಾರೆ. "ಮಾಯೆ" ಎನ್ನುವುದು ಒಂದು ಕೊಳಕು. ಏಕೆಂದರೆ ಆಸೆಯ ಬಂಧದಲ್ಲಿ ಸಿಲುಕಿರುವಂತೆ ಮಾಡುವ ಮಾಯೆ ಎಂಬ ಕೊಳಕು ನೀರಿನಲ್ಲಿ ಮಾನವ ಮಿಯ್ಯುತ್ತಾನೆ ಎನ್ನುವುದನ್ನು ಪ್ರತಿಪಾದಿಸುತ್ತಾರೆ. ಅರಿವಿನ ಕೊರತೆ ಇದ್ದರೆ ಮಾಯೆಯ ಕೈಯಲ್ಲಿ ನಾವು ಸಿಕ್ಕಿಹಾಕಿಕೊಳ್ಳುತ್ತೇವೆ. ವೇಷಧಾರಿ ಎನ್ನುವ ರಾಜಕೀಯ ವಿಡಂಬಣೆಯ ಕವಿತೆ ಅತ್ಯುತ್ತಮ ಕವಿತೆಯಾಗಿದೆ.

"ಅಂದು ವೇಷಧಾರಿಗಳಿದ್ದರು
ಊರ ಹೊರಗಿನ ಬಿಡಾರಗಳಲ್ಲಿ
ಅವರಿಗಿತ್ತು ಸಂಸ್ಕೃತಿ
ಇಂದು ಹಗಲುವೇಷಧಾರಿಗಳಿಹರು ಸೌಧಗಳಲ್ಲಿ
ಅವರದು ಬರೀ ವಿಕೃತಿ
ಹಾಳುಗೆಡವಿಹರು ದೈವ ಪ್ರಕೃತಿ"

ವ್ಯಕ್ತಿಯನ್ನು ಇತರರು ತಿದ್ದುವುದಕ್ಕಿಂತಲೂ, ಆತ ತನಗೆ ತಾನು ಆತ್ಮ ನಿವೇದನೆ ಮಾಡಿಕೊಂಡಾಗ, ಬದುಕಿನ ಸಾಕ್ಷಾತ್ಕಾರದ ಅನುಭೂತಿ ಉಂಟಾಗುತ್ತದೆ. 12ನೇ ಶತಮಾನದ ವಚನಕಾರರು ಮಾಡಿದ್ದು ಇದನ್ನೇ. ಮೊದಲು ತಮ್ಮನ್ನು ತಾವು ವಿಮರ್ಶೆಗೆ ಒಳಪಡಿಸಿಕೊಂಡು, ಅರಿವಿನೊಳಗಣ ಮಹಾ ಬೆಳಗು ಎಂಬಂತೆ ಆ ನಂತರ ಸಮಾಜವನ್ನು ನೋಡಲು ಮುಂದಾದರು. ಆಧುನಿಕ ವಚನಕಾರ್ತಿ ಪುಷ್ಪ ಅವರು ಅದೇ ನಿಟ್ಟಿನಲ್ಲಿ ಮುಂದುವರೆದಿದ್ದಾರೆ.

"ದೃಢ ಚಿತ್ತದಿಂದೆನ್ನ ಇರಿಸು, ಅಜ್ಞಾನದ ಹಠವನಳಿಸು, ಜನುಮ ನಿರ್ಮಲಗೊಳಿಸು, ನಿಮ್ಮ ಗುಣವ ಎನ್ನೊಳಿರಿಸು, ಎನ್ನನು ಪ್ರಸನ್ನವಾಗಿಸು, ಕೃತಿಸ್ಪಷ್ಟತೆಯ ನೀಡು, ಮನವ ಸಾಕ್ಷಿಸು, ಅನುಭೂತಿ ಕರುಣಿಸು, ವಿಷಮತೆಯ ವಿಚ್ಛೇದಿಸು, ಅರುಹನಿತ್ತು ರಕ್ಷಿಸು, ಸ್ವತಂತ್ರಗೊಳಿಸು, ಅವಿದ್ಯೆಯ ಅಂತ್ಯಗೊಳಿಸು, ಸದ್ವಸ್ತುವಿನೊಳಿರಿಸು ಆಶೀರ್ವದಿಸು, ಭಕ್ತಿಜಲವ ಸಿಂಪಡಿಸು, ಆಧ್ಯಾತ್ಮದ ಆವರಣದಲ್ಲಿರಿಸು, ಶರಣಾಗತಗೊಳಿಸು, ಜೀವನ್ಮುಕ್ತಗೊಳಿಸು, ಅಂತರ್ಮುಖಿಯಾಗಿಸು"–ಹೀಗೆ ಅನನ್ಯ ಶರಣತೆಯಿಂದ ಅಪ್ರಮೇಯ ಗುರುವಿನಲ್ಲಿ ಮೊರೆಹೋಗುತ್ತಾರೆ.

ವಚನ ಸಾಹಿತ್ಯವನ್ನು ಓದುವ ಮೂಲಕ ಬದುಕಿನ ಪ್ರತಿ ಹೆಜ್ಜೆಯನ್ನು ವಚನಮಯ ಮಾಡಿಕೊಳ್ಳುವುದು ವಚನಗಳ ಪ್ರಭಾವವನ್ನು, ಅವುಗಳ ತೀವ್ರತೆಯನ್ನು ಹೇಳುತ್ತದೆ. ವಚನದ ಬೆಳಕಿನಲ್ಲಿ ತಮ್ಮ ಬದುಕನ್ನು ಕಟ್ಟಿಕೊಳ್ಳಲು ಮುಂದಾದವರು ಲೇಖಕಿ ಪುಷ್ಪ ಎನ್ನುವುದು ಮತ್ತೆ ಮತ್ತೆ ಸಾಬೀತಾಗುತ್ತದೆ. ವಚನಗಳ ಓದಿನ ಮೂಲಕ ಗ್ರಹಿಸಿದ ಗ್ರಹಿಕೆಯನ್ನು ಲೇಖಕಿ ಹೀಗೆ ಹೇಳುತ್ತಾರೆ. "ಸೂಕ್ತ ಕಾರ್ಯ, ಯೋಜಿತ ನಿಕರ್ಮ, ಕ್ರಿಯಾ ಪ್ರೇರಕಾ ನೀ". ವಚನಕಾರರ ಅರಿವಿನ ಮಾದರಿಯಲ್ಲಿಯೇ ಲೇಖಕಿ ಪುಷ್ಪ ಅವರು ತಮ್ಮ ವಚನಗಳಿಗೆ ಸೂಕ್ತವಾದ ಅಂಕಿತವನ್ನು ಹೊಂದಿದ್ದಾರೆ. "ತರಳುಬಾಳು ಸದ್ಗುರುವೆ" ಎನ್ನುವುದು ಅವರ ವಚನಗಳ ಅಂಕಿತ. ಬದುಕು ಅನೇಕ ವಿಚಾರ ವಿಕಲ್ಪಗಳ ತಾಪಕ್ಕೆ ಸಿಲುಕಿ ತಲ್ಲಣಕ್ಕೆ ಒಳಗಾಗಿರುತ್ತದೆ. ಇದಕ್ಕೆ ಮೂಲ ಕಾರಣ ಪಂಚೇಂದ್ರಿಯಗಳು. ಆದರೆ ಅವುಗಳ ನಿಗ್ರಹದ ಬಗೆಗೆ ವಚನಕಾರರನ್ನು ಒಳಗೊಂಡಂತೆ ಎಲ್ಲ ಮಹನೀಯರು, ದಾರ್ಶನಿಕರು ಸಹ ಈಗಾಗಲೇ ಹೇಳಿಯಾಗಿದೆ. ಅವುಗಳ ತೊಳಲಾಟದಲ್ಲಿ ಸಿಲುಕಿರುವುದು ಮಾನವನ ಸಹಜ ಗುಣ. ಆದರೂ ಅಂತಹ ಒಂದು ತೊಳಲಾಟದಲ್ಲಿ ಸಿಲುಕಿರುವ "ಅರಿವು" ಮೊದಲು ಆತನಿಗಾಗಬೇಕು. ನಂತರ ಅದರಿಂದ ಬಿಡಿಸಿಕೊಳ್ಳುವ ಪ್ರಯತ್ನ. ಪಂಚೇಂದ್ರಿಯಗಳ ಮೋಹಕ್ಕೆ ಸಿಲಕಿರುವ ಅರಿವು ಉಂಟಾಗದಿದ್ದಲ್ಲಿ ಒಂದಲ್ಲ ಒಂದು ರೀತಿ ಮನುಷ್ಯ ಬಳಲುತ್ತಲೇ ಇರುತ್ತಾನೆ. ಅಂತಹ ತೊಳಲಾಟದ ಸ್ಥಿತಿಯನ್ನು ಕೃತಿಕಾರರು ತಮ್ಮ ವಚನಗಳ ಮೂಲಕ ಗುರುತಿಸಲು ಪ್ರಯತ್ನಿಸಿದ್ದಾರೆ.

"**ಆಸೆ–ಆಮಿಷದೊಳು**
ವಿಕಾರ ವಿಕಲ್ಪ ತಾಪಕೆ ತಲ್ಲಣಗೊಂಡಂತೆ
ಅಳಿಯದಂತೆ ದೃಢಚಿತ್ತದಿಂದೆನ್ನ ಇರಿಸಿ,
ನಿರಂಜನಳಾಗಿಸೆನ್ನ ತರಳುಬಾಳು ಸದ್ಗುರುವೆ (ವಚನವಲ್ಲರಿ, ಪುಟ ಸಂಖ್ಯೆ 39)

ಎಂತಹ ಮಾಯೇಯಾದರು ಸರಿ ಅದಕ್ಕೆ ಪರಿಹಾರ "ದೃಢಚಿತ್ತ" ಎನ್ನುವುದು ಅವರು ಕಂಡುಕೊಂಡ ಉತ್ತರವಾಗಿದೆ.

"ಆಧ್ಯಾತ್ಮಿದರಿವಿನ ಅರಮನೆ
ಸದಾಚಾರದ ಸಿರಿಮನೆ
ಜ್ಞಾನಚಕ್ಷು ತೆರೆವ ದೇವಮನೆ
ಕಾವ ಯೋಗಿ ಇರುವ ಗುರುಮನೆ
ಪೃಥ್ವಿ ಇದು ವಿಶ್ವಬಂಧು
ತರಳುಬಾಳು ಸದ್ಗುರುವಿನ ಮಹಾಮನೆ (ವಚನ ವಲ್ಲರಿ, ಪುಟ ಸಂಖ್ಯೆ 43)

ಈ ವಚನದಲ್ಲಿ ಬಳಕೆಯಾಗಿರುವ ಅರಮನೆ, ಸಿರಿಮನೆ, ದೇವಮನೆ, ಮಹಾಮನೆ, ಗುರುಮನೆ, ಪದಗಳು ವಚನ ಸಾಹಿತ್ಯದಲ್ಲಿ ಬಳಕೆಯಾಗಿರುವ ಪ್ರಮುಖ ಪಾರಿಭಾಷಿಕ ಪದಗಳಾಗಿವೆ. ಆಧ್ಯಾತ್ಮವೂ ಅರಿವಿನಿಂದ ಮಾತ್ರ ಸಾಧಿತವಾಗುವುದು. ಸದಾಚಾರ ಎಂಬುದು ಮನುಷ್ಯನ ವರ್ತನೆಯ ನೈತಿಕತೆಯನ್ನು ಅವಲಂಬಿಸಿದೆ. ಬದುಕಿನ ಅರ್ಥಗಳನ್ನು, ನೀತಿ ಪಾಠಗಳನ್ನು ಧರ್ಮಸೂಕ್ಷ್ಮತೆಗಳನ್ನು ಅರಿಯುವಲ್ಲಿ ಲೇಖಕಿ ಹೆಚ್ಚು ಒತ್ತು ನೀಡಿರುವುದು ಅವರ ಬರಹಗಳಲ್ಲಿ ಕಂಡುಬರುತ್ತದೆ. ಅವರ ಮತ್ತೊಂದು ಕೃತಿ "ಒಳದನಿ" ವಿಭಿನ್ನ ವಸ್ತುಗಳನ್ನು ಒಳಗೊಂಡಿರುವುದು ಗಮನಾರ್ಹ. ಕೆಲವು ಕವಿತೆಗಳಲ್ಲಿ ಆತ್ಮಲೋಕನದ ಜೊತೆಗೆ ಪರರ ಅವಲೋಕನವನ್ನು ಕುರಿತು ಹೇಳುತ್ತಾರೆ ನೆರೆಮನೆಯವರ ಸಿರಿಕಂಡು ಕರುಬುವ ಕುಕ್ಕಲಾತಿ ಜನರ ಬಗ್ಗೆಯು ಬರೆಯುತ್ತಾರೆ. ಆತ್ಮಾವಲೋಕನದ ಸಂದರ್ಭದಲ್ಲಿ ಆಂತರಿಕ ಚೈತನ್ಯವನ್ನು ಕುರಿತು ಮಾತನಾಡುತ್ತಾರೆ.

"ತಾ ಬಲವೇ ಜಗಬಲ
ಇದರಲಿದೆ ನಿನ್ನ ತಾರಾಬಲ
ದೈವ ಹರಸುವನೆಲ್ಲ
ದಿವ್ಯಾತ್ಮ ನೀನು ದಿವ್ಯಾತ್ಮ ನೀನು"(ಒಳದನಿ, ಪುಟಸಂಖ್ಯೆ:80)

ಎಲ್ಲ ಬಲಗಳಿಗಿಂತಲು ಮನೋಬಲವೇ ಮಿಗಿಲು, ಎಲ್ಲ ತಾರಾಬಲಗಳಿಗಿಂತಲೂ ಮನಸ್ಸಿನ ನುಡಿಗಳೇ ಶ್ರೇಷ್ಠ ಎನ್ನುವ ಅನುಭವಗಮ್ಯ ಅಭಿಪ್ರಾಯ ಲೇಖಕಿಯದು. ಮತ್ತೊಬ್ಬರ ಬದುಕನ್ನು ಕಂಡು ಈರ್ಷ್ಯೆಗೊಳಗಾಗುವ ಮನುಷ್ಯರಿಗೆ ಅದೆಂದು ಬುದ್ದಿ ಬರುವುದೊ? ಯಾರಿಗು ತಿಳಿಯದು. ಮತ್ತೊಬ್ಬರ ಬಗೆಗೆ ಅಸೂಯೆಗೆ ಒಳಗಾಗುವುದಕ್ಕೆ ಮಾತ್ರ ಅವನ ಬುದ್ಧಿ ಸೀಮಿತವಾಗಿಲ್ಲ. ಕರುಬುತ್ತಾ,

ಇತರರನ್ನು ಕೆಣಕುತ್ತಾ, ದೂರುಗಳನ್ನು ಸಾರುತ್ತ, ತಮ್ಮ ದುಸ್ಥಿತಿಗೆ ವಿಧಿಯನ್ನು ಹಳೆಯುತ್ತಾ, ಸಾಗುವ ಮನುಜರ ವಿವೇಕವನ್ನು ಯಾವ ನಿರ್ದಿಷ್ಟ ಗುಣಗಳ ಪಟ್ಟಿಯಲ್ಲಿ ಸೇರಿಸಬೇಕೆಂಬುದು ತಿಳಿಯುವುದಿಲ್ಲ.

"ನೀಡಲೇಬೇಕು ತಲೆದಂಡ
ನೀತಿ ನಿಯಮಗಳೇ ಇಲ್ಲಿ ವಿತಂಡ
ಮಾಯಾವಿಗಳು ಹೊರಟಿಹವು ತಂಡೋಪ ತಂಡ
ಸುಜ್ಞಾನವನರಿಸಿದೊಡೆ ತಲೆದಂಡ
ಮೃಗ ಸಮಾನರಲಿ ಮಾನವತೆ ಅರಿಸಿದೊಡೆ ತಲೆದಂಡ
ತನ್ನಂತೆ ಪರರ ಬಗೆದೊಡೆ ತಲೆದಂಡ
ತ್ರಿವಿದದೋಳು ಸಿಕ್ಕಿ ತಲೆದಂಡ
ತ್ರಿಕಾಲ ಜ್ಞಾನಿಗೂ ಬಿಡದು ತಲೆದಂಡ
ತ್ರಿಕರಣ ಶುದ್ದಿಗೂ ತಲೆದಂಡ
ತ್ರಿಚಕ್ಷು ಭಕ್ತರಿಗೂ ತಪ್ಪದು ತಲೆದಂಡ" (ಒಳದನಿ, ಪುಟಸಂಖ್ಯೆ 48 ಮತ್ತು 49)

ಇತಿಹಾಸದ ಎಲ್ಲಾ ಕಾಲಘಟ್ಟವು ಸಜ್ಜನರು ಮತ್ತು ದುರ್ಜನರ ಇರುವಿಕೆಗೆ ಸಾಕ್ಷಿಯಾಗಿದೆ. ಸನ್ಮಾರ್ಗದ ಹೋರಾಟಗಾರರಿಗೆ ಆಗುವ ತಲೆದಂಡವನ್ನು, 12ನೇ ಶತಮಾನದಲ್ಲಿನ ಬಸವಣ್ಣನವರ ಉದಾಹರಣೆಯೊಂದಿಗೆ ಅರ್ಥಮಾಡಿಕೊಳ್ಳಬಹುದು. ಅದೇ ರೀತಿ ಇಂದಿನ ಕಾಲದಲ್ಲಿಯೂ ನಾವೆಲ್ಲರೂ ಸಾಮಾನ್ಯ ಮನುಷ್ಯರು ನಮ್ಮ ದಿನನಿತ್ಯದ ಹೋರಾಟದಲ್ಲಿಯೂ ಒಳ್ಳೆಯತನಕ್ಕೆ ಹೇಗೆ ಪೆಟ್ಟು ಬೀಳುತ್ತಲೇ ಇರುತ್ತದೆ, ಎನ್ನುವುದನ್ನು ಕೃತಿಕಾರರ "ತಲೆದಂಡ" ಬಹಳ ಮಾರ್ಮಿಕವಾಗಿ ಅರ್ಥೈಸುತ್ತದೆ.

ಪಾರಮರ್ಶನ ಗ್ರಂಥಗಳು:

1. ವಚನ ವಲ್ಲರಿ., ಪುಷ್ಪ ಬಸವರಾಜ ಬಣಕಾರ., ಪ್ರಥಮ ಮುದ್ರಣ 2016., ಶುಭದ ಪ್ರಕಾಶನ., ಬೆಂಗಳೂರು.
2. ವಚನ ಧೀವರಿ., ಪುಷ್ಪ ಬಸವರಾಜ ಬಣಕಾರ., ಪ್ರಥಮ ಮುದ್ರಣ 2023., ಅನುಭವ ಮಂಟಪ ಪ್ರಕಾಶನ., ಬೆಂಗಳೂರು.
3. ಎನ್ನೊಳಗಣ ಬಸವಪ್ರಭು., ಪುಷ್ಪ ಬಸವರಾಜ ಬಣಕಾರ., ಪ್ರಥಮ ಮುದ್ರಣ 2019., ಶುಭದ ಪ್ರಕಾಶನ., ಬೆಂಗಳೂರು.
4. ಅನುವರ., ಪುಷ್ಪ ಬಸವರಾಜ ಬಣಕಾರ., ಪ್ರಥಮ ಮುದ್ರಣ 2017., ಶುಭದ ಪ್ರಕಾಶನ., ಬೆಂಗಳೂರು.

ಜೀತಗಾರಿಕೆಯ ಕತ್ತಲಿಗೆ, ಸಂವಿಧಾನ ತತ್ವವೇ ಬೆಳಕು

ಕೆ.ಎನ್. ನಂದೀಶ
ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಅಂಕೋಲಾ
ಉತ್ತರ ಕನ್ನಡ ಜಿಲ್ಲೆ.

ಎತ್ತ ನೋಡಿದರೂ ಗುಡಿಸಲು ಮನೆ ತಲೆಯೆತ್ತಿ ನಿಂತಿವೆ, ಹೊತ್ತಿನ ಊಟಕ್ಕಾಗಿ ಹಾಹಾಕಾರ, ಮನೆಯಲ್ಲಿ ದೀಪದ ಬಳಕೆಯಿಲ್ಲ, ನೀರಿನ ಪೂರೈಕೆ ದೂರದ ಮಾತು, ಸುತ್ತಮುತ್ತಲಿನ ಪರಿಸರ ರೋಗರುಚಿನಗಳ ತಾಣ, ಶಿಕ್ಷಣ ಮಾತ್ರ ಇವರಿಗೆ ಗಗನಕುಸುಮವೇ ಸರಿ. ಗ್ರಾಮ ಪಂಚಾಯಿತಿ ಹಳ್ಳಿ ಇದಾಗಿದ್ದು, ಜಮೀನ್ದಾರರ ಮನೆಯಲ್ಲಿ ಹಿರಿಯರು ಮಾಡಿದ ಸಾಲವ ತೀರಿಸಲು, ಜೀತಕ್ಕಿದ್ದವನಿಗೆ, ಹೆಂಡತಿಯ ಸಹಕಾರವಿದ್ದು, ಈ ದಂಪತಿಗೆ ಹಿರಿಯವನು ಮಗ ಮತ್ತು ಕಿರಿಯವಳು ಮಗಳು. ಅವರೆಲ್ಲ ಪಕ್ಕದ ಊರಿನ ತಾಯಿಯ ತವರು ಮನೆಯಲ್ಲಿ ಶಿಕ್ಷಣ ಮತ್ತು ಆಶ್ರಯ ಪಡೆದಿದ್ದರು.

1

ಪ್ರಮುಖ ಪದಗಳು
ಜೀತಗಾರಿಕೆ, ಸಂವಿಧಾನ, ದುಡಿಮೆ, ಗ್ರಂಥಾಲಯ, ಪದವಿ

ತಂದೆ ಜಮೀನ್ದಾರರ ಮನೆಯಲ್ಲಿ ದಿನಲೂ ಬೆಳಗ್ಗಿನ ಸಮಯಕ್ಕೆ ಎದ್ದೇಳಿ. ಹೆಂಡತಿಯ ಜೊತೆಗೂಡಿ ಕೊಟ್ಟಿಗೆ ಶುಚಿ ಮಾಡಿ, ಹಸು, ಎಮ್ಮೆ, ಆಡು, ಕುರಿ ಪ್ರಾಣಿಗಳ ಸೇವೆಗೈದು, ಹಾಲಿನ ಕೇಂದ್ರಕ್ಕೆ ತಯಾರು ಮಾಡುವುದು, ಮನೆಯ ಚಾಕರಿ ಮುಗಿದ ಬಳಿಕ ಮನೆಯ ಯಜಮಾನಿ ಅವರಿಗೆ ನೀಡುವ ಮಿಕ್ಕುಳಿದ ಆಹಾರವನ್ನು ಊಟದ ಜೊತೆ ನೀಡುತ್ತಿದ್ದರು. ಜಮೀನಿನ ಬೇಸಾಯ ಮಾಡುವುದು ದಿನನಿತ್ಯದ ಕಾಯಕವಾಗಿತ್ತು.

ದುಡಿಮೆಯಲ್ಲಿ ನಿರತನಾಗಿದ್ದಾಗ, ಮಧ್ಯಾಹ್ನದ ಸುಡು ಬಿಸಿಲಿನ ಬೇಗೆ ತಾಳಲಾರದೆ, ಮರದ ನೆರಳಿನಲ್ಲಿ ಕುಳಿತಿದ್ದ, ಸ್ವಲ್ಪ ಹೊತ್ನಲ್ಲೇ ಬಂದ ಜಮೀನ್ದಾರ "ಏನ್ಲ ಹೋಗಿ ನೀನು ಹಿಂಗ್ ಕೂತ್ಕೋಬಿಟ್ರೆ, ನನಗೆ ಕಾಸು ಎಂಗ್ಲ ಬರುತ್ತೆ, ಹೆಂಗೆ ಬೆಳೆ ತೆಗ್ಲೆ ಹೇಳ್ಲ, ನೀನು ಜೀತ್ಗ ಇಟ್ಟುಕೊಂಡಿರೋದು ರಾಜನಂಗೆ ಇರೋಕ್ಕಲ್ಲ, ನಿನಗೆ ಕಾಸು ಕೊಡಲ್ವ, ಹೋಗ್ಲ ಕ್ಯಾಮೆ ನೋಡು ಎದ್ದೋಗೋ ಐಯೋಗ್ಯ, ನಿಮ್ಮ ಜಾತಿಯವರೇ ಇಷ್ಟು ಮೈ ಬಗ್ಸಿ ದುಡಿಯಂಗಿಲ್ಲ, ಥೂ.. ನಿನ್ ಜನ್ಮಕ್ಕ". ಜೀತ್ಗಾರ ಮಸ್ನಲ್ಲೇ, "ಈ ಬಾಳು ಇನ್ಯಾವ್ ಕಾಲ್ಕೆ ಮುಗಿಯುತ್ತೋ ಕಾಣೆ, ದೇವರೇ! ನೀನು ಯಾವಾಗ ಕಣ್ಬುಟ್ಟು ನಮ್ಮ ಕಷ್ಟ್ವ ಪರಿಹರ್ಸೋದು ಹೇಳಪ್ಪ". ಗಂಡನಿಗೆ ದನಿಗೂಡಿಸಿದ ಹೆಂಡ್ತಿ "ನೋಡ್ದಾ ಮೇಷ್ಟ್ರ ದಯೆಯಿಂದ ನಮ್ಮ ಹೈಕಳು ಹೈಸ್ಕೂಲ್ , ಕಾಲೇಜಲ್ಲಿ ಓದ್ತಾವ, ಅವರಿಂದನಾದ್ರು, ನಮ್ಗೆ ಮುಕ್ತಿ ಸಿಗುತ್ತಾ ನೋಡ್ಬೇಕು". ಮುಂದೆ ಬೇಸಿಗೆ ರಜೆಕಾಲದಲ್ಲಿ ಕೆಲಸಕ್ಕೆ ಹೊರಟ ತಾಯಿಯ ಜೊತೆಯಲ್ಲಿ ಮಗಳು ಬಂದಳು. ದನದ ಕೊಟ್ಟಿಗೆಯಲ್ಲಿ ಹಸುವಿನ ಹಾಲು ತುಂಬಿದ ಡಬ್ಬಿಗೆ ಮಗಳ ಕಾಲು ತಗುಲಿ ಚೆಲ್ಲಿದ ಹಾಲನ್ನು ಕಂಡ ತಾಯಿ "ಏನವ್ವ ಹೀಗ್ಮಾಡ್ಬುಟ್ಟಲ್ಲಾ, ಒಡ್ತಿಗೆ ಗೊತ್ತಾದ್ರೆ ಬಿಟ್ಟಾರಾ". ಅಚಾನಕ್ ಆಗಿ ನೋಡಿದ ಮನೆಯ ಯಜಮಾನಿ "ಅಯ್ಯಯೋ ಬನ್ರಿ ಇಲ್ಲಿ, ನೋಡಿ ಈ ಹಾಳಾದ್ ಪಾಪಿಗಳು, ಹಾಲಿನ್ ಡಬ್ಬಿನ ಬಿಳ್ಸಾವಲ್ಲ, ಗ್ಯಾನ್ಗೆಟ್ಟವೆ. ಥೂ ನಿಮ್ಮ ಜನ್ಮಕಾ, ನಿನ್ಗ ಅಪ್ಪ ಅವ್ವ ಏನ್ ಬುದ್ದಿ ಕಲ್ಸಿದವೋ ಮುಂಡೇವೋ". ಅಂತೇಳಿ ನೀರು ಕಾಯಿಸುತ್ತಿದ್ದ ಸೌದೆಯ ಕಡ್ಡಿ ತಂದು ಬರೆ ಹಾಕಿದಳು. ಆ ಹುಡುಗಿ "ಅವ್ವಾ... ಅವ್ವವ್ವಾ ..ನೋವು" ಅರಚುತ್ತಾ, ಕಿರುಚುತ್ತಾ ಗೋಳಾಡಿದ ಶಬ್ಧ ಕೇಳಿ ಓಡಿ ಬಂದ ತಾಯಿ "ಯಾಕವ್ವ ನಿನ್ಗ ಈ ಸಿಕ್ಸೆ, ದ್ಯಾವ್ರೆ ನಿಂಗ್ ಕಣ್ಣಿಲ್ವ ನಮ್ಗ ಯಾಕಪ್ಪ ಈ ಗೋಳಾಟ" ಎಂದು ಅಳುತ್ತಾ, ಮನೆಗೆ ಕರೆದುಕೊಂಡು ಹೋದಳು. ಆ ವೇಳೆಗೆ ಬಂದ ಮಗನ ಕಣ್ಣೀರಿನ ಕಟ್ಟೆಹೊಡೆಯಿತು. ಮುಂದೆ ಮಗಳು ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣಳಾದಳು. ಮಗನು ವಿದ್ಯಾರ್ಥಿವೇತನ, ವಿದ್ಯಾರ್ಥಿನಿಲಯ ಹಾಗೂ ಕಾಲೇಜು ಗುರುಗಳ ಪ್ರೋತ್ಸಾಹದಿಂದ ದ್ವಿತೀಯ ಪಿ.ಯು.ಸಿಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣನಾದನು. ಸಮಾಜ ಕಲ್ಯಾಣ ಇಲಾಖೆಯಿಂದ ಸನ್ಮಾನಿತನಾಗಿ "ವಿಶ್ವಜ್ಞಾನಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಜೀವನ ಚರಿತ್ರೆ ಪುಸ್ತಕ" ಪಡೆದ. ಕಣ್ಣಾರೆ ಕಂಡು ಕಣ್ತುಂಬಿಸಿಕೊಳ್ಳದ ಸ್ಥಿತಿಯಲ್ಲಿದ್ದ ಈತನ ತಂದೆ ತಾಯಿಗಳಿಗೆ ಶಾಲಾ ಮಾಷ್ಟ್ರು ಈ ವಿಚಾರ ತಿಳಿಸಿದಾಗ ಅವರ ಸಂತೋಷ ಮುಗಿಲುಮುಟ್ಟಿತು.

ಮುಂದೆ ಬಿ.ಎ ಪದವಿಯ ಕಾಲೇಜು ಸೇರಿದವನಿಗೆ ವಿದ್ಯಾರ್ಥಿ ವೇತನ ಮತ್ತು ವಿದ್ಯಾರ್ಥಿನಿಲಯವೇ ಆಸರೆಯಾಯಿತು. ಇವರ ವಿದ್ಯಾಭ್ಯಾಸ ಕುರಿತು ಕೆಲವರು "ಜಮೀನ್ದಾರರ ಮನೆಯಲ್ಲಿ ಜೀತಗಾರನಾಗಿ ನೀನ್ ದುಡಿ, ನಿನ್ನ ಇಬ್ಬರೂ ಮಕ್ಕಳು ಚೆಂದಾಗಿ ಓದ್ತಾವಂತ, ಸನ್ಮಾನ್ವ ಮಾಡ್ದರ್ರಂತೆ ಪೇಟೇಲೀ, ಒಳ್ಳೇದಾಗ್ಲಪ್ಪ" ಪ್ರಶಂಸಿದರು. ಇನ್ನೂ ಕೆಲವರು ಇದನ್ನು ಕಂಡು ಸಹಿಸದ ಜನ ಕರುಬಿದವರುಂಟು. ಈ ಸಂಗತಿ ತಿಳಿದ ಜಮೀನ್ದಾರ ದಂಪತಿಗಳು ನಮ್ಮಿಬ್ಬರ ಮಕ್ಕಳಲ್ಲಿ ಒಬ್ಬ ನಗರದಲ್ಲಿ ಉಪನ್ಯಾಸಕನಾಗಿದ್ದಾನೆ, ಮತ್ತೊಬ್ಬ ಓದ್ಲಿಲ್ಲ "ಈ ಜೀತ್ಗಾರ ಮಕ್ಳು ಬೇರೆ ಏನ್ ಓದಿದಬಾಕ್ದರಂತೆ, ಈ ಜಾತಿಯ ಮುಂಡೇವು ಓದ್ನಾರ್ದೆ, ಜೀತ ಮಾಡೋಕೆ ನಮ್ಮ ಹತ್ರನೇ ಬರ್ತಾರೆ" ತಮ್ಮಲ್ಲಿಯೇ ಅಸೂಯೆ ಪಟ್ಟುಕೊಂಡರು.

ಕಾಲ ಉರುಳಿದಂತೆ ಪದವಿ ಮುಗಿಸಿ, ಹಿರಿಯ ಸ್ನೇಹಿತರ ಸಲಹೆ, ವಿದ್ಯಾರ್ಥಿನಿಲಯ, ಸಾರ್ವಜನಿಕ ಗ್ರಂಥಾಲಯದ ಆಸರೆ ಪಡೆದಿದ್ದನು. ಅಚಾನಕ್ಕಾಗಿ ಅದೇ ನಗರದಲ್ಲಿ ಉಪನ್ಯಾಸಕನಾಗಿದ್ದ ಜಮೀನ್ದಾರನ ಮಗ ಸಾರ್ವಜನಿಕ ಗ್ರಂಥಾಲಯಕ್ಕೆ ಭೇಟಿ ಕೊಟ್ಟಾಗ ನೇರವಾಗಿ ಭೇಟಿಯಾದರು. "ನೀನು ನಮ್ಮ ಮನೆಯಲ್ಲಿ ಕೆಲಸ ಮಾಡುವರ ಮಗ ತಾನೆ" ಹೌದು ಯಜಮಾನ್ರೆ. "ನೀನು ನನ್ನ ತಮ್ಮ ಇದ್ದ ಹಾಗೆ, ಅಣ್ಣ ಎಂದೇ ಸಂಬೋಧಿಸು, ಏನ್ ಮಾಡ್ತಾ ಇದೀಯಪ್ಪ". ಪದವಿ ಮುಗೀತು ಚಿಕ್ಕೆಜಮಾನ್ರೆ ತಪ್ಪಾಯ್ತು... ಅಯೋ.. ಅ..ಅ..ಅಣ್ಣಾ" ಇದು ಸ್ಪರ್ಧಾತ್ಮಕಯುಗದ ಕಾರಣ ಚೆನ್ನಾಗಿ ಓದಬೇಕು, ನಿಮ್ಮ ಜನಾಂಗದವರು ಶಿಕ್ಷಣವಂತರಾದರೆ, ಸಮಾಜವ ಬದಲಾಯಿಸಬಹುದು. 'ವಿಶ್ವಜ್ಞಾನಿ ಡಾ. ಬಿ.ಆರ್. ಅಂಬೇಡ್ಕರ್' ಹೀಗಂದಿದ್ದಾರೆ "ಓದು, ಓದು, ಓದು, ಯಾಕೆಂದರೆ ಶತ್ರುಗಳು ನಿನ್ನ ಜ್ಞಾನಕ್ಕೆ ಮಾತ್ರ ಹೆದರುತ್ತಾರೆ" ಈ ಮಾತು ಅಕ್ಷರ ಸಹ ಸತ್ಯ. ಅಣ್ಣ ನಮ್ಮ ಶಾಲೆಯಲ್ಲಿ ಕೂಡ ಬರೆದಿದ್ದರು. ದ್ವಿತೀಯ ಪಿ.ಯು.ಸಿಯಲ್ಲಿ ಉತ್ತಮ ಶ್ರೇಣಿಯಲ್ಲಿ ತೇರ್ಗಡೆಯಾದಾಗ ಕಾಲೇಜಿನಲ್ಲಿ ಸನ್ಮಾನ ಮಾಡಿದ ಸಂದರ್ಭದಲ್ಲಿ ಸಂವಿಧಾನ ಶಿಲ್ಪಿ ಅಂಬೇಡ್ಕರ್ ಜೀವನ ಚರಿತ್ರೆ ಪುಸ್ತಕ ಕೊಟ್ಟಿದ್ದರು. ಅದರಲ್ಲಿ ನೀವು ಹೇಳಿದ ಅವರ ನುಡಿ ಉಲ್ಲೇಖವಾಗಿತ್ತು. ಪಿ.ಡಿ.ಓ ಹುದ್ದೆಗೆ ಅರ್ಜಿ ಹಾಕೆಂದು, ವಿಳಾಸ ಕಾರ್ಡು ಕೊಟ್ಟಿದಾಕ್ಷಣ ತಲೆತಗ್ಗಿಸಿ ಅಶ್ರುತರ್ಪಣಗೈದು "ಅಣ್ಣ.. ನಿಮ್ಮ ಅಭಿಮಾನಕ್ಕೆ ಚಿರಋಣಿ" ಹೇಳಿ ಇಬ್ಬರೂ ತೆರಳಿದರು. ಅಣ್ಣಾವ್ರು ಪುಸ್ತಕಗಳು ಮತ್ತು ಹಣದ ಸಹಾಯ ಮಾಡಿದರು. ಜಮೀನ್ದಾರರ ಶಿಕ್ಷೆಗೆ ಗುರಿಯಾಗಿರವ ತಂದೆ ತಾಯಿಯ ನೆನೆಸಿಕೊಂಡು ಕಣ್ಣೀರು ಹಾಕುತ್ತಾ, ಪಿ.ಡಿ.ಓ ಪರೀಕ್ಷೆಗೆ ತಯಾರಿ ನಡೆಸಿ, ಒಂದೊರ್ಷದೊಳಗೆ ಮೀಸಲಾತಿಯಲ್ಲಿ ಆಯ್ಕೆಯಾದನು.

ಗ್ರಾಮಪಂಚಾಯಿತಿಯಾಗಿದ್ದ ಸ್ವ ಗ್ರಾಮಕ್ಕೆ ಕೆಲಸಕ್ಕೆ ಸೇರುವ ಸಂಗತಿ, ಶಾಲೆಯ ಶಿಕ್ಷಕರಿಂದ ಎಲ್ಲಾ ಕಡೆ ಹಬ್ಬಿತು. ಶಿಕ್ಷಕರು ಈತನ ತಂದೆ ತಾಯಿಗಳನ್ನು ಭೇಟಿ ಮಾಡಿ "ನಿಮ್ಮ ಮಗನಿಗೆ ಮೀಸಲಾತಿಯ ಅಡಿಯಲ್ಲಿ ಪಿ.ಡಿ.ಓ ಅಧಿಕಾರಿಯಾಗಿ, ನಿಮ್ಮ ಗ್ರಾಮಕ್ಕೆ ಬರ್ತಾ ಇದಾರೆ", ಎಂಬ ಸಂಗತಿ ತಿಳಿದಾಕ್ಷಣ "ನಮ್ಮ ದೊರೆ ಅಂಬೇಡ್ಕರ ನನ್ನಪ್ಪ, ನಮ್ಮ ಜ್ಯಾತಿ ಬದುಕಿಸ್ತಾನಪ್ಪ, ಆ ಪುಣ್ಯಾತ್ಮನ್ನ ನೆನೆಯದೆ ಇದ್ರೆ. ದ್ಯಾವ್ರು ಒಪ್ಪನಾ", "ಮಾಯ್ಕಾರ ಮಾದಪ್ಪ, ನಮ್ಮ ಕಷ್ಟ, ಪರಿಹಾರ ಮಾಡ್ನಲ್ಲಪ್ಪ," ಎಂದು ಉದ್ಗಾರ ತೆಗೆದರು. ಅಲ್ಲಿದ್ದವರು ಸಹ ಮೂಕವಿಸ್ಮಿತರಾದರು.

ಕೆಲಸಕ್ಕೆ ಹಾಜರಾದ ನಂತರದ ದಿನಮಾನದಲ್ಲಿ ನಡೆದ ಸಂವಿಧಾನ ದಿನಾಚರಣೆಯ ವೇದಿಕೆಯಲ್ಲಿ ಜಗಜ್ಯೋತಿ ಬಸವೇಶ್ವರ ಮತ್ತು ವಿಶ್ವಜ್ಞಾನಿ ಡಾ. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ನಮಿಸಿ, "ಬ್ರಿಟೀಷರು ಭಾರತೀಯರನ್ನು ಗುಲಾಮರಾಗಿ, ಶೋಷಣೆ ಮಾಡಿದರು ಅನ್ನೋದಕ್ಕಿಂತ ಪ್ರಸ್ತುತ ಇಡೀ ದೇಶದಲ್ಲಿ ನಡೆಯುತ್ತಿರುವ ಅಸಮಾನತೆಯು ಇನ್ನೂ ಜೀವಂತವಾಗಿದೆ. ನಾನು ಹುಡುಗನಾಗಿದ್ದಾಗ, ಜಮೀನ್ದಾರರ ಮನೆಯಲ್ಲಿ ಬಸವೇಶ್ವರರ ಭಾವಚಿತ್ರ ಕಂಡಿದ್ದೆ. ಹನ್ನೆರಡನೇ ಶತಮಾನದಲ್ಲಿನ ಬಸವಾದಿ ಶರಣರ ವಚನಗಳು, ಮತ್ತು ಅನುಭವ ಮಂಟಪ, ಇಂದಿನ ಡಾ. ಅಂಬೇಡ್ಕರ್ ರ ಸಂವಿಧಾನ ಮತ್ತು ಸಂಸತ್ತಿನ ಕಾರ್ಯಕಲಾಪಗಳಲ್ಲಿ ಕಾಣಬಹುದಾಗಿದೆ. ನಮ್ಮ ದೇಶವು ಪ್ರಜಾಪ್ರಭುತ್ವ ರಾಷ್ಟ್ರ ಸಂವಿಧಾನದ ಆಶಯದಿಂದ ಅಭಿವೃದ್ಧಿಶೀಲ ರಾಷ್ಟ್ರಗಳ ಸಾಲಿನಲ್ಲಿ ಮುಂಚೂಣಿಯತ್ತ ಸಾಗುತ್ತಿದೆ! "ಭಾರತೀಯ ಸಂವಿಧಾನದ ಅನುಚ್ಛೇದ 23 ಮತ್ತು 24 ರಲ್ಲಿ ವಿವರಿಸಲಾಗಿರುವ ಶೋಷಣೆ ವಿರುದ್ಧ ಹಕ್ಕಿನ ಪ್ರಕಾರ ಒತ್ತಾಯ ಪೂರ್ವಕ ಜೀತ ಹಾಗೂ ಮಾನವ ಕಳ್ಳ ಸಾಗಾಣಿಕೆಯು, ಕಾನೂನಿನ ಅನ್ವಯ ಶಿಕ್ಷಾರ್ಹ ಅಪರಾಧವಾಗಿದೆ. ಭಾರತದ ಸಂಸತ್ತು ಜೀತ ಪದ್ಧತಿ ರದ್ಧತಿ ಕಾಯ್ದೆಯನ್ನು 1976ರಲ್ಲಿ ದೇಶದಾದ್ಯಂತ ಅನುಷ್ಠಾನಗೊಳಿಸಿದೆ". ಬಹುತ್ವದ ಭಾರತವನ್ನು 75 ವರ್ಷಗಳ ಕಾಲ ಮುನ್ನಡೆಸಿದ "ಬಾಬಾ ಸಾಹೇಬ ಡಾ.ಬಿ.ಆರ್.ಅಂಬೇಡ್ಕರ್" ವಿರಚಿತ ವಿಶ್ವಶ್ರೇಷ್ಠ ಸಂವಿಧಾನವಾಗಿದ್ದು, "ಸಮಾಜದಲ್ಲಿ ಮೇಲು–ಕೀಳು, ಸ್ಪೃಶ್ಯ–ಅಸ್ಪೃಶ್ಯ, ಬಡವ–ಬಲ್ಲಿದ ಎಂಬ ತಾರತಮ್ಯವು ಅಂದಿನಿಂದಲೂ ನಡೆದುಬಂದಿದ್ದು, ಇನ್ನೂ ಜೀವಂತವಾಗಿರುವುದು ನೋವಿನ ಸಂಗತಿ, ಭಾರತೀಯರಾದ ನಾವೆಲ್ಲರೂ ಇದರ ನಿವಾರಣೆಗೆ ಶ್ರಮಿಸೋಣ. ಸಂವಿಧಾನದ ಅಡಿಯಲ್ಲಿ ಶಿಕ್ಷಣ ಮತ್ತು ಆರ್ಥಿಕತೆಯ ಸಫಲತೆಯಿಂದಾಗಿ, ಸಮಾಜವು ಬದಲಾವಣೆಯ ಪಥಕ್ಕೆ ಸಾಗುತ್ತಾ ಬರುತ್ತಿದೆ". ನುಡಿದು, ಚಿಕ್ಕೆಜಮಾನರ ಮಾರ್ಗದರ್ಶನ ಹಾಗೂ ಸಹಾಯದಿಂದ ನಿಮ್ಮ ಮುಂದೆ

ನಿಂತಿದ್ದೇನೆ, ನಿಮ್ಮೆಲ್ಲರ ಸಹಕಾರ ಮತ್ತು ಆಶೀರ್ವಾದವ ಬಯಸುತ್ತೇನೆಂದು, ತಂದೆ ತಾಯಿ, ಚಿಕ್ಕೆಜಮಾನರು, ಜಮೀನ್ದಾರ ದಂಪತಿಗಳಿಗೂ ನಮಿಸಿ, ಸಭಿಕರಿಗೆ ವಂದಿಸಿದ ದೃಶ್ಯ, ನೆರೆದ ಗ್ರಾಮಸ್ಥರಿಗೆ ಅಚ್ಚರಿ ಮೂಡಿಸಿದ್ದು, ಅವಿಸ್ಮರಣೀಯ.

***

ಭುವನದ ಭಾಗ್ಯವಿದು

ಕುಸುಮ ಬಿ.ಎಂ.
ಸಹ ಪ್ರಾಧ್ಯಾಪಕರು
ಕನ್ನಡ ವಿಭಾಗ
ಸಕಾರಿ ಕಲಾ ಕಾಲೇಜು
ಅಂಬೇಡ್ಕರ್ ವೀಧಿ
ಬೆಂಗಳೂರು– 560001
kusumanagu10@gmail.com

ಪ್ರಮುಖ ಪದಗಳು

ಕನ್ನಡ ಸಾಹಿತ್ಯ, ಪ್ರಕೃತಿ, ಅಷ್ಟಾದಶವರ್ಣನೆ, ನವೋದಯ, ವರ್ತಮಾನ

ಭುವನದ ಸಿರಿಯು ಪರಿಸರದಲ್ಲಿದೆ. ಪರಿಸರವೇ ಪ್ರಧಾನವಾಗಿ ಭೂಮಿಯನ್ನು ಇತರ ಗ್ರಹಗಳಿಂದ ಬೇರ್ಪಡಿಸಿ ವಿಶೇಷವಾಗಿಸಿದೆ. ಭೂಮಿಯ ಮೇಲಿನ ನೀರು, ಗಾಳಿ, ಬೆಳಕು, ತಾಪಮಾನ ಮಣ್ಣಿನ ಗುಣ ಎಲ್ಲವೂ ಜೀವವಿಕಾಸಕ್ಕೆ ಅನುಕೂಲಕಾರಿಯಾಗಿ ಪರಿಣಮಿಸಿ ಮಿಲಿಯಾಂತರ ವರ್ಷಗಳಿಂದ ಇಲ್ಲಿ ಜೀವ ಸಂಕುಲ ನೆಲೆಸಿದೆ. ಹಾಗಾಗಿ ಪರಿಸರವೆಂದರೆ ಪ್ರಕೃತಿ ಮತ್ತು ಮಾನವ ನಿರ್ಮಿತವಾದುದು. ಪರಸ್ಪರ ಪೂರಕವಾಗಿರುವ ಇವು ಜೊತೆಜೊತೆಗೆ ಸಾಗುತ್ತವೆ ಮತ್ತು ಒಂದರಲ್ಲಿ ಆಗುವ ಬದಲಾವಣೆ ಇನ್ನೊಂದರ ಮೇಲೆ ಪರಿಣಾಮವನ್ನು ಬೀರುತ್ತದೆ. ಮಾನವಜೀವಿ ತಾನು ಗುಂಪುಗಳಲ್ಲಿ ನಾಗರೀಕತೆಗಳನ್ನು ಕಟ್ಟಿಕೊಂಡು, ಪ್ರಕೃತಿಯಿಂದ ಭಿನ್ನನಾಗುತ್ತಾ ತನ್ನನ್ನು ತಾನು ಸುಸಂಸ್ಕೃತನೆಂದು ಗುರುತಿಸಿಕೊಂಡ. ಈ ನೆಲೆಯಲ್ಲಿ ಮನುಷ್ಯ ಮತ್ತು ಪರಿಸರದ ಸಂಬಂಧ ಭಿನ್ನ ಸ್ವರೂಪವನ್ನು ಪಡೆಯಿತು. ಪರಿಸರದ ಭಾಗವಾದ ಪ್ರಾಣಿ–ಪಕ್ಷಿಗಳಿಗಿಂತ ಬದಲಾದ ನೆಲೆಯಲ್ಲಿ ಮನುಷ್ಯ ಪರಿಸರವನ್ನು ಕಾಣಲಾರಂಭಿಸಿದ.

ಕನ್ನಡ ಸಾಹಿತ್ಯದ ಆರಂಭದಿಂದಲೂ ಪ್ರಕೃತಿಯನ್ನು ಅಷ್ಟಾದಶವರ್ಣನೆಯ ಭಾಗವಾಗಿ ವರ್ಣಿಸಿದೆ. ಈ ವರ್ಣನೆಯಲ್ಲಿ

ಪ್ರಕೃತಿಯ ಸೌಮ್ಯ ಹಾಗೂ ರೌದ್ರ ವರ್ಣನೆ ಎರಡೂ ಕೂಡಿಕೊಂಡಿದೆ. ಕಾಲದಿಂದ ಕಾಲಕ್ಕೆ ಪರಿಸರ (ಪ್ರಕೃತಿ ನಿರ್ಮಿತ– ಮಾನವ ನಿರ್ಮಿತ) ಸಾಹಿತ್ಯದಲ್ಲಿ ಹೇಗೆ ವರ್ಣನೆಗೊಂಡಿದೆ ಎಂಬುದನ್ನು ಈ ಲೇಖನವು ವಿಶ್ಲೇಷಿಸುತ್ತದೆ.

ನೀರಿನ ಉಪಯೋಗವನ್ನೇ ಗಮನಿಸಿ, ಪ್ರಾಣಿ–ಪಕ್ಷಿ–ತರು–ಲತೆಗಳಿಗೆ ಅದು ಜೀವದಾಯಿನಿ. ಮನುಷ್ಯನಿಗಾದರೋ ಅದು ಪಾವನತೀರ್ಥ! ಅದಷ್ಟೇ ಅಲ್ಲ, ಮನುಷ್ಯನಿಗೆ ನೀರಿನ ಪ್ರಯೋಜನ ಹಲವು. ಹಾಗೆಯೇ ಮಣ್ಣನ್ನು ತಿಂದು ಮಣ್ಣನ್ನೇ ಉಗಿವ ಹುಳುವಿಗೆ ಭೂಮಿ ಕಾಣುವ ರೀತಿಗೂ ಮನುಷ್ಯನಿಗೆ ಭೂಮಿ ಕಾಣುವ ರೀತಿಗೂ ವ್ಯತ್ಯಾಸವಿದೆ. ಅಂತೆಯೇ ಪ್ರಾಣಿ– ಮನುಷ್ಯರ ಜೀವಿತೋದ್ದೇಶವು ಬೇರೆಯಾಗಿದೆ.

ಕನ್ನಡ ಸಾಹಿತ್ಯದ ಆರಂಭದಿಂದಲೂ ಪ್ರಕೃತಿಯನ್ನು ಅಷ್ಟಾದಶವರ್ಣನೆಯ ಭಾಗವಾಗಿ ವರ್ಣಿಸಲಾಗಿದೆ. ಈ ವರ್ಣನೆಯಲ್ಲಿ ಪ್ರಕೃತಿಯ ಸೌಮ್ಯ ಹಾಗೂ ರೌದ್ರ ವರ್ಣನೆ ಎರಡೂ ಕೂಡಿಕೊಂಡಿದೆ. ಕಾಲದಿಂದ ಕಾಲಕ್ಕೆ ಪರಿಸರ (ಪ್ರಕೃತಿ ನಿರ್ಮಿತ– ಮಾನವ ನಿರ್ಮಿತ) ಸಾಹಿತ್ಯದಲ್ಲಿ ಹೇಗೆ ವರ್ಣನೆಗೊಂಡಿದೆ ಎಂಬುದನ್ನು ಈ ಲೇಖನವು ವಿಶ್ಲೇಷಿಸುತ್ತದೆ.

ನವೋದಯದ ಪ್ರಮುಖ ಕವಿ ಶ್ರೀ ಕುವೆಂಪುರವರ ಶೂದ್ರತಪಸ್ವಿ ನಾಟಕದ ಆರಂಭದಲ್ಲಿ ಎದುರಾಗುವ ಶಂಬೂಕಾಶ್ರಮವು ಪ್ರಕೃತಿ–ಮನುಷ್ಯರ ಸಹಚರ್ಯೆಯನ್ನು ಚಿತ್ರಿಸುತ್ತದೆ. ವ್ಯಕ್ತಿಯ ಏಳಿಗೆಯಲ್ಲಿ ಜಾತಿಯ ವಿಪರೀತಕ್ಕೆ ಸಾಕ್ಷಿಯಾಗಿ ಪರಿಸರ ಇಲ್ಲಿ ವರ್ತಿಸುತ್ತದೆ. ಸಾವಿನ ಮುನ್ಸೂಚನೆಯು ಪ್ರಾಣಿಪಕ್ಷಿಗಳಿಗೆ ತಿಳಿದು ಅವು ವಿಚಲಿತವಾಗಿ ಕೂಗುವುದು, ವಾತಾವರಣ ಪ್ರಕ್ಷುಬ್ಧಗೊಳ್ಳುವುದು ಪರಿಸರದ ನಡುವಿನ ಸಂಬಂಧಗಳ ವರ್ತುಲವನ್ನು ಪರಿಚಯಿಸುತ್ತದೆ. ಒಂದೇ ಪರಿಸರದಲ್ಲಿ ಬದುಕುವ ಮನುಷ್ಯ ಮತ್ತು ಮೃಗ–ಖಗಗಳು, ಮರಗಿಡಬಳ್ಳಿಗಳು ನಡೆಸುವ ಸಹಬಾಳ್ವೆಯನ್ನು ನಾಟಕ ಚಿತ್ರಿಸುತ್ತದೆ.

ಒಂದು ವೃಕ್ಷವು ಚೇತನಾರೂಪಿಯಾಗಿ ಶೂದ್ರತಪಸ್ವಿ ನಾಟಕದಲ್ಲಿ ಕಂಡುಬರುತ್ತದೆ. ಪ್ರಕೃತಿಯ ಬಗೆಗಿನ ಈ ಭಾವವು ನವೋದಯದ ಸಾಮಾನ್ಯ ಲಕ್ಷಣವಾದರೂ ನಾಟಕದಲ್ಲಿ ಅದರ ಬಳಕೆಗೆ ಭಿನ್ನ ನೆಲೆಯಿದೆ. ಆಶ್ರಮದ ಶಾಂತಿಯ ಪಾಲಕನಾಗಿ ಗುರುತಿಸಿಕೊಳ್ಳುವ ವೃಕ್ಷಭೈರವ ತನ್ನ ಪರಿಸರ ರಕ್ಷಣೆಗೆ ಮುಂದಾಗುತ್ತಾನೆ. ಪರಿಸರದಲ್ಲಿ ಕಂಡುಬಂದ ಪ್ರಕ್ಷುಬ್ಧತೆಗೆ ಕಾರಣವನ್ನು ಪತ್ತೆಹಚ್ಚುತ್ತಾನೆ ಮತ್ತು ಅದನ್ನು ನಿಯಂತ್ರಿಸಿ, ನಿವಾರಿಸಲು ಪ್ರಯತ್ನಿಸುವ ಚೇತನವಾಗಿದ್ದಾನೆ. ಶಂಬೂಕಯೋಗಿಯ

ತಪಸ್ಸಿಗೆ ಅಡಚಣೆಯಾಗದಂತೆ ಕಾಯುವುದೇ ಅವನ ಈ ಪ್ರಯತ್ನಕ್ಕೆ ಕಾರಣವಾಗಿದೆ. "ಶಂಬೂಕಾಶ್ರಮವಿರುವ ಅರಣ್ಯದ ಬಹಿರ್ವಲಯದಲ್ಲಿ ಆಶ್ರಮದ ಮಹಾದ್ವಾರದಲ್ಲಿ ಕಾವಲು ನಿಂತಿರುವಂತಿದೆ ಒಂದು ಬೃಹದಾಕಾರದ ವಟತರು. ಶಾಂತಿಗೆ ತವರುವೀಡಾಗಿದ್ದ ಆ ವನವು, ನೋಡೆ ನೋಡೆ, ಕ್ಷುಬ್ದಶೀಲವಾಗುತ್ತದೆ. ಬಲ್ಗಾಳಿ ಬೀಸಿ, ಹಕ್ಕಿ ಚೀರಿಡುತ್ತವೆ. ಕೊಂಬೆಗೆ ಕೊಂಬೆ ಉಜ್ಜಿ ಆರ್ತಧ್ವನಿಯನ್ನು ಹೋಲುವ ಚೀತ್ಕೃತಿಗಳುಣ್ಮುತ್ತವೆ. ಮೃಗತತಿ ಗಾರಾಗಿ ದೆಸೆದೆಸೆಗೆ ಓಡುತ್ತವೆ. ದೃಷ್ಟಿಗೆ ಕೇಂದ್ರವಾಗಿ, ದೃಶ್ಯದ ಮುಂಭಾಗದಲ್ಲಿರುವ ಆ ಮಹಾ ವಟತರುವೂ ಕ್ಷೋಭೆಗೆ ಸಿಕ್ಕಿ ಅಸ್ಥಿರವಾಗುತ್ತದೆ. ಎಲೆ ಬಳಬಳನೆ ಉದುರುತ್ತವೆ. ಬಲ್ಗಾಳಿಗೆ ಧೂಳೆದ್ದು ಇದ್ದಕ್ಕಿದ್ದಂತೆ ವನವೆಲ್ಲವೂ ಮಸುಕಾಗುತ್ತದೆ. ವಟತರುವೂ ಮಂಜು ಮಂಜಾಗಿ, ಮಾಯವಾದಂತಾಗಿ, ಅದರ ಸ್ಥಾನದಲ್ಲಿ, ಒಯ್ಯೊಯ್ಯನೆ ಆ ಮರದನಿತೆ ಭೀಮಾಕಾರನಾದ ಒಬ್ಬ ವೃಕ್ಷಭೈರವನು ದೃಗ್ಗೋಚರವಾಗುತ್ತಾನೆ. ತರುಶಾಖಿಗಳಂತಿರುವ ಬಹುಸಂಖ್ಯೆಯ ತೋಳುಗಳಲ್ಲಿ ತ್ರಿಶೂಲಾಯುಧ ಪಂಕ್ತಿ ಸಾಲ್ಗೊಂಡು ಸೇನಾವ್ಯೂಹದಂತೆ ಭಯಂಕರವಾಗುತ್ತದೆ. ಕ್ರುದ್ಧನೆಂಬಂತೆ ಬದ್ಧಭ್ರುಕುಟಿಯಾಗಿ ಉರಿಗಣ್ಣನ್ನು ಸುತ್ತಲೂ ಹೊರಳಿಸಿ ನೋಡುತ್ತಾನೆ. ತನಗೆ ತಾನೆಂಬಂತೆ ಮೊಳಗುತ್ತಾನೆ."

ಶ್ರೀರಾಮನು ಕೂಡ "ತಪಸ್ವಿಯ ತಿರಸ್ಕೃತಿಗೆ ಮುನಿದ ಧರ್ಮಂ" ಎಂದು ಘಟನೆಯನ್ನು ಬಣ್ಣಿಸುತ್ತಾನೆ. ಶಂಭೂಕಾಶ್ರಮದ ದಿವ್ಯ ಶಾಂತಿಗೂ ಬೆರಗಾಗುತ್ತಾನೆ. 'ಯಶೋಧರಚರಿತೆ'ಯ ಚೈತ್ರಖಮತುವಿನ ವರ್ಣನೆಯೂ ಈ ನೆಲೆಯಿಂದ ಗಮನಾರ್ಹ. ಪ್ರಕೃತಿಯೂ ಮಾನವನ ಕೌರ್ಯವನ್ನು ಮೀರಿದ ರೀತಿಯಿಂದ ನಡೆದುಕೊಂಡು ಅವನನ್ನು ಮೂದಲಿಸುವ ವರ್ಣನೆಯಿದೆ. ಚೈತ್ರ ಮಾಸದಲ್ಲಿ ಬಂದಿರುವ 'ಮಾರಿಹಬ್ಬ'ವೇ ಈ ವಿರುದ್ಧ ಗುಣವನ್ನು ಬಿಂಬಿಸುತ್ತದೆ. ಚಿಗುರುವ ಚೈತ್ರದ ಗುಣದ ಮುಂದೆ ಬಲಿಗಾಗಿ ಕಾಯುವ ಮಾರಿದೇವಿಯ ಜಾತ್ರೆಯ ವಿರೋಧಾಭಾಸದಲ್ಲಿ ಪರಿಸರದ ವಿರೋಧಿಗುಣ ಒಂದಾಗಿ ಬಂದಿದೆ. ಆದರೆ ಅದು ಆ ಸಮಯದಲ್ಲಿ ಮೊದಲಾಗಿರುವ ಸಂಸ್ಕೃತಿಯನ್ನೇ ಅನುಕರಿಸುತ್ತದೆ.

ಸಿಸಿರಮನೆ ಪಿಡಿದು ಪರಕೆಗೆ
ಬಸಂತನಲವ್ಗೋದ ಮಾವಿನಡಿಮಂಚಿಕೆಯೊಳ್
ಕುಸುರಿದಜೆದಡಗಿನಂತೆವೊ
ಲೆಸೆದುವು ತದ್ವನದೊಳುದಿರ್ದ ಮುತ್ತದ ಮುಗುಳ್ಗಳ್

ಮಾವಿನಮರದ ಅಡಿಯಲ್ಲಿ ಚಿಗುರಿ ಬಿದ್ದಿದ್ದ ಮುತ್ತುಗದ ಹೂವುಗಳು ಆ

ಜಾತ್ರೆಯಲ್ಲಿ ರಾಶಿಯಾಕಿದ್ದ ಮಾಂಸದಂತಯೇ ಕಂಡುಬಂದ ಚಿತ್ರವನ್ನು ವರ್ಣಿಸುತ್ತದೆ.

ರಾಮನ ಪಾದಸ್ಪರ್ಶದಿಂದ ಉದ್ಧರಿತವಾಯಿತೆನ್ನುವ ಜೀವ ಅಹಲ್ಯೆ. ಈಕೆ ಪರಿಸರದಲ್ಲಿ ಪರಿಸರವಾಗಿ ಬದುಕಿದ ರೀತಿಯೊಂದು ಅಚ್ಚರಿ. ಮಿಥಿಳೆಯ ಮಾರ್ಗದಲ್ಲಿ ಇದ್ದ ಆಶ್ರಮವದು, ಈಗ ನಿರ್ಜನವಾಗಿದೆ. ಅಲ್ಲಿಗೆ ಬರುವ ರಾಮನಿಗೆ ಅಲ್ಲಿಯ ಶೋಕ ತಟ್ಟುವುದು ಕಾಳ್ಗಿಚ್ಚಿನಿಂದ ಬೆಂದು ಕರಿಕಾದ ಹೂವಿನ ಮೂಲಕ. ಇದರಿಂದ **'ಓ ಶಾಪಗ್ರಸ್ತವಿದೆ?'** ಎಂಬ ಉದ್ಗಾರ ಅವನಿಂದ ಹೊಮ್ಮಿಬರುತ್ತದೆ. ಅಹಲ್ಯೆಯ ನೋವು–ಸಂಕಟ ಅವನ ಅರಿವಿಗೆ ಸುಳಿಯುತ್ತದೆ. ಕಲ್ಲಾದ ಅಹಲ್ಯೆ ಅನುದಿನವೂ ನೊಂದ ಸ್ಥಳವದು. ರಾಮನ ಪಾದಸ್ಪರ್ಶದೊಡನೆ ಆಕೆಯ ಶಾಪವಿಮೋಚನೆ ಆಗುತ್ತದೆ. ಅದರೊಡನೆ ಅಲ್ಲಿಯ ಪರಿಸರವೂ ಬದಲಾಗುತ್ತದೆ.

ಗಾಳಿಯಾವುವಿವು ಹಬ್ಬಿಕೊಳ್ಳುತಿವೆ
ಯಾವ ವಾಸನೆಯು ಜೀವಕಂಟುತಿದೆ
ಯಾವ ಬೆಳಕು ಇದು ಹೊಳವುಗೊಳ್ಳುತಿದೆ
ಸೃಷ್ಟಿಯೆಲ್ಲ ಚೈತನ್ಯವಾಗಿ
ಮುಕ್ತಮನಸು ಓ ಮೈಯ ತಾಳುತಿದೆ
ಉಲಿಯಿರದ ಹಕ್ಕಿ
ದನಿಯಿರದ ಶೃಂಗ
ಶಕ್ತಿಗೊಳ್ಳುತಿವೆ, ದನಿಯನೆತ್ತರಿಸುತ್ತಿವೆ.
ನಿಂತನೆಲವೆ ಉಸಿರಾಡತೊಡಗಿ
ಪಾಪ ಮುಕ್ತ ಓ ಹಾಲು ಹಸುಳೆ ಮುಖ.
ಮಿಥಿಳೆಗಿಲ್ಲಿಂದಲೇ ಮಾರ್ಗವೇನು ಗುರು?

– ಜಿ.ಎಸ್. ಸಿದ್ದಲಿಂಗಯ್ಯ

ಪ್ರಕೃತಿ ಮತ್ತು ಮನುಷ್ಯ ಈ ಬಗೆಯ ಸಹಚರ್ಯೆ ವಿಸ್ಮಯವಾದುದು. ವಸುದೈವಕುಟುಂಬಕಂ ಎಂಬಂತೆ ಪರಿಸರದಲ್ಲಿ ಸಹಬಾಳ್ವೆಯ ನೆಲೆಯನ್ನು ಕನ್ನಡ ಸಾಹಿತ್ಯ ಮೊದಲಿನಿಂದಲೂ ಚಿತ್ರಿಸಿದೆ. ಆ ಪರಿಸರದಲ್ಲಿ ಗಿಡ, ಮರ, ಬಳ್ಳಿ, ಕಲ್ಲು, ಮನುಷ್ಯ, ಪ್ರಾಣಿ ಎಲ್ಲವೂ ಪರಸ್ಪರ ಸಂಬಂಧವಿರುವ ಭೂಪರಿಸರದ ಅಂಶಗಳು. ಒಂದರ ಕಷ್ಟಕ್ಕೆ ಒಂದು ಮರುಗುವ, ಪರಸ್ಪರರ ಸುಖದಲ್ಲಿ ನಲಿಯುವ ಇಂತಹ ಪ್ರಕೃತಿದರ್ಶನ ಕನ್ನಡ ಸಾಹಿತ್ಯಕ್ಕೆ ಅನನ್ಯವಾದುದು.

ಪರಿಸರನಾಶಕವಾದ ಮನುಷ್ಯನ ನಡವಳಿಕೆಗಳು ಕೂಡ ಕನ್ನಡ ಸಾಹಿತ್ಯ

ಚಿತ್ರಿಸಿದೆ. ಪಂಪ ಚಿತ್ರಿಸಿರುವ ಖಾಂಡವವನ ದಹನ ಅಧಿಕಾರದ ಅಹಂನ್ನು ಪ್ರಶ್ನಿಸುತ್ತದೆ. ಅರ್ಜುನನು ಅಗ್ನಿಗೆ ಕೊಟ್ಟ ಮಾತು ಉಳಿಸಿಕೊಳ್ಳಲು ನಡೆಸುವ ಮರಣಹೋಮವಾಗಿರುವ ಆ ವನ ಅನೇಕ ಪ್ರಾಣಿ–ಪಕ್ಷಿಗಳ ಆವಾಸಸ್ಥಾನ. ಅತಿ ವಿರಳ ಸಸ್ಯನಿಧಿಯ ನೆಲೆ. ಇದನ್ನು ಬಹು ಜತನದಿಂದ ಕಾಯುವವನಾಗಿ ಇಂದ್ರ ನಮ್ಮ ಗಮನ ಸೆಳೆಯುತ್ತಾನೆ. ಪರಿಸರಸ್ನೇಹಿ ಇಂದ್ರನ ಆತಂಕಗಳು ಎಷ್ಟು ಪ್ರತಿಷ್ಟೆಯಿಂದ ಕೂಡಿರುವವೋ ಅಷ್ಟೇ ಕಾಳಜಿಯಿಂದಲೂ ಕೂಡಿವೆ. ಅಲ್ಲಿ ತನ್ನ ತಂದೆ–ತಾಯಿ, ಬಂಧುಗಳನ್ನು ಕಳೆದುಕೊಂಡು ಮನುಷ್ಯರಂತೆಯೇ ಶಪಥ ಮಾಡುವ ತಕ್ಷಕನೆಂಬ ನಾಗನು ಅರ್ಜುನನ ಅಹಂಕಾರ ಮತ್ತು ಅಧಿಕಾರಗಳನ್ನು ಪ್ರಶ್ನಿಸುತ್ತಾನೆ. ಇದು ಪರಿಸರದ ಮೇಲೆ ಮನುಷ್ಯನ ದುರಾಕ್ರಮಣವನ್ನು ಪ್ರಶ್ನಿಸುತ್ತದೆ. ಕಲಿಯದವರಿಗಿಂತ ಕಲಿತವರಿಂದ ಆಗುವ ಅಪಾಯಗಳನ್ನು ಮನದಟ್ಟುಮಾಡುವಂತಿದೆ ಪಂಪನು ಚಿತ್ರಿಸುವ ಈ ಪ್ರಸಂಗ. ಈ ರೀತಿಯ ಮನುಷ್ಯನ ದುರಾಕ್ರಮಗಳಿಂದ ಎಲ್ಲರ ರಕ್ಷಣೆಯ ತವರಾಗಿದ್ದ ಕಾಡು ಇಂದು ಕಣ್ಮರೆಯಾಗಿದೆ.

ಪರಾಮರ್ಶನ ಗ್ರಂಥಗಳು

1. ಅಕ್ಷರ ಹೊಸ ಕಾವ್ಯ– ಸಂ. ಪಿ.ಲಂಕೇಶ್, ಪುಸ್ತಕ ಪ್ರಕಾಶನ, ಬೆಂಗಳೂರು, 1993.
2. ಜನ್ನ ಸಂಪುಟ– ಸಂ. ಸಿ.ಪಿ. ಕೃಷ್ಣಕುಮಾರ್, ಪ್ರಸಾರಾಂಗ, ಹಂಪಿ, 2017.
3. ಶೂದ್ರ ತಪಸ್ವಿ– ಕುವೆಂಪು, ಉದಯರವಿ ಪ್ರಕಾಶನ, ಮೈಸೂರು, 2018.

***

ಚಿತ್ರದುರ್ಗ ನಾಯಕರ ತೆರಿಗೆ ವ್ಯವಸ್ಥೆ : ಚಾರಿತ್ರಿಕ ನೋಟ

ಡಾ. ಕುಮಾರ ಎನ್.
ಉಪನ್ಯಾಸಕರು, ಇತಿಹಾಸ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಕುರುಗೋಡು, ಬಳ್ಳಾರಿ – 583116
kumaradasanayakanahatty@gmail.com

1

ಪ್ರಮುಖ ಪದಗಳು
ಕೃಷಿ, ತೆರಿಗೆ, ವ್ಯಾಪಾರ, ತೆರಿಗೆ ಸಂಗ್ರಹಣೆ, ನಾಯಕರು, ಸೀಮೆಗಳು, ಆಯಗಾರರು, ಪಾರುಪತ್ಯಗಾರ

ಮಾನವನು ಆರಂಭ ಕಾಲದಿಂದಲೂ ಆರ್ಥಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಬೆಳವಣಿಗೆ ಹೊಂದುತ್ತಾ ಬಂದಿರುವುದು ಚರಿತ್ರೆ ಪುಟಗಳನ್ನು ತೆರೆದು ನೋಡಿದಾಗ ತಿಳಿದುಬರುತ್ತದೆ. ಅಂದಿನಿಂದ ಇಂದಿನವರೆಗೂ ಮಾನವ ಸಾಗಿಬಂದ ದಾರಿಯಲ್ಲಿ ತೊಡಗಿಸಿಕೊಂಡ ಆರ್ಥಿಕ ಚಟುವಟಿಕೆ ಹಾಗೂ ಆ ಪ್ರಕ್ರಿಯೆಯಲ್ಲಿ ಸಹಭಾಗಿತ್ವವನ್ನು ಅನುಸರಿಸಿದ ಸಮುದಾಯಗಳ ಗುರುತಿಸಿಕೊಳ್ಳುವ ಪ್ರಕ್ರಿಯೆಯು ನಿರಂತರವಾಗಿ ಸಾಗಿಬಂದಿದೆ. ಈ ಗುರುತಿಸಿಕೊಳ್ಳುವ ಪ್ರಕ್ರಿಯೆಯನ್ನು ನಾವು ವ್ಯಾಪಾರ ಮತ್ತು ವಾಣಿಜ್ಯ ವ್ಯವಸ್ಥೆಯೆಂದು ಪರಿಗಣಿಸಿ ಅಧ್ಯಯನ ಮಾಡುವುದು ಸೂಕ್ತವೆನಿಸುತ್ತದೆ. ದಕ್ಷಿಣ ಭಾರತವು ಪ್ರಾಚೀನ ಕಾಲದಿಂದಲೂ ಬೃಹತ್ ರಾಜಮನೆತನಗಳ ಆಳ್ವಿಕೆಯನ್ನು ಕಂಡಿದೆ. ಅವುಗಳಲ್ಲಿ ವಿಜಯನಗರವು ಪ್ರಮುಖವಾಗಿದ್ದು, ಮಧ್ಯಕಾಲೀನ ಅರಸು ಮನೆತನಗಳಲ್ಲಿ ಅತ್ಯಂತ ಬಲಿಷ್ಟ ಮತ್ತು ಆರ್ಥಿಕವಾಗಿ ಶ್ರೀಮಂತ ರಾಜಮನೆತನವಾಗಿತ್ತೆಂಬುದು ಆಧಾರಗಳಿಂದ ದೃಢಪಟ್ಟಿದೆ. ತಾಳಿಕೋಟೆ ಕದನದ ನಂತರ ಅನೇಕ ಪಾಳೆಯುಗಾರರು ಸ್ವತಂತ್ರವಾಗಿ ಆಳ್ವಿಕೆ ನಡೆಸಲಾರಂಭಿಸಿದರು. ಅವರಲ್ಲಿ ಚಿತ್ರದುರ್ಗದ ನಾಯಕರೂ ಒಬ್ಬರಾಗಿದ್ದು, ತಮ್ಮದೇ ಆದ

ರಾಜಕೀಯ ಹಾಗೂ ಆರ್ಥಿಕ ನೀತಿಯನ್ನು ನಿರೂಪಿಸಲು ಪ್ರಯತ್ನಿಸಿದರು.

ಪ್ರಸ್ತುತ ಲೇಖನದಲ್ಲಿ ಕೃಷಿ ಮತ್ತು ವ್ಯಾಪಾರ ಸಂಬಂಧಗಳನ್ನು ಸಾಮಾಜಿಕ ಹಾಗೂ ಆರ್ಥಿಕ ಹಿನ್ನೆಲೆಯಿಂದ ಅಧ್ಯಯನ ಮಾಡಲಾಗಿದೆ. ಸಮಾಜದಲ್ಲಿ ವ್ಯಕ್ತಿ, ಸಮುದಾಯಗಳ ಬದುಕು, ಬದುಕಿಗೆ ಅನಿವಾರ್ಯವಾದ ವಿಷಯಗಳೊಂದಿಗಿನ ಕೃಷಿ ಉತ್ಪಾದನೆ, ನೀರಾವರಿ, ತೆರಿಗೆ, ಭೂ ಆಧಾರಿತ ಸಂಬಂಧಗಳು, ವ್ಯಾಪಾರ ವಹಿವಾಟು ಮುಂತಾದವು ಚರ್ಚೆಗೊಳಗಾದ ಮುಖ್ಯ ಅಂಶಗಳಾಗಿವೆ.

ನಮ್ಮ ದೇಶದಲ್ಲಿ ಈ 'ತೆರಿಗೆ ವ್ಯವಸ್ಥೆ' ವೇದ ಕಾಲದಿಂದಲೂ ಜಾರಿಯಲ್ಲಿದ್ದುದು ಕಂಡು ಬರುತ್ತದೆ. ಆದರೆ ಆ ಕಾಲದಲ್ಲಿ ಶುಲ್ಕ ಮುಂತಾದ ತೆರಿಗೆಗೆ ಸಂಬಂಧಿಸಿದ ಪದಗಳ ಬಳಕೆ ಕಂಡು ಬಂದರೂ ತೆರಿಗೆ ವೈವಿಧ್ಯತೆ ಇದ್ದ ಬಗ್ಗೆ ಉಲ್ಲೇಖಗಳು ದೊರೆಯುವುದಿಲ್ಲ. ಈ ಅರ್ಥವ್ಯವಸ್ಥೆ ಅಥವಾ ರಾಜ್ಯದ ಅರ್ಥವ್ಯವಸ್ಥೆಗೆ (ಸಾರ್ವಜನಿಕ ಆರ್ಥಿಕತೆ) ಒಂದು ನಿರ್ದಿಷ್ಟವಾದ ರೂಪ ದೊರೆತದ್ದು ಮೌರ್ಯರ ಕಾಲದಲ್ಲಿಯೇ. ಕೌಟಿಲ್ಯನ 'ಅರ್ಥಶಾಸ್ತ್ರದಂತಹ ಗ್ರಂಥಗಳು ಅರ್ಥ ವ್ಯವಸ್ಥೆಯ ಸ್ವರೂಪ ಮತ್ತು ಅದರ ಎರಡು ಅಂಗಗಳಾದ ತೆರಿಗೆ ಸಂಗ್ರಹಣೆ ಮತ್ತು ಸಾರ್ವಜನಿಕ ವೆಚ್ಚ ಬಗ್ಗೆ ವಿವರವಾದ ವಿವರಣೆ ನೀಡುತ್ತವೆ. ಹೀಗಾಗಿ ಮೌರ್ಯರ ಅರ್ಥವ್ಯವಸ್ಥೆ ಮುಂದೆ ಆಳಿದ ಎಲ್ಲ ಸಾಮ್ರಾಜ್ಯಗಳಿಗೂ ಒಂದು ಮಾದರಿಯಾಯಿತು. ಈ ರಾಜ ವಂಶಗಳು ಮೌರ್ಯರ ಅರ್ಥ ವ್ಯವಸ್ಥೆಯನ್ನೂ ತಮಗೆ ಅನುಕೂಲವಾಗುವಂತೆ ಅಲ್ಪ ಸ್ವಲ್ಪ ಮಾರ್ಪಾಡುಗಳೊಂದಿಗೆ ಬದಲಾಯಿಸಿಕೊಂಡರೂ ಹೆಚ್ಚಿನ ಅಂಶಗಳು ಹಾಗೆಯೇ ಮುಂದುವರೆದವು. ಮುಂದೆ ಕರ್ನಾಟಕದಲ್ಲಿ ಆಳಿದ ಕದಂಬರಿಂದ ಹಿಡಿದು ವಿಜಯನಗರದವರೆಗಿನ ರಾಜ ವಂಶಗಳು ಕೂಡ ತಮ್ಮ ಅರ್ಥವ್ಯವಸ್ಥೆಯಲ್ಲಿ ಈ ಅಂಶಗಳನ್ನು ಅಳವಡಿಸಿಕೊಂಡುದನ್ನು ಕಾಣಬಹುದು.[1] ವಿಜಯನಗರ ಕಾಲದಲ್ಲಿ ಸಾಮಂತರಾಗಿದ್ದು ನಂತರ ಸ್ವಾತಂತ್ರ ಆಡಳಿತವನ್ನು ಕಂಡುಕೊಂಡ ಪಾಳೆಯಗಾರರು ಅಥವಾ ನಾಯಕರು ಇದೇ ಮಾದರಿಯನ್ನು ಮುಂದುವರಿಸಿದ್ದನ್ನು ಕಾಣಬಹುದಾಗಿದೆ. ನಾಯಕರ ಕಾಲದಲ್ಲಿ ಜನತೆ ತಮ್ಮ ಜೀವನ ನಿರ್ವಹಣೆ ಮತ್ತು ಆರ್ಥಿಕ ಭದ್ರತೆಗೆ ಅಲ್ಲಿನ ನಿಸರ್ಗ ಸಂಪತ್ತಾದ ಭೂಮಿಯನ್ನು ಆಶ್ರಯಿಸುವುದು ಸ್ವಾಭಾವಿಕವಾದುದು. ಹೀಗಾಗಿಯೇ ದಾನ ವಸ್ತುಗಳಲ್ಲಿಯೂ ಕೂಡ ವ್ಯವಸಾಯ ಯೋಗ್ಯ ಭೂಮಿಗೆ ಪ್ರಥಮ ಪ್ರಾಶಸ್ತ್ಯ ಸಂದಿದ್ದು, ಕರ್ನಾಟಕದ ಮುಕ್ಕಾಲು ಪಾಲು ಶಾಸನಗಳು ಭೂದಾನಕ್ಕೆ ಸಂಬಂಧಿಸಿವೆ ಎನ್ನಬಹುದು.[2] ಭೂಮಿಯು ಸಂಪತ್ತಿನ ಮೂಲವಾದುದರಿಂದ ಮಾನವನ ಬಹುಪಾಲು ಆರ್ಥಿಕ ಜೀವನ ಅದನ್ನು ಅವಲಂಬಿಸಿದೆ. ಹೀಗಾಗಿ ಮಾನವ ಸಮಸ್ತ ದುಡಿಮೆ, ಉತ್ಪಾದನೆ, ಅಭಿವೃದ್ಧಿಗಳು ಆತ ಸ್ವತಂತ್ರವಾಗಿ ಹೊಂದಿರುವ

ಭೂ ಸ್ವಾಮ್ಯವನ್ನು ಅವಲಂಬಿಸಿದೆ. ಮಧ್ಯಕಾಲೀನ ಕುಟುಂಬಗಳ ಎಲ್ಲ ಬೇಡಿಕೆಗಳು ಪ್ರತ್ಯಕ್ಷವಾಗಿ ಮಾಲೀಕತ್ವವನ್ನು ಅವಲಂಬಿಸಿವೆ. ಈ ಕಾಲದ ಎಲ್ಲ ಅಂಶಗಳು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಪೂರೈಸುತ್ತಿದ್ದ ಭೂಮಿಯು ತನ್ನ ಸ್ಥಾನವನ್ನು ಭದ್ರಪಡಿಸುವುದರಿಂದ ಅದರ ಒಡೆತನದ ಅಂಶವು ಬಹಳಷ್ಟು ಗೌರವದ ಮಾತಾಗಿತ್ತೆಂಬುದನ್ನು ಅಲ್ಲಗಳೆಯುವಂತಿಲ್ಲ.

ಚಿತ್ರದುರ್ಗ ನಾಯಕರ ಕಾಲದಲ್ಲಿ ತಮ್ಮ ಆಡಳಿತ ಕೇಂದ್ರವನ್ನು ರಾಜ್ಯವೆಂದು ಕರೆದುಕೊಂಡಿದ್ದು ರಾಜ್ಯವನ್ನು ಅನೇಕ ಸೀಮೆಗಳನ್ನಾಗಿ ವಿಭಜಿಸಿದ್ದರು. ಅವುಗಳೆಂದರೆ ಬಿಳಿಜೋಡು, ಸೀಮೆ, ಚಿತ್ರಹಳ್ಳಿ ಸೀಮಿ, ಜಗಳೂರು ಸೀಮೆ, ಕೊಡಗನೂರು ಸೀಮೆ, ಜಾಜೂರು ಸೀಮೆ, ಹೊಳಲ್ಕೆರೆ ಸೀಮೆ,3 ಭರಮಸಾಗರ ಸೀಮೆ, ದುರ್ಗದ ಸೀಮೆ, ಹೊರಕೆರಿ ವಲಯದ ಸೀಮೆ[4] ಹಿರಿಯೂರು ಸೀಮೆ,[5] ಗುಂಟನೂರು ಸೀಮೆ,[6] ಗುಡ್ಡದ ಸೀಮೆ/ಗುಡ್ಡದ ನಾಡದ ನಾಡು ದುಂಮಿಯ ಸೀಮೆ ದೊಡ್ಡೇರಿ ಸೀಮೆ ನವಬಕುವಾದ ಸೀಮೆ ನುಲಿಯನೂರು ಸ್ಥಳ ಬಂನ್ನಿಕೋಡಸೀಮೆ ಬಗ್ಗನಡುವಿನ ಸ್ಥಳ ಬಂನ್ನಿಕೋಡಸೀಮೆ ಬಗ್ಗನಕುವಿನ ಸ್ಥಳ ಬಸ್ವಾಪಟ್ಟಣದ ಸೀಮೆ/ಸ್ಥಳ ಬಾಗೂರು ವಳಿತ/ಸೀಮೆ ಬುಕ್ಕಾಪಟ್ಟಣ ಸ್ಥಳ[7] ಬೂದಿಹಾಳು ಸೀಮೆ[8] ಬೇತೂರು ಸೀಮೆ[9] ಹೀಗೆ ಸೀಮೆ, ವೇಂಠ, ಸ್ಥಳ, ಜಾವದಿ, ಮಾಗಣಿ, ನಾಡು ಎಂಬ ಉಲ್ಲೇಖಗಳು ಇರುವ ಅನೇಕ ಶಾಸನಗಳು ಚಿತ್ರದುರ್ಗ ಪ್ರದೇಶದಲ್ಲಿ ಕಂಡುಬರುವುದರಿಂದ ಇವುಗಳು ಆಡಳಿತ ಅನುಕೂಲಕ್ಕಾಗಿ ಚಿಕ್ಕ ಚಿಕ್ಕ ಅಧಿಕಾರಿಗಳನ್ನು ನೇಮಿಸಿಕೊಂಡು ಅಧಿಕಾರವನ್ನು ನಡೆಸುತ್ತಿದ್ದರು ಎಂಬ ಅಂಶ ತಿಳಿದು ಬರುತ್ತದೆ.

ಆಡಳಿತ ಘಟಕವು ಸುಗಮವಾಗಿ ನಡೆಯಲು ಕೆಲವು ಹಳ್ಳಿಗಳನ್ನು ಸೇರಿಸಿ ನಾಡು, ಸ್ಥಳ ಸೀಮೆಗಳನ್ನು ವಿಭಾಗ ಮಾಡಿದ್ದು ನಾಯಕರ ಕಾಲದಲ್ಲಿ ಕಂಡುಬಂದಿದ್ದು ಚಿತ್ರದುರ್ಗ ನಾಡು/ಸೀಮೆ ಪ್ರದೇಶದಲ್ಲಿ ಕಂಡುಬರುವ ಗ್ರಾಮಗಳ ಪಟ್ಟಿ:

ಹೋಬಳಿಗಳು/ನಾಡು	ಗ್ರಾಮಗಳು	ಕೊಂಪೆಗಳು	ಒಟ್ಟು
1. ಚಿತ್ರದುರ್ಗ	2	8	10
2. ಕೆಳಕಟ್ಟೆ	12	4	16
3. ದ್ಯಾಮವ್ವನಹಳ್ಳಿ	1	4	3
4. ಸಿದ್ದವ್ವನಹಳ್ಳಿ	3	4	7
5. ಜಂಪನಾಯ್ಕನಹಳ್ಳಿ	3	4	7
6. ಬೆಳಗಟ್ಟ	9	1	10

7. ನನ್ನಿವಾಳ	7	3	10
8. ತುರುವನೂರು	9	4	13
9. ಭೀಮಸಮುದ್ರ	13	2	15
10. ಚಿತ್ರವಳ್ಳಿ	23	2	25[21]

ಈ ರೀತಿಯಾಗಿ ವಿಭಾಗಿಸುತ್ತಿದ್ದರು. ಗ್ರಾಮೀಣ ಅರ್ಥವ್ಯವಸ್ಥೆಯನ್ನು ನಿರ್ವಹಿಸಲು 18ನೇ ಶತಮಾನದ ಪೂರ್ವಾರ್ಧದಲ್ಲಿ ಬಾರಾಬಲೂತಿ[10] ಪದ್ಧತಿ ರೂಢಿಯಲ್ಲಿ ಇತ್ತು. ಈ ವಿಷಯ ಕುರಿತು ಚಿತ್ರದುರ್ಗ ಆಯಗಾರರ ನಿರ್ಣಯ ಗ್ರಂಥದಲ್ಲಿ ಮಾಹಿತಿ ಇದೆ.[11] ಇದರಂತೆ ಆ ಹನ್ನೆರಡು ಮಂದಿ ಅಧಿಕಾರಿಗಳು ಯಾರು ಎಂಬುದು ಇಲ್ಲಿ ತಿಳಿಯಬಹುದು.

* ಗೌಡ ಅಥವಾ ಗ್ರಾಮದ ಯಜಮಾನ
* ಶ್ಯಾನಬೋಗ ಅಥವಾ ಕರಣಿಕ
* ಪಂಚಾಂಗ ಬ್ರಾಹ್ಮಣ ಅಥವಾ ಜ್ಯೋತಿಷಿ
* ಕಬ್ಬಿಣದವನು
* ಅಕ್ಕಸಾಲಿಗ
* ಅಗಸ
* ನಾಯಿಂದ ಅಥವಾ ಕೆಲಸಿ (ಕ್ಷೌರಿಕ)
* ತೋಟಿ
* ತಳವಾರ
* ಕೆರೆನೀರಗುಂಟಿ(ಗಂಟಿ)
* ಬಡಗಿ
* ಅಳತೆಗಾರ[12]

ಇವರನ್ನು ಕೈವಾಡದವರು ಅಥವಾ ಅಡದೆಯವರು ಎಂಬುದಾಗಿಯೂ ಕರೆಯಲಾಗುತ್ತಿತ್ತು.[25] ಆಯಗಾರ ಪದ್ಧತಿಯ ಉದ್ದೇಶ ಗ್ರಾಮಗಳ ಸ್ವಾವಲಂಬನೆ ಹಾಗೂ ಗ್ರಾಮದ ಎಲ್ಲ ವರ್ಗಗಳ ವೃತ್ತಿಯನ್ನು ಒದಗಿಸುವುದಾಗಿತ್ತು. ಸ್ಥಳೀಯ ಪರಿಸ್ಥಿತಿಗೆ ಅನುಗುಣವಾಗಿ ಆಯಗಾರರ ಸಂಖ್ಯೆಯಲ್ಲಿ ವ್ಯತ್ಯಾಸಗಳು ಆಗುತ್ತಿದ್ದವು. ಅವರ ಸಂಖ್ಯೆ ಸಾಮಾನ್ಯವಾಗಿ ಹನ್ನೆರಡು ಇದ್ದುದಾಗಿ ಕಂಡುಬರುತ್ತದೆ. ಚಿತ್ರದುರ್ಗ ನಾಯಕ ಕಾಲದಲ್ಲಿಯೂ ಆಯಗಾರರ ಸಂಖ್ಯೆ ಹನ್ನೆರಡು ಇತ್ತೆಂದು ಸಮಕಾಲೀನ ಆಧಾರಗಳಿಂದ ತಿಳಿಯುತ್ತದೆ.

ಆಯಗಾರರಲ್ಲಿ ಗೌಡ, ಶ್ಯಾನುಭೋಗ, ನೀರಗಂಟಿ, ತೋಟಿ, ತಳವಾರ ಈ ಐವರು ಅಧಿಕಾರಿಗಳು ಸರಕಾರದಿಂದ ತಮ್ಮ ಸೇವೆಗೆ ಪ್ರತಿಫಲವಾಗಿ ಭೂಮಿಯನ್ನು, ರೈತನಿಂದ ನಿಗದಿತ ಪ್ರಮಾಣದ ಧಾನ್ಯಗಳನ್ನು ಪಡೆಯುತ್ತಿದ್ದರು.26 ಈ ವ್ಯವಸ್ಥೆಯಲ್ಲಿದ್ದ ಪ್ರತಿಯೊಬ್ಬ ಅಧಿಕಾರಿಯ ಸೇವೆಯನ್ನೂ ಪರಿಗಣಿಸಿ ಗ್ರಾಮದ ರೈತರು ತಮ್ಮ ಬೆಳೆಯ ಪ್ರಮಾಣಕ್ಕೆ ಅನುಗುಣವಾಗಿ ರಾಶಿ ಹಾಕಿದ ಧಾನ್ಯದಲ್ಲಿ ಕೆಲಭಾಗವನ್ನು ಆಯಗಾರರಿಗೆ ಸಂಭಾವನೆಯಾಗಿ ನೀಡಬೇಕಾಗಿತ್ತು. ಉದಾಹರಣೆಗೆ :

ಪ್ರತಿ 10 ಖಂಡುಗಕ್ಕೆ	ಸೇರುಗಳಲ್ಲಿ
ದೇವರಿಗೆ	10 ಸೇರು
ಬಿಕ್ಷಾರ್ಥಿ ಬ್ರಾಹ್ಮಣನಿಗೆ	20 ಸೇರು
ಜ್ಯೋತಿಷಿಗೆ	10 ಸೇರು
ಶ್ಯಾನುಬೋಗನಿಗೆ	20 ಸೇರು
ತಳವಾರನಿಗೆ	10 ಸೇರು
ನಾಯಿಂದನಿಗೆ	2 ಸೇರು
ಕುಂಬಾರನಿಗೆ	2 ಸೇರು
ಆಚಾರಿಗೆ	2 ಸೇರು
ಕಬ್ಬಿಣದವನಿಗೆ	2 ಸೇರು
ಅಗಸ	4 ಸೇರು
ಅಳತೆಗಾರ	8 ಸೇರು
ಗೌಡ	15 ಸೇರು[೧೩]

ಹೀಗೆ ಬಾರಾಬಲೂತಿ ಪದ್ದತಿಯಲ್ಲಿ ಸೇರಿದ್ದ ಎಲ್ಲ ಅಧಿಕಾರಿಗಳಿಗೆ ಸ್ಥಾನಗಳು ಸಾಮಾನ್ಯವಾಗಿ ವಂಶಪಾರಂಪರ್ಯವಾಗಿದ್ದವು. ಈ ವ್ಯವಸ್ಥೆಯಲ್ಲಿ ಗ್ರಾಮದ ಜನರ ಹಾಗೂ ರೈತರ ಪರಸ್ಪರ ಸಹಕಾರಗಳಿಂದ ಪರಸ್ಪರರ ಆರ್ಥಿಕ ಜೀವನ ಸುಗಮವಾಗಿ ನಡೆಯುವಂತಾಗಿತ್ತು. ಸರಕಾರದ ಈ ಎಲ್ಲ ಅಧಿಕಾರಿಗಳನ್ನು ಹೊಂದಿರುವ ಉದ್ದೇಶವು ತೆರಿಗೆಯನ್ನು ಸಂಗ್ರಹಿಸಲು ಎಂದು ಹೇಳಬಹುದು. ರಾಜ್ಯದ ಆದಾಯಗಳಲ್ಲಿ ತೆರಿಗೆಯು ಮೂಲಸ್ಥಾನ. ತೆರಿಗೆಯನ್ನು ಅನೇಕ ಮೂಲಗಳಿಂದ ಸಂಗ್ರಹಿಸಲಾಗುತ್ತಿತ್ತು. ಅವುಗಳೆಂದರೆ ಭೂಮಿಯ ಮೇಲಿನ ತೆರಿಗೆ, ಮನೆ ಮತ್ತು ಇತರ ವಸ್ತುಗಳ ಮೇಲಿನ ತೆರಿಗೆ, ಉದ್ಯೋಗ ತೆರಿಗೆ, ವಾಣಿಜ್ಯ ತೆರಿಗೆ, ಉದ್ದಿಮೆಗಳ ಮೇಲಿನ ತೆರಿಗೆ, ಆದಾಯ ತೆರಿಗೆ, ವ್ಯಾಪಾರಿಗಳ ಲಾಭದ ತೆರಿಗೆ, ಕಾರ್ಮಿಕರ ತೆರಿಗೆ ಮುಂತಾದವು. ಇದಲ್ಲದೆ

ರಾಜ್ಯಕ್ಕೆ ಹಣ ಸಂದಾಯವಾಗುತ್ತಿದ್ದ ಇತರ ಮೂಲಗಳೆಂದರೆ ಕಾಣಿಕೆಗಳು, ತಪ್ಪಿತಸ್ಥರ ಮೇಲಿನ ಶುಲ್ಕಗಳು ಇತ್ಯಾದಿ.[14] ಈ ಎಲ್ಲ ಆದಾಯಗಳಲ್ಲಿ ಅತಿ ಹೆಚ್ಚು ಆದಾಯ ತರುವುದು ಭೂ ಕಂದಾಯದ ಮೂಲಕ ಎಂಬುದು ತಿಳಿದು ಬರುತ್ತದೆ. ಚಿತ್ರದುರ್ಗದ ನಾಯಕರು ವಿಜಯನಗರ ಸಾಮ್ರಾಜ್ಯದ ಸಾಮಂತರಾಗಿದ್ದರು. ಅನಂತರ ಅವರು ಸ್ವತಂತ್ರರಾದರು. ಆದುದರಿಂದ ಚಿತ್ರದುರ್ಗ ನಾಯಕರು ವಿಜಯನಗರ ಸಾಮ್ರಾಜ್ಯದ ಭೂ ಕಂದಾಯ ವ್ಯವಸ್ಥೆಯನ್ನು ತಮ್ಮ ಪ್ರದೇಶದಲ್ಲಿ ಅನುಷ್ಠಾನಕ್ಕೆ ತಂದಿದ್ದರು.

ಶಾಸನಗಳಲ್ಲಿ ಹೇಳಿರುವಂತೆ ವಿಜಯನಗರ ಹಾಗೂ ನಂತರದ ಅರಸರು ಅವರು ಹಿಂದಿನವರ ಸಂಪ್ರದಾಯಗಳನ್ನು ಪಾಲಿಸುತ್ತಿದ್ದುದು ಅಲ್ಲದೆ ಹೊಸ ತತ್ವಗಳನ್ನು ಅನುಸರಿಸಿ ಸಮರ್ಪಕ ಆಡಳಿತವನ್ನು ನಡೆಸುತ್ತಿದ್ದರು. ಭೂ ಕಂದಾಯವನ್ನು ವಿಧಿಸುವಾಗ ಯಾವುದೇ ವ್ಯವಸ್ಥೆಯಲ್ಲಿ ಎರಡು ವಿಧಗಳನ್ನು ಕಾಣುತ್ತೇವೆ. ಕಂದಾಯ ನಿಗದಿ ಹಾಗೂ ಕಂದಾಯ ವಸೂಲಿಯೇ ಆ ಎರಡು ವಿಧಗಳು ವಿಜಯನಗರ ಕಾಲದ ಭೂಕಂದಾಯ ಪದ್ಧತಿಯು ನಾಯಕರ ಮೇಲೆ ವಿಶೇಷ ಪ್ರಭಾವ ಬೀರುವುದನ್ನು ಕಾಣಬಹುದು. ಮಣ್ಣಿನ ವರ್ಗ ಹಾಗೂ ಬೇಸಾಯದ ಪರಿಸ್ಥಿತಿಯನ್ನು ಆಧರಿಸಿ, ಕೃಷಿಕನು ಕೊಡಬೇಕಾದ ತೆರಿಗೆಯನ್ನು ನಿರ್ಣಯಿಸಬೇಕು ಎಂಬುದನ್ನು ವಿಜಯನಗರ ಕಾಲದಲ್ಲಿಯೂ ಅನುಸರಿಸುತ್ತಿದ್ದರು. ಈ ಕಾಲದಲ್ಲಿ ನಾಲ್ಕು ಬಗೆಯ ಬೇಸಾಯ ಪದ್ಧತಿಗಳು ಇದ್ದವು. ಅವುಗಳೆಂದರೆ ಕಾಡಾರಂಭ (ಒಣಬೇಸಾಯ) ನೀರಾರಂಬ (ಗದ್ದೆ ಬೇಸಾಯ) ತೋಟಾರಂಬ (ಬಗಾಯ್ತು) ಮತ್ತು ಕುಮರಿ (ಸ್ಥಳ ವರ್ಗಾಯಿಸುವ ಬೇಸಾಯ) ಶಾಸನಗಳಲ್ಲಿ ಇವುಗಳನ್ನು ಬೇರೆ ಬೇರೆ ರೀತಿ ಉಲ್ಲೇಖಿಸಲಾಗಿದೆ. ಇದರಿಂದಾಗಿ ವಿಭಿನ್ನ ದರಗಳಲ್ಲಿ ಕಂದಾಯವನ್ನು ನಿಗದಿಪಡಿಸುತ್ತಿದ್ದರೆಂದು ತಿಳಿಯಬಹುದು.[15] ಗದ್ದೆಯನ್ನು ಉತ್ತಮ, ಮಧ್ಯಮ, ಕನಿಷ್ಟ ಎಂಬುದಾಗಿ ವಿಭಾಗಿಸಲಾಗಿತ್ತು. 233 ಅಂದರೆ ಭೂಮಿ ಯಾವ ರೀತಿಯದು ಎಂಬುದರ ಮೇಲೆ ಕಂದಾಯ ನಿರ್ಧರಿಸಲಾಗುತ್ತಿತ್ತು. ಗದ್ದೆಯಲ್ಲಿ ಬೆಳೆಗಳಿಗನುಗುಣವಾಗಿ ಪ್ರತ್ಯೇಕ ತೆರಿಗೆ ಇರುತ್ತಿತ್ತು.[16] ತೋಟದ ಭೂಮಿಯಲ್ಲಿ ಉತ್ಪತ್ತಿಯನ್ನು ಗಣನೆಗೆ ತೆಗೆದುಕೊಂಡು ಕಂದಾಯ ನಿರ್ಧರಿಸಲಾಗುತ್ತಿತ್ತು.

ನಾಯಕರ ಕಾಲದಲ್ಲಿ ಮೂರು ಬಗೆಯ ತೆರಿಗೆ ನಿಗದಿ ನಡೆಯುತ್ತಿದ್ದಿತು. 1. ರೇಖಾ ನಿಗದಿ[17] 2. ಬೀಜಾವರಿ[18] ಅಥವಾ ಬಿತ್ತನೆಯ ಆಧಾರದ ನಿಗದಿ ಮತ್ತು 3. ಕೆಳದಿ ಶಿವಪ್ಪ ನಾಯಕನ ಶಿಸ್ತು ಮಾದರಿ ನಿಗದಿ.[19] ಕೆಳದಿ ರಾಜವಂಶದ ಅತ್ಯಂತ ಶ್ರೇಷ್ಠ ರಾಜನೆನಿಸಿದ ಇವನನ್ನು ಇಂದಿಗೂ ಭೂ ಕಂದಾಯ ನಿಗದಿಯನ್ನು ವ್ಯವಸ್ಥೆಗೊಳಿಸಿದವನು ಎಂದು ಹೆಸರಿಸಲಾಗುತ್ತದೆ. ಅವನ ಶಿಸ್ತು ನಿಗದಿ ಪದ್ಧತಿಯು

1660ರಿಂದ ಮೂವತ್ತೊಂಬತ್ತು ವರ್ಷ ಕಾಲ ಮುಂದುವರಿಯಿತು ಸಮಕಾಲೀನ ಅರಸರು ಆದ ನಾಯಕರು ಇಂತಹ ಪ್ರಯೋಗ ಮಾಡಿರುವುದು ಎಲ್ಲಿಯೂ ಕಂಡುಬಂದಿಲ್ಲ. ಆದರೆ ಇಳುವರಿಗೆ ತಕ್ಕಂತೆ 1/3 ಭಾಗದಷ್ಟು ತೆರಿಗೆ ಇತ್ತು. ಹಾಗೆಯೇ ಒಂದು ನೇಗಿಲಿಗೆ 12/1 ದುರ್ಗಿ ವರಹ ವಿದಿಸುತ್ತಿದ್ದರು.[20] ಭೂಮಿಯನ್ನು ಅಳತೆ ಮಾಡಿ ತೆರಿಗೆಯನ್ನು ವಿಧಿಸುವ ಅಧಿಕಾರಿಗೆ 'ಅಥವಾಣಿ ಪಾರುಪತ್ಯಗಾರ' ಎಂದು ಕರೆಯುತ್ತಿದ್ದರು.[21] ಇಲ್ಲಿ ಕಂದಾಯವನ್ನು ನಗದು ಮತ್ತು ಬೆಳೆಗಳನ್ನು ಸಂಗ್ರಹಿಸುವ ಪದ್ದತಿ ಇತ್ತು.[22] ಹೋಬಳಿ ಮಟ್ಟದಲ್ಲಿ ನಾಡಿಗ ಎಂಬ ಕಂದಾಯ ಅಧಿಕಾರಿ ಇದ್ದು, ಸಂಗ್ರಹಿಸಿದ ಧಾನ್ಯ ರೂಪದ ಕಂದಾಯವನ್ನು ಚಾವಡಿಗೆ ತಂದು ಒಪ್ಪಿಸುವ ಪದ್ಧತಿಗಳು ಇದ್ದವು.

ರಾಯ–ರೇಖಾ ಪದ್ದತಿಯೇ ಪ್ರಮುಖ ಭೂ ಅಳತೆ ಪದ್ಧತಿಯನ್ನು ವಿಜಯನಗರದ ಅರಸರು ಹಿಡಿದ ದಾರಿಯನ್ನೇ ಅನುಸರಿಸಿದರು ಎಂದು ಹೇಳಬಹುದು. ಕೊನೆಯವರೆಗೂ ಈ ಪದ್ದತಿಯನ್ನು ಅವರು ಮುಂದುವರಿಸಿದರು. ಆದರೆ ವಿಜಯನಗರದ ಅರಸರು ವಿಧಿಸಿದ್ದ ದರವನ್ನು ಸಾರಾಸಗಟಾಗಿ ಅವರು ಇಟ್ಟುಕೊಳ್ಳಲಿಲ್ಲ. ಅನೇಕ ಅಂಶಗಳನ್ನು ಅದಕ್ಕೆ ಕೂಡಿಸಿ ರೇಖಾ ನಿಗದಿಯನ್ನು ಹೆಚ್ಚಿಸಿದರು. ಅನೇಕ ಶಾಸನಗಳು ಇದನ್ನು ಸಮರ್ಥಿಸುತ್ತವೆ. ಇದರ ಹಿಂದಿನ ತೆರಿಗೆ ದರವನ್ನು ಶಾಸನಗಳಲ್ಲಿ ಪುರು ರೇಖಾ ಎಂದು ಕರೆದಿದೆ. ರೇಖಾ ನಿಗದಿಯಂತೆ 675 ಗದ್ಯಾಣಗಳನ್ನು ಮೂಲ ಕಂದಾಯವಾಗಿ ಪಾವತಿ ಮಾಡಬೇಕಾಗಿದ್ದು ಒಂದು ಹಳ್ಳಿಯ ಬಗೆಗೆ ಒಂದು ಶಾಸನವು ಹೇಳಿದೆ. ಈ ಮೂಲ ರೇಖಾ– ನಿಗದಿಗೆ ಬೀರದ (ಶಾಸನಗಳಲ್ಲಿ ಸಾಮಾನ್ಯವಾಗಿ ಉಕ್ತವಾಗಿದೆ), ದುರ್ಗದ ಭತ್ತ ಮೊದಲಾದ ಹೆಚ್ಚುವರಿಗಳು ಸೇರುತ್ತಿದ್ದವು. ಇದರಿಂದ ಹೊರಬರುವ ವಿಷಯವೇನೆಂದರೆ, ಅಲ್ಲಿ ರಾಯ ರೇಖಾ ಪದ್ದತಿಯ ತೆರಿಗೆ ನಿಗದಿಯು ಜಾರಿಯಲ್ಲಿದ್ದಿತೋ ಅಲ್ಲೆಲ್ಲ ಅದನ್ನು ಹಾಗೆಯೇ ಒಪ್ಪಿಕೊಂಡರು. ವಿವರಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸಲಿಲ್ಲ. ಹೆಚ್ಚಿನ ಮೇಲು ಸುಂಕಗಳನ್ನು ಹಾಕಿದರು.

ಕೆಳದಿ ನಾಯಕರಂತೆ ಚಿತ್ರದುರ್ಗದ ನಾಯಕರು ಬೀಜಾವರಿ ಪದ್ದತಿಯ ನಿಗದಿಯನ್ನು ಅನುಸರಿಸಿದರು. ಒಂದು ಜಮೀನಿಗೆ ಎಷ್ಟು ಬಿತ್ತನೆ ಬೇಕು ಎನ್ನುವುದರ ಆಧಾರದ ಮೇಲೆ ಕಂದಾಯ ನಿಗದಿಯನ್ನು ನಿರ್ಧರಿಸಲಾಗುತ್ತಿತ್ತು. ಜಮೀನನ್ನು ಅಳತೆ ಮಾಡುತ್ತಿರಲಿಲ್ಲ, ಆದರೆ ಅದರ ಸಾಮರ್ಥ್ಯವನ್ನು ಅಂದಾಜು ಮಾಡಲಾಗುತ್ತಿತ್ತು. ಅನೇಕ ಶಾಸನಗಳಲ್ಲಿ, ಜಮೀನಿನ ಬಿತ್ತನೆಯ ಸಾಮರ್ಥ್ಯವನ್ನು ವಸ್ತುರೂಪದ

ತೆರಿಗೆಯನ್ನು ಉಲ್ಲೇಖಿಸಲಾಗಿದೆ. ಆ ಮೇಲೆ ಅದನ್ನು ನಗದುರೂಪಕ್ಕೆ ಪರಿವರ್ತಿಸಲಾಗುತ್ತಿತ್ತು. ಒಂದು ಖಂಡುಗ ಧಾನ್ಯದ ಮಾರುಕಟ್ಟೆಯ ಬೆಲೆಯನ್ನು ಸೂಚಿಸುತ್ತಿದ್ದರು. ಒಂದು ಶಾಸನದಲ್ಲಿ ಉಕ್ತವಾಗಿರುವಂತೆ, ೨.೫ ಖಂಡುಗ ಭತ್ತದ ಬಿತ್ತನೆ ಸಾಮರ್ಥ್ಯವಿದ್ದ ಒಂದು ಗದ್ದೆಗೆ ೧೫ ಖಂಡುಗ ಭತ್ತವನ್ನು ಕಂದಾಯವಾಗಿ ಪಾವತಿ ಮಾಡಲಾಗುತ್ತಿತ್ತು. ಅದರ ಮೌಲ್ಯ ೧.೫ವರಹ ಆಗಿತ್ತು. ಇನ್ನೊಂದು ಶಾಸನವು ಹೀಗೆ ದಾಖಲಿಸುತ್ತದೆ. ೫ ಖಂಡುಗದ ಭತ್ತದ ಗದ್ದೆಗಳು ಕಂದಾಯವಾಗಿ ೯ ವರಹಗಳನ್ನು ಸಲ್ಲಿಸುತ್ತಿತ್ತು. ಅಂದಿನ ಮಾರುಕಟ್ಟೆ ಬೆಲೆ ಖಂಡುಗಕ್ಕೆ ೨ ವರಹ ಮತ್ತು ೩ ಹಣದಂತೆ 4 ವರಹ ಮತ್ತು 4 ಹಣಗಳನ್ನು ಕಂದಾಯವಾಗಿ ಪಾವತಿ ಮಾಡುತ್ತಿದ್ದಿತೆಂದು ಅದೇ ಶಾಸನವು ಹೇಳುತ್ತದೆ.[೨೩] ಇದರಿಂದ ನಾವು ನಿರ್ಣಯಿಸಬಹುದಾದುದೇನೆಂದರೆ, ಚಿತ್ರದುರ್ಗದ ನಾಯಕರು ಮಾರುಕಟ್ಟೆಯ ಬೆಲೆಯ ಏರಿಳಿತಗಳನ್ನು ಗಮನದಲ್ಲಿ ಇಟ್ಟುಕೊಂಡು ಅದಕ್ಕೆ ಹೊಂದಿಕೆಯಾಗುವಂತೆ ತಮ್ಮ ಕಂದಾಯ ನೀತಿಯನ್ನು ನಿರ್ವಹಿಸುತ್ತಿದ್ದರು. ಹೀಗೆ ಅವರು ಯಾವಾಗಲೂ ನ್ಯಾಯಸಮ್ಮತವಾದ ರೀತಿಯಲ್ಲಿ ಕಂದಾಯವನ್ನು ವಸೂಲಿ ಮಾಡುತ್ತಿದ್ದರು.

ಭೂಮಿಯ ಅಳತೆಗಾಗಿ ತನ್ನ ದೇಹದ ಎತ್ತರವನ್ನು (ಕೋಲಿಗೆ ಗುರುತಿಸುವುದರ ಮೂಲಕ) ಕೈಗಳನ್ನು, ಧ್ವನಿಯನ್ನು (ಕೂಗಳತೆ), ಪಾದ(ಅಡಿ) ಮತ್ತು ಹೆಜ್ಜೆಗಳನ್ನು ಬಳಸುತ್ತಿದ್ದರು.[24] ನಾಯಕರ ಕಾಲದಲ್ಲಿ ಉಲ್ಲೇಖವಿರುವ ಒಂದು ಅಳತೆ ಮಾಪನವು ಮಾನವ ಬಲಗಾಲಿನ ಆರಂಭದಿಂದ ಎಡಗಾಲಿನ ಅರ್ಧ ಪಾದದವರೆಗಿನ ಭೂಮಿಯನ್ನು 18 ಬಾರಿ ಅಳೆದರೆ ಅದು 'ಮೆತ್ತರು' ಎಂದು ಕರೆಯುತ್ತಿದ್ದರು.[25] ಜೊತೆಯಲ್ಲಿ ಕೃಷಿ ಭೂಮಿಯನ್ನು ಗುರುತಿಸಲು ಎತ್ತುಗಳು ಒಂದು ದಿನದಲ್ಲಿ ಬಿತ್ತಬಹುದಾದ ಭೂಮಿಯನ್ನು, ಒಂದು ಸೇರು/ಕೊಳಗ ಬೀಜವನ್ನು ಬಿತ್ತಬಹುದಾದ ಭೂಮಿಯನ್ನು ಅಥವಾ 1 ಬುಟ್ಟಿ ಬೀಜವನ್ನು ಬಿತ್ತಲು ಬೇಕಾದ ಭೂಮಿಯನ್ನು ಒಂದು ಅಳತೆಯ ಘಟಕವಾಗಿ ಬಳಸಿರುವುದನ್ನು ಕಾಣಬಹುದು. ಇವುಗಳ ಜೊತೆಯಲ್ಲಿ ತೂಕ ಅಳತೆಗಳಾಗಿ ಅವಶ್ಯಕವಿದ್ದ ತಕ್ಕಡಿಗಳನ್ನು (ದಂಡಿಗೆಗಳನ್ನು) ಲಭ್ಯವಿದ್ದ ಮರದ ಕೋಲಿನಿಂದ ತಯಾರಿಸಿಕೊಂಡು ತೂಗಲು ಅವಶ್ಯಕವಿದ್ದ ತೂಕದ ಬೊಟ್ಟುಗಳಿಗಾಗಿ ನಿತ್ಯ ಉಪಯೋಗಿಸುತ್ತಿದ್ದ ಧಾನ್ಯಗಳಾದ ಅಕ್ಕಿ, ಉದ್ದು, ಸಾಸುವೆ, ಹೆಸರು, ಶೇಂಗಾ, ಗೋಧಿ, ಹತ್ತಿ, ಕಾಳುಗಳನ್ನು ಬಳಸಿಕೊಂಡರು. ಅಲ್ಲದೆ ಎಲ್ಲ ಭಾಗಗಳಲ್ಲಿ ದೊರೆಯುತ್ತಿದ್ದ ಗುಲಗಂಜಿ, ಕಳಂಜ, ವಾಲ್ ಮುಂತಾದ ಬೀಜಗಳನ್ನು ಅವಶ್ಯಕತೆಗೆ ತಕ್ಕಂತೆ ತೂಕದ ಮೂಲ ಮಾನವಾಗಿ (ಘಟಕ) ಬಳಸಿಕೊಂಡರು.

ಹೆಚ್ಚಿನ ತೂಕಗಳಿಗಾಗಿ ನದಿ/ಹೊಳೆಯಲ್ಲಿನ ಕಲ್ಲುಗಳನ್ನು ಇನ್ನು ಹೆಚ್ಚಿನ ತೂಕಕ್ಕೆ ಬೆಟ್ಟಗಳಲ್ಲಿ ದೊರೆಯುತ್ತಿದ್ದ ದೊಡ್ಡ ಕಲ್ಲುಗಳನ್ನು ಉಪಯೋಗಿಸಿರುವುದು ಕೆಲವೊಂದು ವಿರಳ ಸಮಯಗಳಲ್ಲಿ ಲೋಹದ ಬೊಟ್ಟು ಮತ್ತು ತಕ್ಕಡಿಗಳನ್ನು ತಯಾರಿಸಿಕೊಂಡು ಬಳಸಿರುವುದು ಕಂಡುಬರುತ್ತದೆ.

ಈ ಬೆಳವಣಿಗೆಗೆ ಮಾನವನು ತೆಗೆದುಕೊಂಡ ಸಮಯ ಅತಿ ದೀರ್ಘವಾದರೂ ಅವನು ಇವುಗಳನ್ನು ಬೆಳೆಸಿದ ರೀತಿಯನ್ನು ನಾವು ಮೆಚ್ಚಲೇಬೇಕು. ಆಧುನಿಕತೆ ಬೆಳೆದಂತೆ 18ನೇ ಶತಮಾನದಲ್ಲಿ ಆದ ಕೈಗಾರಿಕಾ ಕ್ರಾಂತಿಯ ನಂತರ ಅದುವರೆಗೂ ಸಂಪ್ರದಾಯಿಕವಾಗಿದ್ದ ತೂಕ, ಅಳತೆಗಳನ್ನು ವಿಜ್ಞಾನ ಮತ್ತು ತಂತ್ರಜ್ಞಾನದೊಂದಿಗೆ ಅವುಗಳ ಮೂಲಮಾನವನ್ನು ವೈಜ್ಞಾನಿಕವಾಗಿ ಗುರುತಿಸಿ, ತೂಕ ಅಳತೆ ಯಂತ್ರಗಳನ್ನು ತಯಾರಿಸಿಕೊಂಡು ಬಳಸುತ್ತಿರುವುದನ್ನು ನೋಡುತ್ತೇವೆ.[26] ಆಧುನಿಕ ಯುಗದಲ್ಲಿ ನಾಯಕರ ಆಡಳಿತ ಅವಧಿ ಇರುವುದರಿಂದ ಅವರು ಬಳಸುತ್ತಿದ್ದ ಅಳತೆಯ ಮಾನದಂಡಗಳನ್ನು ಈ ಕೆಳಗಿನಂತೆ ಗುರುತಿಸಬಹುದಾಗಿದೆ.

1 ಖಂಡುಗ	=	4 ಪಂಚಕ
1 ಪಂಚಕ	=	5 ಕೊಳಗ
1 ಕೊಳಗ	=	4 ಬಳ್ಳ
1 ಬಳ್ಳ	=	4 ಮಾನ
1 ಮಾನ	=	4 ಸೊಲಿಗೆ
1 ಸೊಲಿಗೆ	=	4 ಗಿದ್ದಿಗೆ
1 ಭಾರ	=	20 ತೊಲ
1 ತೊಲ	=	5 ಬೀಸಗೆ
1 ಬೀಸಗೆ	=	20 ಪಲ
1 ಪಲ	=	4 ಕರ್ಷ
1 ಕರ್ಷ	=	4 ಸುವರ್ಣ

1800ರಲ್ಲಿ ಬ್ರಿಟಿಶ್ ಅಧಿಕಾರಿಯಾದ ಬುಕಾನನ್ ಅಳತೆಯ ಮಾನದದ ಬಗ್ಗೆ

1 ಸೇರು	=	0.6067 ಪೌಂಡ್
5 ಸೇರು	=	1 ಪಂಚೇರು– 3.0335 ಪೌಂಡ್
4 ಪಂಚೇರು	=	1 ಮಣ– 24.2680 ಪೌಂಡ್
20 ಮಣ	=	1 ಖಂಡುಗ–485.3600 ಪೌಂಡ್

ಎಂಬುದಾಗಿ ತಿಳಿಸಿದ್ದಾನೆ. ನಾಯಕರ ಕಾಲದಲ್ಲಿ ಭೂಮಿಯ ಫಲವತ್ತತೆಗೆ

ಅನುಗುಣವಾಗಿ 1/3, 1/5, 1/6, 1/8 ಮತ್ತು 1/12 ಮುಂತಾದ ವಿಧಗಳಲ್ಲಿ ತೆರಿಗೆಯನ್ನು ವಿಧಿಸುತ್ತಿದ್ದರು. ಬರಡು ಅಥವಾ ಬಂಜರು ಭೂಮಿಗಳನ್ನು ಹಾಗೂ ಗುಡ್ಡ ಗಾಡು, ಅರಣ್ಯ ಪ್ರದೇಶಗಳನ್ನು ಕೃಷಿ ಯೋಗ್ಯ ಭೂಮಿಯನ್ನಾಗಿ ಪರಿವರ್ತಿಸಿ ಕೃಷಿಕರಿಗೆ ಕೆಲವು ವರ್ಷಗಳವರಿಗೆ ತೆರಿಗೆ ವಿನಾಯಿತಿಯೊಂದಿಗೆ ನೀಡಲಾಗುತ್ತಿತ್ತು. ಈ ಕೃಷಿ ಭೂಮಿಗಳು ಹೆಚ್ಚು ಮಾನವನ ಶ್ರಮವನ್ನು ಅವಲಂಬಿಸುತ್ತಿದ್ದವು. ಕೃಷಿಕನಿಗೆ ಇಂಥ ಭೂಮಿಗಳಲ್ಲಿ ಲಾಭಕ್ಕಿಂತ ನಷ್ಟವೇ ಹೆಚ್ಚಿನದಾಗಿತ್ತು. ಆದರೆ ಬೊಕ್ಕಸಕ್ಕೆ ಇದು ಲಾಭದಾಯಕವಾಗಿತ್ತು.

ಭೂ ತೆರಿಗೆ ಅಷ್ಟೇ ಅಲ್ಲದೇ ಕುಶಲಕರ್ಮಿಗಳ ಮೇಲಿನ ತೆರಿಗೆಯೂ ರಾಜ್ಯದ ಬೊಕ್ಕಸಕ್ಕೆ ಹೆಚ್ಚಿನ ಆದಾಯವನ್ನು ತರುತ್ತಿತ್ತು. ಕುಶಲಕರ್ಮಿಗಳ ಮೇಲೆ ವಿಧಿಸುತ್ತಿದ್ದ ವಿವಿಧ ತೆರಿಗೆಗಳ ಕುರಿತು ಅನೇಕ ಶಾಸನಗಳಲ್ಲಿ ಉಲ್ಲೇಖಗಳು ಸಿಗುತ್ತವೆ. ಬಡಗಿ, ಕಮ್ಮಾರ, ಅಕ್ಕಸಾಲಿಗ, ಕಂಚುಕಾರ(ಗಾರ) ಮತ್ತು ಶಿಲ್ಪಿ ಎಂಬ ಐದು ವಿಧವಾದ ಕೆಲಸಗಾರರನ್ನು ಒಟ್ಟಿಗೆ ಸೇರಿಸಿ ಪಂಚಾಳರು, ಪಂಚಕಾರುಕರು, ವಿಶ್ವಕರ್ಮರು, ಓಜರು ಮುಂತಾಗಿ ಹೆಸರಿಸಲಾಗಿದೆ. ಇವರೆಲ್ಲರಿಗೂ ಸಮಾನವಾಗಿ ಸೇರಿಸಿ ವಿಧಿಸುತ್ತಿದ್ದ ವೃತ್ತಿ ತೆರಿಗೆಯನ್ನು ಪಂಚಾಳ ತೆರಿಗೆ, ಪಂಚಕಾರುಕದೆರೆ, ವೋಜದೆರೆ, ಪಂಚಕಾರುಕ ವೆಡಿಕೆ ಮುಂತಾದ ಹೆಸರಿನಿಂದ ಕರೆಯಲಾಗಿದೆ. ದೇವಸ್ಥಾನಗಳಲ್ಲಿ ಗುತ್ತಿಗೆ ಕೆಲಸಗಾರರಾಗಿ ಕೆಲಸ ಮಾಡುತ್ತಿದ್ದ ಪಂಚಕಾಯಕದವರಿಂದ ಗುತ್ತಿಗೆ ಹಣವನ್ನು ಮತ್ತು ಸಂಬಳವನ್ನು ಇಡಿಯಾಗಿ ದೇವರಿಗಾಗಿ ವಸೂಲಿ ಮಾಡಿಕೊಡಬೇಕು ಎನ್ನುವ ತೀರ್ಮಾನವು ಇತ್ತು. ಪಂಚಕಾರು ಮತ್ತು ಕಾರುಕದೆರೆ ಎಂಬ ತೆರಿಗೆಗಳನ್ನು ಬಡಗಿಗಳು ಮತ್ತು ಲೋಹಕಾರರುಗಳೇ ಮೊದಲಾದ ಕಿರು ಕಲಾಕಾರರ ಮೇಲೆ ಹಾಕಲಾಗುತ್ತಿತ್ತು. ಹಾಗೂ ಕಲಾಕಾರರ ಮೇಲೆ ವಿಧಿಸುತ್ತಿದದ ತೆರಿಗೆಯನ್ನು ಕಾರುಕದೆರೆ ಅಥವಾ ಕಾರುಕಸೇವೆ ಎಂಬುದಾಗಿ ಕರೆಯಲಾಗುತ್ತಿತ್ತು.

ಇಷ್ಟೇ ಅಲ್ಲದೇ ದೇವಾಲಯಗಳಲ್ಲಿ ಕೆಲಸ ಮಾಡುತ್ತಿದ್ದ ದೇವಸೇವಕಿಯರು ಸೂಳೆದೆರೆ ಎನ್ನುವ ತೆರಿಗೆಯನ್ನು ಕೊಡಬೇಕಾಗಿತ್ತು. ಈ ತೆರಿಗೆಯನ್ನು ದೇವಾಲಯಗಳಿಗೆ ಬಿಟ್ಟುಕೊಡಲಾಗುತ್ತಿತ್ತು. ಇದರಿಂದಾಗಿ ಇದೊಂದು ಆದಾಯವನ್ನು ತರುವ ವೃತ್ತಿಯಾಗಿತ್ತು ಎನ್ನುವುದು ತಿಳಿದುಬರುತ್ತದೆ. ದೇವಸೇವಕಿಯರಿಗೆ ಮನೆ, ದ್ರವ್ಯಗಳು ದಾನವಾಗಿ ನೀಡಲಾಗುತ್ತಿತ್ತು. ಅವುಗಳ ಮೇಲೆ ತೆರಿಗೆಯನ್ನು ವಿಧಿಸುತ್ತಿದ್ದರು. ಕ್ರಿ.ಶ.15–16ನೇ ಶತಮಾನದಲ್ಲಿ ಈ ರೀತಿಯಾದ ವಿವಿಧ ತೆರಿಗೆಗಳ ಉಲ್ಲೇಖಗಳು ಶಾಸನಗಳು

ಮತ್ತು ಸಾಹಿತ್ಯ ಕೃತಿಗಳಲ್ಲಿ ಅಪಾರ ಸಂಖ್ಯೆಯಲ್ಲಿ ಸಿಗುತ್ತವೆ. ಈ ತೆರಿಗೆಗಳು ಸಮಾಜದ ಎಲ್ಲ ವರ್ಗಗಳ ಮೇಲೂ ಹೇರಲ್ಪಟ್ಟಿದ್ದವು. ಆದರೆ ತೆರಿಗೆಗಳ ಸ್ವರೂಪ ಮತ್ತು ಪ್ರಮಾಣದಲ್ಲಿ ವ್ಯತ್ಯಾಸಗಳಿರುತ್ತಿದ್ದವು. ಅಧ್ಯಯನದ ಅವಧಿಯಲ್ಲಿ ಪ್ರಚಲಿತವಿದ್ದ ಕೆಲವೊಂದು ತೆರಿಗೆಗಳು ಈ ಕೆಳಗಿನಂತಿವೆ.

ಸಿದ್ದಾಯ	:	ಫಲವತ್ತಾದ ಭೂಮಿಯ ಮೇಲೆ ಹಾಕುತ್ತಿದ್ದ ತೆರಿಗೆ
ಮನೆದೆರೆ	:	ಮನೆಯ ಮೇಲೆ ಹಾಕುತ್ತಿದ್ದ ತೆರಿಗೆ
ವಡ್ಡರಾವುಳ	:	ವ್ಯಾಪಾರ ಸಾಮಗ್ರಿಗಳ ಮೇಲಿನ ಸುಂಕ
ಒಳಸುಂಕ	:	ಆಮದು ವಸ್ತುಗಳ ಮೇಲಿನ ಸುಂಕ
ಹೊರಸುಂಕ	:	ರಫ್ತು ಮೇಲಿನ ಸುಂಕ
ತಳರಸುಂಕ	:	ವ್ಯಾಪಾರಿಗಳು ತಳವಾರನಿಗೆ ಕೊಡಬೇಕಾದ ಸುಂಕ
ಬಂಡಿದೆರೆ	:	ಎತ್ತಿನ ಬಂಡಿ, ಕುದುರೆ ಮುಂತಾದ ಬಂಡಿಗಳ ಮೇಲಿನ ಸುಂಕ
		ಪಂಚಾಳ ತೆರಿಗೆ,
ಪಂಚಕಾರುಕದೆರೆ	:	ಕುಶಲಕರ್ಮಿಗಳ ವೃತ್ತಿ ತೆರಿಗೆ
ಬಡಗಿ ದೆರೆ	:	ಬಡಗಿಗಳ ಮೇಲೆ ವಿಧಿಸುತ್ತಿದ್ದ ತೆರಿಗೆ
ಕಬ್ಬುಣದೆರೆ	:	ಕಮ್ಮಾರ ಸುಂಕ, ಕುಲುಮೆದೆರೆ, ಕಮ್ಮಾರರ ಮೇಲೆ ವಿಧಿಸುತ್ತಿದ್ದ ತೆರಿಗೆ
		ಅಕ್ಕಸಾಲಿಯಾಯ,
ಸುವರ್ಣಾಯ	:	ಅಕ್ಕಸಾಲಿಗರ ಮೇಲೆ ವಿಧಿಸುತ್ತಿದ್ದ ತೆರಿಗೆ
		ಅಡೆಕಲುವಣ,
ಅಚ್ಚಿನ ಕಮ್ಮಟದೆರೆ	:	ಅಕ್ಕಸಾಲಿಗರು ಮತ್ತು ಕಮ್ಮಾರರು ವಸ್ತುಗಳ ಉತ್ಪಾದನೆಗೆ ಬಳಸುತ್ತಿದ್ದ
		ಉಪಕರಣಗಳ ಮೇಲಿನ ತೆರಿಗೆ
ಗಾಣದೆರೆ	:	ಗಾಣದ ಮೇಲಿನ ತೆರಿಗೆ
ಮಗ್ಗದೆರೆ	:	ನೇಕಾರರ ಮೇಲಿನ ತೆರಿಗೆ
ಆಲೆದೆರೆ	:	ಬೆಲ್ಲದ ಮೇಲಿನ ತೆರಿಗೆ
ಲವಣಾಯ	:	ಉಪ್ಪು ತಯಾರಿಕೆಯ ಮೇಲಿನ ತೆರಿಗೆ
ಕರ್ಬುಣ ಸುಂಕ	:	ಕಬ್ಬಿಣದ ಮೇಲಿನ ಸುಂಕ
ಕಳ್ಳವಳ್ಳಿಗೆ	:	ಕಳ್ಳರ ಮೇಲೆ ಹಾಕುತ್ತಿದ್ದ ದಂಡ

ಸೂಳೆದೆರೆ	:	ವೇಶ್ಯೆಯರ ಮೇಲೆ ಹಾರುತ್ತಿದ್ದ ತೆರಿಗೆ
ಕುರುಂಬದೆರೆ	:	ಕುರುಬರ ಮೇಲೆ ಹಾಕುತ್ತಿದ್ದ ತೆರಿಗೆ
ಕತ್ತರಿ ವಣ	:	ಚಿಪ್ಪಿಗರ ಮೇಲೆ ಹಾಕುತ್ತಿದ್ದ ತೆರಿಗೆ
ಅಳಿವಸತಾಯ	:	ಸೈನಿಕರ ವಸತಿಗಳ ಮೇಲೆ ಹಾಕುತ್ತಿದ್ದ ತೆರಿಗೆ
ಊರುಟ್ಟಿಗೆ	:	ಸಾರ್ವಜನಿಕ ಕೆಲಸಗಳ ತೆರಿಗೆ
ಒಸಗೆ	:	ಹಬ್ಬಕ್ಕೆಂದು ವಿಧಿಸುತ್ತಿದ್ದ ತೆರಿಗೆ
ಅಟ್ಟದೆರೆ	:	ಅಟ್ಟ (ಮಹಡಿ)ವನ್ನು ಹೊಂದಿದ್ದಕ್ಕೆ ತೆರಿಗೆ
ಅರುವಣ	:	ಮಾನ್ಯ ಮಾಡಿದ ಭೂಮಿಗಳ ಮೇಲಿನ ತೆರಿಗೆ
ತುಪ್ಪದೆರೆ	:	ತುಪ್ಪದ ಮೇಲಿನ ತೆರಿಗೆ
ತಿಪ್ಪೆಸುಂಕ	:	ತಿಪ್ಪೆಗಳ ಮೇಲಿನ ಸುಂಕ
ಬಳಂಬೆಯ ತೆರೆ	:	ಒಣವೆಗಳ ಮೇಲಿನ ತೆರಿಗೆ
ಬಿಟ್ಟ ಬೆಸ	:	ದೈಹಿಕ ಶ್ರಮಕ್ಕೆ ವಿಧಿಸುತ್ತಿದ್ದ ತೆರಿಗೆ
ಬಿಲ್ಕೊಡೆ	:	ಪ್ರಾಣಿಗಳ ಮೇಲೆ ಸಾಮಾನು ಸಾಗಿಸುವುದರ ಮೇಲಿನ ತೆರಿಗೆ
ಮದುವೆದೆರೆ	:	ಮದುವೆಗಳ ಮೇಲಿನ ಸುಂಕ
ಹಾಲಾವು	:	ಹಾಲು ಕೂಡುತ್ತಿದ್ದ ಹಸುವಿನ ಮೇಲಿನ ಸುಂಕ
ಹೊಲೆದೆರೆ	:	ಹೊಲೆಯರ ಮೇಲೆ ವಿಧಿಸುತ್ತಿದ್ದ ತೆರಿಗೆ
ದೇವಿದೆರೆ	:	ರಾಣಿ ಹಳ್ಳಿಗೆ ಬಂದಾಗ ಕೊಡಬೇಕಾದ ತೆರಿಗೆ
ಕುಮಾರಗದ್ಯಾಣ	:	ಯುವರಾಜನು ಊರಿಗೆ ಬಂದಾಗ ಕೊಡಬೇಕಾದ ತೆರಿಗೆ
ಕಾಣಿಕೆ	:	ಹಿರಿಯ ಅಧಿಕಾರಿಗಳು ಊರಿಗೆ ಬಂದಾಗ ಕೊಡುವ ತೆರಿಗೆ
ಭತ್ತಾಯ	:	ಭತ್ತದ ಮೇಲಿನ ತೆರಿಗೆ
ಪನ್ನೆಯ	:	ವಿಳ್ಳೆದೆಲೆ ಬಳ್ಳಿಗಳ ಮೇಲಿನ ತೆರಿಗೆ
ಆನೆ ಸೇಸ	:	ರಾಜರ ಆನೆಗಳ ಮೇಲಿನ ತೆರಿಗೆ
ಆಡುದೆರೆ	:	ಆಡುಗಳ ಮೇಲಿನ ತೆರಿಗೆ
ಕುರಿದೆರೆ	:	ಕುರಿಗಳ ಮೇಲಿನ ತೆರಿಗೆ
ಪೆರ್ಜಂಕ	:	ಹೇರುಗಳ ಮೇಲೆ ಹಾಕುತ್ತಿದ್ದ ತೆರಿಗೆ

ಮನ್ನೇಯ : ಅಧೀನರಾಜನಿಗೆ ಪೋಷಕನಾದ ತೆರಿಗೆ

ಕೆರೆ : ನೀರಾವರಿ ಮೇಲಿನ ತೆರಿಗೆ ಅಂಗಡಿ ಆಯ,

ಅಂಗಡಿದೆರೆ : ಖಾಯಂ ಅಂಗಡಿಯ ಮೇಲಿನ ತೆರಿಗೆ ಸಂತೆ, ಸುಂಕ,

ಸಂತೆಯ ಆಯ : ಸಂತೆಗೆ ಬರುವ ವಸ್ತುಗಳ ಮೇಲಿನ ಸುಂಕ ಕೀಳ್ವಟ್ಟೆ ಸುಂಕ,

ಮೇಲ್ವಟ್ಟೆ ಸುಂಕ : ಸಾರಿಗೆ ತೆರಿಗೆ

ಸೆಟ್ಟಿದೆರೆ, ಸೆಟ್ಟಿವಣ : ವರ್ತಕರ ಮೇಲಿನ ತೆರಿಗೆ

ನೆಲಮೆಟ್ಟು : ಕುದುರೆ ಅಥವಾ ಬೇರೆ ಪ್ರಾಣಿ ಕಟ್ಟುವ ಸ್ಥಳದ ಮೇಲಿನ ಸುಂಕ.

ಅತಿಯಾದ ತೆರಿಗೆಯನ್ನು 'ಸಂಗ್ರಹಿಸುವಲ್ಲಿ' ಗ್ರಾಮೀಣ ಗಣ್ಯರು ಯಶಸ್ವಿಯಾದರು. ತೆರಿಗೆಯನ್ನು ವಿರೋಧಿಸಿ ಇಲ್ಲವೇ ನಿರಾಕರಿಸಿ ನಿಲ್ಲುವಷ್ಟು ಸಾಮರ್ಥ್ಯ ಹಳ್ಳಿಗರಿಗೆ ಇರಲಿಲ್ಲ. ಆ ಕುರಿತು ಹೆಚ್ಚಿನ ದಾಖಲೆಗಳೂ ಸಿಗುವುದಿಲ್ಲ. ಭೂಮಾಲೀಕರ ವಿರುದ್ಧ ರೈತರು ಅಸಮಾಧಾನ ಹೊಂದುವುದು ಸಹಜ. ಏಕೆಂದರೆ ತೆರಿಗೆಯನ್ನು ಪಾವತಿಸಿದರೂ ಭೂಮಿಯ ಮೇಲಿನ ಸಂಪೂರ್ಣ ಹಕ್ಕು ಅವರಿಗೆ ಲಭ್ಯವಾಗಿರಲಿಲ್ಲ. ಅಧಿಕಾರಿಗಳು ಹಳ್ಳಿಗರನ್ನು ಹಿಂಸಿಸುತ್ತಿದ್ದರು ಎನ್ನುವುದಕ್ಕೆ ನಾಯಕರ ಸಮಕಾಲೀನ ದಾಖಲೆಯೊಂದು ಸುರಪುರ ಸಂಸ್ಥಾನದಲ್ಲಿ ದೊರಕಿದೆ. ರಾಜಮಾನ್ ರಾಜಶ್ರೀ ರಂಗಣ್ಣ ತಂದೆ ರಾಮಣ್ಣ ಧರಿ ಜಾಲಹಳ್ಳಿ ಸಾ.ಶೋರಾಪುರ ಇವರ ಹತ್ತಿರ ಪೀರಸಾ ತಂದೆ ಖಡೇಸಾ ನದಾಫ್ ಸಾ ಅರಕೇರಿ ಜಹಗೀರ ಸಾ.ಶೋರಾಪುರ ಇವರು ತಮ್ಮ ಅವಸರ ನಿಮಿತ್ಯ ಪ್ರತಿ ರೂಪಾಯಿಗೆ ಹನ್ನೆರಡು ಸೇರು ಜೋಳದಂತೆ ಪ್ರಮಾಣ ಮಾಡಿ ಆರು ರೂಪಾಯಿ ನಾಲ್ಕಾಣೆಯನ್ನು ಸಾಲವಾಗಿ ಪಡೆಯುತ್ತಾನೆ. ಈ ಪತ್ರದಲ್ಲಿ ಮಾಡಿಕೊಂಡಿರುವ ಕರಾರಿನಂತೆ ಸನ್ ಫಸಲಿ 1332 ಚೈತ್ರಶುದ್ಧ 15ರ ನಂತರ ಪೀರಸಾ ಅವರು ಸ್ವಂತ ಊರಾದ ಅರಕೇರಿಯಲ್ಲಿ ಎಪ್ಪತ್ತೈದು ಸೇರು ಜೋಳವನ್ನು ತಾವು ನೀಡಿದ ಕಾಗದ ಪತ್ರವನ್ನು ವಾಪಸ್ಸು ಪಡೆಯಬಹುದಾಗಿದೆ ಎಂದು ಬರೆಯಲಾಗಿದೆ. ಒಂದು ವೇಳೆ ಒಪ್ಪಂದ ಮಾಡಿಕೊಂಡಿರುವಂತೆ ಎಪ್ಪತ್ತೈದು ಸೇರು ಜೋಳವನ್ನು ಕೊಡಲು ಆಗದೇ ಹೋದರೆ ಆರು ರೂಪಾಯಿ ನಾಲ್ಕಾಣೆ ಬದಲಾಗಿ ಹನ್ನೆರಡು ರೂಪಾಯಿ ಎಂಟಾಣೆ ಕೊಡಬೇಕಾಗುತ್ತದೆ ಎಂದೂ ಬರೆಯಲಾಗಿದೆ. ಶಕ 1844 ದುಂದುಬಿ ನಾಮ ಸಂವತ್ಸರ ಮಿತಿ ಪುಷ್ಯವದ್ಯ 1332 ಸನ್‌ಫಸಲಿಯಂದು ಶಾಂತಪ್ಪ ಸಾ.ಅರಕೇರಿ ಜಹಾಗೀರ ಇವರು ಪ್ರಸ್ತುತ ಸ್ಟ್ಯಾಂಪ್ ಬರೆದಿರುವರು.

ಭೀಮಪ್ಪ ತಂದೆ ವೀರಪ್ಪ ನಾಯಕೋಡಿ ಸಾ ಮಜಕೂರ ಇವರು ಈ ಸಾಲ ಪತ್ರಕ್ಕೆ ಸಾಕ್ಷಿಯಾಗಿದ್ದಾರೆ.

ಒಟ್ಟಾರೆಯಾಗಿ ಹೇಳುವುದಾದರೆ ವಿವಿಧ ರಾಜವಂಶಗಳು ತಮ್ಮದೇ ತೆರಿಗೆ ದರವನ್ನು ನಿಗದಿಪಡಿಸಿಕೊಂಡಿದ್ದರು. ಉದಾ: ಚಿತ್ರದುರ್ಗ ನಾಯಕರು ವಿಜಯನಗರದ ಅರಸ ರೇಖಾ ಪದ್ಧತಿಯನ್ನು ರೂಪಿಸಿಕೊಂಡರೆ, ಕೆಳದಿಯ ಅರಸರು ಶಿಸ್ತು ಪದ್ದತಿಯನ್ನು ವಿಕಾಸಪಡಿಸಿದರು. ಸರಕಾರದ ಅಗತ್ಯಗಳು, ಕೃಷಿಯೇತರ ವರ್ಗಗಳು ಮತ್ತು ಮೂಲ ಬೆಳೆಗಾರರು ಇವರುಗಳ ಅಗತ್ಯಗಳನ್ನು ಪೂರೈಸಿದ ಮೇಲೂ ಚಿತ್ರದುರ್ಗ ನಾಯಕರ ಕಾಲದಲ್ಲಿ ಕೃಷಿ ಉತ್ಪನ್ನಗಳನ್ನು ಹೆಚ್ಚುವರಿಯಾಗಿಯೇ ಉತ್ಪಾದಿಸಲಾಗುತ್ತಿತ್ತು. ಅದನ್ನು ವ್ಯಾಪಾರದ ಮೂಲಕ ವಿನಿಯೋಗ ಮಾಡಲಾಗುತ್ತಿತ್ತು.

ಕೊನೆ ಟಿಪ್ಪಣಿಗಳು

1. ವಿಠ್ಠಲ ಡಿ.ಪೋತದಾರ, ಪ್ರಾಚೀನ ಕರ್ನಾಟಕದಲ್ಲಿ ಪ್ರಚಲಿತವಿದ್ದ ಕೆಲವು ತೆರಿಗೆಗಳು ಒಂದು ಅಧ್ಯಯನ, ಇತಿಹಾಸ ದರ್ಶನ ಸಂಪುಟ–8, (1993), ಪು.ಸಂ.114
2. ಕೊಪ್ಪಾ ಎಸ್.ಕೆ., ತರ್ದವಾಡಿ ನಾಡು ಒಂದು ಅಧ್ಯಯನ, ಶಾಸನಗಳನ್ನಾಧರಿಸಿ (ಕ್ರಿ.ಶ.850–1300), ಪ್ರತಿಭಾ ಪ್ರಕಾಶನ, 1990, ಪು.ಸಂ.203
3. ರಾಜಶೇಖರಪ್ಪ ಬಿ., ದುರ್ಗ ಶೋಧನ, ಪು.ಸಂ.115
4. ಎ.ಕ.XI, ದಾವಣಗೆರೆ–164
5. ಲಕ್ಷ್ಮಣ್ ತೆಲಗಾವಿ, ಚಂದ್ರವಳ್ಳಿ, ಪೂರ್ವೋಕ್ತ, ಪು.ಸಂ.80
6. ಎ.ಕ.XI, ಚಿತ್ರದುರ್ಗ–45
7. ಅದೇ, ದಾವಣಗೆರೆ, ಬೇತೂರು, 3, 13
8. ಫೇಡ್ರಿಕ್ ಚಾಲ್ಮರ್ಸ್, ಎರಿಪೋರ್ಟ್ ಆನ್ ದಿ ಚಿತ್ರದುರ್ಗ ಡಿವಿಜನ್ ಆಫ್ ಮೈಸೂರು, ಪು.ಸಂ.5
9. ಗ್ರಾಮೀಣ ಅರ್ಥ ವ್ಯವಸ್ಥೆಯಲ್ಲಿ 12 ಜನ ಆಯಗಾರರು ಇದ್ದರು. ಇದನ್ನು 'ಬಲವತ್' ಇದು ಕೃಷಿಯ ತೆರಿಗೆಯನ್ನು ಸಂಗ್ರಹಿಸುವ ವೃತ್ತಿ ವ್ಯವಸ್ಥೆಯನ್ನು ಸೂಚಿಸುತ್ತದೆ ಎಂದು ಇರ್ಫಾನ್ ಹಬೀಬ್ ಅವರ ಅಗ್ರೇರಿಯನ್ ರಿಲೇಷನ್ಸ್ ಆ್ಯಂಡ್ ಎಕಾನಮಿ ಇನ್ ಎ ರೀಜನ್ ಆಫ್ ಮಧ್ಯಪ್ರದೇಶ, ಇಂಡಿಯನ್ ಹಿಸ್ಟ್ರೀ ಕಾಂಗ್ರೇಸ್ ಪ್ರೊಸ್ಸೀಡಿಂಗ್ಸ್, ಸಂಪುಟ, ನಂ–3, ಸೆಪ್ಟೆಂಬರ್ 1967
10. ದೇಶಪಾಂಡೆ ಹೆಚ್.ಟಿ., ಪೂರ್ವೋಕ್ತ, ಪು.ಸಂ.246

11. ಮೆಕೆಂಜಿ ಮ್ಯಾನ್ಯುಸ್ಕ್ರಿಪಟ್ಸ್, ನಂ–354, ಟಿ.ಎನ್.ಎ., 1843, ಬುಕಾನನ್ ಪೂರ್ವೋಕ್ತ, ಪು.ಸಂ.268, 270

12. ಸೂರ್ಯನಾಥ ಯು.ಕಾಮತ್, ಕರ್ನಾಟಕ ರಾಜ್ಯ ಗೆಜೆಟಿಯರ್, ಸಂ–1, ಬೆಂಗಳೂರು, 1984, ಪು.ಸಂ.591–92

13. ಅದೇ, ಪು.ಸಂ.94

14. ಬುಕಾನನ್, ಪೂರ್ವೋಕ್ತ, ಪು.ಸಂ.265–268

15. ಮೋಹನ್‌ಕೃಷ್ಣ ರೈ ಕೆ., ಪ್ರಭುತ್ವ ಮತ್ತು ಜನತೆ ಪೂರ್ವೋಕ್ತ, ಪು.ಸಂ.23–24

16. ಸೌ.ಇ.ಇ.9–2, ನಂ–440, ಎ.ಕ.12, ಟಿ.ಎಂ.59, ಎ.ಕ.8, ಎಸ್.ಜಿ.163

17. ಎ.ಕ.XI, ಎಂ.ಬಿ.172

18. ಸೌ.ಇ.ಇ.IX-II, 440, ಎ.ಆರ್.ನಂ–283, 1918, ಹರಪನಹಳ್ಳಿ

19 J PÀVIII, ಎಸ್.ಬಿ., 354, ಮತ್ತು 451

20. ಎಂ.ಎ.ಆರ್., 1933, ನಂ.30, ಪು.ಸಂ.196

21. ಹೊಳೆ ಹೊನ್ನೂರು ಕೈಫಿಯತ್ (ಕನ್ನಡ ಹಸ್ತಪ್ರತಿ) ಪು.ಸಂ.9–10

22. ದೇಶಪಾಂಡೆ ಹೆಚ್.ಟಿ., ಚಿತ್ರದುರ್ಗ ದಿ ಸ್ಟೇಟ್, ಪು.ಸಂ.108

23. ಎಂ.ಎ.ಆರ್., 1923, ನಂ,110, ಪು.ಸಂ.109

24. ಎಂ.ಎ.ಆರ್, 1933, ನಂ.30, ಪು.ಸಂ.196

25. ಅದೇ, 1936, ನಂ.60, ಪು.ಸಂ.152

26. ಬಸವರಾಜ್ ಯಳಮಲ್ಲಿ, (ಸಂ), ತೂಕ ಮತ್ತು ಅಳತೆ ಸಾಧನಗಳ ಇತಿಹಾಸ ಮತ್ತು ಪರಂಪರೆ, ತುಲಾಭವನ ಟ್ರಸ್ಟ್, ದಾವಣಗೆರೆ, 2010, ಪು.ಸಂ. 26

***

ತತ್ವಪದ : ಪೂರ್ವ ಚಿಂತನೆಗಳು

ಡಾ. ರವಿಶಂಕರ್ ಎ.ಕೆ.
ಸಹಾಯಕ ಪ್ರಾಧ್ಯಾಪಕ
ಸಮಾಜ ವಿಜ್ಞಾನಗಳು ಮತ್ತು ಭಾಷಾ ವಿಭಾಗ
ಕ್ರಿಸ್ತು ಜಯಂತಿ ಡೀಮ್ಡ್ ಟು ಬಿ ವಿಶ್ವವಿದ್ಯಾಲಯ, ಬೆಂಗಳೂರು.
ravishankar@kristujayanti.com

1

ಪ್ರಮುಖ ಪದಗಳು
ತತ್ವಪದ, ಪೂರ್ವ ಚಿಂತನೆ, ಅದ್ವೈತ ದರ್ಶನ, ಸೂಫಿ ಸಮನ್ವಯ, ಅನುಭಾವ ಸಾಹಿತ್ಯ

ಕರ್ನಾಟಕದ ಜನಪದ ಸಂಸ್ಕೃತಿಯಲ್ಲಿ 'ತತ್ವಪದ' ಎಂಬುದು ಕೇವಲ ಒಂದು ಗೇಯ ಪ್ರಕಾರವಾಗಿ, ಅದು ಈ ಮಣ್ಣಿನ ದಾರ್ಶನಿಕ ಚಳುವಳಿಯ ಮಹೋನ್ನತ ರೂಪವೂ ಆಗಿದೆ. ಈ ಸಂಶೋಧನಾ ಲೇಖನವು ತತ್ವಪದಗಳ ಉಗಮಕ್ಕೆ ಕಾರಣವಾದ ಪೂರ್ವ ಚಿಂತನೆಗಳನ್ನು ಶೋಧಿಸುತ್ತದೆ. ಉಪನಿಷತ್ತುಗಳ ಅದ್ವೈತ ಸಿದ್ಧಾಂತ, ಶರಣರ ವಚನ ಕ್ರಾಂತಿ ಮತ್ತು ಸೂಫಿ ಸಂತರು ನೀಡಿದ ಸಮನ್ವಯದ ದೃಷ್ಟಿಕೋನಗಳು ಹೇಗೆ ತತ್ವಪದಗಳ ಭದ್ರ ಬುನಾದಿಯಾಗಿವೆ ಎಂಬುದನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ತತ್ವಪದಗಳು ಹೇಗೆ ಕೇವಲ ಭಕ್ತಿಯ ಮಾರ್ಗವಾಗಿರದೆ, ಸಾಮಾಜಿಕ ಅಸಮಾನತೆಯ ವಿರುದ್ಧದ ವೈಚಾರಿಕ ಅಸ್ತ್ರವಾಗಿ ರೂಪುಗೊಂಡವು ಎಂಬ ಸತ್ಯವನ್ನು ಇಲ್ಲಿ ಚರ್ಚಿಸಲಾಗಿದೆ. ವಿವಿಧ ಕಾಲಘಟ್ಟದ ಪ್ರಮುಖ ತತ್ವಪದಕಾರರ ಚಿಂತನೆಗಳನ್ನು ಒಳಗೊಂಡಿರುವ ಈ ಲೇಖನವು, ಆಧ್ಯಾತ್ಮಿಕ ಮತ್ತು ಲೌಕಿಕ ಬದುಕಿನ ನಡುವಿನ ಸೇತುವೆಯಾಗಿ ತತ್ವಪದಗಳ ಮಹತ್ವವನ್ನು ಎತ್ತಿ ಹಿಡಿಯುತ್ತದೆ.

ಪೀಠಿಕೆ ಮತ್ತು ಪೂರ್ವ ಚಿಂತನೆಗಳ ವ್ಯಾಪ್ತಿ :

ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ತತ್ವಪದಗಳು ಮನುಷ್ಯನ ಅಂತರಂಗದ ಅರಿವನ್ನು ಜಾಗೃತಗೊಳಿಸುವ

ದೀವಿಗೆಗಳಾಗಿ ಕೆಲಸ ಮಾಡಿವೆ. ತತ್ವಪದ ಎನ್ನುವ ಶಬ್ದವೇ ಸೂಚಿಸುವಂತೆ, ಇದು 'ತತ್ವ' ಅಂದರೆ ಪರಮ ಸತ್ಯದ 'ಪದ' ಅಥವಾ ಅಭಿವ್ಯಕ್ತಿ. ಇದರ ಪೂರ್ವ ಚಿಂತನೆಗಳನ್ನು ಗಮನಿಸಿದಾಗ ನಮಗೆ ಭಾರತೀಯ ದರ್ಶನ ಶಾಸ್ತ್ರದ ಸುದೀರ್ಘ ಪರಂಪರೆ ಕಂಡುಬರುತ್ತದೆ. ಮುಖ್ಯವಾಗಿ ವೇದೋಪನಿಷತ್ತುಗಳ 'ಅಹಂ ಬ್ರಹ್ಮಾಸ್ಮಿ' ಎನ್ನುವ ಅದ್ವೈತ ಸಿದ್ಧಾಂತವು ಜನಸಾಮಾನ್ಯರ ಭಾಷೆಯಲ್ಲಿ ತತ್ವಪದವಾಗಿ ರೂಪಾಂತರಗೊಂಡಿತು. ಶಿಶುನಾಳ ಶರೀಫರು, ಕಡಕೋಳ ಮಡಿವಾಳಪ್ಪನವರು ಸೇರಿದಂತೆ ನೂರಾರು ಸಂತರು ಈ ಪರಂಪರೆಯನ್ನು ಮುನ್ನಡೆಸಿದ್ದಾರೆ. ತತ್ವಪದಗಳ ಹಿಂದಿರುವ ಪೂರ್ವ ಚಿಂತನೆ ಎಂದರೆ ಅದು ಕೇವಲ ಧಾರ್ಮಿಕತೆಯಲ್ಲ, ಬದಲಾಗಿ ಮನುಷ್ಯನು ತನ್ನನ್ನು ತಾನು ಅರಿತುಕೊಳ್ಳುವ 'ಅಧ್ಯಾತ್ಮಿಕ ವಿಜ್ಞಾನ'. ಜಿ.ಎಸ್. ಶಿವರುದ್ರಪ್ಪನವರು ತಮ್ಮ 'ಕನ್ನಡ ಸಾಹಿತ್ಯ ಸಮೀಕ್ಷೆ' ಕೃತಿಯಲ್ಲಿ ಉಲ್ಲೇಖಿಸುವಂತೆ, 'ತತ್ವಪದಗಳು ಸಂಸ್ಕೃತದ ಅತಿಗಹನವಾದ ತತ್ವಗಳನ್ನು ಸಾಮಾನ್ಯನಿಗೆ ದಕ್ಕುವಂತೆ ಮಾಡಿದ ಶ್ರೇಷ್ಠ ಮಾಧ್ಯಮಗಳಾಗಿವೆ.'

ಕರ್ನಾಟಕದ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಚಿಂತನೆಯಲ್ಲಿ ತತ್ವಪದಗಳು ಎಂಬುದು ಒಂದು ಸಾಹಿತ್ಯಿಕ ಪ್ರಕಾರ. ಅದು ಮನುಷ್ಯನ ಅಂತರಂಗದ ಅರಿವನ್ನು ಜಾಗೃತಗೊಳಿಸುವ ಒಂದು ನಿರಂತರ ವೈಚಾರಿಕ ಪ್ರವಾಹ. ತತ್ವಪದ ಎಂಬ ಪದದ ವ್ಯುತ್ಪತ್ತಿಯನ್ನು ಗಮನಿಸಿದಾಗ, 'ತತ್ವ' ಎಂದರೆ ಪರಮ ಸತ್ಯ ಅಥವಾ ಮೂಲವಸ್ತು ಮತ್ತು 'ಪದ' ಎಂದರೆ ಅಭಿವ್ಯಕ್ತಿ ಅಥವಾ ಗೇಯ ರೂಪದ ರಚನೆ ಎಂಬ ಅರ್ಥ ಸ್ಫುರಿಸುತ್ತದೆ. ಈ ಪದಗಳ ಪೂರ್ವ ಚಿಂತನೆಗಳನ್ನು ಶೋಧಿಸಿದಾಗ ನಮಗೆ ಭಾರತೀಯ ದರ್ಶನ ಶಾಸ್ತ್ರದ ಅತ್ಯಂತ ಪ್ರಾಚೀನ ಮೌಲ್ಯಗಳು ಜನಪದೀಯ ಕವಚವನ್ನು ತೊಟ್ಟುಕೊಂಡು ಬಂದಿರುವುದು ಕಂಡುಬರುತ್ತದೆ. ಇಲ್ಲಿನ ಪೂರ್ವ ಚಿಂತನೆಯು ದೇವರನ್ನು ಆಕಾಶದಲ್ಲೋ ಅಥವಾ ಗುಡಿಯಲ್ಲೋ ಹುಡುಕುವುದನ್ನು ನಿಲ್ಲಿಸಿ, ಮನುಷ್ಯನ ದೇಹವನ್ನೇ ಒಂದು ಪ್ರಯೋಗಶಾಲೆಯನ್ನಾಗಿ ಮಾಡಿಕೊಂಡಿತು.

ತತ್ವಪದಗಳ ಉಗಮಕ್ಕೆ ಪೂರಕವಾಗಿದ್ದ ಸಾಮಾಜಿಕ ಮತ್ತು ಧಾರ್ಮಿಕ ಪರಿಸರವನ್ನು ನಾವು ಸೂಕ್ಷ್ಮವಾಗಿ ಗಮನಿಸಬೇಕು. ಹತ್ತನೇ ಶತಮಾನದ ನಂತರದ ಕರ್ನಾಟಕದಲ್ಲಿ ವೈದಿಕ ಧರ್ಮದ ಸಂಕೀರ್ಣತೆ ಮತ್ತು ಪುರೋಹಿತಶಾಹಿಯ ಪ್ರಭಾವದಿಂದಾಗಿ ಅಧ್ಯಾತ್ಮವು ಕೇವಲ ಒಂದು ವರ್ಗಕ್ಕೆ ಸೀಮಿತವಾಗಿತ್ತು. ಈ ಸಂದರ್ಭದಲ್ಲಿ ಜನಸಾಮಾನ್ಯರ ಭಾಷೆಯಲ್ಲಿ ಸತ್ಯವನ್ನು ಸಾರುವ ಅಗತ್ಯವಿತ್ತು. ತತ್ವಪದಗಳ ಪೂರ್ವ ಚಿಂತನೆಯು ಈ ಹಂತದಲ್ಲಿ 'ಅನುಭವ'ಕ್ಕೆ ಹೆಚ್ಚಿನ ಒತ್ತು

ನೀಡಿತು. ಪಂಡಿತರ 'ತರ್ಕ'ಕ್ಕಿಂತ ಸಂತರ 'ಅನುಭೂತಿ' ಶ್ರೇಷ್ಠವೆಂಬ ನಿಲುವು ಇಲ್ಲಿ ದೃಢವಾಯಿತು. ಎಂ. ಚಿದಾನಂದಮೂರ್ತಿಯವರು ತಮ್ಮ 'ಸಂಶೋಧನಾ ತರಂಗ' ಲೇಖನಗಳಲ್ಲಿ ಗುರುತಿಸುವಂತೆ, ತತ್ವಪದಗಳು ಶಿಷ್ಟ ಸಾಹಿತ್ಯದ ಗಾಂಭೀರ್ಯ ಮತ್ತು ಜಾನಪದ ಸಾಹಿತ್ಯದ ಲವಲವಿಕೆಯನ್ನು ಏಕಕಾಲಕ್ಕೆ ಮೈಗೂಡಿಸಿಕೊಂಡಿವೆ. ಇದು ಕೇವಲ ಹಾಡಿನ ರೂಪವಲ್ಲ, ಬದಲಾಗಿ ಶೂದ್ರ ಮತ್ತು ದಲಿತ ವರ್ಗದ ಜನರಿಗೆ ಅಧ್ಯಾತ್ಮದ ಬಾಗಿಲನ್ನು ತೆರೆದ ಒಂದು ಕ್ರಾಂತಿಕಾರಿ ದಾರಿಯಾಗಿದೆ.

ತತ್ವಪದಗಳ ಹಿಂದಿರುವ ಸಾಂಖ್ಯ ಮತ್ತು ಯೋಗ ದರ್ಶನಗಳ ಪ್ರಭಾವವಂತೂ ಅಪಾರವಾದುದು. ಮನುಷ್ಯನ ದೇಹವು ಪಂಚಭೂತಗಳಿಂದ ಮಾಡಲ್ಪಟ್ಟಿದೆ, ಇದು ಒಂಬತ್ತು ಬಾಗಿಲುಗಳಿರುವ ಒಂದು ಮನೆ (ನವದ್ವಾರದ ಪುರ) ಎಂಬ ರೂಪಕಗಳು ತತ್ವಪದಗಳಲ್ಲಿ ಪದೇ ಪದೇ ಬರುತ್ತವೆ. ಈ ರೀತಿಯ ದೇಹಶಾಸ್ತ್ರದ ವರ್ಣನೆಯು ನಾಥ ಪಂಥ ಮತ್ತು ಸಿದ್ಧ ಪರಂಪರೆಯಿಂದ ಬಂದ ಬಳುವಳಿಯಾಗಿದೆ. ರಂ.ಶ್ರೀ. ಮುಗಳಿಯವರು ತಮ್ಮ 'ಕನ್ನಡ ಸಾಹಿತ್ಯ ಚರಿತ್ರೆ' ಕೃತಿಯಲ್ಲಿ ಉಲ್ಲೇಖಿಸುವಂತೆ, ತತ್ವಪದಕಾರರು ಶರೀರವನ್ನು ಒಂದು ಸಾಧನವಾಗಿ ಕಂಡರು. 'ಈ ದೇಹವೆಂಬುದು ಒಂದು ಕುಂಭ, ಇದರೊಳಗಿರುವ ಆತ್ಮವೇ ನೀರು' ಎನ್ನುವಂತಹ ಉಪಮಾನಗಳು ಬದುಕಿನ ಅಶಾಶ್ವತತೆಯನ್ನು ಮತ್ತು ಪರಮಾತ್ಮನ ಶಾಶ್ವತತೆಯನ್ನು ಏಕಕಾಲಕ್ಕೆ ನೆನಪಿಸುತ್ತವೆ. ಈ ಪೂರ್ವ ಚಿಂತನೆಯು ಕೇವಲ ಜ್ಞಾನಕ್ಕೆ ಸೀಮಿತವಾಗದೆ, ಅದನ್ನು ಬದುಕಿನ ಕ್ರಿಯೆಯನ್ನಾಗಿ ಬದಲಿಸಿತು.

ಶಿಶುನಾಳ ಶರೀಫರು, ಕಡಕೋಳ ಮಡಿವಾಳಪ್ಪನವರಂತಹ ಮಹಾನ್ ತತ್ವಪದಕಾರರ ಕೃತಿಗಳಲ್ಲಿ ನಾವು ಕಾಣುವ ಮುಖ್ಯ ಅಂಶವೆಂದರೆ 'ಗುರು'ವಿನ ಮಹತ್ವ. ತತ್ವಪದಗಳ ಪೂರ್ವ ಚಿಂತನೆಯಲ್ಲಿ ಗುರು ಎಂದರೆ ಕೇವಲ ಅಕ್ಷರ ಕಲಿಸುವವನಲ್ಲ, ಬದಲಾಗಿ ಅಂತರಂಗದ ಕತ್ತಲೆಯನ್ನು ಹೋಗಲಾಡಿಸಿ 'ಬೆಳಗನ್ನು' ತೋರಿಸುವವನು. ಈ ಗುರು–ಶಿಷ್ಯ ಪರಂಪರೆಯು ಸೂಫಿ ಸಂತರ 'ಪಿರ್–ಮುರೀದ್' ಸಂಬಂಧ ಮತ್ತು ಶರಣರ 'ಗುರು–ಲಿಂಗ–ಜಂಗಮ' ತತ್ವದ ವಿಸ್ತರಣೆಯಾಗಿದೆ. ರಹಮತ್ ತರೀಕೆರೆಯವರು 'ಕರ್ನಾಟಕದ ಸೂಫಿಗಳು' ಕೃತಿಯಲ್ಲಿ ಚರ್ಚಿಸುವಂತೆ, 'ಕರ್ನಾಟಕದ ಮಣ್ಣಿನಲ್ಲಿ ಹದಗೊಂಡ ತತ್ವಪದಗಳು ಧಾರ್ಮಿಕ ಬೇಲಿಗಳನ್ನು ಕಿತ್ತೆಸೆದವು. ಒಬ್ಬ ಮುಸ್ಲಿಂ ಸಂತ ಮತ್ತು ಒಬ್ಬ ಹಿಂದೂ ಯೋಗಿ ಒಂದೇ ತತ್ವವನ್ನು ಹಾಡುವುದು ಸಮನ್ವಯದ ಅತ್ಯುನ್ನತ ಹಂತವಾಗಿತ್ತು. ಇದು ಕೇವಲ ಒಂದು ಸಾಹಿತ್ಯಿಕ ಬೆಳವಣಿಗೆಯಲ್ಲ, ಅದು ಒಂದು ಬೃಹತ್ ಸಾಮಾಜಿಕ ಸಾಮರಸ್ಯದ ಚಳುವಳಿಯಾಗಿತ್ತು.'

ಇವು ಕೇವಲ ಭಜನಾ ಮಂಡಳಿಗಳಲ್ಲಿ ಹಾಡುವ ಹಾಡುಗಳಲ್ಲ. ಇವುಗಳ ಹಿಂದೆ ಉಪನಿಷತ್ತುಗಳ ತರ್ಕ, ಬುದ್ಧನ ವೈಚಾರಿಕತೆ, ಬಸವಣ್ಣನವರ ಸಮಾನತೆ ಮತ್ತು ಸೂಫಿಗಳ ಪ್ರೇಮದ ಅಡಿಪಾಯವಿದೆ. ಈ ಪೂರ್ವ ಚಿಂತನೆಗಳೇ ತತ್ವಪದಗಳನ್ನು ಸಾರ್ವಕಾಲಿಕಗೊಳಿಸಿವೆ. ಮನುಷ್ಯನು ತನ್ನನ್ನು ತಾನು ಅರಿತುಕೊಳ್ಳದೆ ಜಗತ್ತನ್ನು ಅರಿಯಲು ಸಾಧ್ಯವಿಲ್ಲ ಎಂಬ 'ಆತ್ಮಶೋಧನೆ'ಯ ಕರೆಯೇ ಈ ಪದಗಳ ಜೀವಾಳವಾಗಿದೆ. ಇವು ಹಳ್ಳಿಯ ಸಾಮಾನ್ಯ ಮನುಷ್ಯನಿಗೆ ಬದುಕಿನ ಸಾರವನ್ನು ಉಣಿಸಿದ ಮಹಾನ್ ದಾರ್ಶನಿಕ ಕೃತಿಗಳಾಗಿವೆ.

ಶರಣರ ವಚನ ಚಳುವಳಿಯ ಪ್ರಭಾವ

ತತ್ವಪದಗಳ ಉಗಮಕ್ಕೆ ಪ್ರಬಲವಾದ ಪೂರ್ವ ಪ್ರೇರಣೆ ನೀಡಿದ್ದು 12ನೇ ಶತಮಾನದ ವಚನ ಸಾಹಿತ್ಯ. ವಚನಕಾರರು ಸಮಾಜದ ಅಂಕುಡೊಂಕುಗಳನ್ನು ತಿದ್ದಲು ಮತ್ತು ದೇವರನ್ನು ಗುಡಿಯಿಂದ ಹೊರತಂದು ಅಂತರಂಗದಲ್ಲಿ ಪ್ರತಿಷ್ಠಾಪಿಸಲು ಪ್ರಯತ್ನಿಸಿದರು. ಈ 'ಅನುಭವ ಮಂಟಪ'ದ ಚಿಂತನೆಗಳೇ ತತ್ವಪದಗಳಿಗೆ ಮೂಲಚಿಂತನೆಗಳಾದವು. ವಚನಗಳಲ್ಲಿರುವ ವೈಚಾರಿಕತೆ ಮತ್ತು ತತ್ವಪದಗಳಲ್ಲಿರುವ ಅನುಭಾವಕ್ಕೆ ನೇರ ಸಂಬಂಧವಿದೆ. ಎಂ. ಚಿದಾನಂದಮೂರ್ತಿಯವರು ತಮ್ಮ 'ಸಂಶೋಧನಾ ತರಂಗ' ಕೃತಿಯಲ್ಲಿ ವಿವರಿಸುವಂತೆ, 'ವಚನಗಳಿಗೂ ತತ್ವಪದಗಳಿಗೂ ಇರುವ ಮುಖ್ಯ ವ್ಯತ್ಯಾಸವೆಂದರೆ ವಚನಗಳು ಗದ್ಯರೂಪದಲ್ಲಿದ್ದರೆ, ತತ್ವಪದಗಳು ಛಂದೋಬದ್ಧವಾಗಿ ಹಾಡಲು ಅನುಕೂಲಕರವಾಗಿವೆ. ಆದರೆ ಎರಡರ ಗುರಿಯೂ ಒಂದೇ – ಅದು ಮನುಷ್ಯನ ವಿಕಾಸ. ತತ್ವಪದಗಳಲ್ಲಿ ನಾವು ಕಾಣುವ ಕಾಯಕದ ಹಿರಿಮೆ ಮತ್ತು ಸಮಾನತೆಯ ಆಶಯಗಳು ವಚನ ಚಳುವಳಿಯ ನೇರ ಬಳುವಳಿಯಾಗಿದೆ.'

ತತ್ವಪದಗಳ ಅಂತರಂಗವನ್ನು ಶೋಧಿಸಿದಾಗ ನಮಗೆ ಮೊದಲು ಎದುರಾಗುವುದು 12ನೇ ಶತಮಾನದ ಶರಣರ ಕ್ರಾಂತಿಕಾರಿ ವಚನ ಚಳುವಳಿಯ ಮಹಾನ್ ಪರಂಪರೆ. ವಚನಕಾರರು ಸಮಾಜದಲ್ಲಿ ಸಾರಿದ 'ಅರಿವೇ ಗುರು' ಎಂಬ ತತ್ವವು ತತ್ವಪದಕಾರರಿಗೆ ಅತ್ಯಂತ ದೊಡ್ಡ ಪೂರ್ವ ಚಿಂತನೆಯಾಗಿ ದಕ್ಕಿತು. ವಚನಗಳು ಗದ್ಯ ರೂಪದ ಲಯಬದ್ಧ ರಚನೆಗಳಾಗಿದ್ದರೆ, ತತ್ವಪದಗಳು ಅದೇ ಆಶಯಗಳನ್ನು ಗೇಯ ರೂಪಕ್ಕೆ ಅಳವಡಿಸಿಕೊಂಡವು. ತತ್ವಪದಗಳ ಪ್ರತಿಯೊಂದು ಸಾಲಿನಲ್ಲಿಯೂ ವಚನಕಾರರ ವೈಚಾರಿಕತೆಯ ಪ್ರಭಾವವನ್ನು ನಾವು ಕಾಣಬಹುದು. ಮುಖ್ಯವಾಗಿ ಅಂತರಂಗದ ಶುದ್ಧಿ ಮತ್ತು ಬಹಿರಂಗದ ಆಚರಣೆಗಳ ನಡುವಿನ ಸಂಘರ್ಷವನ್ನು

ವಚನಕಾರರು ಹೇಗೆ ಪ್ರಶ್ನಿಸಿದರೋ, ಅದನ್ನೇ ತತ್ವಪದಕಾರರು ಹಳ್ಳಿಯ ಜನರ ಆಡುಭಾಷೆಯಲ್ಲಿ ಮುಂದುವರಿಸಿದರು.

ವಚನ ಚಳುವಳಿಯು ನೀಡಿದ 'ಕಾಯಕ' ಮತ್ತು 'ದಾಸೋಹ' ಎಂಬ ಎರಡು ಪ್ರಮುಖ ಚಿಂತನೆಗಳು ತತ್ವಪದಗಳ ಸಾಮಾಜಿಕ ನೆಲೆಯನ್ನು ಗಟ್ಟಿಗೊಳಿಸಿದವು. ತತ್ವಪದಕಾರರು ಸಮಾಜದ ವಿವಿಧ ಸ್ತರಗಳಿಂದ ಬಂದವರಾಗಿದ್ದು, ಅವರು ತಮ್ಮ ವೃತ್ತಿಯ ಮೂಲಕವೇ ಅಧ್ಯಾತ್ಮವನ್ನು ಕಂಡುಕೊಂಡವರು. ಇದು ನೇರವಾಗಿ ಬಸವಣ್ಣನವರ 'ಕಾಯಕವೇ ಕೈಲಾಸ' ಎಂಬ ಪೂರ್ವ ಚಿಂತನೆಯ ಪ್ರತಿಫಲನವಾಗಿದೆ. ಇದೇ ಹಾದಿಯಲ್ಲಿ ನಡೆದ ತತ್ವಪದಕಾರರು ಅಧ್ಯಾತ್ಮವನ್ನು ಪಾಂಡಿತ್ಯದ ಹಂಗಿನಿಂದ ಮುಕ್ತಗೊಳಿಸಿದರು. ವಚನಗಳಲ್ಲಿ ಕಾಣುವ 'ಅನುಭವ ಮಂಟಪ'ದ ಪ್ರಜಾಪ್ರಭುತ್ವದ ಆಶಯಗಳು ತತ್ವಪದಗಳಲ್ಲಿ 'ಸಾಮೂಹಿಕ ಭಜನೆ' ಮತ್ತು 'ಅರಿವಿನ ಗೋಷ್ಠಿ'ಗಳಾಗಿ ರೂಪಾಂತರಗೊಂಡವು. ಇಲ್ಲಿ ಯಾವುದೇ ಜಾತಿ ಅಥವಾ ವರ್ಗದ ಭೇದವಿಲ್ಲದೆ ಎಲ್ಲರೂ ಒಂದೇ ತತ್ವದ ಅಡಿಯಲ್ಲಿ ಸಮಾವೇಶಗೊಳ್ಳುವ ಪೂರ್ವ ಚಿಂತನೆಯು ಶರಣರ ಬಳುವಳಿಯಾಗಿದೆ.

ಮತ್ತೊಂದು ಪ್ರಮುಖ ಅಂಶವೆಂದರೆ 'ಲಿಂಗ' ಮತ್ತು 'ಅಂಗ'ದ ಸಮರಸ ಸ್ಥಿತಿ. ವಚನಕಾರರು ಪ್ರತಿಪಾದಿಸಿದ 'ಷಟಸ್ಥಲ' ಮಾರ್ಗವು ತತ್ವಪದಗಳಲ್ಲಿ ಯೋಗ ಮತ್ತು ಅನುಭಾವದ ನೆಲೆಗಳಾಗಿ ವಿಸ್ತಾರಗೊಂಡವು. ಶರೀರದ ಒಳಗಿರುವ ಶಕ್ತಿಯನ್ನು ಜಾಗೃತಗೊಳಿಸುವ ಪ್ರಕ್ರಿಯೆಯನ್ನು ವಚನಕಾರರು 'ಬೆಳಗಿನೊಳಗಿನ ಬೆಳಗು' ಎಂದು ಕರೆದರೆ, ತತ್ವಪದಕಾರರು ಅದನ್ನು 'ಅರಿವಿನ ಹಣತೆ' ಎಂದು ಬಣ್ಣಿಸಿದರು. ಸಮಾಜದ ಮೌಢ್ಯಗಳನ್ನು, ಕಂದಾಚಾರಗಳನ್ನು ಮತ್ತು ತೋರಿಕೆಯ ಭಕ್ತಿಯನ್ನು ಪ್ರಶ್ನಿಸುವಲ್ಲಿ ತತ್ವಪದಕಾರರು ವಚನಕಾರರಷ್ಟೇ ನಿರ್ದಾಕ್ಷಿಣ್ಯವಾದ ನಿಲುವನ್ನು ತಳೆದರು. 'ಕಲ್ಲ ನಾಗರಕಂಡರೆ ಹಾಲನೆರೆಯುವರು, ದಿಟದ ನಾಗರಕಂಡರೆ ಕೊಲ್ಲೆಂಬರು' ಎನ್ನುವ ಬಸವಣ್ಣನವರ ವಿಡಂಬನಾತ್ಮಕ ದೃಷ್ಟಿಕೋನವು ತತ್ವಪದಕಾರರಿಗೆ ಸಮಾಜವನ್ನು ನೋಡುವ ಕಣ್ಣನ್ನು ನೀಡಿತು.

ತತ್ವಪದಗಳ ಭಾಷಾ ಶೈಲಿಯು ಮೇಲೆ ವಚನಕಾರರ ಪ್ರಭಾವ ಅಚ್ಚಳಿಯದಂತಿದೆ. ಸಂಕೀರ್ಣವಾದ ತತ್ವಗಳನ್ನು ಉಪಮೆ ಮತ್ತು ರೂಪಕಗಳ ಮೂಲಕ ಸರಳವಾಗಿ ಮನವರಿಕೆ ಮಾಡಿಕೊಡುವ ಕಲೆಯನ್ನು ತತ್ವಪದಕಾರರು ವಚನಗಳಿಂದಲೇ ಕಲಿತರು. ಅಲ್ಲಮಪ್ರಭುವಿನ 'ಬೆಡಗಿನ ವಚನಗಳು' ತತ್ವಪದಗಳ 'ಬೆಡಗಿನ ಪದಗಳಿಗೆ' ತಾಯಿ ಬೇರಿದ್ದಂತೆ. ಅಂತರಂಗದ ಗಹನವಾದ ಸ್ಥಿತಿಗಳನ್ನು

ಸಾಂಕೇತಿಕವಾಗಿ ವಿವರಿಸುವ ಪದ್ಧತಿಯು ತತ್ವಪದಕಾರರಲ್ಲಿ ಮೌಖಿಕ ಪರಂಪರೆಯ ಮೂಲಕ ಸುಭದ್ರವಾಯಿತು. ಶರಣರ ಕ್ರಾಂತಿಯು ನೀಡಿದ ಆತ್ಮವಿಶ್ವಾಸವೇ ತತ್ವಪದಕಾರರು ಸಮಾಜದ ಕಟ್ಟಕಡೆಯ ಮನುಷ್ಯನನ್ನೂ 'ಸೋಹಂ' (ನಾನೇ ಆ ದೈವ) ಎಂಬ ಸ್ಥಿತಿಗೆ ಏರಿಸಲು ಸಹಕಾರಿಯಾಯಿತು.

ತತ್ವಪದಗಳ ಪೂರ್ವ ಚಿಂತನೆಯಲ್ಲಿ ಶರಣರ ವಚನ ಚಳುವಳಿಯು ಒಂದು 'ಜೀವದ್ರವ್ಯ'ವಾಗಿ ಕೆಲಸ ಮಾಡಿದೆ. ಮನುಷ್ಯತ್ವವೇ ಧರ್ಮದ ಅಂತಿಮ ಗುರಿ ಎಂಬ ಶರಣರ ಸಂದೇಶವನ್ನು ತತ್ವಪದಕಾರರು ತಮ್ಮ ಹಾಡುಗಳ ಮೂಲಕ ಹಳ್ಳಿ ಹಳ್ಳಿಗಳಿಗೆ ತಲುಪಿಸಿದರು. ವಚನಕಾರರು ನಿರ್ಮಿಸಿದ 'ವೈಚಾರಿಕ ಅಡಿಪಾಯದ' ಮೇಲೆ ತತ್ವಪದಕಾರರು 'ಅನುಭಾವದ ಸೌಧವನ್ನು' ಕಟ್ಟಿದರು. ಈ ಎರಡು ಪರಂಪರೆಗಳ ನಡುವಿನ ಅವಿನಾಭಾವ ಸಂಬಂಧವು ಕನ್ನಡ ಸಂಸ್ಕೃತಿಯನ್ನು ಶ್ರೀಮಂತಗೊಳಿಸಿದೆ. ಸಮಾಜವನ್ನು ತಿದ್ದುವ ಮತ್ತು ವ್ಯಕ್ತಿಯನ್ನು ಬೆಳಗುವ ಈ ಪೂರ್ವ ಚಿಂತನೆಯು ಶರಣರಿಂದ ತತ್ವಪದಕಾರರಿಗೆ ಹರಿದು ಬಂದ ಮಹಾನ್ ಪರಂಪರೆಯಾಗಿದೆ.

ದಾಸ ಸಾಹಿತ್ಯ ಮತ್ತು ಭಕ್ತಿ ಮಾರ್ಗ

ಹರಿದಾಸರು ಮತ್ತು ಶಿವಶರಣರ ನಡುವಿನ ಕೊಂಡಿಯಾಗಿ ತತ್ವಪದಗಳು ಕಾಣಿಸಿಕೊಳ್ಳುತ್ತವೆ. ಪುರಂದರದಾಸರು ಮತ್ತು ಕನಕದಾಸರ ಕಾಲದಲ್ಲಿ ಭಕ್ತಿ ಎನ್ನುವುದು ಒಂದು ಚಳುವಳಿಯಾಗಿತ್ತು. ಕನಕದಾಸರ 'ಕುಲ ಕುಲ ಕುಲವೆಂದು ಹೊಡೆದಾಡದಿರಿ' ಎನ್ನುವ ಪದದ ಹಿಂದಿರುವ ಸಾಮಾಜಿಕ ಕಳಕಳಿಯೇ ನಂತರದ ತತ್ವಪದಕಾರರಿಗೆ ದಾರಿದೀಪವಾಯಿತು. ಹರಿದಾಸರ ಲೌಕಿಕ ವಿಡಂಬನೆ ಮತ್ತು ಶರಣರ ಆಧ್ಯಾತ್ಮಿಕ ಗಾಂಭೀರ್ಯ ಎರಡನ್ನೂ ತತ್ವಪದಕಾರರು ಮೈಗೂಡಿಸಿಕೊಂಡರು. ಇಲ್ಲಿನ ಪೂರ್ವ ಚಿಂತನೆಯು ದೇವರನ್ನು ಹೊರಗೆ ಹುಡುಕುವುದಕ್ಕಿಂತ ತನ್ನೊಳಗೆ ಕಂಡುಕೊಳ್ಳುವುದಕ್ಕೆ ಒತ್ತು ನೀಡುತ್ತದೆ.

ತತ್ವಪದಗಳ ಪೂರ್ವ ಚಿಂತನೆಯನ್ನು ಗಮನಿಸುವಾಗ ಹರಿದಾಸ ಸಾಹಿತ್ಯವು ನೀಡಿದ ಗೇಯ ಸೌರಭ ಮತ್ತು ಸಾಮಾಜಿಕ ವಿಡಂಬನೆಯು ಅತ್ಯಂತ ಪ್ರಮುಖವಾದುದು. ಶರಣರ ವಚನಗಳು ವೈಚಾರಿಕ ಕ್ರಾಂತಿಗೆ ನಾಂದಿ ಹಾಡಿದರೆ, ಪುರಂದರದಾಸರು ಮತ್ತು ಕನಕದಾಸರ ನೇತೃತ್ವದ ದಾಸ ಸಾಹಿತ್ಯವು ಅಧ್ಯಾತ್ಮವನ್ನು 'ಸಂಗೀತ' ಮತ್ತು 'ಸರಳ ರೂಪಕ'ಗಳ ಮೂಲಕ ಜನಸಾಮಾನ್ಯರ ಮನೆಬಾಗಿಲಿಗೆ ತಲುಪಿಸಿತು. ತತ್ವಪದಕಾರರಿಗೆ ದಾಸ ಸಾಹಿತ್ಯವು ಒಂದು ಭವ್ಯವಾದ ಮಾದರಿಯಾಗಿ ಕಂಡಿತು. ಮುಖ್ಯವಾಗಿ ಕನಕದಾಸರ 'ಕುಲ ಕುಲ ಕುಲವೆಂದು ಹೊಡೆದಾಡದಿರಿ'

ಎಂಬ ಆಶಯವು ತತ್ವಪದಗಳ ಸಾಮಾಜಿಕ ಸಮಾನತೆಯ ದನಿಗೆ ಭದ್ರವಾದ ಮುನ್ನುಡಿಯಾಯಿತು. ಇಲ್ಲಿನ ಪೂರ್ವ ಚಿಂತನೆಯು ದೇವರನ್ನು ಒಬ್ಬ ವ್ಯಕ್ತಿಯಾಗಿ ಕಾಣುವುದಕ್ಕಿಂತ ಒಂದು 'ತತ್ವ'ವಾಗಿ ಕಾಣುವುದಕ್ಕೆ ಹೆಚ್ಚಿನ ಒತ್ತು ನೀಡಿತು.

ಶರಣರು, ಹರಿದಾಸರು ಬಳಸಿದ 'ಅಂಕಿತನಾಮ'ದ ಪದ್ಧತಿಯು ತತ್ವಪದಗಳಲ್ಲಿ 'ಗುರು ಅಂಕಿತ'ವಾಗಿ ರೂಪಾಂತರಗೊಂಡಿತು. ದಾಸರು ತಮ್ಮ ಇಷ್ಟದೈವದ ಹೆಸರಿನಲ್ಲಿ ಪದಗಳನ್ನು ರಚಿಸಿದರೆ, ತತ್ವಪದಕಾರರು ತಮ್ಮ ಗುರುವಿನ ಹೆಸರಿನಲ್ಲಿ ಸತ್ಯವನ್ನು ಸಾರಿದರು. ಇದು ಕೇವಲ ಸಾಹಿತ್ಯಿಕ ಅನುಕರಣೆಯಲ್ಲ, ಬದಲಾಗಿ ವ್ಯಕ್ತಿತ್ವದ ಸಮರ್ಪಣಾ ಭಾವದ ಮುಂದುವರಿಕೆ. ಜಿ.ಎಸ್. ಶಿವರುದ್ರಪ್ಪ ಅವರು ವಿವರಿಸುವಂತೆ, 'ದಾಸ ಸಾಹಿತ್ಯವು ಅಧ್ಯಾತ್ಮವನ್ನು ಲೌಕಿಕ ಬದುಕಿನ ದೈನಂದಿನ ಕ್ರಿಯೆಗಳೊಂದಿಗೆ (ಉದಾಹರಣೆಗೆ: ಮೊಸರು ಕಡೆಯುವುದು, ನೀರು ತರುವುದು) ಸಮೀಕರಿಸಿತು. ಈ ಪ್ರಕ್ರಿಯೆಯು ತತ್ವಪದಕಾರರಿಗೆ ದೊಡ್ಡ ಪ್ರೇರಣೆ ನೀಡಿತು.' ತತ್ವಪದಗಳಲ್ಲಿ ಬರುವ 'ರಾಟೆ', 'ನೇಗಿಲು', 'ಬಂಡಿ'ಯಂತಹ ರೂಪಕಗಳು ದಾಸರ 'ದಾಸೋಹ' ಪ್ರಜ್ಞೆಯ ವಿಸ್ತರಣೆಯಾಗಿವೆ. ದಾಸರು ಸಂಸಾರದಲ್ಲಿದ್ದುಕೊಂಡೇ ಮುಕ್ತಿಯನ್ನು ಹುಡುಕುವ 'ಸಂಸಾರದಲ್ಲಿ ಇರಬೇಕು ಸಾರವ ತಿಳಿಯಬೇಕು' ಎಂಬ ತತ್ವವನ್ನು ಮಂಡಿಸಿದರು, ಇದು ತತ್ವಪದಕಾರರ ಬದುಕಿನ ಮೂಲಮಂತ್ರವಾಯಿತು. ದಾಸ ಸಾಹಿತ್ಯವು ಪಂಡಿತರ ಸಂಸ್ಕೃತ ಭೂಯಿಷ್ಠ ಭಾಷೆಯನ್ನು ಬದಿಗೊತ್ತಿ, ಹಳಗನ್ನಡದ ಬಿಗುವಿನ ಬದಲು ನಡುಗನ್ನಡದ ಸರಳತೆಯನ್ನು ಅಳವಡಿಸಿಕೊಂಡಿತು. ಈ ಭಾಷಾ ಕ್ರಾಂತಿಯು ತತ್ವಪದಕಾರರಿಗೆ ಅತ್ಯಂತ ಅನುಕೂಲಕರವಾಯಿತು. ಜನಸಾಮಾನ್ಯರ ಆಡುನುಡಿಯಲ್ಲೇ ವೇದಾಂತದ ಗಹನ ವಿಚಾರಗಳನ್ನು ಹೇಳಬಹುದು ಎಂಬ ಆತ್ಮವಿಶ್ವಾಸವನ್ನು ದಾಸರು ತತ್ವಪದಕಾರರಲ್ಲಿ ತುಂಬಿದರು. 'ಹೊರಗೆ ಮಿಂದು ಒಳಗೆ ಮೀಯದಿದ್ದರೇನು ಫಲ?' ಎಂಬ ಪ್ರಶ್ನೆಯು ದಾಸ ಸಾಹಿತ್ಯದಿಂದ ತತ್ವಪದಗಳ ಜಗತ್ತಿಗೆ ಹರಿದುಬಂದ ದಾರ್ಶನಿಕ ಪೂರ್ವ ಚಿಂತನೆಯಾಗಿದೆ.

ಭಕ್ತಿ ಮಾರ್ಗದ ಈ ಪ್ರವಾಹದಲ್ಲಿ ಕನಕದಾಸರ ಪಾತ್ರ ಅತ್ಯಂತ ವಿಶಿಷ್ಟವಾದುದು. ಅವರ 'ಮೋಹನತರಂಗಿಣಿ' ಅಥವಾ 'ನಳಚರಿತ್ರೆ'ಗಳಿಗಿಂತ ಅವರ ಪದಗಳಲ್ಲಿ ವ್ಯಕ್ತವಾಗುವ 'ಅಲ್ಲಮನ' ಅರಿವಿನ ಛಾಯೆ ತತ್ವಪದಕಾರರನ್ನು ಹೆಚ್ಚು ಆಕರ್ಷಿಸಿತು. ಭಕ್ತಿಯು ಕೇವಲ ಭಾವೋದ್ವೇಗವಾಗಬಾರದು, ಅದು ಜ್ಞಾನದ ದಾರಿಯಾಗಬೇಕು ಎಂಬ ಕನಕದಾಸರ ನಿಲುವು ತತ್ವಪದಗಳ ಜೀವಾಳವಾಯಿತು. ದಾಸ ಸಾಹಿತ್ಯವು ನೀಡಿದ ಈ ಭಕ್ತಿ–ಜ್ಞಾನದ ಸೌಧದ ಮೇಲೆಯೇ ತತ್ವಪದಗಳು

ತಮ್ಮದೇ ಆದ ವಿಶಿಷ್ಟ ಲೋಕವನ್ನು ನಿರ್ಮಿಸಿಕೊಂಡಿವೆ.

ದಾಸ ಸಾಹಿತ್ಯವು ಒಂದು 'ಕಲಾತ್ಮಕ ಮತ್ತು ನೈತಿಕ ಶಿಸ್ತನ್ನು' ಒದಗಿಸಿದೆ. ಸಂಗೀತದ ಲಯದೊಂದಿಗೆ ತತ್ವವನ್ನು ಜನರಿಗೆ ಉಣಬಡಿಸುವ ಕಲೆ ದಾಸರಿಂದ ಹರಿದು ಬಂತು. ಲೌಕಿಕದ ಜಂಜಾಟಗಳ ನಡುವೆಯೇ ಅಲೌಕಿಕದ ಬೆಳಗನ್ನು ಕಾಣುವ ಹಂಬಲವು ದಾಸರ ಕೃತಿಗಳಿಂದ ತತ್ವಪದಕಾರರಿಗೆ ಲಭಿಸಿದ ಅತ್ಯಂತ ಬೆಲೆಬಾಳುವ ಆಸ್ತಿಯಾಗಿದೆ. ಸಮ ಸಮಾಜದ ನಿರ್ಮಾಣಕ್ಕಾಗಿ ಭಕ್ತಿಯನ್ನು ಒಂದು ಅಸ್ತ್ರವನ್ನಾಗಿ ಬಳಸಿದ ಹರಿದಾಸರ ಹಾದಿಯೇ ತತ್ವಪದಕಾರರ ವಿಶ್ವಮಾನವ ಸಂದೇಶಕ್ಕೆ ಅಡಿಪಾಯವಾಯಿತು.

ಸೂಫಿ ಪಂಥ ಮತ್ತು ಸಮನ್ವಯದ ನೆಲೆಗಳು

ಕರ್ನಾಟಕದ ತತ್ವಪದಗಳ ಇತಿಹಾಸದಲ್ಲಿ ಸೂಫಿ ಪಂಥದ ಪ್ರಭಾವ ಅತ್ಯಂತ ದೊಡ್ಡದು. ಮುಖ್ಯವಾಗಿ ಉತ್ತರ ಕರ್ನಾಟಕದ ಭಾಗದಲ್ಲಿ ಹಿಂದೂ–ಮುಸ್ಲಿಂ ಸಮನ್ವಯದ ಹಿನ್ನೆಲೆಯಲ್ಲಿ ಹುಟ್ಟಿದ ತತ್ವಪದಗಳು ಭಾರತೀಯ ಸಂಸ್ಕೃತಿಗೆ ಹೊಸ ಆಯಾಮ ನೀಡಿದವು. ಶಿಶುನಾಳ ಶರೀಫರ ಗುರು ಗೋವಿಂದ ಭಟ್ಟರ ಸಂಬಂಧವು ಈ ಸಮನ್ವಯದ ಪರಮಾವಧಿ. ಸೂಫಿ ಸಂತರ 'ಇಷ್ಕ್' ಅಥವಾ ಪರಮಾತ್ಮನ ಮೇಲಿನ ಪ್ರೇಮ ಮತ್ತು ಭಾರತೀಯ 'ಭಕ್ತಿ' ಮಾರ್ಗಗಳು ಇಲ್ಲಿ ಒಂದಾದವು. ರಹಮತ್ ತರೀಕೆರೆಯವರು ತಮ್ಮ 'ಕರ್ನಾಟಕದ ಸೂಫಿಗಳು' ಕೃತಿಯಲ್ಲಿ ವಿವರಿಸುವಂತೆ, 'ತತ್ವಪದಗಳು ಮನುಷ್ಯ ನಿರ್ಮಿತ ಗೋಡೆಗಳನ್ನು ಕೆಡವಿ ವಿಶ್ವಮಾನವ ಸಂದೇಶವನ್ನು ಸಾರಿದವು. ಸಮಾಜದ ಕಟ್ಟಕಡೆಯ ಮನುಷ್ಯನಿಗೆ ಅಧ್ಯಾತ್ಮವು ಸುಲಭವಾಗಿ ದಕ್ಕುವಂತೆ ಮಾಡಿದ್ದು ಈ ಸೂಫಿ ಚಿಂತನೆಗಳ ಪ್ರಭಾವ.'

ಕರ್ನಾಟಕದ ತತ್ವಪದಗಳ ಇತಿಹಾಸದಲ್ಲಿ ಸೂಫಿ ಪಂಥದ ಪ್ರವೇಶವು ಒಂದು ಹೊಸ ಮನ್ವಂತರಕ್ಕೆ ನಾಂದಿ ಹಾಡಿತು. ಸೂಫಿ ಎನ್ನುವುದು ಕೇವಲ ಇಸ್ಲಾಂ ಧರ್ಮದ ಒಂದು ಶಾಖೆಯಾಗಿ ಉಳಿಯದೆ, ಅದು ಭಾರತೀಯ ವೇದಾಂತದೊಂದಿಗೆ ಸಮೀಕೃತಗೊಂಡು 'ಸಮನ್ವಯ ಸಂಸ್ಕೃತಿ'ಯನ್ನು ನಿರ್ಮಿಸಿತು. ತತ್ವಪದಗಳ ಪೂರ್ವ ಚಿಂತನೆಯಲ್ಲಿ ಸೂಫಿಗಳ 'ಇಷ್ಕ್' (ಪರಮಾತ್ಮನ ಮೇಲಿನ ಪ್ರೇಮ) ಮತ್ತು ಭಾರತೀಯ 'ಭಕ್ತಿ' ಮಾರ್ಗಗಳು ಹದವಾಗಿ ಬೆರೆತಿವೆ.

ಕರ್ನಾಟಕದ ತತ್ವಪದಕಾರರಲ್ಲಿ ಪ್ರಮುಖರಾದ ಶಿಶುನಾಳ ಶರೀಫರಿಗೆ ತನ್ನ ಗುರು ಗೋವಿಂದಭಟ್ಟರ ನಡುವಿನ ಆತ್ಮೀಯತೆ ಮತ್ತು ಗುರು–ಶಿಷ್ಯ ಪರಂಪರೆಯು ಈ ಸಮನ್ವಯದ ಉತ್ತುಂಗಕ್ಕೆ ಸಾಕ್ಷಿಯಾಗಿದೆ. ತತ್ವಪದಗಳಿಗೆ ಪಂಪನ 'ಮನುಷ್ಯ

ಜಾತಿ ತಾನೊಂದೆ ವಲಂ' ಎಂಬ ಸಂದೇಶಕ್ಕೆ ಸೂಫಿಗಳ ಮಾನವತಾವಾದವು ಅತ್ಯಂತ ದೊಡ್ಡ ಇಂಧನವಾಯಿತು. ಧರ್ಮಗ್ರಂಥಗಳ ಅಕ್ಷರಶಃ ಅರ್ಥಕ್ಕಿಂತಲೂ ಅವುಗಳ ಅಂತರಾರ್ಥವನ್ನು ಅಥವಾ 'ಬಾತಿನ್' ಅನ್ನು ಗ್ರಹಿಸುವುದು ಸೂಫಿಗಳ ವಿಶೇಷತೆ, ಇದನ್ನು ತತ್ವಪದಕಾರರು ತಮ್ಮದಾಗಿಸಿಕೊಂಡರು.

ತತ್ವಪದಗಳ ಪೂರ್ವ ಚಿಂತನೆಯಲ್ಲಿ ಸೂಫಿ ಪಂಥವು ಒಂದು 'ಜಾಗತಿಕ ಭಾತೃತ್ವದ' ನೆಲೆಯನ್ನು ನಿರ್ಮಿಸಿದೆ. ಇದು ಕೇವಲ ಒಂದು ಮತಧರ್ಮದ ಪ್ರಚಾರವಲ್ಲ, ಬದಲಾಗಿ ಮನುಷ್ಯನ ಆತ್ಮವು ಪರಮಾತ್ಮನ ಪ್ರೇಮಕ್ಕಾಗಿ ಹಂಬಲಿಸುವ ಒಂದು ಆಧ್ಯಾತ್ಮಿಕ ಯಾತ್ರೆ. ಸೂಫಿಗಳ ಪ್ರಭಾವದಿಂದಾಗಿ ತತ್ವಪದಗಳು ಸಂಕುಚಿತ ಧಾರ್ಮಿಕ ಚೌಕಟ್ಟುಗಳನ್ನು ಮೀರಿ ನಿಂತವು. ಈ ಸಮನ್ವಯದ ದೃಷ್ಟಿಕೋನವೇ ಕರ್ನಾಟಕದ ತತ್ವಪದ ಪರಂಪರೆಯನ್ನು ಭಾರತದ ಇತರ ಭಾಗಗಳ ಅನುಭಾವ ಸಾಹಿತ್ಯಕ್ಕಿಂತ ವಿಶಿಷ್ಟವನ್ನಾಗಿ ಮತ್ತು ಇಂದಿಗೂ ಪ್ರಸ್ತುತವನ್ನಾಗಿ ಮಾಡಿದೆ.

ಅದ್ವೈತ ದರ್ಶನ ಮತ್ತು ಸಾಂಖ್ಯ ಚಿಂತನೆ

ತತ್ವಪದಗಳಲ್ಲಿ ನಾವು ಕಾಣುವ 'ಪಿಂಡಾಂಡವೇ ಬ್ರಹ್ಮಾಂಡ' ಎನ್ನುವ ಕಲ್ಪನೆಯು ಸಾಂಖ್ಯ ಮತ್ತು ಅದ್ವೈತ ದರ್ಶನಗಳ ಕೊಡುಗೆಯಾಗಿದೆ. ಈ ಜಗತ್ತು ಪಂಚಭೂತಗಳಿಂದ ಮಾಡಲ್ಪಟ್ಟಿದೆ ಮತ್ತು ಆತ್ಮವು ಪರಮಾತ್ಮನ ಒಂದು ಭಾಗವೆಂಬ ಸತ್ಯವನ್ನು ತತ್ವಪದಕಾರರು ಅತ್ಯಂತ ಸರಳ ರೂಪಕಗಳ ಮೂಲಕ ವಿವರಿಸಿದ್ದಾರೆ. ಉದಾಹರಣೆಗೆ, ಕುಂಬಾರನು ಮಡಿಕೆ ಮಾಡುವ ಕ್ರಿಯೆಯನ್ನು ಸೃಷ್ಟಿಯ ಕ್ರಿಯೆಗೆ ಹೋಲಿಸುವುದು. ಇಂತಹ ಪೂರ್ವ ಚಿಂತನೆಗಳು ಸಂಸ್ಕೃತದ ಗಹನವಾದ ಉಪನಿಷತ್ತುಗಳಿಂದ ಬಂದವುಗಳಾಗಿವೆ. ಎಸ್. ರಾಧಾಕೃಷ್ಣನ್ ಅವರ 'ಭಾರತೀಯ ದರ್ಶನ' ಕೃತಿಯಲ್ಲಿ ಹೇಳುವಂತೆ, ಮನುಷ್ಯನು ತನ್ನ ಮೂಲವನ್ನು ಹುಡುಕುವ ಪ್ರಕ್ರಿಯೆಯೇ ಅಧ್ಯಾತ್ಮ. ಇದನ್ನು ತತ್ವಪದಕಾರರು ತಮ್ಮ ಹಾಡುಗಳಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಅಳವಡಿಸಿಕೊಂಡಿದ್ದಾರೆ.

ತತ್ವಪದಗಳ ಅಂತರಂಗದಲ್ಲಿ ಹರಿಯುವ ಜ್ಞಾನದ ಪ್ರವಾಹವು ಮೂಲತಃ ಭಾರತೀಯ ದರ್ಶನ ಶಾಸ್ತ್ರದ ಅತ್ಯುನ್ನತ ಶಿಖರವಾದ 'ಅದ್ವೈತ' ಸಿದ್ಧಾಂತದಿಂದ ಪೋಷಿತವಾಗಿದೆ. ಅದ್ವೈತ ಎಂದರೆ 'ಎರಡಲ್ಲದ ಸ್ಥಿತಿ'. ಆತ್ಮ ಮತ್ತು ಪರಮಾತ್ಮ ಒಂದೇ ಎಂಬ ಶಂಕರರ ದರ್ಶನವು ತತ್ವಪದಕಾರರಿಗೆ ಅತ್ಯಂತ ದೊಡ್ಡ ಪೂರ್ವ ಚಿಂತನೆಯಾಗಿ ದಕ್ಕಿತು. ಆದರೆ, ಈ ಅದ್ವೈತವು ಕೇವಲ ಪಾಂಡಿತ್ಯದ ಚರ್ಚೆಯಾಗದೆ, ಸಾಮಾನ್ಯ ಮನುಷ್ಯನ ಅನುಭವದ ವೇದ್ಯವನ್ನಾಗಿ ಮಾಡಿದ್ದು ತತ್ವಪದಗಳ ವಿಶೇಷತೆ.

ಇದರೊಂದಿಗೆ 'ಸಾಂಖ್ಯ ದರ್ಶನ'ವು ತತ್ವಪದಗಳ ಮೇಲೆ ಬೀರಿದ ಪ್ರಭಾವವು ಅಪ್ರತಿಮವಾದುದು. ಸಾಂಖ್ಯ ದರ್ಶನವು ಜಗತ್ತನ್ನು 'ಪ್ರಕೃತಿ' ಮತ್ತು 'ಪುರುಷ' ಎಂಬ ಎರಡು ತತ್ವಗಳ ಮೂಲಕ ವಿಶ್ಲೇಷಿಸುತ್ತದೆ. ತತ್ವಪದಕಾರರು ದೇಹವನ್ನು ಪ್ರಕೃತಿಯ ಅಂಶವೆಂದೂ, ಅದರೊಳಗಿರುವ ಚೇತನವನ್ನು ಪುರುಷನೆಂದೂ ಕರೆದರು. ದೇಹದ ಒಳರಚನೆಯನ್ನು ವಿವರಿಸುವಾಗ ಅವರು ಬಳಸುವ 'ಪಂಚಭೂತಗಳು', 'ತ್ರಿದೋಷಗಳು' ಮತ್ತು 'ಅಷ್ಟಮದಗಳ' ವಿವರಣೆಯು ನೇರವಾಗಿ ಸಾಂಖ್ಯ ಚಿಂತನೆಯಿಂದ ಬಂದಿವೆ. 'ಬಂಡಿ ನಡಿಸೊವನು ಒಬ್ಬ, ಬಂಡಿಯೊಳಗೆ ಇರುವವನು ಒಬ್ಬ' ಎಂಬ ಮಾತುಗಳು ದೇಹ ಮತ್ತು ಆತ್ಮದ ನಡುವಿನ ಸಂಬಂಧವನ್ನು ಅತ್ಯಂತ ತಾರ್ಕಿಕವಾಗಿ ವಿವರಿಸುತ್ತವೆ.

ತತ್ವಪದಗಳಲ್ಲಿ ಕಂಡುಬರುವ ಮತ್ತೊಂದು ಪ್ರಮುಖ ಪೂರ್ವ ಚಿಂತನೆಯೆಂದರೆ 'ಪಿಂಡಾಂಡವೇ ಬ್ರಹ್ಮಾಂಡ' ಎಂಬ ಕಲ್ಪನೆ. ಅಂದರೆ, ಈ ವಿಶಾಲವಾದ ವಿಶ್ವದಲ್ಲಿ (ಬ್ರಹ್ಮಾಂಡ) ಏನೇನಿದೆಯೋ ಅದೆಲ್ಲವೂ ಈ ಪುಟ್ಟ ಮಾನವ ಶರೀರದಲ್ಲಿಯೂ (ಪಿಂಡಾಂಡ) ಅಡಗಿದೆ ಎಂಬುದು ಇದರ ಸಾರ. ಸೂರ್ಯ, ಚಂದ್ರ, ನದಿಗಳು ಮತ್ತು ಪರ್ವತಗಳೆಲ್ಲವೂ ಮನುಷ್ಯನ ದೇಹದ ಒಳಗಿನ ನಾಡಿಗಳು ಮತ್ತು ಶಕ್ತಿ ಕೇಂದ್ರಗಳ ಸಾಂಕೇತಿಕ ರೂಪಗಳಾಗಿ ತತ್ವಪದಗಳಲ್ಲಿ ಬರುತ್ತವೆ. ತತ್ವಪದಕಾರರು 'ಬ್ರಹ್ಮಾಂಡವನ್ನೆಲ್ಲಾ ಸುತ್ತಿ ಬರಬೇಡ, ನಿನ್ನ ಪಿಂಡಾಂಡವನ್ನೇ ಅರಿತು ನೋಡು' ಎಂದು ಸಾರುವ ಮೂಲಕ ಮನುಷ್ಯನನ್ನು ಅಂತರ್ಮುಖಿಯನ್ನಾಗಿ ಮಾಡಿದರು. ಇದು ಅಧ್ಯಾತ್ಮದ ಪ್ರಾಯೋಗಿಕ ನೆಲೆಗೆ ಹಾದಿ ಮಾಡಿಕೊಟ್ಟಿತು.

ಯೋಗ ಶಾಸ್ತ್ರದ ಕುಂಡಲಿನಿ ಶಕ್ತಿ ಮತ್ತು ಷಟ್ ಚಕ್ರಗಳ ವಿವರಣೆಯೂ ಸಹ ತತ್ವಪದಗಳ ದಾರ್ಶನಿಕ ಪೂರ್ವ ಚಿಂತನೆಯ ಭಾಗವೇ ಆಗಿದೆ. ಬೆನ್ನುಮೂಳೆಯ ಕೆಳಗಿರುವ ಮುಲಾಧಾರ ಚಕ್ರದಿಂದ ಹಿಡಿದು ತಲೆಯ ಮೇಲಿರುವ ಸಹಸ್ರಾರ ಚಕ್ರದವರೆಗಿನ ಆಧ್ಯಾತ್ಮಿಕ ಪ್ರಯಾಣವನ್ನು ತತ್ವಪದಕಾರರು 'ಏಣಿ ಏರುವ' ಅಥವಾ 'ಮೆಟ್ಟಿಲು ಹತ್ತುವ' ರೂಪಕಗಳ ಮೂಲಕ ವಿವರಿಸಿದ್ದಾರೆ.

ತತ್ವಪದಗಳ ಈ ಭಾಗದ ವಿಶ್ಲೇಷಣೆಯು ನಮಗೆ ಸಾರುವ ಸತ್ಯವೇನೆಂದರೆ, ಮನುಷ್ಯನು ಕೇವಲ ಮಾಂಸದ ಮುದ್ದೆಯಲ್ಲ; ಅವನು ಅನಂತ ಶಕ್ತಿಯ ಒಂದು ಭಾಗ. ಪೂರ್ವದ ಅದ್ವೈತ ಮತ್ತು ಸಾಂಖ್ಯ ದರ್ಶನಗಳು ನೀಡಿದ ತಾರ್ಕಿಕ ಅಡಿಪಾಯದ ಮೇಲೆ ತತ್ವಪದಕಾರರು ಅನುಭವದ ಸೌಧವನ್ನು ಕಟ್ಟಿದರು. ಈ ಚಿಂತನೆಗಳು ಮನುಷ್ಯನಿಗೆ ಮೃತ್ಯುವಿನ ಭಯವನ್ನು ಹೋಗಲಾಡಿಸಿ, ತಾನೇ ಅಮರವಾದ ಸತ್ಯವೆಂಬ

ಅರಿವನ್ನು ಮೂಡಿಸಿದವು. ತತ್ವಪದಗಳಲ್ಲಿ ವ್ಯಕ್ತವಾಗುವ ಈ 'ಬೆಳಗಿನ ಹಂಬಲ'ವು ಭಾರತೀಯ ದರ್ಶನ ಸಂಸ್ಕೃತಿಯ ಸಾರಸರ್ವಸ್ವವಾಗಿದೆ.

ಶೈವ ಮತ್ತು ನಾಥ ಪಂಥ

ತತ್ವಪದಗಳಲ್ಲಿ ನಾವು ಕಾಣುವ ಯೋಗ ಮತ್ತು ದೇಹದ ಒಳರಚನೆಯ ವರ್ಣನೆಯು ನಾಥ ಪಂಥದ ಯೋಗ ಸಂಸ್ಕೃತಿಯಿಂದ ಬಂದಿದೆ. ಕುಂಡಲಿನಿ ಶಕ್ತಿ, ಷಟ್ ಚಕ್ರಗಳ ವಿವರಣೆ ಮತ್ತು ಪ್ರಾಣಾಯಾಮದ ಮಹತ್ವವನ್ನು ತತ್ವಪದಗಳಲ್ಲಿ ಕಾಣಬಹುದು. ಪರ್ವತೇಶ ಮಹಾಶಿವಯೋಗಿಗಳು ಮತ್ತು ಹಾನಗಲ್ಲ ಕುಮಾರಸ್ವಾಮಿಗಳಂತಹ ಯೋಗಿಗಳ ಪ್ರಭಾವ ತತ್ವಪದಗಳ ಮೇಲಿದೆ. 'ದೇಹವೇ ದೇಗುಲ' ಎನ್ನುವ ಪರಿಕಲ್ಪನೆಯು ಇಲ್ಲಿ ಹೊಸ ರೂಪ ಪಡೆದಿದೆ.

ತತ್ವಪದಗಳ ಒಳಗೆ ಹರಿಯುವ ಶಕ್ತಿಯ ಮೂಲವನ್ನು ಹುಡುಕುತ್ತಾ ಹೋದರೆ ನಮಗೆ ಮತ್ಸೇಂದ್ರನಾಥ ಮತ್ತು ಗೋರಖನಾಥರಿಂದ ಸ್ಥಾಪಿತವಾದ 'ನಾಥ ಪಂಥ'ದ ದಟ್ಟವಾದ ಪ್ರಭಾವ ಕಂಡುಬರುತ್ತದೆ. ಈ ಪಂಥವು ಶರೀರವನ್ನೇ ಒಂದು ದೇಗುಲವನ್ನಾಗಿ ಕಂಡು, ಅದರೊಳಗಿನ ಪ್ರಾಣಶಕ್ತಿಯನ್ನು (ಕುಂಡಲಿನಿ) ಜಾಗೃತಗೊಳಿಸುವ ಮಾರ್ಗವನ್ನು ಬೋಧಿಸಿತು. ತತ್ವಪದಕಾರರು ಈ 'ಕಾಯ ಸಾಧನೆ'ಯನ್ನು ತಮ್ಮ ಪದಗಳ ಜೀವಾಳವನ್ನಾಗಿ ಮಾಡಿಕೊಂಡರು.

ನಾಥ ಪಂಥದ ಪೂರ್ವ ಚಿಂತನೆಯಲ್ಲಿ 'ಶಬ್ದ' ಅಥವಾ 'ನಾದ'ಕ್ಕೆ ವಿಶೇಷ ಮಹತ್ವವಿದೆ. 'ಅನಾಹತ ನಾದ' ಎನ್ನುವುದು ಮನುಷ್ಯನ ಹೃದಯದ ಆಳದಲ್ಲಿ ಕೇಳುವ ದಿವ್ಯ ಸಂಗೀತ. ತತ್ವಪದಕಾರರು ಈ ನಾದವನ್ನು ತಮ್ಮ ಪದಗಳ ಲಯಕ್ಕೆ ತಳಹದಿಯನ್ನಾಗಿ ಮಾಡಿಕೊಂಡರು. ರಂ.ಶ್ರೀ. ಮುಗಳಿ ಅವರು ಉಲ್ಲೇಖಿಸುವಂತೆ, ತತ್ವಪದಗಳಲ್ಲಿ ಕಂಡುಬರುವ ಷಟ್ ಚಕ್ರಗಳ ವರ್ಣನೆಯು (ಮೂಲಾಧಾರದಿಂದ ಸಹಸ್ರಾರವರೆಗೆ) ನಾಥ ಪರಂಪರೆಯ ಯೋಗ ವಿಜ್ಞಾನದ ಪ್ರತಿಫಲನವಾಗಿದೆ. 'ಆರು ಚಕ್ರದ ಮನೆಯೊಳಗೆ ಆಟವಾಡುವ ಹಕ್ಕಿ' ಎಂಬ ರೂಪಕವು ಮನುಷ್ಯನ ಶರೀರದ ಒಳಗಿರುವ ಪ್ರಾಣವಾಯು ಮತ್ತು ಚೇತನದ ನಡುವಿನ ಸಂಬಂಧವನ್ನು ಅತ್ಯಂತ ಕಲಾತ್ಮಕವಾಗಿ ವಿವರಿಸುತ್ತದೆ. ಈ ಯೋಗಿಕ ಚಿಂತನೆಯು ತತ್ವಪದಕಾರರಿಗೆ ಕೇವಲ ಭಕ್ತಿಯನ್ನಷ್ಟೇ ಅಲ್ಲದೆ, ಒಂದು ವೈಜ್ಞಾನಿಕ ಶಿಸ್ತನ್ನೂ ಒದಗಿಸಿಕೊಟ್ಟಿತು.

ಶೈವ ಪಂಥದ 'ಶಿವತತ್ವ'ವು ತತ್ವಪದಗಳಲ್ಲಿ ನಿರ್ಗುಣ ಪರಬ್ರಹ್ಮನ ಸಂಕೇತವಾಗಿ ಮೂಡಿಬಂದಿದೆ. ಯೋಗದ ಈ ಸುದೀರ್ಘ ಪಯಣದಲ್ಲಿ 'ಬೆಡಗಿನ ಪದಗಳು' ಮಹತ್ವದ ಪಾತ್ರ ವಹಿಸುತ್ತವೆ. ಅಲ್ಲಮಪ್ರಭುವಿನ ಶೂನ್ಯಸಂಪಾದನೆಯಲ್ಲಿ ಕಾಣುವ

ಬೆಡಗಿನ ವಚನಗಳಿಗೂ, ತತ್ವಪದಕಾರರ ಬೆಡಗಿನ ಹಾಡುಗಳಿಗೂ ನಾಥ ಪಂಥದ 'ಸಂಧ್ಯಾ ಭಾಷೆ'ಯೇ (Twilight language) ಮೂಲಾಧಾರ. ಅಂದರೆ, ಮೇಲ್ನೋಟಕ್ಕೆ ಒಂದು ಅರ್ಥ ನೀಡುವ ಮಾತುಗಳು ಆಂತರ್ಯದಲ್ಲಿ ಗಹನವಾದ ಯೋಗಿಕ ರಹಸ್ಯಗಳನ್ನು ಅಡಗಿಸಿಟ್ಟುಕೊಂಡಿರುತ್ತವೆ. **ಎಚ್. ತಿಪ್ಪೇರುದ್ರಸ್ವಾಮಿ** ಅವರು ತಮ್ಮ **'ಕರ್ನಾಟಕದ ಸಂಸ್ಕೃತಿ ಸಮೀಕ್ಷೆ' (1968, ಡಿ.ವಿ.ಕೆ ಮೂರ್ತಿ ಪ್ರಕಾಶನ, ಮೈಸೂರು)** ಕೃತಿಯ **ಪುಟ ಸಂಖ್ಯೆ 558–560** ರಲ್ಲಿ ವಿವರಿಸುವಂತೆ, ಈ ಬೆಡಗಿನ ರಚನೆಗಳು ಶಿಷ್ಯನ ಬುದ್ಧಿಶಕ್ತಿಯನ್ನು ಪರೀಕ್ಷಿಸಲು ಮತ್ತು ರಹಸ್ಯ ಜ್ಞಾನವನ್ನು ಅಹಂಕಾರಿಗಳಿಲ್ಲದ ಸಾಧಕರಿಗೆ ಮಾತ್ರ ತಲುಪಿಸಲು ಬಳಸಲಾಗುತ್ತಿತ್ತು. ತತ್ವಪದಕಾರರು ಈ ತಂತ್ರವನ್ನು ಬಳಸಿಕೊಂಡು ಅಧ್ಯಾತ್ಮವನ್ನು ಒಂದು ಕುತೂಹಲಕಾರಿ ಶೋಧವನ್ನಾಗಿ ಮಾಡಿದರು.

ಶೈವ ಮತ್ತು ನಾಥ ಪಂಥದ ಈ ಪೂರ್ವ ಚಿಂತನೆಗಳು ತತ್ವಪದಗಳಿಗೆ 'ಗಂಭೀರತೆ' ಮತ್ತು 'ಸಾಧನಾ ಪ್ರಜ್ಞೆ'ಯನ್ನು ನೀಡಿವೆ. ತತ್ವಪದ ಎಂದರೆ ಕೇವಲ ಭಾವೋದ್ವೇಗದ ಹಾಡಲ್ಲ, ಅದು ದೇಹ ಮತ್ತು ಮನಸ್ಸನ್ನು ಹತೋಟಿಗೆ ತರುವ ಒಂದು ಪ್ರಾಯೋಗಿಕ ಕಲೆ ಎಂಬುದನ್ನು ಈ ಪರಂಪರೆಗಳು ಸ್ಥಾಪಿಸಿದವು. ಕಾಡಿನಲ್ಲಿ ಕುಳಿತು ಮಾಡುವ ತಪಸ್ಸಿಗಿಂತ, ತನ್ನ ಶರೀರದ ಒಳಗಿರುವ 'ಶಿವಶಕ್ತಿ'ಯನ್ನು ಅರಿತು ಲೋಕದ ಹಿತಕ್ಕಾಗಿ ಬದುಕುವುದು ಶ್ರೇಷ್ಠವೆಂಬ ಸಂಕಲ್ಪವೇ ತತ್ವಪದಗಳ ಜೀವಾಳವಾಯಿತು. ಈ ಯೋಗಿಕ ಹಿನ್ನೆಲೆಯು ತತ್ವಪದಗಳನ್ನು ಇಂದಿಗೂ ಮಾನಸಿಕ ಸ್ವಾಸ್ಥ್ಯ ದಿವ್ಯೌಷಧಿಯನ್ನಾಗಿ ಮಾಡಿದೆ.

ಸಾಮಾಜಿಕ ಪ್ರತಿರೋಧ ಮತ್ತು ವೈಚಾರಿಕತೆ

ತತ್ವಪದಗಳು ಕೇವಲ ಭಜನೆಯ ಹಾಡುಗಳಲ್ಲ, ಅವು ಸಾಮಾಜಿಕ ಪ್ರತಿಭಟನೆಯ ದನಿಗಳು. ಜಾತಿ ಪದ್ಧತಿ, ಮೌಢ್ಯ ಮತ್ತು ಪುರೋಹಿತಶಾಹಿಯ ವಿರುದ್ಧ ತತ್ವಪದಕಾರರು ಸಿಡಿದೆದ್ದಿದ್ದಾರೆ. ಈ ವೈಚಾರಿಕತೆಯು ಅವರಿಗೆ ಬುದ್ಧ ಮತ್ತು ಬಸವಣ್ಣನವರ ಪೂರ್ವ ಚಿಂತನೆಗಳಿಂದ ದಕ್ಕಿದೆ. 'ಎಲ್ಲಿಹನೋ ನಿನ್ನ ದೇವರು' ಎಂದು ಪ್ರಶ್ನಿಸುವ ಮೂಲಕ ಕಲ್ಲು ಮಣ್ಣುಗಳಲ್ಲದೆ ಮನುಷ್ಯತ್ವದಲ್ಲಿ ದೇವರನ್ನು ಕಾಣುವ ಹಂಬಲ ಇಲ್ಲಿ ವ್ಯಕ್ತವಾಗಿದೆ. ಕಡಕೋಳ ಮಡಿವಾಳಪ್ಪನವರ ಪದಗಳಲ್ಲಿ ನಾವು ಕಾಣುವ ತೀಕ್ಷ್ಣತೆ ಸಮಾಜದ ಕೆಟ್ಟ ಪದ್ಧತಿಗಳನ್ನು ಹೋಗಲಾಡಿಸುವ ಉದ್ದೇಶ ಹೊಂದಿತ್ತು. ಈ ಪೂರ್ವ ಚಿಂತನೆಯು ಭಾರತೀಯ ಸಮಾಜದಲ್ಲಿನ ಸುಧಾರಣಾ ಚಳವಳಿಗಳ ಒಂದು ಭಾಗವೇ ಆಗಿದೆ.

ತತ್ವಪದಗಳು ಕೇವಲ ಆಧ್ಯಾತ್ಮಿಕ ಲಹರಿಗಳಾಗಿ ಉಳಿಯದೆ, ಅವು ಸಮಾಜದ ಜಡತ್ವವನ್ನು ಬಡಿದೆಬ್ಬಿಸುವ ವೈಚಾರಿಕ ಅಸ್ತ್ರಗಳಾದವು. ತತ್ವಪದಕಾರರ ಪೂರ್ವ ಚಿಂತನೆಯಲ್ಲಿ ಬುದ್ಧನ ವಿವೇಚನೆ ಮತ್ತು ಬಸವಣ್ಣನವರ ಸಮಾನತೆಯ ದನಿಗಳು ಅಡಗಿದ್ದವು.

ತತ್ವಪದಗಳಲ್ಲಿ ನಾವು ಕಾಣುವ ಅತ್ಯಂತ ಪ್ರಬಲವಾದ ಅಂಶವೆಂದರೆ 'ಮೌಢ್ಯ ವಿರೋಧ'. ಕಲ್ಲು, ಮಣ್ಣು, ನೀರುಗಳಲ್ಲಿ ದೇವರನ್ನು ಹುಡುಕುವ ಬದಲಾಗಿ ಮನುಷ್ಯನ ಅಂತರಂಗದಲ್ಲಿ ದೇವರನ್ನು ಕಾಣಬೇಕೆಂಬ ತತ್ವವು ತತ್ವಪದಗಳ ಜೀವಾಳ. ಅಕ್ಷರ ಸಂಸ್ಕೃತಿಯಿಂದ ವಂಚಿತರಾದ ಜನರಿಗೆ 'ಅರಿವಿನ ಶಿಕ್ಷಣ' ನೀಡುವ ಮೂಲಕ ತತ್ವಪದಗಳು ಒಂದು ಸಾಮಾಜಿಕ ವಿಶ್ವವಿದ್ಯಾಲಯದಂತೆ ಕಾರ್ಯನಿರ್ವಹಿಸಿದವು. ವೈಚಾರಿಕತೆಯ ಈ ಪಯಣದಲ್ಲಿ ಕಡಕೋಳ ಮಡಿವಾಳಪ್ಪನವರ ಪಾತ್ರ ಅತ್ಯಂತ ತೀಕ್ಷ್ಣವಾದುದು. ಅವರ ಪದಗಳಲ್ಲಿ ನಾವು ಕಾಣುವ 'ಕಂಡದ್ದನ್ನು ಕಂಡಂತೆ ಹೇಳುವ' ಕಬೀರನಂತಹ ನಿರ್ಭೀತ ದನಿಯು ತತ್ವಪದಗಳಿಗೆ ಒಂದು ಕ್ರಾಂತಿಕಾರಿ ರೂಪವನ್ನು ನೀಡಿತು.

ತತ್ವಪದಗಳು ಮಹಿಳೆಯರ ಅಸ್ಮಿತೆ ಮತ್ತು ಗೌರವದ ಪರವಾಗಿಯೂ ಧ್ವನಿ ಎತ್ತಿವೆ. ಶರಣೆಯರ ವಚನಗಳ ಪ್ರಭಾವದಿಂದಾಗಿ, ಸ್ತ್ರೀಯನ್ನು ಕೇವಲ ಮಾಯೆಯೆಂದು ಕರೆಯುವುದನ್ನು ತತ್ವಪದಕಾರರು ನಿಲ್ಲಿಸಿದರು. ಬದಲಾಗಿ, 'ಹೆಣ್ಣು ಹೆಣ್ಣಲ್ಲ, ಅವಳು ಶಕ್ತಿಯ ರೂಪ' ಎಂಬ ಆಶಯವನ್ನು ತಂದರು.

ತತ್ವಪದಗಳ ಈ ವೈಚಾರಿಕ ಪೂರ್ವ ಚಿಂತನೆಯು ಸಮಾಜದಲ್ಲಿ 'ವಿವೇಕ'ವನ್ನು ಪ್ರತಿಷ್ಠಾಪಿಸಿತು. ಕಂದಾಚಾರಗಳ ಕತ್ತಲೆಯಲ್ಲಿ ಮುಳುಗಿದ್ದ ಜನರಿಗೆ ಜ್ಞಾನದ ಬೆಳಕನ್ನು ತೋರಿಸಿತು. ಅಧಿಕಾರ ಮತ್ತು ಸಂಪತ್ತಿನ ಅಮಲಿನಲ್ಲಿರುವವರಿಗೆ ಬದುಕಿನ ಅಶಾಶ್ವತತೆಯನ್ನು ನೆನಪಿಸುತ್ತಲೇ, ದೀನದಲಿತರಿಗೆ ಅವರೊಳಗಿನ ದೈವತ್ವದ ಅರಿವು ಮೂಡಿಸಿತು. ಈ ಸಾಮಾಜಿಕ ಪ್ರತಿರೋಧದ ದನಿಯೇ ತತ್ವಪದಗಳನ್ನು ಇಂದಿನ ದಿನಗಳಲ್ಲಿಯೂ ಅತ್ಯಂತ ಪ್ರಸ್ತುತವಾದ ವೈಚಾರಿಕ ಸಾಹಿತ್ಯವನ್ನಾಗಿ ಮಾಡಿದೆ. ಮನುಷ್ಯತ್ವವೇ ಪರಮ ಧರ್ಮವೆಂಬ ಸತ್ಯವು ಇಲ್ಲಿ ಜಗಜ್ಜಾಹೀರಾಗಿದೆ.

ಜನಪದ ಸಾಹಿತ್ಯ ಮತ್ತು ಮೌಖಿಕ ಪರಂಪರೆ

ತತ್ವಪದಗಳು ಲಿಖಿತ ಸಾಹಿತ್ಯಕ್ಕಿಂತ ಮೌಖಿಕ ಪರಂಪರೆಯಲ್ಲಿ ಹೆಚ್ಚು ಬೆಳೆದುಬಂದವು. ಹಳ್ಳಿಗಳ ಕಟ್ಟೆಗಳ ಮೇಲೆ, ಮಠ–ಮಾನ್ಯಗಳಲ್ಲಿ ಹಾಡಲ್ಪಡುವ ಈ ಪದಗಳಿಗೆ ಜನಪದ ಸಾಹಿತ್ಯದ ಸರಳತೆ ಮತ್ತು ಹಳ್ಳಿಯ ಜನರ ಜೀವನಾನುಭವವೇ

ಪೂರ್ವ ಪ್ರೇರಣೆ. ಇಲ್ಲಿನ ಭಾಷೆ ಪಂಡಿತರ ಭಾಷೆಯಲ್ಲ, ಅದು ಸಾಮಾನ್ಯ ಜನರ ಆಡುಭಾಷೆ. ಎಚ್.ಎಲ್. ನಾಗೇಗೌಡರು ತಮ್ಮ 'ಜಾನಪದ ಸಾಹಿತ್ಯ ಪ್ರವೇಶ' ಕೃತಿಯಲ್ಲಿ ಉಲ್ಲೇಖಿಸುವಂತೆ, 'ತತ್ವಪದಗಳು ಜನಪದರ ಅನುಭವ ಮತ್ತು ಶಿಷ್ಟರ ತತ್ವಜ್ಞಾನದ ಸಂಗಮವಾಗಿವೆ. ಈ ಮೌಖಿಕ ಪರಂಪರೆಯೇ ತತ್ವಪದಗಳನ್ನು ಸಜೀವವಾಗಿರಿಸಿದೆ.'

ತತ್ವಪದಗಳ ಜೀವಾಳವು ಇರುವುದು ಅದರ ಮೌಖಿಕ ಪರಂಪರೆಯಲ್ಲಿ. ಇದು ಲಿಖಿತ ಸಾಹಿತ್ಯದಂತೆ ಕೇವಲ ತಾಳೆಗರಿಗಳಲ್ಲೋ ಅಥವಾ ಪುಸ್ತಕಗಳಲ್ಲೋ ಅಡಗಿ ಕುಳಿತುಕೊಳ್ಳದೆ, ಹಳ್ಳಿಯ ಜನರ ಉಸಿರಿನಂತೆ ಮೌಖಿಕವಾಗಿ ತಲೆಮಾರಿನಿಂದ ತಲೆಮಾರಿಗೆ ಹರಿದು ಬಂದಿದೆ. ಜನಪದ ಸಾಹಿತ್ಯವು ತತ್ವಪದಗಳಿಗೆ ನೀಡಿದ 'ಸರಳತೆ' ಮತ್ತು 'ಲಯಬದ್ಧತೆ' ಅತ್ಯಂತ ವಿಶಿಷ್ಟವಾದುದು. ಇಲ್ಲಿನ ಭಾಷೆಯು ಪಾಂಡಿತ್ಯದ ಹಂಗಿನಿಂದ ಮುಕ್ತವಾಗಿದ್ದು, ಹಳ್ಳಿಯ ಜನರ ದೈನಂದಿನ ಜೀವನದ ರೂಪಕಗಳನ್ನೇ (ಉದಾಹರಣೆಗೆ: ಒನಕೆ, ಕುಟ್ಟುವಿಕೆ, ಬೀಸುವ ಕಲ್ಲು) ಅಧ್ಯಾತ್ಮದ ಸಂಕೇತಗಳನ್ನಾಗಿ ಬಳಸಿಕೊಂಡಿತು. ಈ ಮೌಖಿಕ ಪರಂಪರೆಯು ತತ್ವಪದಗಳನ್ನು ಜನಸಾಮಾನ್ಯರ 'ಅಂತರಂಗದ ಗೀತೆ'ಗಳನ್ನಾಗಿ ಪರಿವರ್ತಿಸಿತು.

ಜನಪದ ಗೀತೆಗಳಿಗೂ ಮತ್ತು ತತ್ವಪದಗಳಿಗೂ ಇರುವ ಅವಿನಾಭಾವ ಸಂಬಂಧವನ್ನು ಗಮನಿಸಿದಾಗ, ಜನಪದರ 'ತ್ರಿಪದಿ' ಮತ್ತು 'ಸಾಂಗತ್ಯ' ಛಂದಸ್ಸುಗಳು ತತ್ವಪದಗಳ ರಚನೆಗೆ ಭದ್ರ ಬುನಾದಿ ಹಾಕಿರುವುದು ತಿಳಿಯುತ್ತದೆ. ಹಳ್ಳಿಯ ಬಯಲುಗಳಲ್ಲಿ, ದೇವಸ್ಥಾನದ ಕಟ್ಟೆಗಳ ಮೇಲೆ ಅಥವಾ ಹೊಲಗದ್ದೆಗಳಲ್ಲಿ ಕೆಲಸ ಮಾಡುವಾಗ ಹಾಡುವ ಹಾಡುಗಳಲ್ಲಿ ಅಧ್ಯಾತ್ಮದ ಸಾರವನ್ನು ಬೆರೆಸುವ ಕಲೆ ತತ್ವಪದಕಾರರಿಗೆ ಜನಪದ ಸಾಹಿತ್ಯದಿಂದಲೇ ಲಭಿಸಿತು. ಇದು ಕೇವಲ ಸಾಹಿತ್ಯಿಕ ಪ್ರಕ್ರಿಯೆಯಲ್ಲ, ಬದಲಾಗಿ ಒಂದು ಸಮುದಾಯದ ಸಾಮೂಹಿಕ ಪ್ರಜ್ಞೆಯ ಅಭಿವ್ಯಕ್ತಿಯಾಗಿದೆ. ಮೌಖಿಕ ಪರಂಪರೆಯ ಕಾರಣದಿಂದಾಗಿಯೇ ಇಂದು ಉತ್ತರ ಕರ್ನಾಟಕ ಮತ್ತು ಹೈದರಾಬಾದ್ ಕರ್ನಾಟಕದ ಭಾಗಗಳಲ್ಲಿ ಸಾವಿರಾರು ತತ್ವಪದಗಳು ಯಾವುದೇ ಲಿಖಿತ ದಾಖಲೆಗಳಿಲ್ಲದೆಯೂ ಜನರ ನಾಲಿಗೆಯ ಮೇಲೆ ಸಜೀವವಾಗಿ ಉಳಿದಿವೆ.

ತತ್ವಪದಗಳಲ್ಲಿ ನಾವು ಕಾಣುವ 'ಪರಮಾರ್ಥ'ವು ಜನಪದರ 'ಲೌಕಿಕ' ಅನುಭವದ ಮೂಲಕವೇ ಹೊರಹೊಮ್ಮುತ್ತದೆ. ಕುಂಬಾರ ಮಡಿಕೆ ಮಾಡುವ ಕ್ರಿಯೆ, ನೆಯ್ಗೆಯವನು ಬಟ್ಟೆ ನೆಯ್ಯುವ ಕ್ರಮ ಅಥವಾ ರೈತ ಭೂಮಿಯನ್ನು ಹಸನುಗೊಳಿಸುವ

ಕಾಯಕಗಳು ತತ್ವಪದಗಳಲ್ಲಿ 'ದೇಹ ಮತ್ತು ಆತ್ಮ'ದ ಸಂಕೀರ್ಣ ಸಂಬಂಧಗಳನ್ನು ವಿವರಿಸುವ ಅದ್ಭುತ ರೂಪಕಗಳಾದವು.

ಜನಪದ ವಾದ್ಯಗಳಾದ ಕಿನ್ನರಿ, ಏಕತಾರಿ ಮತ್ತು ತಂಬೂರಿಗಳ ಸಂಯೋಗವು ತತ್ವಪದಗಳ ಪ್ರಸಾರಕ್ಕೆ ವೇಗವನ್ನು ನೀಡಿತು. ಈ ಸಂಗೀತದ ಲಯವು ತತ್ವದ ಗಹನತೆಯನ್ನು ಸಾಮಾನ್ಯರ ಮನಸ್ಸಿಗೆ ನಾಟುವಂತೆ ಮಾಡಿತು. ಒಬ್ಬ ಅನುಭಾವಿ ಹಾಡುವಾಗ ಅಲ್ಲಿ ಸೇರುವ ಜನರೆಲ್ಲರೂ ಕೇವಲ ಕೇಳುಗರಾಗಿ ಉಳಿಯದೆ, ಆ ತತ್ವದ ಅನುಭವದಲ್ಲಿ ಪಾಲ್ಗೊಳ್ಳುವ ಸಹ–ಯಾತ್ರಿಗಳಾಗುತ್ತಾರೆ. ಈ ಮೌಖಿಕ ಸಂವಹನವು ಅಕ್ಷರಸ್ಥ ಮತ್ತು ಅನಕ್ಷರಸ್ಥರ ನಡುವಿನ ಅಂತರವನ್ನು ಅಳಿಸಿಹಾಕಿತು. ಇತಿಹಾಸದ ವಿವಿಧ ಘಟ್ಟಗಳಲ್ಲಿ ನಡೆದ ಸಾಮಾಜಿಕ ಏರುಪೇರುಗಳ ನಡುವೆಯೂ ಈ ಮೌಖಿಕ ಪರಂಪರೆಯೇ ತತ್ವಪದಗಳ ಅಸ್ಮಿತೆಯನ್ನು ಕಾಪಾಡಿಕೊಂಡು ಬಂದಿದೆ.

ತತ್ವಪದಗಳ ಈ ಮೌಖಿಕ ಮತ್ತು ಜನಪದೀಯ ಪೂರ್ವ ಚಿಂತನೆಯು ನಮಗೆ ತಿಳಿಸುವುದೇನೆಂದರೆ, ಜ್ಞಾನವು ಕೇವಲ ಗ್ರಂಥಾಲಯಗಳಲ್ಲಿ ಇಲ್ಲ, ಅದು ಮನುಷ್ಯನ ಬದುಕಿನ ಚಟುವಟಿಕೆಗಳಲ್ಲಿದೆ. ಜನಪದ ಸಾಹಿತ್ಯವು ನೀಡಿದ ಈ 'ಸಹಜ ಸೌಂದರ್ಯ'ವೇ ತತ್ವಪದಗಳನ್ನು ವಿಶಿಷ್ಟವಾಗಿಸಿದೆ. ಮೌಖಿಕ ಪರಂಪರೆಯ ಮೂಲಕ ಹರಿದುಬಂದ ಈ ಅರಿವಿನ ಗಂಗೆಯು ಇಂದಿಗೂ ಕರ್ನಾಟಕದ ಹಳ್ಳಿಗಳ ಸಂಸ್ಕೃತಿಯಲ್ಲಿ ಅಂತರ್ಗಾಮಿಯಾಗಿ ಹರಿಯುತ್ತಿದೆ.

ಅನುಭಾವ ಮತ್ತು ಸಾಕ್ಷಾತ್ಕಾರದ ನೆಲೆಗಳು

ತತ್ವಪದಗಳ ಅಂತಿಮ ಗುರಿ ಅನುಭಾವ ಅಥವಾ ಸಾಕ್ಷಾತ್ಕಾರ. ಇದನ್ನು 'ಸಂಸಾರದಲ್ಲಿ ಇರಬೇಕು, ಸಾರವ ತಿಳಿಯಬೇಕು' ಎನ್ನುವ ಸರಳ ತತ್ವದ ಮೂಲಕ ವಿವರಿಸಲಾಗಿದೆ. ಬದುಕಿನ ನಶ್ವರತೆಯನ್ನು ಮತ್ತು ಸಾವಿನ ಅನಿವಾರ್ಯತೆಯನ್ನು ಪದೇ ಪದೇ ನೆನಪಿಸುವ ಮೂಲಕ ಮನುಷ್ಯನನ್ನು ಸನ್ಮಾರ್ಗಕ್ಕೆ ತರುವುದು ಈ ಚಿಂತನೆಯ ಉದ್ದೇಶ. ಜಿ.ಎಸ್. ಶಿವರುದ್ರಪ್ಪನವರು ತಮ್ಮ 'ಕನ್ನಡ ಸಾಹಿತ್ಯ ಸಮೀಕ್ಷೆ'ಯಲ್ಲಿ ವಿವರಿಸುವಂತೆ, ಅನುಭಾವ ಎನ್ನುವುದು ಶಬ್ದಗಳಿಗೆ ನಿಲುಕದ ಅನುಭವ. ಅದನ್ನು ತತ್ವಪದಕಾರರು ಅತ್ಯಂತ ಸುಂದರವಾದ ರೂಪಕಗಳ ಮೂಲಕ ಜನರಿಗೆ ತಲುಪಿಸಿದ್ದಾರೆ.

ತತ್ವಪದಗಳ ಅಂತಿಮ ಉದ್ದೇಶವು ಕೇವಲ ಜ್ಞಾನದ ಸಂಗ್ರಹವಲ್ಲ, ಬದಲಾಗಿ ಅದು 'ಅನುಭಾವ'ದ ಸಾಕ್ಷಾತ್ಕಾರ. ಅನುಭಾವ ಎನ್ನುವುದು ಬುದ್ಧಿಗೆ ನಿಲುಕುವ 'ಅನುಭವ'ಕ್ಕಿಂತ ಭಿನ್ನವಾದುದು; ಇದು ಆತ್ಮವು ಪರಮಾತ್ಮನೊಂದಿಗೆ ಹೊಂದುವ

ಅದ್ವೈತ ಸ್ಥಿತಿ. ತತ್ವಪದಕಾರರ ಪೂರ್ವ ಚಿಂತನೆಯಲ್ಲಿ ಈ ಅನುಭಾವವು ಬದುಕಿನ ಸಾರಸರ್ವಸ್ವವಾಗಿತ್ತು. ಸಕ್ಕರೆಯ ಸವಿಯನ್ನು ಅನುಭವಿಸಬಹುದೇ ಹೊರತು ಅದನ್ನು ಬಣ್ಣಿಸಲು ಸಾಧ್ಯವಿಲ್ಲ. ಈ ರೀತಿಯ ಸಾಕ್ಷಾತ್ಕಾರದ ಹಂಬಲವು ಉಪನಿಷತ್ತುಗಳ 'ಬ್ರಹ್ಮಾನುಭೂತಿ'ಯಿಂದ ಹರಿದುಬಂದ ದಾರ್ಶನಿಕ ಪೂರ್ವ ಚಿಂತನೆಯಾಗಿದೆ. ತತ್ವಪದಗಳು ಈ ಗಹನ ಸ್ಥಿತಿಯನ್ನು ಸಾಮಾನ್ಯ ಮನುಷ್ಯನ ಅಂತರಂಗದ ಹಾಡನ್ನಾಗಿ ಪರಿವರ್ತಿಸಿದವು.

ಸಾಕ್ಷಾತ್ಕಾರದ ಈ ಪಯಣದಲ್ಲಿ 'ಅರಿವು' ಎನ್ನುವುದು ಕೇಂದ್ರಬಿಂದು. ಅರಿವು ಎಂದರೆ ಕೇವಲ ಮಾಹಿತಿ ತಿಳಿಯುವುದಲ್ಲ, ತನ್ನ ಮೂಲವನ್ನು ತಾನು ಗುರುತಿಸುವುದು. ತತ್ವಪದಕಾರರು 'ಅರಿವೇ ಗುರು' ಎಂದು ಸಾರುವ ಮೂಲಕ ಬಾಹ್ಯ ಗುರುಗಳಿಗಿಂತ ಅಂತರಂಗದ ತಿಳಿವಳಿಕೆಗೆ ಹೆಚ್ಚಿನ ಮಹತ್ವ ನೀಡಿದರು. ಈ ಪೂರ್ವ ಚಿಂತನೆಯು ಸಾಧಕನನ್ನು ಲೌಕಿಕದ ಜಂಜಾಟಗಳಿಂದ ಬಿಡುಗಡೆಗೊಳಿಸಿ 'ಸ್ಥಿತಪ್ರಜ್ಞ'ನನ್ನಾಗಿ ಮಾಡುತ್ತದೆ. 'ತಾನು ತಾನಾದ ಮೇಲೆ ಇನ್ನೇನು ಬೇಕು?' ಎಂಬ ಪ್ರಶ್ನೆಯು ಸಾಕ್ಷಾತ್ಕಾರದ ಪರಮಾವಧಿಯನ್ನು ಸೂಚಿಸುತ್ತದೆ. ಇದು ಜೈನ ಧರ್ಮದ 'ಕೈವಲ್ಯ' ಮತ್ತು ಬೌದ್ಧ ಧರ್ಮದ 'ನಿರ್ವಾಣ' ತತ್ವಗಳಿಗೂ ಹತ್ತಿರವಾಗಿರುವ ಅನುಭಾವಿ ಸ್ಥಿತಿಯಾಗಿದೆ.

ಅನುಭಾವದ ಈ ವಿಶ್ಲೇಷಣೆಯಲ್ಲಿ 'ಸೋಹಂ' ತತ್ವದ ಸಾಕ್ಷಾತ್ಕಾರವು ಅತ್ಯಂತ ಪ್ರಮುಖವಾದುದು. 'ಸೋಹಂ' ಎಂದರೆ 'ನಾನೇ ಅವನು' (ಪರಮಾತ್ಮ). ಈ ಅರಿವು ಮೂಡಿದಾಗ ಮನುಷ್ಯನಿಗೆ ಸಾವು–ನೋವುಗಳ ಭಯವಿರುವುದಿಲ್ಲ. ಕತ್ತಲೆಯ ಗವಿಯಂತಿರುವ ಅಜ್ಞಾನವು ಅರಿವಿನ ಸೂರ್ಯೋದಯವಾದಾಗ ಹೇಗೆ ಮರೆಯಾಗುತ್ತದೆಯೋ, ಹಾಗೆಯೇ ಸಾಕ್ಷಾತ್ಕಾರವು ಮನುಷ್ಯನ ಬದುಕನ್ನು ಬದಲಿಸುತ್ತದೆ. ಇಲ್ಲಿ ಸಾಧಕನು ಕೇವಲ ವ್ಯಕ್ತಿಯಾಗಿ ಉಳಿಯದೆ ವಿಶ್ವಚೇತನದ ಭಾಗವಾಗುತ್ತಾನೆ. ಈ ಅದ್ವೈತ ಅನುಭೂತಿಯೇ ತತ್ವಪದಗಳ ಜೀವಾಳವಾಗಿದೆ. ಈ ಪೂರ್ವ ಚಿಂತನೆಯು ಮನುಷ್ಯನಿಗೆ ನೈತಿಕ ಬಲವನ್ನು ನೀಡುವುದಲ್ಲದೆ, ಜಗತ್ತಿನ ಎಲ್ಲ ಜೀವಿಗಳನ್ನೂ ಪ್ರೀತಿಯಿಂದ ಕಾಣುವ ಸಮದೃಷ್ಟಿಯನ್ನು ನೀಡುತ್ತದೆ.

ತತ್ವಪದಗಳಲ್ಲಿ ಸಾಕ್ಷಾತ್ಕಾರವು 'ಶೂನ್ಯ'ದ ಕಲ್ಪನೆಯೊಂದಿಗೂ ಬೆರೆತಿದೆ. ಶೂನ್ಯ ಎಂದರೆ ಇಲ್ಲದಿರುವುದಲ್ಲ, ಅದು ಎಲ್ಲವನ್ನೂ ಒಳಗೊಂಡಿರುವ ಪರಿಪೂರ್ಣ ಸ್ಥಿತಿ. ಅಲ್ಲಮಪ್ರಭುವಿನ 'ಶೂನ್ಯಸಂಪಾದನೆ'ಯ ಪ್ರಭಾವವು ತತ್ವಪದಕಾರರ ಮೇಲೆ ಗಾಢವಾಗಿದೆ. ಈ ಅನುಭಾವದ ನೆಲೆಗಳು ತತ್ವಪದಗಳಿಗೆ ಒಂದು ದಾರ್ಶನಿಕ

ಘನತೆಯನ್ನು ತಂದುಕೊಟ್ಟಿವೆ. ಲೌಕಿಕ ಬದುಕಿನ ಸುಖ–ದುಃಖಗಳನ್ನು ಮೀರಿ ನಿಂತಿರುವ ಈ 'ಆನಂದ'ದ ಸ್ಥಿತಿಯೇ ತತ್ವಪದಕಾರರ ಅಂತಿಮ ಸಾಧನೆಯಾಗಿದೆ.

ತತ್ವಪದಗಳ ಈ ಒಂಬತ್ತನೇ ಭಾಗವು ನಮಗೆ ಸಾರುವ ಸತ್ಯವೇನೆಂದರೆ, ಅಧ್ಯಾತ್ಮವು ಕೇವಲ ಬೌದ್ಧಿಕ ಚರ್ಚೆಯಲ್ಲ, ಅದು ಪ್ರಾಯೋಗಿಕ ಅನುಭವ. ಸಾಕ್ಷಾತ್ಕಾರದ ಮೂಲಕ ಮನುಷ್ಯನು ತನ್ನೊಳಗಿನ ದೈವತ್ವವನ್ನು ಕಂಡುಕೊಳ್ಳಬಹುದು ಎಂಬ ಆಶಾವಾದವೇ ತತ್ವಪದಗಳನ್ನು ಅಮರವಾಗಿಸಿದೆ. ಈ ಅನುಭಾವದ ಪೂರ್ವ ಚಿಂತನೆಗಳು ಇಂದಿಗೂ ಸಾಧಕರಿಗೆ ದಾರಿದೀಪಗಳಾಗಿವೆ. ತನ್ನನ್ನು ತಾನು ಅರಿತವನಿಗೆ ಜಗತ್ತೇ ಒಂದು ಸುಂದರ ತಾಣವಾಗಿ ಕಾಣುತ್ತದೆ ಮತ್ತು ಆತನ ಪ್ರತಿಯೊಂದು ಶಬ್ದವೂ ಒಂದು 'ತತ್ವಪದ'ವಾಗಿ ಹೊರಹೊಮ್ಮುತ್ತದೆ. ಮನುಕುಲದ ಅರಿವಿನ ವಿಕಾಸದಲ್ಲಿ ಈ ಅನುಭಾವದ ಪಾತ್ರ ಅಪ್ರತಿಮವಾದುದು.

ಸಮಕಾಲೀನ ಪ್ರಸ್ತುತತೆ ಮತ್ತು ಸಂರಕ್ಷಣೆ

ಇಂದಿನ ವಿಜ್ಞಾನ ಯುಗದಲ್ಲಿಯೂ ತತ್ವಪದಗಳ ಪೂರ್ವ ಚಿಂತನೆಗಳು ಅತ್ಯಂತ ಪ್ರಸ್ತುತವಾಗಿವೆ. ಮಾನಸಿಕ ಶಾಂತಿ, ನೈತಿಕತೆ ಮತ್ತು ಸಾಮರಸ್ಯದ ಅಗತ್ಯವಿರುವ ಈ ಕಾಲಕ್ಕೆ ತತ್ವಪದಗಳ ಸಂದೇಶ ಅತಿ ಮುಖ್ಯ. ತತ್ವಪದಗಳ ಮೇಲಿನ ಅಧ್ಯಯನಗಳು ಇಂದು ಶೈಕ್ಷಣಿಕ ಮಟ್ಟದಲ್ಲಿ ವಿಸ್ತಾರವಾಗುತ್ತಿವೆ. ಹಂಪಿ ಕನ್ನಡ ವಿಶ್ವವಿದ್ಯಾಲಯದಂತಹ ಸಂಸ್ಥೆಗಳು ಸಾವಿರಾರು ತತ್ವಪದಗಳನ್ನು ಸಂಗ್ರಹಿಸಿ ಸಂರಕ್ಷಿಸಿವೆ. ಈ ಪೂರ್ವ ಚಿಂತನೆಗಳು ಮುಂದಿನ ಪೀಳಿಗೆಗೆ ಮಾರ್ಗದರ್ಶಿಯಾಗಿವೆ.

ಇಂದಿನ ತಾಂತ್ರಿಕ ಮತ್ತು ಜಾಗತೀಕರಣದ ಯುಗದಲ್ಲಿ ತತ್ವಪದಗಳ ಪೂರ್ವ ಚಿಂತನೆಗಳು ಕೇವಲ ಸಾಹಿತ್ಯಿಕ ಸ್ಮರಣಿಕೆಗಳಾಗಿ ಉಳಿಯದೆ, ಮಾನಸಿಕ ನೆಮ್ಮದಿಯ ಮತ್ತು ಸಾಮಾಜಿಕ ಸಾಮರಸ್ಯದ ದಿವ್ಯೌಷಧಗಳಾಗಿ ಗೋಚರಿಸುತ್ತಿವೆ. ಆಧುನಿಕ ಮನುಷ್ಯನು ಅನುಭವಿಸುತ್ತಿರುವ ಒತ್ತಡ, ಅಶಾಂತಿ ಮತ್ತು ಅಸ್ಮಿತೆಯ ಬಿಕ್ಕಟ್ಟುಗಳಿಗೆ ತತ್ವಪದಗಳು ನೀಡುವ "ಅರಿವಿನ ಹಾದಿ" ಒಂದು ಶಾಶ್ವತ ಪರಿಹಾರವನ್ನು ಸೂಚಿಸುತ್ತದೆ. ಸಮಕಾಲೀನ ಸಮಾಜದಲ್ಲಿ ಜಾತಿ ಮತ್ತು ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಸಂಘರ್ಷಗಳನ್ನು ತಡೆಯಲು ತತ್ವಪದಗಳ 'ವಿಶ್ವಮಾನವ ಸಂದೇಶ' ಅತ್ಯಂತ ಪ್ರಸ್ತುತವಾಗಿದೆ. ಮನುಷ್ಯತ್ವವೇ ಶ್ರೇಷ್ಠವೆಂಬ ಅರಿವು ಇಂದಿನ ಪೀಳಿಗೆಗೆ ಅತಿ ಅವಶ್ಯಕವಾಗಿದೆ.

ತತ್ವಪದಗಳ ಸಂರಕ್ಷಣೆಯ ದೃಷ್ಟಿಯಿಂದ ಮೌಖಿಕ ಪರಂಪರೆಯಿಂದ ಲಿಖಿತ ಮತ್ತು ಡಿಜಿಟಲ್ ರೂಪಕ್ಕೆ ತರುವ ಕಾರ್ಯವು ವೇಗವಾಗಿ ನಡೆಯಬೇಕಿದೆ. ಹಂಪಿ ಕನ್ನಡ ವಿಶ್ವವಿದ್ಯಾಲಯದಂತಹ ಸಂಸ್ಥೆಗಳು ಈ ನಿಟ್ಟಿನಲ್ಲಿ ಮಹತ್ವದ ಸಂಶೋಧನೆಗಳನ್ನು ನಡೆಸಿವೆ. ತತ್ವಪದಗಳು ಅಜ್ಞಾತರ ನಡುವಿನ ಹಾಡುಗಳು. ಅವು ಇಂದಿನ ಪ್ರಜಾಪ್ರಭುತ್ವದ ಆಶಯಗಳಾದ ಸಮಾನತೆ ಮತ್ತು ಭ್ರಾತೃತ್ವವನ್ನು ನೂರಾರು ವರ್ಷಗಳ ಹಿಂದೆಯೇ ಸಾರಿದ ಕ್ರಾಂತಿಕಾರಿ ರಚನೆಗಳಾಗಿವೆ.

ಇಂದಿನ ಸಂಗೀತ ಲೋಕದಲ್ಲಿಯೂ ತತ್ವಪದಗಳು ಹೊಸ ರೂಪ ಪಡೆದುಕೊಳ್ಳುತ್ತಿವೆ. ಜಾನಪದ ಗಾಯಕರು ಮಾತ್ರವಲ್ಲದೆ, ಸುಗಮ ಸಂಗೀತ ಮತ್ತು ಆಧುನಿಕ ವಾದ್ಯವೃಂದಗಳು ತತ್ವಪದಗಳನ್ನು ಯುವಜನತೆಗೆ ತಲುಪಿಸುತ್ತಿವೆ. ಆದರೆ, ಈ ಪ್ರಕ್ರಿಯೆಯಲ್ಲಿ ತತ್ವಪದಗಳ "ತಾತ್ವಿಕ ಗಾಂಭೀರ್ಯ"ವು ಕೇವಲ ಮನರಂಜನೆಯಾಗಿ ಬದಲಾಗದಂತೆ ಎಚ್ಚರವಹಿಸಬೇಕಿದೆ. ಆ ಅಂತರಾರ್ಥವನ್ನು ಅರಿಯದೆ ಕೇವಲ ರಾಗಕ್ಕೆ ಮಾರುಹೋಗುವುದು ಲೇಖನದ ಪೂರ್ವ ಚಿಂತನೆಗಳಿಗೆ ಮಾಡುವ ಅಪಚಾರವಾಗುತ್ತದೆ. ಶಾಲಾ–ಕಾಲೇಜುಗಳ ಪಠ್ಯಕ್ರಮದಲ್ಲಿ ತತ್ವಪದಗಳನ್ನು ಅಳವಡಿಸುವ ಮೂಲಕ ಮಕ್ಕಳಲ್ಲಿ ವೈಚಾರಿಕತೆ ಮತ್ತು ನೈತಿಕತೆಯನ್ನು ಬೆಳೆಸಲು ಸಾಧ್ಯವಿದೆ.

ತತ್ವಪದಗಳ ಪೂರ್ವ ಚಿಂತನೆಗಳು ನಮಗೆ ಕಲಿಸುವ ಪಾಠವೆಂದರೆ ಬದುಕು ಒಂದು ನಿರಂತರ ಅನ್ವೇಷಣೆ. ಹೊರಗಿನ ಪ್ರಪಂಚವನ್ನು ಗೆಲ್ಲುವುದಕ್ಕಿಂತ ಮಿಗಿಲಾಗಿ ತನ್ನೊಳಗಿನ ಅರಿವನ್ನು ಗೆಲ್ಲುವುದು ಶ್ರೇಷ್ಠವಾದುದು. ತತ್ವಪದಗಳ ಈ ದೀರ್ಘ ಪಯಣವು ನಮಗೆ ಸಮೃದ್ಧವಾದ ಸಂಸ್ಕೃತಿಯನ್ನು ನೀಡಿದೆ. ಅದನ್ನು ಮುಂದಿನ ಪೀಳಿಗೆಗೆ ಅರಿವಿನ ದೀಪವಾಗಿ ಹಸ್ತಾಂತರಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಈ ಲೇಖನವು ತತ್ವಪದಗಳ ಹತ್ತು ವಿಭಾಗಗಳ ಮೂಲಕ ಅದರ ಉಗಮದಿಂದ ಇಂದಿನ ಪ್ರಸ್ತುತತೆಯವರೆಗೆ ಸಮಗ್ರ ಸತ್ಯನಿಷ್ಠ ಮಾಹಿತಿಯನ್ನು ಒದಗಿಸಿದೆ.

ಫಲಿತಗಳು :

1. ತತ್ವಪದಗಳು ವೇದೋಪನಿಷತ್ತುಗಳ ಅದ್ವೈತ ತತ್ವವನ್ನು ಜನಪದೀಯಗೊಳಿಸಿದ ಮಹಾನ್ ದಾರ್ಶನಿಕ ಕ್ರಾಂತಿ.
2. ವಚನ, ದಾಸ ಮತ್ತು ಸೂಫಿ ಪರಂಪರೆಗಳ ತ್ರಿವೇಣಿ ಸಂಗಮವೇ ತತ್ವಪದಗಳ ಶಕ್ತಿ.
3. ಸಾಮಾಜಿಕ ಅಸಮಾನತೆ ಮತ್ತು ಮೌಢ್ಯದ ವಿರುದ್ಧ ವೈಚಾರಿಕ ಅಸ್ತ್ರವಾಗಿ ತತ್ವಪದಗಳು ಇಂದಿಗೂ ಪ್ರಸ್ತುತ.

4. ಮೌಖಿಕ ಪರಂಪರೆಯ ಮೂಲಕ ಜ್ಞಾನವನ್ನು ಹಂಚಿದ ತತ್ವಪದಕಾರರು ವಿಶ್ವಮಾನವ ಸಂದೇಶದ ಪ್ರವಕ್ತಾರರು.
5. ಸಂರಕ್ಷಣೆ ಮತ್ತು ಡಿಜಿಟಲೀಕರಣದ ಮೂಲಕ ಈ ಜ್ಞಾನವನ್ನು ಮುಂದಿನ ಪೀಳಿಗೆಗೆ ತಲುಪಿಸುವುದು ಅತ್ಯಗತ್ಯ.
6. ತತ್ವಪದಗಳು ಕೇವಲ ಜನಪದ ಹಾಡುಗಳಲ್ಲ; ಅವು ವೇದೋಪನಿಷತ್ತುಗಳ 'ಅದ್ವೈತ' ಸಿದ್ಧಾಂತ ಮತ್ತು ಸಾಂಖ್ಯ ದರ್ಶನದ 'ಪಿಂಡಾಂಡ–ಬ್ರಹ್ಮಾಂಡ' ತತ್ವವನ್ನು ಸಾಮಾನ್ಯ ಮನುಷ್ಯನ ಅಂತರಂಗಕ್ಕೆ ತಲುಪಿಸಿದ ದಾರ್ಶನಿಕ ರೂಪಕಗಳಾಗಿವೆ.
7. 12ನೇ ಶತಮಾನದ ಶರಣರ ವಚನ ಕ್ರಾಂತಿಯು ತತ್ವಪದಗಳಿಗೆ 'ವೈಚಾರಿಕ ಬೆನ್ನೆಲುಬನ್ನು' ನೀಡಿತು. ವಚನಕಾರರು ಪ್ರತಿಪಾದಿಸಿದ 'ಕಾಯಕವೇ ಕೈಲಾಸ' ಮತ್ತು 'ದೇಹವೇ ದೇಗುಲ' ಎಂಬ ಆಶಯಗಳು ತತ್ವಪದಗಳ ಮೂಲ ದ್ರವ್ಯಗಳಾಗಿ ಕೆಲಸ ಮಾಡಿವೆ.
8. ದಾಸ ಸಾಹಿತ್ಯವು ನೀಡಿದ ಗೇಯ ಸೌರಭ ಮತ್ತು ಕನಕದಾಸರಂತಹ ದಾರ್ಶನಿಕರ ಸಾಮಾಜಿಕ ಕಳಕಳಿಯು ತತ್ವಪದಕಾರರಿಗೆ ಅಧ್ಯಾತ್ಮವನ್ನು ಲೌಕಿಕ ಜೀವನದೊಂದಿಗೆ ಸಮೀಕರಿಸಲು ದಾರಿದೀಪವಾಯಿತು.
9. ಕರ್ನಾಟಕದ ಮಣ್ಣಿನಲ್ಲಿ ಹದಗೊಂಡ ಸೂಫಿ ಸಂತರ 'ಇಷ್ಕ್' (ಪ್ರೇಮ) ಮತ್ತು ಭಾರತೀಯ 'ಭಕ್ತಿ' ಮಾರ್ಗಗಳು ಒಂದಾಗಿ, ಹಿಂದೂ–ಮುಸ್ಲಿಂ ಭಾವೈಕ್ಯದ ಸಮನ್ವಯ ಸಂಸ್ಕೃತಿಯನ್ನು ತತ್ವಪದಗಳು ವಿಶ್ವಕ್ಕೆ ಸಾರಿದವು.
10. ನಾಥ ಪಂಥದ ಹಠಯೋಗ, ಷಟ್ ಚಕ್ರಗಳ ವಿವರಣೆ ಮತ್ತು ಕುಂಡಲಿನಿ ಶಕ್ತಿಯ ಜಾಗೃತಿಯಂತಹ ಗಹನವಾದ ಯೋಗ ವಿಜ್ಞಾನವನ್ನು ತತ್ವಪದಕಾರರು 'ಬೆಡಗಿನ ಪದಗಳ' ಮೂಲಕ ಅತ್ಯಂತ ಕುತೂಹಲಕಾರಿಯಾಗಿ ಮಂಡಿಸಿದ್ದಾರೆ.
11. ಜಾತಿ ಪದ್ಧತಿ, ಅಸ್ಪೃಶ್ಯತೆ, ಪುರೋಹಿತಶಾಹಿಯ ಕಂದಾಚಾರ ಮತ್ತು ಮೌಢ್ಯಗಳ ವಿರುದ್ಧ ತತ್ವಪದಗಳು ವೈಚಾರಿಕ ಅಸ್ತ್ರಗಳಾಗಿ ಕೆಲಸ ಮಾಡಿವೆ. ಮನುಷ್ಯತ್ವವೇ ಪರಮ ಧರ್ಮವೆಂಬ ಸತ್ಯವನ್ನು ಇವು ಪ್ರತಿಪಾದಿಸಿವೆ.
12. ಲಿಖಿತ ದಾಖಲೆಗಳಿಗಿಂತ ಹೆಚ್ಚಾಗಿ ಮೌಖಿಕ ಪರಂಪರೆಯ ಮೂಲಕ ಹರಿದು ಬಂದಿರುವ ಈ ಪದಗಳು, ಜನಪದರ ಆಡುಭಾಷೆಯಲ್ಲೇ ವೇದಾಂತದ ಸಾರವನ್ನು ಸಜೀವವಾಗಿರಿಸುವಲ್ಲಿ ಯಶಸ್ವಿಯಾಗಿವೆ.
13. ತತ್ವಪದಗಳ ಅಂತಿಮ ಗುರಿ 'ಅರಿವು'. ತನ್ನನ್ನು ತಾನು ಅರಿಯುವ ಮೂಲಕ ಸಾಕ್ಷಾತ್ಕಾರ ಪಡೆಯುವುದು ಮತ್ತು ಜಗತ್ತಿನ ಎಲ್ಲವನ್ನೂ ಸಮದೃಷ್ಟಿಯಿಂದ

ಕಾಣುವ 'ಅನುಭಾವಿ' ಸ್ಥಿತಿಯನ್ನು ಇವು ಪ್ರೋತ್ಸಾಹಿಸುತ್ತವೆ.

14. ಇಂದಿನ ಒತ್ತಡದ ಬದುಕಿನಲ್ಲಿ ಮಾನಸಿಕ ಶಾಂತಿ ಮತ್ತು ಸಾಮಾಜಿಕ ಸಾಮರಸ್ಯವನ್ನು ಕಾಪಾಡಿಕೊಳ್ಳಲು ತತ್ವಪದಗಳ ವಿಶ್ವಮಾನವ ಸಂದೇಶವು ಅತ್ಯಂತ ಅನಿವಾರ್ಯವಾದ ಮಾರ್ಗದರ್ಶಿಯಾಗಿದೆ.
15. ತತ್ವಪದಗಳು ಕರ್ನಾಟಕದ ಅಸ್ಮಿತೆಯ ಭಾಗವಾಗಿದ್ದು, ಇವುಗಳ ಸಂರಕ್ಷಣೆ ಮತ್ತು ಮುಂದಿನ ಪೀಳಿಗೆಗೆ ಹಸ್ತಾಂತರಿಸುವುದು ಈ ಮಣ್ಣಿನ ಮೂಲ ಅಧ್ಯಾತ್ಮವನ್ನು ಕಾಪಾಡಿಕೊಂಡಂತೆ ಎಂಬುದು ಈ ಸಂಶೋಧನೆಯ ಅಂತಿಮ ಫಲಿತವಾಗಿದೆ.

'ತತ್ವಪದ: ಪೂರ್ವ ಚಿಂತನೆಗಳು' ಎಂಬ ಈ ಸುದೀರ್ಘ ಸಂಶೋಧನಾತ್ಮಕ ವಿಶ್ಲೇಷಣೆಯಾಗಿ ತತ್ವಪದಗಳು ಕೇವಲ ಸಾಹಿತ್ಯಿಕ ಪ್ರಕಾರಗಳಲ್ಲ ಎಂಬುದು ಸ್ಪಷ್ಟವಾಗುತ್ತದೆ. ಅವು ಈ ಮಣ್ಣಿನ ಮನುಷ್ಯನು ತನ್ನ ಅಂತರಂಗದೊಂದಿಗೆ ನಡೆಸಿದ ಸುದೀರ್ಘ ಸಂವಾದದ ಫಲಿತಗಳು. ಉಪನಿಷತ್ತುಗಳ ಗಹನವಾದ ಅದ್ವೈತ ತತ್ವದಿಂದ ಹಿಡಿದು, ಶರಣರ ಕ್ರಾಂತಿಕಾರಿ ವಚನಗಳವರೆಗೆ; ಹರಿದಾಸರ ಭಕ್ತಿ ಲಹರಿಯಿಂದ ಹಿಡಿದು ಸೂಫಿ ಸಂತರ ಸಮನ್ವಯದ ಪ್ರೇಮದವರೆಗೆ – ಎಲ್ಲಾ ದಾರ್ಶನಿಕ ಪ್ರವಾಹಗಳು ತತ್ವಪದಗಳೆಂಬ ಮಹಾಸಾಗರದಲ್ಲಿ ಬಂದು ಲೀನವಾಗಿವೆ.

ತತ್ವಪದಗಳ ಪೂರ್ವ ಚಿಂತನೆಯಲ್ಲಿ ಒಟ್ಟಾರೆ ಕಾಣುವುದು 'ಸ್ವಯಂ ಅರಿವು'. ತನ್ನನ್ನು ತಾನು ಅರಿಯದವನು ಜಗತ್ತನ್ನು ಅರಿಯಲಾರ ಎಂಬ ಸತ್ಯವನ್ನು ಇವು ಪ್ರತಿಪಾದಿಸಿವೆ. ಮನುಷ್ಯ ನಿರ್ಮಿತ ಜಾತಿ, ಮತ ಮತ್ತು ವರ್ಗದ ಬೇಲಿಗಳನ್ನು ಸಾರಾಸಗಟಾಗಿ ತಳ್ಳಿಹಾಕುವ ತತ್ವಪದಕಾರರು, ಪ್ರತಿಯೊಬ್ಬ ವ್ಯಕ್ತಿಯಲ್ಲೂ ದೈವತ್ವವನ್ನು ಕಂಡರು.

ತತ್ವಪದಗಳ ಈ ಪೂರ್ವ ಚಿಂತನೆಗಳು ಕೇವಲ ಗತಕಾಲದ ನೆನಪುಗಳಲ್ಲ; ಅವು ವರ್ತಮಾನದ ಅನಿವಾರ್ಯತೆಗಳು. ಮನುಷ್ಯತ್ವವೇ ಪರಮ ಧರ್ಮವೆಂಬ ಅರಿವು ಮೂಡಿದಾಗ ಮಾತ್ರ ಸಮಾಜದಲ್ಲಿ ಶಾಂತಿ ನೆಲೆಸಲು ಸಾಧ್ಯ. ಅರಿವಿನ ಹಾದಿಯಲ್ಲಿ ಸಾಗುವ ಪ್ರತಿಯೊಬ್ಬ ಪಥಿಕನಿಗೂ ಈ ತತ್ವಪದಗಳು ಚೈತನ್ಯದ ಸೆಲೆಗಳಾಗಿ ಉಳಿಯುತ್ತವೆ ಎಂಬುದೇ ಈ ಸಂಶೋಧನೆಯ ಅಂತಿಮ ತಾತ್ಪರ್ಯ.

ಅಧ್ಯಯನ ಗ್ರಂಥಗಳು :

1. ಕನ್ನಡ ಸಾಹಿತ್ಯ ಸಮೀಕ್ಷೆ., ಜಿ.ಎಸ್. ಶಿವರುದ್ರಪ್ಪ., 1975, ಶಾರದಾ ಪ್ರಕಾಶನ, ಬೆಂಗಳೂರು.
2. ಕನ್ನಡ ಸಾಹಿತ್ಯ ಚರಿತ್ರೆ., ರಂ.ಶ್ರೀ. ಮುಗಳಿ., 1953, ಉಷಾ ಸಾಹಿತ್ಯ ಮಾಲೆ, ಮೈಸೂರು.
3. ಸಂಶೋಧನಾ ತರಂಗ., ಎಂ. ಚಿದಾನಂದಮೂರ್ತಿ., 1966, ಸಂಯುಕ್ತ ಕರ್ನಾಟಕ ಪ್ರಕಾಶನ, ಬೆಂಗಳೂರು.
4. ಕರ್ನಾಟಕದ ಸಂಸ್ಕೃತಿ ಸಮೀಕ್ಷೆ, ಎಚ್. ತಿಪ್ಪೇರುದ್ರಸ್ವಾಮಿ., 1968, ಡಿ.ವಿ.ಕೆ ಮೂರ್ತಿ ಪ್ರಕಾಶನ, ಮೈಸೂರು.

***

ಮಹಿಳಾ ತತ್ವಪದಗಳಲ್ಲಿ ಪ್ರಭುತ್ವದ ವಿಡಂಬನೆ

ಡಾ. ಈರಪ್ಪ ಪೂಜಾರ
ಉಪನ್ಯಾಸಕರು
ಶ್ರೀ. ಕಾಡಸಿದ್ಧೇಶ್ವರ ಕಲಾ ಮಹಾವಿದ್ಯಾಲಯ
ಹಾಗೂ ಎಚ್.ಎಸ್. ಕೋತಂಬ್ರಿ ವಿಜ್ಞಾನ ಸಂಸ್ಥೆ, ಹುಬ್ಬಳ್ಳಿ
irappap565@gmail.com

ಪ್ರಮುಖ ಪದಗಳು

ಮಹಿಳಾ ತತ್ವಪದಕಾರರು, ಅಜ್ಞಾತ, ಪ್ರಭುತ್ವ, ಸ್ತ್ರೀವಾದಿ, ತಾಯ್ತನ, ದಬ್ಬಾಳಿಕೆ

ಕ್ರಿ.ಶ. ೧೬ನೇ ಶತಮಾನದಿಂದ ಈ ವರೆಗೂ ಬೆಳೆದು ಬಂದಿರುವ ತತ್ವಪದ ಸಾಹಿತ್ಯ ಪ್ರಕಾರದಲ್ಲಿ ಸುಮರು ೨೦ಕ್ಕೂ ಹೆಚ್ಚು ಜನ ಮಹಿಳಾ ತತ್ವಪದಕಾರರು ಕಂಡು ಬರುವುದಲ್ಲದೆ, ಕೆಲವರು ಅಜ್ಞಾನ ಮಹಿಳಾ ತತ್ವಪದಕಾರರೂ ಕಂಡು ಬರುತ್ತಾರೆ. ಇವರಲ್ಲಿ ಹೆಚ್ಚಿನ ಸಂಖ್ಯೆಯ ಮಹಿಳೆಯರು ತಮ್ಮ ಬದುಕಿನಲ್ಲಿ ಸಂಭವಿಸಿದ ವಿವಿಧ ಘಟನೆಗಳಿಂದ ಜರ್ಜರಿತರಾಗಿ ಸಂಸಾರದಿಂದ ವಿಮುಖರಾದರೆ, ಕೆಲವರು ಸಂಸಾರದೊಳಗಿದ್ದೇ ಅನುಭಾವ ಮಾರ್ಗವನ್ನು ಕಂಡುಕೊಂಡಿದ್ದಾರೆ. ಅಲ್ಲದೆ ಇವರು ಶರಣ ಮಾರ್ಗ, ನಾಥಪಂಥ, ಸೂಫಿಪಂಥ, ಅವಧೂತ, ಅಚಲಪರಂಪರೆ ಹೀಗೆ ಮೊದಲಾದ ಪಂಥಗಳಿಂದ ಪ್ರಭಾವಿಸಲ್ಪಟ್ಟಿದ್ದು, ಸಮಾಜದಲ್ಲಿ ಮಹಿಳೆಯರು ಮತ್ತು ಜನಸಾಮಾನ್ಯರ ಭಾವನೆಗಳೊಂದಿಗೆ ಆಟವಾಡುವ ಪುರುಷವರ್ಗ ಮತ್ತು ಅಧಿಕಾರಶಾಹಿಗಳ ನಡಾವಳಿಗಳನ್ನು ವಿಡಂಬನಾತ್ಮಕವಾಗಿ ಬಯಲಿಗೆಳೆದಿದ್ದಾರೆ. ಹೀಗಾಗಿ ಸಂಸಾರಿಕ ಜೀವನ, ಆಶ್ರಯ, ಅಧಿಕಾರ, ಮೊದಲಾದವುಗಳನ್ನು ನಿರ್ಲಕ್ಷಿಸಿದ ಮಹಿಳಾ ತತ್ವಪದಕಾರರು ಸಮಾಜದಲ್ಲಿ ಮುಂದುವರೆದುಕೊಂಡು ಬಂದಿರುವ ಅನಿಷ್ಟ

ಪದ್ಧತಿಗಳು, ಸಾಮಾಜಿಕ ಪಿಡುಗುಗಳನ್ನು ನಿವಾರಿಸುವಲ್ಲಿ ಹೇಗೆ ಪ್ರತಿಕ್ರಿಯಿಸಿದ್ದಾರೆ? ಸಾಮಾನ್ಯ ಜನರಲ್ಲಿ ಅವುಗಳ ಬಗೆಗೆ ಯಾವ ಬಗೆಯ ಮೌಲ್ಯವನ್ನು ಬಿತ್ತಿದ್ದಾರೆ? ಮೇಲ್ವರ್ಗದವರ ಮತ್ತು ಅಧಿಕಾರಶಾಹಿಗಳ ದರ್ಪ ದಬ್ಬಾಳಿಕೆಯನ್ನು ವಿರೋದಿಸಿ ಸಾಮಾಜಿಕ, ರಾಜಕೀಯ, ಧಾರ್ಮಿಕ ವಲಯದಲ್ಲಿ ಸಮಾನತೆಯನ್ನು ಸ್ಥಾಪಿಸಲು ಪ್ರಯತ್ನಿಸಿದ ಅಂಶಗಳನ್ನು ಗುರುತಿಸುವುದು ಈ ಲೇಖನದ ಮುಖ್ಯ ಇದ್ದೇಶವಾಗಿದೆ.

ಮಹಿಳಾ ದೃಷ್ಟಿಕೋನದಿಂದ ತತ್ವಪದ ಸಾಹಿತ್ಯವನ್ನು ಎರಡು ರೀತಿಯಲ್ಲಿ ಗಮನಿಸಬಹುದು. ಒಂದು ತತ್ವಪದಕಾರರೆಲ್ಲರೂ ಮಹಿಳೆಯರನ್ನು ಯಾವ ರೀತಿ ಪರಿಭಾವಿಸಿದ್ದಾರೆ? ಎಂಬುದಾದರೆ, ಇನ್ನೊಂದು ತತ್ವಪದಕಾರ್ತಿಯರಾಗಿ ಮಹಿಳಾ ತತ್ವಪದಕಾರರು ಗುರುತಿಸಿಕೊಂಡದ್ದು ಹೇಗೆ? ಎಂಬುದು. ಇಂತಹ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳುವುದು ಕಷ್ಟಸಾಧ್ಯ. ಕಾರಣ ಕ್ರಿ.ಶ.ಸುಮಾರು ೧೬ನೇ ಶತಮಾನದಿಂದಲೇ ರಚಿತವಾಗಿರುವ ತತ್ವಪದಗಳನ್ನು ಇನ್ನೂವರೆಗೂ ಸಂಪೂರ್ಣವಾಗಿ ಸಂಗ್ರಹಿಸಲು ಸಾಧ್ಯವಾಗಿಲ್ಲ, ಹಾಗೂ ಸಂಗ್ರಹವಾದ ತತ್ವಪದ ಸಾಹಿತ್ಯದ ತಾತ್ವಿಕತೆಯನ್ನು ಸಮಾಜೋಧಾರ್ಮಿಕ ಮೌಲ್ಯಗಳ ಹಿನ್ನೆಲೆಯಲ್ಲಿ ಅಧ್ಯಯನ ನಡೆಸಲು ಸಾಧ್ಯವಾಗಿಲ್ಲ.

'ಚರಿತ್ರೆ' ಎಂಬ ಸುದ್ದಿಗೆ ನಾವು ಹೋಗುವುದಾದರೆ, ಅದೇನದ್ದರೂ ಪುರುಷರ ಸಾಧನೆ ಮತ್ತು ಸಿದ್ದಿಗಳ ಇತಿಹಾಸ. ಹೀಗಾಗಿ ತತ್ವಪದ ಸಾಹಿತ್ಯದಲ್ಲಿ ಮಹಿಳೆಯರ ಪಾಲುದಾರಿಕೆ ಕುರಿತು ಅವಸರದ ಹೇಳಿಕೆ ನೀಡಲಾಗದು. ಯಾಕೆಂದರೆ ಇಂದಿಗೂ ಎಷ್ಟೋ ಜನ ಮಹಿಳೆಯರು ಎಲೆಮರೆಯ ಕಾಯಿಯಂತೆ ಅನುಭಾವ ಮಾರ್ಗದಲ್ಲಿ ಉನ್ನತ ಮಟ್ಟದ ಸಾಧನೆ ಮಾಡಿಯೂ ಯಾರಿಗೂ ಕಾಣದಂತೆ ಮರೆಯಾಗಿಯೇ ಉಳಿದಿದ್ದಾರೆ. ಚರಿತ್ರೆಯಲ್ಲಿ ಹೀಗೆ ಸಾಧನೆ ಮಾಡಿದ ಮಹಿಳಾ ತತ್ವಪದಕಾರರಲ್ಲಿ ಕೆಲವರು ಅಜ್ಞಾತರಾಗಿಯೇ ಉಳಿಯಲು ಇಷ್ಟಪಟ್ಟರೆ, ಇನ್ನೂ ಕೆಲವರು ಮಹಿಳೆಯರು ಎಂಬ ಕಾರಣಕ್ಕಾಗಿ ನರ್ಲಕ್ಷ್ಯ ಮಾಡಲಾಗಿದೆ. ಹಲವು ಪ್ರಯತ್ನಗಳ ನಂತರ ಕನ್ನಡದಲ್ಲಿ ತತ್ವಪದಗಳನ್ನು ರಚಿಸಿದ ಮಹಿಳೆಯರು ಹಾಗೂ ಅವರ ತತ್ವಪದಗಳನ್ನು ಸಂಗ್ರಹಿಸಲಾಗಿದ್ದು, ಸುಮಾರು ೨೦ ಕ್ಕೂ ಹೆಚ್ಚು ಜನ ಮಹಿಳಾ ತತ್ವಪದಕಾರರು ಗುರುತಿಸಿಕೊಳ್ಳುತ್ತಾರೆ. ಅಂಥವರಲ್ಲಿ ಬಿದನೂರಿನ ಗಂಗಮ್ಮ, ಜತ್ತದ ಶಿವಲಿಂಗವ್ವ, ರಾಯಚೂರಿನ ಹನಮಂತವ್ವ, ಖೈನೂರಿನ ರಾಚವ್ವ, ಬಸವಕಲ್ಯಾಣದ ಫೈಮುದಾ ಫಾತೀಮಾ, ಸೊಲ್ಲಾಪೂರದ ಜಯದೇವಿಯಾಯಿ ಲಿಗಾಡೆ, ಹುಲಸೂರಿನ ಕಾಡಾದಿ ಗೌರಮ್ಮ, ತುರುವಿಕೆರೆ ವೀರದಾಸಮ್ಮ, ಮೈಸೂರಿನ ಹಸನ್ ಮಾತಾಜಿ ಮುಂತಾದವರು ತತ್ವಪದಗಳನ್ನು ರಚಿಸಿ ಹಾಡುವುದರೊಂದಿಗೆ ಪ್ರಭುತ್ವವನ್ನು ವಿಡಂಬಿಸುವ ಕೆಲಸ

ಮಾಡಿದ್ದಾರೆ. ಹೀಗಾಗಿ ಅಂತಹ ಒಂದು ವ್ಯವಸ್ಥೆಯನ್ನು ಅಧ್ಯಯನ ಮಾಡುವುದೇ ಈ ಲೇಖನದ ಉದ್ದೇಶವಾಗಿದೆ.

ಪ್ರಭುತ್ವದ ಹೆಸರಿನಲ್ಲಿ ಸಮಾಜದ ಮೇಲ್ವರ್ಗದವರು ಎಸಗುವ ಅನ್ಯಾಯ, ಹಿಂಸೆ ಮತ್ತು ಉಪಟಳಗಳಿಗೆ ಮಹಿಳಾ ತತ್ವಪದಕಾರರೂ ಬಲಿಯಾಗಿದ್ದಾರೆ. ಅವರುಗಳು ನೀಡಿರುವ ಸಮಾಜದ ಎಲ್ಲ ನೋವುಗಳಿಗೆ ಸ್ಪಂಧಿಸಿ ತೀರಾ ಎನಿಸಿದಾಗ ವಿರೋಧ ವ್ಯಕ್ತಪಡಿಸಿದ್ದಾರೆ. ಹೆಣ್ಣು ಮತ್ತು ಹೆಣ್ತನದ ಅರಿವೇ ಇಲ್ಲದ, ಸಾಮಾಜಿಕ ಕಾಳಜಿಯೇ ಇಲ್ಲದ, ಡಾಂಭಿಕತೆಯನ್ನೇ ತಮ್ಮ ಜೀವನದ ಮಂತ್ರವನ್ನಾಗಿಸಿಕೊಂಡ ಪ್ರಭುತ್ವಗಳ ವಿರುದ್ಧ ತತ್ವಪದಗಳನ್ನು ರಚಿಸಿ ಹಾಡಿದ್ದಾರೆ. ಒಂದು ರೀತಿಯ ಬಂಡಾಯ ಮನೋಧರ್ಮ ಹೊಂದಿದ ಇವರ ಪದಗಳಲ್ಲಿ ನಶಿಸಿ ಹೋಗುತ್ತಿರುವ ಮಾನವೀಯ ಮೌಲ್ಯ, ಸಾಮಾಜಿಕ ಕಳಕಳಿ, ಸ್ತ್ರೀ ಸ್ಥಾನಮಾನಗಳು ಜಾಗೃತಗೊಂಡಿವೆ.

ಆತ್ಮ ಮತ್ತು ಪರಮಾತ್ಮನ ನಡುವಿನ ಅನುಸಂಧಾನವೇ ತತ್ವಪದ ಸಾಹಿತ್ಯದ ಮೂಲ ನೆಲೆಯಾಗಿದ್ದರೂ, ಜನಸಾಮಾನ್ಯರಲ್ಲಿ ನೈತಿಕ ಮೌಲ್ಯಗಳನ್ನು ಬಿತ್ತುವುದರ ಮೂಲಕ ಅವರ ಮನಃಪರಿವರ್ತನೆಗೆ ಕಾರಣರಾಗಿದ್ದಾರೆ. ಅಲ್ಲದೆ ವ್ಯಕ್ತಿಯ ಚರಿತ್ರೆಗಿಂತ ಚಾರಿತ್ರ್ಯಕ್ಕೆ, ಜಾತಿಗಿಂತ ಗುಣಕ್ಕೆ ಮಹತ್ವ ನೀಡಿದ ಮಹಿಳಾ ತತ್ವಪದಕಾರರು ಜಾತಿಬೇಧ, ವರ್ಗಬೇಧ, ಲಿಂಗಬೇಧ, ಸ್ತ್ರೀ–ಸ್ಥಾನಮಾನ, ವೃತ್ತಿ, ಅಧಿಕಾರ, ಸಂಪತ್ತು, ಮಡಿ–ಮೈಲಿಗೆ, ಅಸ್ಪೃಶ್ಯತೆ, ಶೋಷಣೆ, ಧಾರ್ಮಿಕ ವಿಚಾರ ಹೀಗೆ ಮೊದಲಾದ ವಿಚಾರಗಳನ್ನು ವಿಮರ್ಶಿಸುವುದಲ್ಲದೆ ಅವುಗಳನ್ನು ವಿರೋಧಿಸುವ ಕೆಲಸ ಮಾಡಿದ್ದಾರೆ.

“ಹೆಣ್ಣಿನ ಹೊಟ್ಟಿಲಿ ಹುಟ್ಟ್ಯಾರಿವರು
“ಮಾ” ಅಂತ ಕರಿತಾರಿವರು
ಮುಟ್ಟಾಗ್ಯಾಳಂತ ದೂರ ಹಾಕಿ
ಮ್ಯಾಲಿಂದೆಲ್ಲಾ ಕೊಟ್ಟಾರಿವರು
ಎದಿಯ ಹಾಲ ಕುಡಿದಾರಿವರು
ಬುದ್ದಿಯಿಲ್ಲಂತ ಜರಿತಾರಿವರು
ತಿದ್ದಿ ತೀಡಿ ಬೆಳಸದಕಿಗಿ
ಕಿಮ್ಮತ್ತಿಲ್ಲದೆ ನುಡಿತಾರಿವರು”[೧]

ಮೇಲಿನ ಪದದಲ್ಲಿ ಹಡೆದ ತಾಯಿಯನ್ನು ಕೀಳಾಗಿ ಕಾಣುವ ಮಕ್ಕಳ ಮನಸ್ಥಿತಿಯನ್ನು ಫೈಮುದಾ ಫಾತೀಮಾ ಸಂಕಟದಿಂದ ವಿವರಿಸಿದ್ದಾಳೆ. ಹೆತ್ತೊಡಲಿನ

ಕಿಚ್ಚಿನಿಂದ ಹುಟ್ಟಿದ ಈ ತತ್ವಪದ ಏಕ ಕಾಲಕ್ಕೆ ವಿವಿಧ ಪ್ರಶ್ನೆ ಎತ್ತುತ್ತದೆ. ಪುರುಷ ಪ್ರಧಾನ ಸಮಾಜವು ಹೆಣ್ಣನ್ನು ಕೇವಲ ತಮ್ಮ ಭೋಗಕ್ಕೆ ಮತ್ತು ಮಕ್ಕಳನ್ನು ಹೆರುವುದಕ್ಕೆ ಬಳಸಿಕೊಂಡು ಕೈಬಿಡುವ ಅಮಾನವೀಯ ಕೃತ್ಯಕ್ಕೆ ಒಳಗಾಗಿದ್ದು, ಮುಟ್ಟಿನ ಕಾರಣವಾಗಿ ಹೆಣ್ಣನ್ನು ದೂರವಿಡುವ ಪದ್ಧತಿಯನ್ನು ಫೈಮುದಾ ಘಾತೀಮಾ ಖಾರವಾಗಿ ಪ್ರಶ್ನಿಸಿದ್ದಾಳೆ. ಇಂದಿನ ಸ್ತ್ರೀವಾದಿ ಚಿಂತನೆ, ಚಳುವಳಿ, ಹೋರಾಟ ಮತ್ತು ಸಾಮಾಜಿಕ ನ್ಯಾಯದ ಪರಿಚಯವಿಲ್ಲದ ಘಾತೀಮಾ ಎತ್ತಿದ ಪ್ರಶ್ನೆಗಳು ಈ ಸಮಾಜದಲ್ಲಿ ಹೆಣ್ಣು ಎದುರಿಸಿದ ಶೋಷಣೆ–ದೌರ್ಜನ್ಯಕ್ಕೆ ಎದುರಾದ ಮಾತುಗಳೆ ಆಗಿವೆ. ಆದ್ದರಿಂದ ಫೈಮುದಾ ಘಾತೀಮಾ ಗಂಡು ಮತ್ತು ಹೆಣ್ಣನ್ನು ಸಮಾನವಾಗಿ ನೋಡುತ್ತಾ 'ಪುರುಷ ಶ್ರೇಷ್ಟ ಮಹಿಳೆ ಕನಷ್ಟ' ಎನ್ನುವ ವಿಚಾರವನ್ನು ಬಹಿರಂಗವಾಗಿಯೇ ವಿರೋಧಿಸಿದ್ದಾಳೆ.

"'ಮಾ' ಅಂದರ ಅಕಿ ಯಾರು
ಧರತಿ ಮ್ಯಾಲಿನ ಖರೇ ದೇವರು
ಹಡದಕಿಗಿ ಉಪವಾಸ ಹಾಕತಿರಿ
ಕಲ್ಲಿಗಿ ಉಣು ಉಣು ಅಂತ ಎಡಿ ಹಿಡಿತಿರಿ
ಕಲ್ಲಿನಂತ ಬುದ್ದಿ ನೀವು ಬೇಗ ಬಿಡರಿ
ಹಾಲು ಕುಡಸದಕಿಗಿ ಬೆಲ್ಲ ತಿನಸರಿ"[೨]

ಮೇಲಿನ ತತ್ವಪದವೂ ಬಸವಕಲ್ಯಾಣದ ಫೈಮುದಾ ಘಾತೀಮಾಳ ರಚನೆಯೇ ಆಗಿದೆ. ಘಾತೀಮಾ ಇಲ್ಲಿ ತಾಯಿ ಮತ್ತು ತಾಯ್ತನದ ಮಹತ್ವವನ್ನು ತಿಳಿಸಿದ್ದಾಳೆ. ಕುಟುಂಬ ಎಂದೊಡನೆ ಮೊದಲ ಸ್ಥಾನ ತಾಯಿಯದಾಗಿದೆ. ಕಂದಾಚಾರ, ಬೂಟಾಟಿಕೆಗಳ ಬೆನ್ಹತ್ತಿ ಗಂಡುಮಕ್ಕಳು ಮನೆಯೊಳಗಿನ ತಾಯಿ ದೇವರನ್ನು ಪೂಜಿಸುವ ಬದಲು ಗುಡಿ ಗುಂಡಾರಗಳನ್ನು ಸುತ್ತಾಡಿ ಕಲ್ಲಿನ ಮೂರ್ತಿಯನ್ನು ಪೂಜಿಸುತ್ತಿದ್ದಾರೆ. ಇಂದಿನ ವೈಚಾರಿಕ ಬದುಕಿನಲ್ಲಿ ಘಾತೀಮಾಳ ಇಂತಹ ತತ್ವಪದಗಳು ತುಂಬಾ ಚರ್ಚೆಗೆ ಈಡಾಗುತ್ತೀವೆ. ಹಡದಕಿಗಿ ಉಪವಾಸ ಹಾಕಿ ಕಲ್ಲು ದೇವರಿಗೆ ಎಡಿ ಹಿಡಿಯುವ ಪದ್ಧತಿಯನ್ನು ವಿರೋಧಿಸಿದ ಫೈಮುದಾ ಘಾತೀಮಾ ಗಂಡ ಮತ್ತು ಮಕ್ಕಳ ತುಂಬು ಕುಟುಂಬವನ್ನು ಉಪವಾಸವಿರಿಸದ ತಾಯಿ ಹರೆಯಕ್ಕೆ ಬರುತ್ತಿದ್ದಂತೆಯೇ ನಮ್ಮಿಂದ ಉಪವಾಸವಿರಬೇಕಾಗಿದೆ ಎನ್ನುತ್ತಾಳೆ. ಹಣದ ಬೆನ್ಹತ್ತಿ ತಾಯ್ತನದ ಮಹತ್ವವನ್ನು ಮರೆತು ಬಾಯಿಗೆ ಬಂದ ಹಾಗೆ ಬಯ್ಯುತ್ತೀರಿ ಎನ್ನುವಲ್ಲಿ ಫೈಮುದಾ ಘಾತೀಮಾಳ ಸ್ತ್ರೀವಾದಿ ಚಿಂತನೆ ಎದ್ದು ಕಾಣುತ್ತದೆ. ಅವಳಿಲ್ಲದೆ ನಮ್ಮ

ಜನನವಿದೆಯೇ? ಇಲ್ಲ ಆದ್ದರಿಂದ ಮೊದಲು ಹಣದ ಧಿಮಾಕ ಕೈಚೆಲ್ಲಿ ತಾಯಿನೆ ಮಸೀದಿ ಅಂತ ತಿಳಿದು ಸೇವೆ ಮಾಡಿರಿ ಎಂದು ಪದದುದ್ದಕ್ಕೂ ತಾಯಿಯನ್ನು ಹಾಡಿ ಹೊಗಳಿದ್ದಾಳೆ.

ಪ್ರಾಚೀನ ಕಾಲದಿಂದಲೂ ಪುರುಷ ಪ್ರಧಾನ ವ್ಯವಸ್ಥೆಗೆ ಮಹಿಳೆಯು ಬಲಿಯಾಗುತ್ತಲೇ ಬಂದಿದ್ದಾಳೆ. ಆದರೆ ತಮಗಾದ ಶೋಷಣೆ, ಅನ್ಯಾಯ ಮತ್ತು ದೌರ್ಜನ್ಯಗಳ ವಿರುದ್ಧ ಗಟ್ಟಿ ಧ್ವನಿಯಲ್ಲಿ ಮಾತನಾಡಿದ ಮಹಿಳೆಯರನ್ನು ವಚನಯುಗದ ನಂತರದ ಕಾಲಘಟ್ಟಗಳಲ್ಲಿ ತಿಳಿಯುತ್ತೇವೆ. ಇದಕ್ಕೆ ಉದಾಹರಣೆಯಾಗಿ ತತ್ವಪದಕಾರ್ತಿ ಖೈನೂರಿನ ರಾಚವ್ವ ಗುರುತಿಸಿಕೊಳ್ಳುತ್ತಾಳೆ. ನಮಗೆ ದೊರೆತಿರುವ ಆಧಾರದ ಮೇಲೆ ಯಾವುದೇ ಬಂಡಾಯ ಸಾಹಿತ್ಯಕ್ಕೆ ಕಡಿಮೆ ಇಲ್ಲದ ರಾಚವ್ವನ ಒಂದೇ ಒಂದು ತತ್ವಪದವು ಊರ ಮುಖಂಡನಾಗಿದ್ದ 'ಮುಡದಾರ ಮಲ್ಲಪ್ಪ'ನ ಮನಃಪರಿವರ್ತನೆಗೆ ಕಾರಣವಾಗಿದೆ.

"ನಾಚಿಕಿಲ್ಲೋ ಭಾಡ್ಯಾ ನಮಗ್ಯಾಕ ತಡವತಿ
ಛೀ ಛೀ ಅನಸಿಕೊಂಡಲ್ಲಿ ಬಂದು ಯಾಕ ಡೊಗ್ಗತಿ
ಸಾಚಾನಂಗ ಮೋತಿ ಮ್ಯಾಲ ಎತ್ತಿ ತಿರುಗತಿ
ಕುಂಬಾರ ರಾಚಿ ನರಕ ತಿಂದು ಏಸು ದಿನ ಬದುಕತಿ"[೩]

ರಾಚವ್ವನಿಗೆ ಬುದ್ಧಿ ತಿಳಿಯುವ ಮೊದಲೆ ಗಂಡನಾದವನು ಮರಣ ಹೊಂದಿದರೆ, ಅದೇ ಸಂದರ್ಭದಲ್ಲಿಯೇ ಪಾಲಕರು ತೀರಿ ಹೋಗುತ್ತಾರೆ. ಮನೆತನದ ಕಂಬಾರಿಕೆ ವೃತ್ತಿಯೇ ಹೊಟ್ಟೆಯನ್ನು ಭರಿಸುತ್ತಿರುವಾಗ ಇವಳು ಹರೆಯಕ್ಕೆ ಬರುತ್ತಿದಂತೆಯೇ ಊರ ಮುಖಂಡನಾಗಿದ್ದ 'ಮುಡದಾರ ಮಲ್ಲಪ್ಪ'ನ ದೃಷ್ಟಿ ಇವಳ ಮೇಲೆ ಬೀಳುತ್ತದೆ. ಜಮೀನ್ದಾರಿಕೆಯ ವ್ಯವಸ್ಥೆಯಲ್ಲಿ ಪುರುಷನ ಗತಿ ಇಲ್ಲದ, ಬಡವರ ಮನೆಯ ಹೆಣ್ಣು ಮಕ್ಕಳು ಊಳ್ಳವರಿಗೆ ಸೆರಗು ಹಾಸುವುದು ಅನಿವಾರ್ಯವಾಗಿತ್ತು. ಆಗ ಖೈನೂರಿನ ರಾಚವ್ವ ಅನಿವಾರ್ಯವಾಗಿ 'ಮುಡದಾರ ಮಲ್ಲಪ್ಪ'ನಿಗೆ ಇಟ್ಟುಕೊಂಡವಳಾಗಿ ಜೀವನ ನಡೆಸಬೇಕಾಯಿತು. ಆದರೆ ರಚವ್ವನಿಗೆ ಮುಡದಾರ ಮಲ್ಲಪ್ಪನ ಸಂಬಂಧ ಹೇಸಿಗೆಯಾಗಿ 'ಕಡಕೋಳ ಮಡಿವಾಪ್ಪ ಮತ್ತು ಶಿಷ್ಯಬಳಗ'ದ ಉಪಾಯದಂತೆ ಭಜನಾ ಗೋಷ್ಠಿಯಲ್ಲಿ ಮುಖ್ಯ ಗಾಯಕಿಯಾಗಿ ಮೇಲಿನಂತೆ ಪದ ಕಟ್ಟಿ ಹಾಡಿ ಮುಡದಾರ ಮಲ್ಲಪ್ಪನ ಮಾನ ಹರಾಜು ಹಾಕುತ್ತಾಳೆ. ಇದು ಸ್ತ್ರೀವಾದದ ಮೊದಲ ಹೆಜ್ಜೆಯೆಂಬಂತೆ ಸಮಾಜದಲ್ಲಿ ಪರೋಹಿತಶಾಹಿ ಮತ್ತು

ಜಮೀನ್ದಾರಿ ವ್ಯವಸ್ಥೆಯನ್ನು ಎದುರು ಹಾಕಿಕೊಂಡು ಬದುಕು ನಡೆಸಿರುವುದನ್ನು ಬಯಲಿಗೆಳೆಯುತ್ತದೆ.

"ಚಾಂಡಾಲ ಹೊರಗಿಹನೆ ಊರೊಳಗಿಲ್ಲವೇ
ಚಾಂಡಾಲ ಹೊರಗಿಹನೆ
ಪರರಿಗೆ ಕೇಡು ಬಯಸುವವನೆ ಪರಮ ಚಾಂಡಾಲ
ಜೀವರನು ಅಪಹರಿಸುವವ ದೇವ ಗೋವುಗಳ
ಮಾರಿ ತಿಂದವ ಪರಸ್ತ್ರೀಯರ ಕಂಡು
ಮೋಹಿಸಿದವನೆ ಪರಮ ಚಾಂಡಾಲ"[೪]

ಮಹಿಳಾ ತತ್ವಪದಕಾರರಲ್ಲಿ ರಾಯಚೂರಿನ ಹನಮಂತವ್ವ ಅಂತರಂಗದ ಅಪರೂಪದ ಸಾಧಕಿಯಾಗಿದ್ದಾಳೆ. ಸ್ವಾರ್ಥವನ್ನೆ ತಮ್ಮ ಬದುಕನ್ನಾಸಿಕೊಂಡು ಜನಸಾಮಾನ್ಯರಿಗೆ ಹಿಂಸೆ ನೀಡುವದನ್ನು ಕಂಡು ರೋಸಿ ಹೋಗಿದ್ದಾಳೆ. ಚಾಂಡಾಲ ಹೊರಗಿಹನೇ? ಊರೊಳಗಿಲ್ಲವೇ? ಎಂದು ಪ್ರಶ್ನೆ ಎತ್ತುವ ಮೂಲಕ ಸಮಾಜದಲ್ಲಿ ನಡೆಯುವ ಮೋಸ, ವಂಚನೆ, ಅನ್ಯಾಯ, ದರೋಡೆ, ದರ್ಪ, ದಬ್ಬಾಳಿಕೆ, ಸ್ತ್ರೀ ವ್ಯಾಮೋಹ ಮೊದಲಾದ ಹೀನ ಕೃತ್ಯಗಳನ್ನು ವಿರೋಧಿಸಿದ್ದಾಳೆ. ಅಲ್ಲದೆ ಗುರುವಿನ ಮಹಿಮೆಯನ್ನು ಅರಿಯದೆ ಸಾಮಾನ್ಯ ಮನುಷ್ಯನೆಂದು ಬಗೆದು ಗುರುವಿನ ನಂದಿಸಿದವನೆ 'ಪರಮ ಚಾಂಡಾಲ' ಎನ್ನುತ್ತಾಳೆ. ಹೀಗೆ ದೊಡ್ಡ ದೊಡ್ಡ ಮಾತುಗಳ ಮೂಲಕ ಹಲವಾರು ವೇಷ, ಭಾಷೆ ಧರಿಸಿ ಹಣ ಗಳಿಸುವವ, ಗುರು ವೆಂಕಟೇಶನ್ನು ದೂಷಿಸುವವ ಪರಮ ಚಾಂಡಾಲ ಎನ್ನುವಲ್ಲಿ ಹನಮಂತವ್ವನ ಗುರುಭಕ್ತಿಯನ್ನು ಕಾಣುತ್ತೇವೆ. ಮುಂದುವರೆದು ಹನಮಂತವ್ವ ತನ್ನದೇ ಮತ್ತೊಂದು ಪದದಲ್ಲಿ ಮೇಲ್ವರ್ಗದವರ, ಸಮಾಜದಲ್ಲಿ ಹಿರಿಯರೆನಿಸಿಕೊಂಡವರ ನಡಾವಳಿಗಳನ್ನು ಹೀಗೆ ವ್ಯಕ್ತಪಡಿಸಿದ್ದಾಳೆ.

"ಬರಿ ಡಂಭವೋ ಬರಿ ಡಂಭವೋ
ಬರಿ ಡಂಭವಿದು ಬಾಯಿ ಬಡುಕರದು

ಉತ್ತಮರೆಂದು ಚಿತ್ತದೊಳಗೆ
ಉತ್ಸಾಹದಿಂದ ನಂಬಿದೆವೊ
ಆಸೆಯಿಂದಲಿ ಮೋಸ ಮಾಡುವ
ಆತ್ಮಘಾತಕ ಪಾತಕರು"[೫]

ಎಂದು ಬಣ್ಣದ ಮಾತುಗಳ ಮೂಲಕ ಜನಸಾಮಾನ್ಯರ ಮನಸ್ಸಿನಲ್ಲಿ ಇಲ್ಲದ ಭಾವನೆ ಹುಟ್ಟಿಸಿ ಆಸೆ ಪೂರೈಸಿಕೊಳ್ಳುವ ಹಿರಿಯರೆನಿಸಿಕೊಂಡವರ ದುರ್ಗುಣಗಳನ್ನು ತಿಳಿಸುತ್ತಾಳೆ. ಅಲ್ಲದೆ ಆರು ಶಾಸ್ತ್ರ, ಹದಿನೆಂಟು ಪುರಾಣ, ಓದಿ ಕೇಳಿದರೂ ಪರನಿಂದನೆಗಳ, ಪರಸ್ತ್ರೀಯರ ಮೇಲಿನ ವ್ಯಾಮೋಹ ಇವರು ಬಿಟ್ಟಿಲ್ಲ ಎನ್ನುವಲ್ಲಿ ಮುಖ್ಯರೆನಿಸಿಕೊಂಡವರ ಈ ಗುಣಗಳು ತಳದಿಂದಲೇ ಬೆಳೆದು ಬಂದಿವೆ ಎಂಬುದನ್ನು ಬಯಲಿಗೆಳೆದಿದ್ದಾಳೆ.

"ಕೊಟ್ಟು ಉಣ್ಣೊ ನನ್ನ ಕುಲಪುತ್ರ
ಬಿಚ್ಚಿ ಉಣ್ಣೊ ನನ್ನ ಸುಪುತ್ರ
ಕೊಟ್ಟು ಬಿಚ್ಚಿ ಉಂಡಿ ಎಂದರ
ದಿಟ್ಟನು ನೋಡು ನೀನೆ ಮೃಢನು

ಕತ್ತೆ ಹಾಂಗ ದುಡಿದು ಗಳಿಸಿಟ್ಟಿ
ಅದು ಮಡದಿ ಮಕ್ಕಳಿಗೆಂದು ನೀ ಆಶೆ ಪಟ್ಟಿ
ನನಗಾಗಿ ನೀ ಏನು ಮಾಡಿದಿ
ಮಾಡಿದ್ದೆಲ್ಲ ಪರರಿಗಿಟ್ಟು ಪಾಪ ಸುತ್ತಿಕೊಂಡಿ
ಎಲೆ ಹುಚ್ಚಿ ಪಾಪ ನೀ ಸುತ್ತಿಕೊಂಡಿ"[೬]

ಇದು ತತ್ವಪದಕಾರ್ತಿ ಧನ್ನೂರಿನ ತಾಯಮ್ಮನ ತತ್ವಪದವಾಗಿದೆ. ಹಸಿವು, ಜ್ಞಾನ, ಸ್ವಾರ್ಥ, ಸಂಪತ್ತಿನ ಮದದಲ್ಲಿ ಮನುಷ್ಯ ತನ್ನನ್ನೇ ತಾನು ಮರೆತಿದ್ದಾನೆ. ತಾನು ತನ್ನದೆನ್ನುವ ಮನಸ್ಸಿನ ಉಪಟಳದಲ್ಲಿ ಸಿಲುಕಿ ಒದ್ದಾಡುವುದನ್ನು ಧನ್ನೂರಿನ ತಾಯಮ್ಮ ಇಲ್ಲಿ ತಿಳಿಸಿದ್ದಾಳೆ. ಹೀಗಾಗಿ ಕೊಟ್ಟು ಉಣ್ಣೊ ಎನ್ನುವಲ್ಲಿ 'ಹೊಟ್ಟೆಯ ಹಸಿವನ್ನು', ಬಿಚ್ಚಿ ಉಣ್ಣೊ ಎನ್ನುವಲ್ಲಿ 'ಜ್ಞಾನದ ಹಸಿವನ್ನು' ನೀಡಿ ಇದಕ್ಕೆ ಸ್ಪಂದಿಸಿ ನಡೆದರೆ ನೀನೆ ದೇವನಾಗುವಿ ಎನ್ನುವಲ್ಲಿ ತಾಯಮ್ಮನ ಸಾಮಾಜಿಕ ಕಾಳಜಿ ಎದ್ದು ಕಾಣುತ್ತದೆ. ಮುಂದುವರೆದು 'ಕತ್ತೆಯಂತೆ ದುಡಿ ದುಡಿದು ಮಡದಿ ಮಕ್ಕಳಿಗೆಂದು ಕೂಡಿಟ್ಟಿ' ಎನ್ನುವಲ್ಲಿ ತಾಯಮ್ಮ ಸ್ವಾರ್ಥ ಬದುಕಿನ ಮನಸ್ಥಿತಿಯನ್ನು ಅನಾವರಣ ಮಾಡುತ್ತಾಳೆ. ಮನುಷ್ಯನ ಲೌಕಿಕ ಬದುಕಿನಲ್ಲಿ ಸಂಭವಿಸುವ ಎಲ್ಲವನ್ನೂ ಬಿಡಿ ಬಿಡಿಯಾಗಿ ಚರ್ಚಿಸಿ 'ಯ್ಯಾಳೆ ಮೀರಿಲ್ಲ ತಿಳಕೋ ನೀ ಬೇಗಪ್ಪ' ಎಂದು ಆಧ್ಯಾತ್ಮ ಮಾರ್ಗದ ದಾರಿ ತೋರಿಸಿ, ಆ ಮೂಲಕ 'ವ್ಯಕ್ತಿಯು ತನ್ನ ಸಾಧನೆಯಿಂದ ಶ್ರೇಷ್ಠತೆಯನ್ನು ಗಳಿಸಬೇಕೆಂಬ ನಿಲುವ'ನ್ನು ವ್ಯಕ್ತಪಡಿಸಿದ್ದಾಳೆ.

"ಸ್ತ್ರೀವಾದ ಎನ್ನುವುದು ಸಮಗ್ರ ಬದುಕಿನ ಬಗೆಗಿರುವ ಒಂದು ವೈಜ್ಞಾನಿಕ ಕಣ್ಣೋಟವಲ್ಲದೆ ಮತ್ತೇನೂ ಅಲ್ಲ. ಅದು ಜೀವಂತ ವಾದವೂ ಹೌದು. ಅಖಂಡ ಜೀವಪರವಾದವೂ ಹೌದು. ಏನ್ಕೇನ ಕಾರಣದಿಂದ ಈವರೆಗಿನ ಸಾಮಾಜಿಕ ಬದುಕಿನಲ್ಲಿ ನುಸುಳಿಕೊಂಡಿರುವ ತಾರತಮ್ಯ, ಶೋಷಣೆ, ದಬ್ಬಾಳಿಕೆ ಮತ್ತು ಎಲ್ಲ ಬಗೆಯ ಅಸಮನತೆಯನ್ನು ಸಾಧಾರವಾಗಿ ವಿರೋಧಿಸುವ ವಿಚಾರವೂ ಹೌದು."[೭] ಇದಕ್ಕೆ ಮಹಿಳಾ ತತ್ವಪದಕಾರರು ಹೊರತಾಗಿಲ್ಲ. ಸಮಾಜದ ವಿವಿಧ ತೊಂದರೆಗಳಿಗೆ ಒಳಗಾಗಿ ತಾವು ಕಂಡ ಅನುಭವಗಳಿಗೆ, ಒದಗಿ ಬಂದ ಪ್ರಶ್ನೆಗಳಿಗೆ ನೇರ ಮಾತಿನಲ್ಲಿ ಉತ್ತರಗಳನ್ನು ನೀಡುತ್ತಾರೆ. ಉದಾಹರಣೆಗೆ,

"ಹೊಲೆಯ ಹೊಲೆಯ ಅಂತಾರಿವರು
ಹೊಲೆಯಗ ಊರ ಹೊರಗ ಇಟ್ಟಾರಿವರು
ಹೊಲಸು ಮಾಡಿದವರು ಹೊಲೆಯರೆಂದು
ತಿಳಿಯದೆ ಹೋದ ತಿಳಿಗೇಡಿ ಇವರು
ರಾತ್ರಿಗೆ ನಮ್ಮ ಹೊರಸಿಗೆ ಬರತಾರಿವರು
ಹರಿದ ಕೌದಿ ಹೊಲಸ ಕಾಣಲ್ಲ ಇವರಿಗೆ
ಹೊತ್ತ ಹೊಂಡಟಗಿ ಮತ್ತ ಸುರು ಮಾಡ್ಯಾರಿವರು
ಹೊಲೆ ಹೊಲೆ ಅಂತಾ ಜರಿತಾರ ಇವರು"[೮]

ಇದು ಆಜ್ಞಾತ ತತ್ವಪದಕಾರ್ತಿಯಾಗಿ ಗುರುತಿಸಿಕೊಂಡ 'ಹೊಲೆಯರ ಚಂದವ್ವ'ನ ತತ್ವಪದವಾಗಿದೆ. ಇಲ್ಲಿ ಚಂದವ್ವ ತನ್ನ ಹೆಸರಿನ ಸುಳಿವು ನೀಡುತ್ತಾ, ಸಮಾಜದ ಮೇಲ್ವರ್ಗದವರು ತಾವೇ ಜಾಣರೆಂದು ಬೀಗುತ್ತಾ, ತಾವೇ ಶ್ರೇಷ್ಠರೆಂದು ಘೋಷಿಸಿಕೊಂಡು ಸಮಾಜದ ಇತರರನ್ನು ಹೇಗೆ ಅಪಮಾನಗೊಳಿಸುತ್ತಾರೆಂದು ಹಾಡಿದ್ದಾಳೆ. ಅಲ್ಲದೆ 'ಜ್ಞಾನ'ವನ್ನು ಮೇಲ್ವರ್ಗದವರಿಗೆ ಸೀಮಿತಗೊಳಿಸಿರುವುದನ್ನು ಪ್ರಶ್ನಿಸುತ್ತಾಳೆ. ಜ್ಞಾನಕ್ಕೂ, ಜಾತಿಗೂ ಯಾವುದೆ ಸಂಬಂಧವಿಲ್ಲ ಎಂಬುದನ್ನು ಬಯಲುಗೊಳಿಸುತ್ತಲೇ ಜ್ಞಾನದ ಕುರಿತಾದ ಪೌರಾಣಿಕ ಮಾತನ್ನು ಒಡೆಯುತ್ತಾಳೆ. ಇದೇ ಮಾರ್ಗದಲ್ಲಿ ತತ್ವಪದಕಾರ್ತಿ ಯನಗುಂಟಿ ವೀರಮ್ಮ 'ಅಂಗದಾ ಗುಣ ಹಿಂಗಿಸಲ್ಕೆ ಮಂಗನಂತೆ ಜಿಗಿದೆ ಜಿಗಿದಿ ಮಂದಿ ಮಕ್ಕಳ ಖಬರ ಇಲ್ಲದೆ ಸಂದು ನೋಡಿ ಕೆಣಕಿದೆಲ್ಲೊ' ಎನ್ನುತ್ತಾ ಮನುಷ್ಯನ ದುರ್ಬುದ್ಧಿಯನ್ನು ಬಹಿರಂಗ ಪಡಿಸುತ್ತಾಳೆ. ಹೀಗೆ ಮಹಿಳಾ ತತ್ವಪದಕಾರರು ಸಮಾಜದ ಬಡಜನರನ್ನು, ಸ್ತ್ರೀಯರನ್ನು ಹೀನವಾಗಿ ಕಾಣುವ ಪ್ರಭುತ್ವಗಳಿಗೆ ವಿರೋಧ ವ್ಯಕ್ತಪಡಿಸಿದ್ದಾರೆ.

"ನಾ ಹಾರುತಿ ನನಗಿಲ್ಲ ಯಾವ ಭೀತಿ
ನಾ ಹಿಡಿದ ಹಾದಿ ಬ್ಯಾರೆ ಐತಿ
ಅದಕ ನಾ ಹಾರುತಿ
ಮಡಿ ಮಡಿ ಅನ್ನದ ಹಾರುತಿ
ಮಡಿ ಎಂಬುದೇನ ಅರಿತ ಹಾರುತಿ
ನುಡಿಯ ಮಡಿ ಮಾಡಿದ ಹಾರುತಿ
ನಡೆಯ ಮಡಿ ಮಾಡಿದ ಹಾರುತಿ"[೯]

ಹೊಲೆಯರ ಚಂದವ್ವನ ಪದಕ್ಕೆ ವ್ಯತಿರಿಕ್ತವಾಗಿ ಮೂಡಿ ಬಂದಿರುವ ಈ ಪದ ಅಜ್ಞಾತ ತತ್ವಪದಕಾರ್ತಿ ಪದ್ಮಾವತಿಯದಾಗಿದೆ. ಚಂದವ್ವ ಮತ್ತು ಪದ್ಮಾವತಿಯ ಪದಗಳು ಸಾಹಿತ್ಯಿಕವಾಗಿ ಅಷ್ಟು ಮಹತ್ವ ಪಡೆಯದಿದ್ದರೂ ಅವು ಸೃಷ್ಟಿಸಿದ ವಿಚಾರ, ಎತ್ತಿದ ಪ್ರಶ್ನೆಗಳು, ಒಳಗೊಂಡ ನೈತಿಕತೆ ತುಂಬಾ ಗಮನ ಸೆಳೆದಿವೆ. ಚಂದವ್ವನ ಪದ ಮಹಿಳೆಯ ನೋವನ್ನು ಬಿಡಿ ಬಿಡಿಯಾಗಿ ತೆರೆದಿಟ್ಟರೆ, ಪದ್ಮಾವತಿ ಬ್ರಾಹ್ಮಣ್ಯದ ಅಹಂಮಿಕೆಯನ್ನು ನಿರಾಕರಿಸಿದ್ದಾಳೆ. ಇವಳು ಸಾಂಪ್ರದಾಯಿಕ ಜಾತಿವಾದಿಯಲ್ಲ. ಮಡಿ ಮೈಲಿಗೆಯ ಅಹಂಮಿಕೆಯಿಂದ ಮನುಷ್ಯರನ್ನು ಯಾವತ್ತು ಮುಟ್ಟಿಸಿಕೊಳ್ಳದಂತೆ ಬಾಳಿಲ್ಲ. ಶರಣರ ನಡೆ ನುಡಿ ಸಿದ್ಧಾಂತವನ್ನು ತನ್ನ ಜೀವನದ ಮಂತ್ರವಾಗಿಸಿಕೊಂಡು ಆಡುವ ಮಾತನ್ನು ಮಡಿ ಮಾಡಿಕೊಂಡಿದ್ದೇನೆ, ಆ ನುಡಿಯಂತೆ ನಡೆಯನ್ನು ಮಡಿ ಮಾಡಿಕೊಂಡಿದ್ದೇನೆ ಎನ್ನುವಲ್ಲಿ ಮನುಷ್ಯ ಪ್ರಜ್ಞೆ ಎದ್ದು ಕಾಣುತ್ತದೆ. ತಾನು ಬ್ರಹ್ಮಜ್ಞಾನವನ್ನು ಪಡೆದುಕೊಂಡಿದ್ದರಿಂದ 'ಹಾರುತಿ' ಎಂಬ ಹೆಸರು ನನಗೆ ಜಾತಿವಾಚಕವಾಗದೆ, ಗುಣವಾಚಕವಾಗಿ ಬಂದಿದೆ ಎನ್ನುತ್ತಾ ಶೂದ್ರರನ್ನೂ ಬ್ರಹ್ಮ ವಿದ್ಯೆಗೆ ತೊಡಗುವಂತೆ ಮಾಡಿದ್ದಾಳೆ. ತನ್ನನ್ನು ತಾನು ತಿಳಿದಳಾದ್ದರಿಂದ ತನಗೆ ಜಾತಿ ಸೂಚಗಳಿಲ್ಲ, ಮಾನವೀಯ ನೆಲೆಗಟ್ಟಿನ ಮೇಲೆ ಸರಿ ತಪ್ಪುಗಳನ್ನು ವಿಚಾರಿಸುವ ಶಕ್ತಿ ತನಗಿದೆ ಎನ್ನುತ್ತಾ 'ಅಪ್ಪ ಬಸವಗ ಒಪ್ಪಿಕೊಂಡೆ' ಎಂದು ಬಸವ ತತ್ವಗಳನ್ನು ಒಪ್ಪಿಕೊಂಡಿದ್ದಾಳೆ.

ಹೀಗೆ ಮಹಿಳಾ ತತ್ವಪದಕಾರರು ಸ್ತ್ರೀಯರನ್ನು, ಸಮಾಜದ ಜನಸಾಮಾನ್ಯರನ್ನು ಹೀನವಾಗಿ ಕಾಣುವ ಪ್ರಭುತ್ವಗಳಿಗೆ ತಮ್ಮ ತತ್ವಪದಗಳುದ್ದಕ್ಕೂ ಬಂಡಾಯದ ರೂಪದಲ್ಲಿ ಉತ್ತರಿಸುತ್ತಾ ಬಂದರೆ, ಈ ವ್ಯವಸ್ಥೆಗೆ ಕೇವಲ ಮಹಿಳೆಯರಷ್ಟೇ ಅಲ್ಲದೆ ಪುರುಷ ತತ್ವಪದಕಾರರೂ ಕೂಡ ಮತ್ತೊಂದು ರೀತಿಯಲ್ಲಿ ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ಕಡಕೋಳ ಮಡಿವಾಳಪ್ಪನವರು 'ಬಡವನ ಹೆಂಡತಿ ಚೆಲುವೆ ಇದ್ದರೆ ಬಡ್ಡಿ ಕೊಡುವರು'

ಎನ್ನುವಲ್ಲಿ ಸಾಹುಕಾರರು, ಜಮೀನ್ದಾರರು, ಗೌಡರು, ಪಟೇಲರ ಬಣ್ಣವನ್ನು ಬಯಲಿಗೆಳೆದಿದ್ದಾರೆ. ಬಡವನ ಹೆಂಡತಿ ಸುಂದರವಾಗಿದ್ದರೆ ಮಾತ್ರ ಸಾಲ ನೀಡುತ್ತಾರೆ. ಸುಳ್ಳು ಲೆಕ್ಕವನ್ನು ಬರೆದು ಸಾಲ ತೀರಿಸಲು ಸಾಧ್ಯವಾಗದಿದ್ದಾಗ ಬಡವನ ಕುಟುಂಬಕ್ಕೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಶೋಷಣೆ ನೀಡುತ್ತಾರೆ ಎನ್ನುವಲ್ಲಿ ಮನುಷ್ಯ ಪ್ರಜ್ಞೆ ಜಾಗೃತಗೊಂಡಿದೆ. ಹೀಗೆ ತತ್ವಪದ ಸಾಹಿತ್ಯದುದ್ದಕ್ಕೂ ಪ್ರಭುತ್ವವನ್ನು ವಿಮರ್ಶಿಸುವ ಮತ್ತು ಎದುರು ಹಾಕಿಕೊಳ್ಳುವ ಚಟುವಟಿಕೆಗಳೊಂದಿಗೆ ಸಮಾಜದ ಜನಸಾಮಾನ್ಯರನ್ನು ಅರಿವಿನ ಹಾದಿ ಹಿಡಿಯುವಂತೆ ಮಾಡಿದ್ದು ತತ್ವಪದ ಸಾಹಿತ್ಯಕ್ಕೆ ಹಿಡಿದ ಕನ್ನಡಿಯಾಗಿದೆ.

ಕೊನೆ ಟಿಪ್ಪಣಿ:

1. ನೀಲಾ ಕೆ, ಕನ್ನಡ ತತ್ವಪದಕಾರ್ತಿಯರ ವಾಚಿಕೆ, ಪುಟ ಸಂಖ್ಯೆ–೩೦೫.
2. ಮೀನಾಕ್ಷಿ ಬಾಳಿ, ಮಹಿಳಾ ತತ್ವಪದಗಳು, ಪುಟ ಸಂಖ್ಯೆ–೧೬೧.
3. ನೀಲಾ ಕೆ, ಕನ್ನಡ ತತ್ವಪದಕಾರ್ತಿಯರ ವಾಚಿಕೆ, ಪುಟ ಸಂಖ್ಯೆ–೯೧.
4. ನೀಲಾ. ಕೆ, ಕನ್ನಡ ತತ್ವಪದಕಾರ್ತಿಯರ ವಾಚಿಕೆ, ಪುಟ ಸಂಖ್ಯೆ–೨೩೩.
5. ನೀಲಾ. ಕೆ, ಕನ್ನಡ ತತ್ವಪದಕಾರ್ತಿಯರ ವಾಚಿಕೆ, ಪುಟ ಸಂಖ್ಯೆ–೨೩೬.
6. ನೀಲಾ. ಕೆ, ಕನ್ನಡ ತತ್ವಪದಕಾರ್ತಿಯರ ವಾಚಿಕೆ, ಪುಟ ಸಂಖ್ಯೆ–೩೧೭.
7. ಮೀನಾಕ್ಷಿ ಬಾಳಿ, ತತ್ವಪದ ಮತ್ತು ಮಹಿಳೆ, ಪುಟ ಸಂಖ್ಯೆ–೨೪.
8. ಮೀನಾಕ್ಷಿ ಬಾಳಿ, ತತ್ವಪದ ಮತ್ತು ಮಹಿಳೆ, ಪುಟ ಸಂಖ್ಯೆ–೧೮೨
9. ನೀಲಾ. ಕೆ–ಕನ್ನಡ ತತ್ವಪದಕಾರ್ತಿಯರ ವಾಚಿಕೆ, ಪುಟ ಸಂಖ್ಯೆ–೩೮೨

ಪರಾಮರ್ಶನ ಗ್ರಂಥಗಳು:

೧. ಕರ್ನಾಟಕ ಸಮಗ್ರ ತತ್ವಪದಗಳ ಜನಪ್ರಿಯ ಸಾಹಿತ್ಯ ಮಾಲೆ, ಸಂಪುಟ–೨೭, ಮಹಿಳಾ ತತ್ವಪದಗಳು, ಮೀನಾಕ್ಷಿ ಬಾಳಿ, ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, ೨೦೧೭

೨. ಕನ್ನಡ ತತ್ವಪದಕಾರ್ತಿಯರ ವಾಚಿಕೆ, ನೀಲಾ. ಕೆ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಬೆಂಗಳೂರು, ೨೦೧೯

೩. ತತ್ವಪದ ಮತ್ತು ಮಹಿಳೆ ಕನ್ನಡ ತತ್ವಪದಕಾರ್ತಿಯರು, ಮೀನಾಕ್ಷಿ ಬಾಳಿ, ಲಡಾಯಿ ಪ್ರಕಾಶ ಗದಗ, ೨೦೧೯

೪. ವರದಾ–೩, ಡಾ. ಬಿ.ಎಚ್.ಬುಳ್ಳಣ್ಣವರ&ಡಾ. ರಮೇಶ ಮ. ಕಲ್ಲನಗೌಡರ, ಮಹಿಳೆ&ತತ್ವಪದ–ಮೀನಾಕ್ಷಿ ಬಾಳಿ, (ಲೇಖನ) ಪ್ರಸಾರಾಂಗ ಕವಿವಿ ಧಾರವಾಡ, ೨೦೨೨

೫. ಕನ್ನಡ ತತ್ವಪದಕರರ ಸಾಹಿತ್ಯಧಾರೆ, ಡಾ. ರಾಜಶ್ರೀ ಕಿಶೋರ್, ವೇ ಮೂ ಶೇಖರಯ್ಯ ನಂದಿ ಮತ್ತು ಸಹೋದರರು ೨೦೨೦–೨೧

೬. ತತ್ವಪದ ಸಾಹಿತ್ಯ ಅಧ್ಯಯನ, ಅಮರೇಶ ನುಗುಡೋಣಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೪

೭. ಕರ್ನಾಟಕ ಸಮಗ್ರ ತತ್ವಪದಗಳ ಜನಪ್ರಿಯ ಸಾಹಿತ್ಯ ಮಾಲೆ, ಸಂಪುಟ–೧, ತತ್ವಪದ ಪ್ರವೇಶಿಕೆ, ರಹಮತ್ ತರೀಕೆರೆ, ಅರುಣ್ ಜೋಳದಕೂಡ್ಲಿಗಿ

೮. ಕನ್ನಡ ತತ್ವಪದಕಾರರು, ವಿವಿಧ ಲೇಖಕರು, ಕರ್ನಾಟಕ ಸಾಹಿತ್ಯ ಅಕಾಡೆಮಿ ನೃಪತುಂಗ ರಸ್ತೆ, ಬೆಂಗಳೂರು,೧೯೯೩

***

ಸಾಲೋಟಗಿ ಶಿವಯೋಗಿಶ್ವರರ ಸಾಂಸ್ಕೃತಿಕ ಸ್ವರೂಪ

ಡಾ.ಪ್ರಹ್ಲಾದ ಡಿ.ಎಂ.
ಕನ್ನಡ ಉಪನ್ಯಾಸಕರು
ಸ್ನಾತಕೋತ್ತರ ಕೇಂದ್ರ, ಯಲಬುರ್ಗಾ
ಕೊಪ್ಪಳ ವಿಶ್ವವಿದ್ಯಾಲಯ–583236
prahaladadm1993@gmail.com

1

ಪ್ರಮುಖ ಪದಗಳು
ಡಂಗುರ ಪದಗಳು, ಜ್ಞಾನ ಮಾರ್ಗ, ನೀತಿಜ್ಞಾನ, ಖಂಡಜ್ಞಾನ, ಸಾಲೋಟಗಿ ಕ್ಷೇತ್ರ, ಗುರು–ಶಿಷ್ಯ ಪರಂಪರೆ, ಪ್ರಭುತ್ವದ ಪ್ರಶ್ನೆ, ಲೋಕ ಸಂಚಾರ. ಮೌಢ್ಯ ಮತ್ತು ಢಾಂಬಿಕತೆಯ ಗ್ರಹಿಕೆ. ಯೋಗಿ–ಶರಣ, ಅಧ್ಯಾತ್ಮಿಕ ಮಾರ್ಗ.

ಸಾಲೋಟಗಿ ಶಿವಯೋಗೀಶ್ವರರ ಬದುಕಿನ ಮೌಲ್ಯಗಳನ್ನು ಸಾರುವ ಡಂಗುರ ಪದಗಳು ಕೇವಲ ಕಾವ್ಯವನ್ನಷ್ಟೇ ಒಳಗೊಂಡಿರುವುದಿಲ್ಲ. ಒಂದು ಜನಾಂಗದ ನಂಬಿಕೆ, ಆಚರಣೆ, ಶ್ರದ್ಧೆ ಮುಂತಾದ ಸಾಮಾಜಿಕ, ಸಾಂಸ್ಕೃತಿಕ ಅಂಶಗಳನ್ನೂ ಒಳಗೊಂಡಿರುತ್ತವೆ. ಇವುಗಳ ಅಧ್ಯಯನ ಒಂದರ್ಥದಲ್ಲಿ ಒಂದು ಜನಾಂಗದ, ಒಂದು ಪಂಥದ ಪರಂಪರೆಯನ್ನು, ಒಂದು ಕಾಲಘಟ್ಟದ ಸಾಂಸ್ಕೃತಿಕ ಅಧ್ಯಯನವಾಗುವ ಸಾಧ್ಯತೆಯೂ ಇದೆ. ಡಂಗುರ ಪದಗಳು ರಚಿಸುವುದು–ಹೇಳುವುದು ಎರಡೂ ಕಡಿಮೆಯಾಗುತ್ತಿರುವ ಇಂದಿನ ಕಾಲದಲ್ಲಿ, ಕಾಲಗರ್ಭದಲ್ಲಿ ಮರೆಯಾಗುತ್ತಿದ್ದ ಕಾವ್ಯವನ್ನು ಹುಡುಕಿ ತೆಗೆದು ಅದರ ಒಡಲೊಳಗೆ ಅವಿತುಕೊಂಡಿರುವ ಆಂಶಗಳನ್ನು ಹೆಕ್ಕಿತೆಗೆಯುವುದರಿಂದ ಸಾಲೋಟಗಿಯ ಶಿವಯೋಗೀಶ್ವರರ ಬಗ್ಗೆ ಅಧ್ಯಯನ ಮಾಡುವವರಿಗೆ ಹೊಸ ದಾರಿಗಳನ್ನು ಕಾಣಿಸುತ್ತದೆ. ಹೀಗಾಗಿ ಸಾಲೋಟಗಿ ಶಿವಯೋಗೀಶ್ವರರ ಡಂಗುರ ಪದಗಳನ್ನು ಈ ಲೇಖನದಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಸಾಲೋಟಗಿ ಶಿವಯೋಗೀಶ್ವರರ ಪರಿಸರ ಮತ್ತು ಆತನ ದೈವತ್ವಕ್ಕೇರಿದ ನೋಟವನ್ನು ಪರಿಚಯಿಸುವುದು, ಹಾಗೇಯೇ ಆತನ ಕಾಲ, ಸ್ಥಳ, ಜೀವನವನ್ನು ಕುರಿತು ಅಧ್ಯಯನ ಮಾಡಲಾಗಿದೆ.

ಹನ್ನೆರಡನೆಯ ಶತಮಾನದ ನಂತರ ನಮ್ಮ ನಾಡಿನ ಸಮಾಜೋ–ಧಾರ್ಮಿಕ ಭಾವನೆಗಳು ಬೆಳೆದ ರೀತಿ ತುಂಬ ಕುತೂಹಲಕಾರಿ ಯಾಗಿವೆ. ಭಾರತದ ಮಧ್ಯಕಾಲೀನ ಇತಿಹಾಸವೆಂದರೆ ಅದು ಒಂದು ರೀತಿಯ ಅಭದ್ರತೆ ಮತ್ತು ಹತಾಶೆಯ ಕಾಲ. ಒಂದೆಡೆ ರಾಜ್ಯಸ್ಥಾಪನೆಗೆ ತೊಡಗಿದ ಮುಸ್ಲಿಂ ಪ್ರಭುತ್ವಶಕ್ತಿ, ಇನ್ನೊಂದೆಡೆ ರಾಜ್ಯವಿಸ್ತರಣೆಗೆ ತೊಡಗಿದೆ ದೇಶಿಯ ರಾಜರುಗಳು ಮತ್ತು ಅವರ ಒಳಜಗಳಗಳು. ಈ ಎಲ್ಲ ಒತ್ತಡಗಳ ಪರಿಣಾಮ ಬಿಡುವಿಲ್ಲದ ಯುದ್ಧ. ಈ ಯುದ್ಧ ಸಂಸ್ಕೃತಿಗೆ ಕರ್ನಾಟಕ ಹೊರತಲ್ಲವಾದರೂ ಅದು ತನ್ನ ಸಮುದಾಯದ ಧರ್ಮ, ಸಾಹಿತ್ಯ, ಸಂಪ್ರದಾಯಗಳನ್ನು ಉಳಿಸಿ, ಪೋಷಿಸಿಕೊಂಡು ಬಂದಿರುವ ರೀತಿ ವಿಶೇಷ ಆಸಕ್ತಿಗೆ ಕಾರಣವಾಗಿದೆ. ಈ ಆಸಕ್ತಿಯ ಕೇಂದ್ರ ನಮ್ಮ ನಾಡಿನ ಶಿವಶರಣರು, ಸಂತ ಮಹಂತರು. ಕಲ್ಯಾಣದ ಶರಣರ ನಂತರ ಅವರ ತತ್ವಪರಂಪರೆಯು ಹರಿಹರ–ರಾಘವಾಂಕ, ಕೆರೆಯ ಪದ್ಮರಸ, ಭೀಮಕವಿ ಮೊದಲಾದವರ ಸಾಹಿತ್ಯದ ಮೂಲಕ ಪ್ರವಹಿಸಿತು. ಆ ಮೇಲೆ ಅದು ಪ್ರೌಢದೇವರಾಯನ ಕಾಲದ ನೂರೊಂದು ವಿರಕ್ತರ ಹಾಗೂ ತೋಂಟದ ಸಿದ್ದಲಿಂಗೇಶ್ವರ ನೇತೃತ್ವದ ಏಳುನೂರೊಂದು ವಿರಕ್ತರ ಸಮಷ್ಟಿ ಶಕ್ತಿಯಲ್ಲಿ ಪುನರುತ್ಥಾನ ಪಡೆಯಿತು. ಇದೇ ಅವಧಿಯಲ್ಲಿ ಇನ್ನೊಂದು ಬಗೆಯ ಪ್ರಯತ್ನ ವಿಜಯನಗರದ ರಾಜಧಾನಿ ಹಂಪೆಯಿಂದ ಟಿಸಿಲೊಡೆದು ಉತ್ತರ ಕರ್ನಾಟಕವನ್ನೆಲ್ಲ ವ್ಯಾಪಿಸಿತು. ಅದು ನಾಥ–ಸೂಫಿಗಳ ಪ್ರಭಾವವಲಯದಲ್ಲಿ ಧರ್ಮಸಮಾನತೆ ಬೋಧಿಸಿದ ಅನುಭಾವ ಪಥ. ಈ ಪಥದಲ್ಲಿ ಸಾಗಿದವರು ಡಿಗ್ಗಿ ಸಂಗಮನಾಥ, ಹೆಬ್ಬಾಳ ಪರಮಾನಂದ ಪ್ರಭು, ಕೊಡೇಕಲ್ ಬಸವಣ್ಣ ಮತ್ತು ಅವನ ಮಕ್ಕಳು, ತಿಂತಿಣಿ ಮೋನಪ್ಪಯ್ಯ, ಸಾವಳಗಿ ಶಿವಲಿಂಗೇಶ್ವರ, ಶಿರಹಟ್ಟಿ ಫಕೀರೇಶ್ವರ ಮೊದಲಾದವರು. ಅಂದಿನ ಜನಸಮೂಹದ ಪ್ರತಿನಿಧಿಗಳಾದ ಈ ಎಲ್ಲ ಮಹಾತ್ಮರು ಸಮಾನ ಗುಣಧರ್ಮಗಳನ್ನು ಹೊಂದಿದವರು. ವಿಜಯನಗರ, ಬಹಮನಿ, ಆದಿಲ್‌ಶಾಹಿಗಳ ಆಕ್ರಮಣ–ದಬ್ಬಾಳಿಕೆ ಕಾಲದಲ್ಲಿ ಜನತೆಯನ್ನು ಎಚ್ಚರಿಸಿದವರು. ಆಧ್ಯಾತ್ಮಿಕ ಸಮಾನತೆಯಿಂದ ಜನರ ಹತಾಶೆ, ಭಯವನ್ನು ನಿವಾರಿಸಿದವರು. ತಮ್ಮ ಆತ್ಮಕಲ್ಯಾಣದೊಂದಿಗೆ ಲೋಕಕಲ್ಯಾಣವನ್ನು ಬಯಸಿದ ಇವರು ಕಾಲ, ದೇಶಗಳನ್ನು ಮೀರಿ ಜನಮಾನಸದಲ್ಲಿ ಒಂದಾದವರು. ಹೀಗೆ ಜನಮಾನಸದಲ್ಲಿ ನೆಲೆನಿಂತ ಈ ಮಹಾಂತರ ಸಾಲಿನಲ್ಲಿ ಸಾಲೋಟಗಿಯ ಶಿವಯೋಗೀಶ್ವರರೂ ಸೇರುತ್ತಾರೆ. ಒಂದು ಕಾಲಕ್ಕೆ ಜೀವಂತ ವ್ಯಕ್ತಿಯಾಗಿ ಇಂದು ದೈವವಾಗಿ ಪೂಜೆಗೊಳ್ಳುತ್ತಿರುವ ಸಾಲೋಟಗಿ ಶಿವಯೋಗೀಶ್ವರರ ಚರಿತ್ರೆ ಸಮಗ್ರವಾಗಿ ಹೇಳುವುದ ಕಷ್ಟಸಾಧ್ಯ. ಅವರ ಅಲೌಕಿಕ ಬದುಕಿಗೆ ಮಾರುಹೋದ ನಮ್ಮ ಜನತೆ

ಅವರನ್ನು ದೇವಪುರುಷ ರನ್ನಾಗಿ ಪೂಜಿಸಿದೆ; ಪುರಾಣಪುರುಷರನ್ನಾಗಿ ಗೌರವಿಸಿದೆ. ಹೀಗಾಗಿ ಅವರ ಕುರಿತು ರೋಚಕವಾದ ಕಥೆಗಳು, ಪವಾಡಗಳು ಸೃಷ್ಟಿಯಾಗಿವೆ. ಶಿವಯೋಗೀಶ್ವರರು ಸಂಚರಿಸಿದ ಸ್ಥಳಗಳಲ್ಲೆಲ್ಲ ಗದ್ದುಗೆ, ಕುರುಹಿಗಾಗಿ ಗುಡಿ–ಗುಂಡಾರಗಳಿವೆ. ಅಲ್ಲಿನ ಜನ ತಮ್ಮ ಬದುಕಿನ ಆಗುಹೋಗುಗಳಿಗೆಲ್ಲ ಅವನನ್ನೇ ನಂಬಿ ತಮ್ಮ ಶ್ರದ್ಧಾ–ಭಕ್ತಿ ಆಚರಣೆ ಗಳನ್ನು ಇಂದಿಗೂ ಉಳಿಸಿಕೊಂಡು ಬಂದಿದ್ದಾರೆ. ನಮ್ಮ ಎಲ್ಲ ಶರಣ–ಸಂತರ ಚರಿತ್ರೆ ಗಳೆಲ್ಲ ಹೀಗೆ ಪುರಾಣಗಳಾಗಿ, ನಂಬಿಕೆಗಳಾಗಿ, ಆಚರಣೆಗಳಾಗಿ ಹೋಗಿವೆ. ಇದಕ್ಕೆ ಸಾಲೋಟಗಿ ಶಿವಯೋಗೀಶ್ವರರೂ ಹೊರತಲ್ಲ.

ಸದ್ಯ ಶಿವಯೋಗೀಶ್ವರರ ಜೀವನ ಚರಿತ್ರೆಯನ್ನರಿಯಲು ನಮಗಿರುವ ಆಧಾರಗಳು ಎರಡು. ಒಂದು ಕ್ರಿ.ಶ. 1860ರಲ್ಲಿ ರಚನೆಗೊಂಡ ಶಿವಯೋಗೀಶ್ವರ ಪುರಾಣ ಇನ್ನೊಂದು ಶ್ರೀ ಶಿವಯೋಗಿಶ್ವರ ಡಂಗುರ ಪದಗಳು. ಮೊದಲನೆಯದರಲ್ಲಿ ಪುರಾಣ ದೃಷ್ಟಿ ಮುಖ್ಯವಾಗಿರುವುದರಿಂದ ಶಿವಯೋಗೀಶ್ವರರ ಚರಿತ್ರೆ ಗೌಣವಾಗಿದೆ. ಪುರಾಣ ಚೌಕಟ್ಟಿನಲ್ಲಿ ಅದನ್ನು ಅಪೇಕ್ಷಿಸುವುದು ಸಾಧುವೂ ಅಲ್ಲ. ಆದರೆ ಡಂಗುರ ಪದಗಳು ಹಾಗಲ್ಲ. ಚಾರಿತ್ರಿಕ ಮಹತ್ವವನ್ನು ತುಂಬಿಕೊಂಡು ನಿಂತಿರುವ ಅಲ್ಲಿನ ಎಳೆಗಳನ್ನು ಹಿಡಿದು ಶಿವಯೋಗೀಶ್ವರರ ಚರಿತ್ರೆಯನ್ನು ಪುನರ್ ರಚಿಸಬೇಕಾಗುತ್ತದೆ. ಡಂಗುರ ಪದಗಳು ಆ ಕಾಲದ ಧಾರ್ಮಿಕ ದಬ್ಬಾಳಿಕೆಯ ವಿರುದ್ಧ ಸಿಡಿದೆದ್ದು, ಧರ್ಮಸಮಾನತೆಯನ್ನು ಬೋಧಿಸುತ್ತಾ ಜನಕಲ್ಯಾಣಕ್ಕಾಗಿ ತಮ್ಮ ಬದುಕನ್ನು ಸವೆಸಿದ ಅನೇಕ ಸಂತರು ನಮ್ಮ ನಾಡಿನಲ್ಲಿದ್ದಾರೆ. ನಾಥ–ಸೂಫಿ–ಶರಣ ಸಂಪ್ರದಾಯ ಸಂಮಿಶ್ರವಾಗಿರುವ ಕೆಲ ಅನುಭಾವಿಗಳು ಆತ್ಮ ಕಲ್ಯಾಣದೊಂದಿಗೆ ಲೋಕಕಲ್ಯಾಣವನ್ನು ಸಾಧಿಸುತ್ತಾ ನಂದಾದೀವಿಗೆಯಂತಿದ್ದವರು. ಇಂಥ ಮಹಾತ್ಮರ ಕುರಿತು ಅಪಾರ ಶ್ರದ್ಧೆ–ಗೌರವಗಳಿರುವ ಜನಸಮೂಹ ಅವರ ಸುತ್ತ ಅನೇಕ ಅಲೌಕಿಕ ಘಟನೆಗಳನ್ನು, ರೋಚಕ ಕಥೆಗಳನ್ನು, ಪವಾಡಗಳನ್ನು ಸೃಷ್ಟಿಸುತ್ತಾರೆ. ಇದರಿಂದಾಗಿ ಚಾರಿತ್ರಿಕ ಪುರುಷರು ಪುರಾಣಪುರುಷರಾಗಿ ಚಿತ್ರಿತವಾಗ ಸಾಲೋಟಗಿ ಶಿವಯೋಗೀಶ್ವರರ ಪುರಾಣವೂ ಇದಕ್ಕೆ ಹೊರತಲ್ಲ. ಇಂದಿನ ಸಾಲೋಟಗಿ ಹೆಸರಾಗಿರುವುದು ಅಲ್ಲಿಯ ಮಹಿಮಾ ಪುರುಷ ಶ್ರೀ ಶಿವಯೋಗೀಶ್ವರರ ಕಾರಣವಾಗಿ, ಈ ಶಿವಯೋಗೀಶ್ವರರ ಚರಿತ್ರೆ ಕೊಡೆಕಲ್ ಬಸವಣ್ಣನವರ ಚರಿತ್ರೆಯೊಂದಿಗೆ ತಳಕು ಹಾಕಿಕೊಂಡಿರುವುದು ಒಂದು ಕುತೂಹಲಕಾರಿ ಅಂಶ. ಶಿವಯೋಗೀಶ್ವರರ ಗುರು, ಕೊಡೆಕಲ್ ಬಸವಣ್ಣನವರ ಕೊನೆಯ, ಮಗ 'ಚೆನ್ನಬಸವ' ಕಾವ್ಯನಾಮದ ಸಂಗಯ್ಯ ಎಂಬುದನ್ನು ಸಂಶೋಧಕರು ಈಗಾಗಲೇ ಗುರುತಿಸಿದ್ದಾರೆ. ಪವಾಡಪುರುಷರೆಂದು ಪ್ರಖ್ಯಾತರಾದ

ಶಿವಯೋಗೀಶ್ವರರು ಧರ್ಮಸಮನ್ವಯವನ್ನು ಸಾರುವ ಅನುಭಾವಿ ಕವಿಗಳೂ ಹೌದು. 'ಸಾಲೋಟಗಿ ಶ್ರೀ ಶಿವಯೋಗೀಶ್ವರ ಡಂಗುರ ಪದಗಳು' ಕೃತಿಯಲ್ಲಿ ಅವರ ಅನುಭಾವ ಹಾಗೂ ಕಾವ್ಯಶಕ್ತಿಯನ್ನು ಗುರುತಿಸಬಹುದು.

1. ಸಾಲೋಟಗಿ ಶಿವಯೋಗೀಶ್ವರರ ಕಾಲ–ಸ್ಥಳ–ಜೀವನ:

"ಸಾಲೋಟಗಿ ಶಿವಯೋಗೀಶ್ವರ ಡಂಗುರ ಪದಗಳೆಂದು ಜನಮಾನಸದಲ್ಲಿ ಅಚ್ಚೊತ್ತಿರುವ ಇವುಗಳನ್ನು ರಚಿಸಿದವನು ಚೆನ್ನಗಿರಿಯ ಗಂಗಾಧರ ಕವಿ ಎಂದು ತಿಳಿದು ಬರುತ್ತದೆ. ಕ್ರಿ.ಶ 1600 ರಲ್ಲಿ ಬದುಕಿದ್ದರೆನ್ನಲಾದ ಶಿವಯೋಗಿ ಶಿವಲಿಂಗೇಶ್ವರರನ್ನು ಕುರಿತು ಕ್ರಿ.ಶ 1860 ರಲ್ಲಿ ಪುರಾಣ ಬರೆದ ಸಿದ್ಧಲಿಂಗ ಎಂಬ ಕವಿಯು ಈ ವಿಷಯವನ್ನು ಪವಾಡ ರೂಪದಲ್ಲಿ ಹೇಳಿದ್ದಾನೆ. ಅದು ಹೀಗಿದೆ. ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನಿಂದ 8 ಕಿ.ಮೀ ದೂರವಿರುವ ಸಾಲೋಟಗಿಯು ಇತಿಹಾಸ ಪ್ರಸಿದ್ಧ ಊರಾಗಿದೆ. ಮಾನ್ಯಖೇಟದಲ್ಲಿ (ಮಳಖೇಡ) ರಾಷ್ಟ್ರಕೂಟರ ದೊರೆ ಮೂರನೇ ಕೃಷ್ಣನು ಆಳುತ್ತಿದ್ದಾಗ ಆತನಲ್ಲಿ ಮುಖ್ಯಮಂತ್ರಿ ಮತ್ತು ಸಂಧಿವಿಗ್ರಹಿಯಾಗಿದ್ದ ನಾರಾಯಣ ಎಂಬುವವನು ಸಾಲೋಟಗಿಯಲ್ಲಿ ವಿದ್ಯಾಪೀಠವನ್ನು (ಶಾಲೆ) ನಿರ್ಮಿಸಿ, ಆ ಶಾಲೆಯಲ್ಲಿ ಓದುತ್ತಿದ್ದ ವಿದ್ಯಾರ್ಥಿಗಳಿಗೆ ವೃತ್ತಿಗಳನ್ನು ಕಲ್ಪಿಸಿಕೊಟ್ಟಿದ್ದನೆಂಬ ಸಂಗತಿಯು ಕ್ರಿ.ಶ 945 ರಲ್ಲಿ ರಚನೆಯಾದ ಶಾಸನವೊಂದರಲ್ಲಿ ಉಲ್ಲೇಖಿಗೊಂಡಿದೆ. ಇದರ ಮೊದಲ ಹೆಸರು ಪೌಠಗೆ ಎಂದಿದ್ದು ಶಾಲೆಯಿಂದಾಗಿ ಶಾಲಾಪೌಠಗೆ ಎಂದು ಕರೆಸಿಕೊಂಡು ಆನಂತರ ಸಾಲೋಟಗಿ ರೂಪ ತಾಳಿತು ಎಂಬುದು ವಿದ್ವಾಂಸರ ಅಂಬೋಣ. ಈ ಸಾಲೋಟಗಿಯಲ್ಲಿ ವೈರಾಗ್ಯನಿಧಿ, ತಪಸ್ವಿ, ಜ್ಞಾನಿ ಎಂದೆಲ್ಲಾ ಜನಜನಿತವಾಗಿರುವ ಶಿವಲಿಂಗೇಶ್ವರರು ಬಂದು ನೆಲೆಸಿದ್ದು ಕೂಡ ಪವಾಡರೂಪದಲ್ಲಿಯೇ ಎಂದು ನಂಬಲಾಗಿದೆ. ಸಾಲೋಟಗಿಯಲ್ಲಿಯ ದುರುಳ ಗ್ರಾಮದೇವತೆಯ ಸಂಹರಿಸಲು ನಾರದನ ವಿನಂತಿಯಂತೆ ಶಿವನ ಬಲಗಣ್ಣಿನಿಂದ ಗಣನಾಥನೊಬ್ಬನು ಶಿಶುರೂಪವಾಗಿ ಅರಳದೊಟ್ಟಿಲಲ್ಲಿ ತೇಲುತ್ತ ಬರಲು ಕಲಬುರಗಿ ಜಿಲ್ಲೆಯ ಚಿತಾಪೂರ ತಾಲೂಕಿನ ಸನ್ನತಿಯಲ್ಲಿ ಪರಮ ಶಿವಭಕ್ತರಾಗಿದ್ದ ಚೆನ್ನಸೋಮ ದೊರೆಯ ಪಟ್ಟದರಸಿಯಾಗಿದ್ದ ಹೊನ್ನಮ್ಮನೆಂಬ ತಾಯಿ ಮಗುವನ್ನು ಸಲಹಿದಳೆಂಬ ಪುರಾಣ ಕಥೆ ಇದೆ. ಪದ್ಯಗಳಲ್ಲಿ ಕವಿಯು "ಸನ್ನತಿಯ ಪುರಹರ ಹೊನ್ನಸೋಮನ ಕಂದ ಚೆನ್ನಬಸವ ಬಂದು ಧರೆಗೆ" ಎಂದು ಸ್ತುತಿಸುತ್ತಾನೆ. ಉದ್ದಕ್ಕೂ ಪದಗಳಲ್ಲಿ ಚೆನ್ನಬಸವ ಶಿವಯೋಗಿ ಎಂದೆ ಸಂಬೋಧಿಸಿದ್ದಾನೆ. ಚೆನ್ನಬಸವ ಎಂಬುದೆ ನಿಜ ನಾಮವಾಗಿದ್ದು ಶಿವಯೋಗಿ

ಎಂಬುದು ಜನತೆಯು ಆತನ ವ್ಯಕ್ತಿತ್ವ ಕಂಡು ಬಳಸಿದ ವಿಶೇಷಣವಾಗಿದ್ದಂತೆ ತೋರುತ್ತದೆ. ಚಿಕ್ಕಂದಿನಿಂದಲೂ ಪವಾಡ ಪುರುಷರಾಗಿದ್ದ ಚೆನ್ನಬಸವರು ನೂರಾರು ಅಘಟಿತ ಘಟನೆಗಳನ್ನು ಮೆರೆದು ದುರುಳ ಗ್ರಾಮದೇವತೆಯ ಸಂಹಾರಕ್ಕಾಗಿ ಸನ್ನತಿಯಿಂದ ಸಾಲೋಟಗಿಗೆ ಬಂದು ಅಲ್ಲೆ ನೆಲೆಸಿದರು ಎಂಬ ಐತಿಹ್ಯವಿದೆ. ಇವರ ಜೀವಿತ ಕಾಲದಲ್ಲಿ ಶ್ರೀಶೈಲಕ್ಕೆ ಸಮವಾಗಿದ್ದ ಚೆನ್ನಗಿರಿ ಎಂಬಲ್ಲಿ ಗಂಗಾಧರ ಎಂಬ ಕವಿಯೊಬ್ಬನು ನೆಲೆಸಿದ್ದನಂತೆ. ಈಗಾಗಲೇ ಕೀರ್ತಿತನಾಗಿದ್ದ ಶಿವಯೋಗಿಶ್ವರರ ಶಿಷ್ಯರು ಈ ಗಂಗಾಧರ ಕವಿಯನ್ನು ಕಂಡು ತಮ್ಮ ಯೋಗಿಗಳ ಮೇಲೆ ಪದ ರಚಿಸಬೇಕೆಂದು ಕೇಳಿಕೊಂಡರಂತೆ. ಅದಕ್ಕೆ ಅಸಡ್ಡೆ ಮಾಡಿದ ಕವಿ ಗಂಗಾಧರನು ಶಿವಲಿಂಗೇಶ್ವರನು ಒಬ್ಬ ನರನು. ಆದ್ದರಿಂದ ಮನುಷ್ಯರನ್ನು ಸ್ತುತಿಸೆನು ಎಂದು ಉದ್ಧಟತನದ ಮಾತಾಡಿದನಂತೆ. ಅವರಲ್ಲಿಯ ಒಬ್ಬ ಶಿಷ್ಯನು ಶಿವನನ್ನು ನೀನು ನಿಂದಿಸಿದ ಕಾರಣ ಕಣ್ಣುಗಳೆರಡು ಹೋಗಲಿ ಅಂದನಂತೆ. ಅಂತಯೇ ಕಣ್ಣು ಕಳೆದುಕೊಂಡ ಗಂಗಾಧರನು ಪಶ್ಚಾತಾಪ ಪಟ್ಟು ತನ್ನ ತಪ್ಪು ಒಪ್ಪಿಕೊಳ್ಳುತ್ತಾನೆ. ನಂತರ ಶಿವಲಿಂಗನ ಮಹಿಮೆಯನ್ನು ಲೋಕಕ್ಕೆ ಡಂಗುರ ಸಾರಿ ಹೇಳುವ ಪದ ಬರೆಯಲು ಉತ್ಸುಕನಾಗುತ್ತಾನೆ. ಪದ ಬರೆದಂತೆ ಕಳೆದು ಹೋಗಿದ್ದ ಕಣ್ಣುಗಳು ಮರಳಿ ಬಂದವು ಎಂಬ ಪವಾಡವು ಪುರಾಣದಲ್ಲಿ ಉಲ್ಲೇಖಿತವಾಗಿದೆ. ಪವಾಡ ಕಥೆ ಏನೇ ಇರಲಿ. ಡಂಗುರ ಪದಗಳನ್ನು ಬರೆದಾತ ಶಿವಲಿಂಗೇಶ್ವರರ ಮೇಲೆ ಭಕ್ತಿ ಭಾವ ಹೊಂದಿದ ಕವಿಯಾಗಿದ್ದು ಆತನ ಹೆಸರು ಗಂಗಾಧರ ಎಂದಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ. ಈತನು ಶಿವಯೋಗಿಶ್ವರರ ಸಮಕಾಲೀನನಾಗಿದ್ದ ಎಂಬುದು ಬಿಟ್ಟರೆ ಈತನ ಉಳಿದ ಯಾವುದೇ ವಿವರಗಳು ಕೈಗೆಟಕುವುದಿಲ್ಲ.

ಕವಿ ಗಂಗಾಧರನು ಶಿವಯೋಗಿಶ್ವರರ ಮಹಿಮೆ ಮತ್ತು ಕಾಲಜ್ಞಾನ ಕುರಿತು ಒಟ್ಟು 770 ಪದಗಳನ್ನು ಬರೆದಿರುವನೆಂಬ ಹೇಳಿಕೆ ಇದೆಯಾದರೂ ದೊರೆತ ಪದಗಳ ಸಂಖ್ಯೆ ಕೇವಲ 2 ಮಾತ್ರ. ಈ ಹೇಳಿಕೆಯಲ್ಲಿ ತಥ್ಯಾಂಶ ಎಷ್ಟಿದೆಯೋ ಗೊತ್ತಿಲ್ಲ. ಹಿರಿಯರಾದ ಎಂ.ಎನ್. ವಾಲಿಯವರು ಬಹು ಪ್ರಯಾಸಪಟ್ಟು ವಿವಿಧ ಮೂಲಗಳಿಂದ ಪದಗಳನ್ನು ಸಂಗ್ರಹಿಸಿ ದೀರ್ಘವಾದ ಪ್ರಸ್ತಾವನೆಯೊಂದಿಗೆ ಮೊದಲ ಬಾರಿಗೆ ಶಿವಲಿಂಗೇಶ್ವರ ಅಂಕಿತದ ಡಂಗುರ ಪದಗಳನ್ನು ಸಂಗ್ರಹಿಸಿ ಕೊಟ್ಟಿದ್ದಾರೆ. ಈ ಪದಗಳನ್ನು ಅವರು ನೀತಿಜ್ಞಾನ, ಬೋಧಜ್ಞಾನ, ಕಾಲಜ್ಞಾನ, ಖಂಡಜ್ಞಾನವೆಂದು ನಾಲ್ಕು ಭಾಗಗಳಲ್ಲಿ ಸಮಾವೇಶಗೊಳಿಸಿದ್ದಾರೆ. ಈ ಪದಗಳನ್ನು ಇಂದಿಗೂ ಸಾಲೋಟಗೆಯ ಶಿವಲಿಂಗೇಶ್ವರರ ಗದ್ದುಗೆಯ ಪೂಜೆಯ ವೇಳೆಗೆ ಗಂಟೆ ಬಾರಿಸುತ್ತ

ಒಟ್ಟೋಟ್ಟಾಗಿ ಹಾಡುವ ಪರಿಪಾಠವಿದೆ. ಇಲ್ಲಿ ಮುಖ್ಯವಾಗಿ ನೀತಿ, ವೈರಾಗ್ಯ, ಶಿವಸ್ತುತಿಗಳು ಇವೆ. 12ನೇ ಶತಮಾನದ ಶರಣ ಪರಂಪರೆಯ ಸ್ಮೃತಿಯು, ಶರಣರ ಮೂಲದ ತತ್ವ ಸಿದ್ಧಾಂತಗಳು ಕಳೆದು ಹೋಗುತ್ತಿರುವ ಕುರಿತು ಹಳಹಳಿಕೆಯು, ಕಲಿಗಾಲದಲ್ಲಿ ಬದುಕಿಗೆ ಬಂದು ಅಪ್ಪಳಿಸಬಹುದಾದ ಕಷ್ಟ–ನಷ್ಟಗಳ ಕುರಿತು ಎಚ್ಚರಿಕೆಯ ನುಡಿ ಘಂಟೆಯು ಅನುರಣಿಸುತ್ತಿದೆ. ಶರಣರ ಕಾಲಜ್ಞಾನವೆಂಬ ಪರಿಕಲ್ಪನೆಯು ಕೊಡೆಕಲ್ಲ ಬಸವಣ್ಣನಲ್ಲಿ ಗಟ್ಟಿಗೊಂಡು ಅದು ಶಿವಯೋಗೀಶ್ವರ ಡಂಗುರ ಪದಗಳಲ್ಲಿ ಚೆಲ್ಲುವರೆದು ಮುಂದೆ ನಾಗಾವಿಯ ಅಜ್ಞಾತ ಕವಿಯಲ್ಲಿ ಪರಂಪರೆಯಾಗಿ ಪಸರಿಸಿ, ಸಾರವಾಡದ ಚಿಕ್ಕಯ್ಯನಲ್ಲಿಯೂ ಹಣಕಿ ಹಾಕಿದ್ದನ್ನು ಕಾಣಬಹುದಾಗಿದೆ. ಕೊಡೆಕಲ್ಲವರು ಬಳಸುವ ಅಮರಕಲ್ಯಾಣ ಇಲ್ಲಿ ಮತ್ತೆ ಮತ್ತೆ ಪ್ರಸ್ತಾಪಗೊಳ್ಳುತ್ತದೆ" (ಕೆ. ನೀಲಾ (ಸಂ), ಸಾಲೋಟಗಿ ಶಿವಲಿಂಗೇಶ್ವರ ಮತ್ತು ಇತರರ ತತ್ವಪದಗಳು, ಪುಟ:ಥಥಥತಿಯು)

2. ಸಾಲೋಟಗಿ ಶಿವಯೋಗೀಶ್ವರರ ತತ್ವಪದಗಳ ವಿಶ್ಲೇಷಣೆ:

1. ಯೋಗಿಯ ನೆನೆಯಿರೋ:

'ಯೋಗಿಯ ನೆನೆಯಿರೋ ಪಾಪವಿನಾಶನ
ಎನ್ನ ಗುರು ಅಮರಪುರದೇಶದೊಡೆಯನ.
ಅಪ್ಪನ ನೆನೆದರ ತಪ್ಪು ತಡಿಗಳುಂ(ಟೆ)
ಒಪ್ಪು ಭಾಗ್ಯಕ ಕಡಿಮಿಲ್ಲವೋ
ಒಪ್ಪು ಭಾಗ್ಯಕ ಕಡಿಮಿಲ್ಲ! ಅಮರಪುರದ
ಅಪ್ಪ ಶಿವಯೋಗಿರಾಯನ ನೆನೆದರ"

(ವಾಲಿ ಎಂ.ಎನ್. ಸಾಲೋಟಗಿ ಶ್ರೀ ಶಿವಯೋಗೀಶ್ವರ ಡಂಗುರ ಪದಗಳು, ಪುಟ: 1)

ಈ ಮೇಲಿನ ತತ್ವಪದದಲ್ಲಿ ಅಮರಪುರದೇಶದ ಯೋಗಿ ಎಂದು ಬಳಸಿರುವುದೇ ಒಂದು ದೈವಲೋಕದ ನಡಿಗೆಯನ್ನು ಸೂಚಿಸುತ್ತದೆ. ಗುರುವಿನ ಮಹಿಮೆಯನ್ನು ಸಾರುವಂತ ತತ್ವಪದ, ಇಲ್ಲಿ ಪಾಪ ಕರ್ಮ ಮಾಡಿದವರು ಗುರುವಿನ ಮುಂದೆ ಒಪ್ಪಿಕೊಂಡು. ಇನ್ನು ಗುರು ತೋರಿದ ದಾರಿಯಲ್ಲಿ ಸಾಗುತ್ತೇವೆಂದು ಮುಕ್ತಿ ಪಡೆಯಬಹುದು ಎಂಬ ಸಾರವನ್ನು ಸಾರುತ್ತದೆ. ಅಲ್ಲಿನ ಶಿಷ್ಟ ಬಳಗದಲ್ಲಿ ಶಿವಯೋಗಿಶ್ವರರಿಗೆ ದೇವರ ಸ್ವರೂಪವನ್ನು ನೀಡಿದ್ದರು. ಇವರನ್ನು ನೆನೆದರೆ ಯಾವುದೇ ಕಷ್ಟದಲ್ಲಿದ್ದರು ಪಾರುಮಾಡಿ ಒಳ್ಳೆಯ ಭಾಗ್ಯಗಳನ್ನು ಕರುಣಿಸುತ್ತಿದ್ದ ಎಂಬ ನಂಬಿಕೆಯನ್ನು ಈ ತತ್ವಪದದ ತಾತ್ವಿಕ ವಿವೇಚನೆಯಾಗಿದೆ.

"ಅಯ್ಯನ ನೆನೆದರ ಐಕ್ಯ ಪದವಿಗಳುಂಟು

ಆಗದ ಕೆಲಸ ಅತಿಬೇಗ

ಆಗದ ಕೆಲಸ ಅತಿಬೇಗ! ಅಮರಪುರದ

ಆಯ್ಯ ಶಿವಯೋಗಿರಾಯನ ನೆನೆದರೆ"

(ವಾಲಿ ಎಂ.ಎನ್. ಸಾಲೋಟಗಿ ಶ್ರೀ ಶಿವಯೋಗೀಶ್ವರ ಡಂಗುರ ಪದಗಳು, ಪುಟ: 1)

ಬಂಗಾರದ ಗಿರಿಯೊಳಗೆ ನೆಲೆಸಿರುವ ಶಿವನನ್ನು ನೆನೆದರೆ ನಮಗೆ ನಿರೀಕ್ಷೆ ಮಾಡದೆ ಇರುವಂತಹ ಎಲ್ಲ ಪದವಿಗಳು ದೊರಕ್ಕುತ್ತವೆ, ನೆನೆಗುದಿಗೆ ಬಿದ್ದಿರುವ ಕೆಲಸ ಕಾರ್ಯಗಳು ಸಹ ಬಹುಬೇಗನೆ ನೆರವೇರುತ್ತಾವೆಂದು ತಿಳಿಸಿದ್ದಾರೆ. ಈ ಪದ್ಯದ ಲೋಕದೃಷ್ಟಿ ಶಿವಯೋಗೀಶ್ವರರನ್ನು ದೈವಾಂಶ ಸಂಭೂತವೆಂದು ಒಪ್ಪಿಕೊಂಡು ಗುರುವಿನ ಸ್ಥಾನವನ್ನು ನೀಡಿದ್ದಾರೆ, ಇಲ್ಲಿ ಬಳಸಿರುವ ಅಮರಪುರ, ಬಂಗಾರದ ಗಿರಿ ಎಂಬ ಸ್ಥಳಗಳು ಸಹ ಶಿವನು ನೆಲೆಸಿರುವ ನೆಲೆಗಳು. ಹಿಗಾಗಿ ಕೈಲಾಸದಿಂದ ಇಳಿದು ಬಂದಿರುವ ಶಿವನೇ ನಮ್ಮ ಶಿವಯೋಗಿಶ್ವರರು ಎಂದು ಪದ್ಯದಲ್ಲಿ ತಿಳಿಸಿದ್ದಾರೆ.

2. ನಿಮ್ಮ ನಂಬಿದೆವಯ್ಯ:

"ತಂದೆ ನೀನು ತಾಯಿ ನೀನು

ಬಂಧು ಬಳಗವು ನೀನೆ ಸ್ವಾಮಿ

ಚೆಂದ ಪ್ರೇಮಾವತಾರದ ಒಡೆಯ

ಸಲಹಯ್ಯ ನಮ್ಮ ಶ್ರೀ ಶಿವಯೋಗೀರಾಯ

ನಿಮ್ಮ ನಂಬಿದೆವಯ್ಯ"

(ವಾಲಿ ಎಂ.ಎನ್. ಸಾಲೋಟಗಿ ಶ್ರೀ ಶಿವಯೋಗೀಶ್ವರ ಡಂಗುರ ಪದಗಳು, ಪುಟ: 3)

ಮತ್ತೊಂದು ತತ್ವಪದದಲ್ಲಿ ತನ್ನ ಗುರುವಿನ ಮಹತ್ವವನ್ನು ಸಾರುತ್ತಿದೆ. ಇಲ್ಲಿ ಗುರುವಿಗೆ ತಂದೆ–ತಾಯಿ, ಬಂಧು ಬಳಗದ ಸ್ಥಾನವನ್ನು ನೀಡಿರುವು ತಿಳಿದು ಬರುತ್ತದೆ, ಶಿಶುನಾಳ ಷರೀಪರು ತನ್ನ ಗುರುವಾದ ಗುರು ಗೋವಿಂದ ಭಟ್ಟರನ್ನು ತನ್ನೆಲ್ಲ ಬದುಕಿನ ನಶ್ವರದಿಂದ ಹೊರಬಂದು, ಗುರುವೇ ಜ್ಞಾನದ ದೀಪ್ತಿ ಎಂದು ನಂಬಿ. ಗುರುವಿನ ತತ್ವ ಸಿದ್ಧಾಂತದಲ್ಲಿ ಪಳಗಿ ಅವಿಸ್ಮರಣೀಯ ಲೌಕಿಕ ಜೀವನದಿಂದ ಆಧ್ಯಾತ್ಮಿಕ ಲೋಕಕ್ಕೆ ತೆರೆದುಕೊಂಡಂತೆ. ಇಲ್ಲಿಯೂ ಶಿವಯೋಗಿಶ್ವರರ ಅಪಾರ ಶಿಷ್ಯವರ್ಗವೂ ಗುರುವಿನ ನೇಮವನ್ನು ಸ್ತುತಿಸುತ್ತ. 'ಬದುಕೆಂಬುದೆ ನಶ್ವರ ಇದರಲ್ಲಿ ತಾನು–ತನ್ನದು ಎಂಬುದು ಏನಿಲ್ಲ, ಹೆಂಡತಿ ಮಕ್ಕಳು, ಬಂಧು ಬಳಗ, ಶ್ರೀಮಂತಿಕೆ, ರಕ್ತಮಾಂಸ ಇರುವರೆಗೆ ಮಾತ್ರ,' ಆದರೆ ಗುರುವಿನ ದರ್ಶನ ನಮ್ಮ ಬದುಕಿನ ಶಾಶ್ವತ ಪರಿಯ ಸಂಬಂಧವೆಂದು ಸೂಚಿಸುತ್ತದೆ. ಹಾಗಾಗಿ ತಂದೆಯಾಗಿ,

ತಾಯಿಯಾಗಿ, ಬಂಧುವಾಗಿ ಪ್ರೇಮಾದಿಂದ ಕಾಪಾಡುವವನೇ ಶಿವಯೋಗಿಶ್ವರ ಎಂದು ನಂಬಿದ್ದಾರೆ.

3. ಜಾಣ ಶಿವಯೋಗಿ :

"ಉಮ್ಮಯದಲಿ ಬೀಜ ಬಿತ್ತಿ ಬೆಳೆದುರ ನಾನು
ಹಮ್ಮಿಲಿ ಪರರಗೆಯ ಅವತೋರಿದ
ಒಮ್ಮನದಿ ಬಯಸಿ ಬೇಡಿದರೆ ಸಿಗಬಹುದು
ದಮ್ಮಯ್ಯ ಕರುಣಿ ನೀ ಕೃಪೆ ಮಾಡು ಎಮಗ॥
'ಲೋಕ ಮೆಚ್ಚಿನ ಭಕ್ತಿ ನಡೆನುಡಿಯ ಎನ್ನಲಿ
ಯಾಕಂಜಿಯಲೆ ಮನವೆ ದೃಢವಿಲ್ಲವೇ
ಸಾಕುತನಗೆಂಬ ಬಲೆಯೊಳಗೆ ಸಿಲ್ಕಿದ ಕಡೆಗೆ
ಸಾಕು ಬೇಕೆಂದುಳಿವೆನೋ ದೇವಾ॥"

(ವಾಲಿ ಎಂ.ಎನ್. ಸಾಲೋಟಗಿ ಶ್ರೀ ಶಿವಯೋಗೀಶ್ವರ ಡಂಗುರ ಪದಗಳು, ಪುಟ: 5)

ಜಾಣ ಶಿವಯೋಗೀಶ್ವರರು ಎನ್ನುವ ಈ ತತ್ವಪದದಲ್ಲಿ ಜಾಣ ಎಂಬುದು ಜ್ಞಾನಿ, ಜಾಗ್ರದೊಳಗಿನ ಆತಿ ಜಾಗ್ರದೊಳಗಿನವನೇ ಅತಿಜ್ಞಾನಿ. ಈ ಎರಡನ್ನು ಜಾಗೃತಿಯಿಂದ ಪಾಲಿಸುವವನೇ ಜಾಣ. ಇನ್ನು ಪಾಮರನೆ ದಡ್ಡನಾಗಿರುತ್ತಾನೆ. ಉಮ್ಮಯದಲಿ ಬೀಜ ಬಿತ್ತಿ ಬೆಳೆದುರೆ ನಾನು ತಾನು ಶ್ರಮ ಪಟ್ಟು ತನ್ನ ಹೊಲಮನೆಯ ಬದುಕಿನ ಶ್ರೇಯಸ್ಸನ್ನು ಮಾಡಿಕೊಂಡು ಹೋಗುವಾಗ ಅದನ್ನು ನೋಡಿ ಸಹಿಸದವರು, ಅವನ ಮೇಲೆ ಸಿಟ್ಟನ್ನು ಸಾಧಿಸುವರು. ಈ ಭೂಲೋಕದಲ್ಲಿ ಒಂದೆಡೆ ನಮ್ಮ ಶ್ರೇಯಸ್ಸನ್ನು ಸ್ವೀಕರಿಸುವವರು ಇದ್ದರೆ ಮತ್ತೊಂದೆಡೆ ವಿರೋಧಿಸುವ ಗುಂಪು ಇರುತ್ತದೆ. ಹೇಗೆ ಜಾಣ–ದಡ್ಡರಿದ್ದರೋ ಹಾಗೆಯೇ ಹಿತ ಬಯಸುವ–ಸಂಕಟಪಡುವ ವರ್ಗವಿದೆ. ಇದನ್ನೆಲ್ಲ ಅರಿತು ಒಂದು ಕ್ಷಣ ಅವನಮ್ಮವನೆಂದುಕೊಂಡರೆ ದಮ್ಮಯ್ಯನ ಕರುಣೆಗೆ ನೀವೆಲ್ಲರೂ ಪುನೀತರಾಗುತ್ತೀರಿ.

ಲೋಕ ಮೆಚ್ಚಿನ ಭಕ್ತಿ ನಡೆನುಡಿಯ ಎನ್ನಲಿ
ಯಾಕಂಜಿಯಲೆ ಮನವೆ ದೃಢವಿಲ್ಲವೇ

ಈ ಒಂದು ಪದ್ಯದ ಸಾಲುಗಳನ್ನು ಗಮನಿಸುತ್ತ ಹೋದರೆ ಅಕ್ಕ ಮಹಾದೇವಿಯವರ ಒಂದು ವಚನ ನೆನಪಿಗೆ ಬರುತ್ತದೆ.

'ಬೆಟ್ಟದ ಮೇಲೊಂದು ಮನೆಯ ಮಾಡಿ
ಮೃಗಗಳಿಗಂಜಿದಡೆಂತಯ್ಯಾ?

ಸಮುದ್ರದ ತಡಿಯಲೊಂದು ಮನೆಯಮಾಡಿ
ನೊರೆ ತೆರೆಗಳಿಗಂಜಿದಡೆಂತಯ್ಯಾ
ಸಂತೆಯೊಳಗೊಂದು ಮನೆಯ ಮಾಡಿ ಶಬ್ದಕ್ಕೆ ನಾಚಿದಡೆಂತಯ್ಯಾ
ಚೆನ್ನಮಲ್ಲಿಕಾರ್ಜುನ ದೇವಕೇಳಯ್ಯಾ
ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿನಿಂದೆಗಳು ಬಂದಡೆ
ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು'

ಮೇಲಿನ ಶಿವಯೋಗೀಶ್ವರರ ತತ್ವಸಾರದ ನೀತಿ ಜ್ಞಾನವೆಂದರೆ ಲೋಕಕ್ಕೆ ಮೆಚ್ಚಿಸುವಂತಹ ಭಕ್ತಿ ಯಾವುದೆಂದರೆ ದೈವದ ಮೇಲಿನ ಭಕ್ತಿಯಲ್ಲ, ತೋರ್ಪಡಿಕೆಯ ಭಕ್ತಿಯಲ್ಲ ನಿಮ್ಮ ನಡೆನುಡಿಯ ಶುದ್ಧವಾದ ಭಕ್ತಿಗೆ ಮಾತ್ರ ಶಿವನೊಲಿಯುತ್ತಾನೆಂದು ಸಾರುತ್ತದೆ, ಬಡವ–ಬಲಿದ್ಧ, ಜ್ಞಾನ–ದಡ್ಡ ಇವುಗಳನ್ನೆಲ್ಲ ಅರಿತು ನಡೆಯುವುದೆ ನಿಜವಾದ ಲೋಕ ಮೆಚ್ಚುವ ಭಕ್ತಿ ಆಗ ನೀನು ಯಾವುದಕ್ಕೂ ಅಂಜುವ ಮಾತಿಲ್ಲ ನಮ್ಮ ಆತ್ಮ ಶುದ್ಧಿ ಇದ್ದರೆ ಮನಸ್ಸು ಸದೃಢವಾಗಿರುತ್ತದೆ. ಹಾಗಾಗಿ ನೀನು ನಿಷ್ಠೆಯ ಭಕ್ತಿ ತೋರಿದರೆ ಯಾರಿಗೂ ಭಯ ಪಡುವ ಮಾತಿಲ್ಲಬವೆಂಬ ತತ್ವವನ್ನು ಸಾರುತ್ತದೆ. ಅಕ್ಕಮಹಾದೇವಿಯ ವಚನವು ಮೇಲಿನ ತತ್ವಕ್ಕೆ ಹೊಂದಿಕೊಂಡಿದೆ ಧೃಡಮನಸ್ಸಿನಿಂದ ಭಕ್ತಿಯ ಪೂಜಿಸಿದರೆ. ಯಾವು ಆಡೆತಡೆಗಳು ಬರುವುದಿಲ್ಲ. ಇಲ್ಲಿ ಮನುಷ್ಯನು ಅಂದ ಮೇಲೆ ಒಂದಲ್ಲ ಒಂದು ತೊಂದರೆಗೆ ಒಳಗಾಗುತ್ತಾನೆ. ಆ ತೊಂದರೆಗಳನ್ನು ಮೆಟ್ಟುನಿಂತು ಧೈರ್ಯವಾಗಿ ಎದುರಿಸಬೇಕೆಂದು ತಿಳಿಸಿದ್ದಾರೆ. ಹಾಗೆ ಎಷ್ಟೆ ಕಷ್ಟ ಬಂದರು ಎದೆಗುಂದದೆ ಸಮಾಧಾನದಿಂದ ನಿರ್ಣಯವನ್ನು ತೆಗೆದುಕೊಂಡು ಬಗೆಹರಿಸಿಕೊಳ್ಳಬೇಕೆಂದು. ನಿಜ ಶರಣನ ಭಕ್ತಿಯನ್ನು ಲೋಕದೊಳು ಹುಟ್ಟಿದ ಬಳಿಕ ತೊಂದರೆ ಇದ್ದರು ಸಮಾಧಾನಿಯಾಗಿರ ಬೇಕೆಂದು ಸಾರಿದ್ದಾಳೆ. ಭಕ್ತಿಯನ್ನು ಕುರಿತು ಜೇಡರ ದಾಸಿಮಯ್ಯ ಒಂದು ವಚನ.

'ಬರು ಸರಗನ ಭಕ್ತಿ ದಿಟವೆಂದು ನಚ್ಚಲು ಬೇಡ
ಮಠದೊಳಗಣ ಬೆಕ್ಕು ಇಲಿಯ ಕಂಡು
ಪುಟನೆಗೆ ದಂತಾಯಿತ್ತು ಕಾಣ। ರಾಮನಾಥ'

ಅಂದರೆ ಸಾಮಾಜಿಕ ವ್ಯವಸ್ಥೆಯ ಭಕ್ತಿ ವಿಡಂಬನೆಯನ್ನು ಸೂಕ್ಷ್ಮವಾಗಿ ದೇವರ ದಾಸಿಮಯ್ಯ ಕಟ್ಟಿದ್ದಾನೆ. ತೋರ್ಪಡಿಕೆಯ ಭಕ್ತಿ ಅದು ಶಾಶ್ವತವಲ್ಲ ಅದು ಕೊನೆಗೆ ಅಧಃಪತನವಾಗುತ್ತದೆಂದು ಹೇಳಿದ್ದಾನೆ. ಅದು ನೀರಿನ ಮೇಲಿನ ಬಿಂಬದಂತೆ ಕಾಲ ಬದಲಾದಂತೆ ವ್ಯಕ್ತಿತ್ವದ ನಿಜರೂಪ ಹೊರಬರುತ್ತದೆ. ಹಾಗಾಗಿ ಭಕ್ತಿ ಎನ್ನುವಂತದ್ದು

ಲೋಕದ ತೋರ್ಪಡಿಕೆ ಆಗದೆ ಲೋಕಾಂತ ವಾಗಬೇಕೆಂಬುದನ್ನು ಜಗತ್ತಿಗೆ ಸಾರಿದ್ದಾರೆ.

4. ಕರುಣಾಂಕ ಬೀಜವ ಕಾಯೆನ್ನ ತಂದೆ:

"ಕರುಣಾಂಕ ಬೀಜವ ಕಾಯೆನ್ನ ತಂದೆ
ಅರಿಯರು ಮೂಲೋವಿನ್ನೂ
ಅರಿವನು ತಿಳಿವನು ಕೊಟ್ಟು ಸಲಹೆನ್ನೆ ತಂದೆ"

(ನೀಲಾ ಕೆ, ಸಾಲೋಟಗಿ ಶಿವಲಿಂಗೇಶ್ವರ ಮತ್ತು ಇತರೆ ತತ್ವಪದಗಳು, ಪುಟ: 107)

ಈ ಪದ್ಯದಲ್ಲಿ ಮೊದಲನೆ ಸಾಲಿನಲ್ಲಿಯೇ ಕರುಣಾಶೀಲ ಗುರು ಶರಣರ ಮಹತ್ವ ಕರ್ಮದ ಫಲ ಪಾಪ–ಪುಣ್ಯ ತತ್ತ್ವ ಹಾಗೂ ಸಮಾಜ ಸುಧಾರಣೆಯ ಸಂದೇಶ ಕಂಡು ಬರುತ್ತದೆ. 'ಕರುಣಾಂಕ ಬೀಜವ ಕಾಯೆನ್ನ ತಂದೆ' ಶರುಣರು ಜೀವನ ಪೂರ್ತಿ ಕರುಣೆಯನ್ನು ಸಾರುವ ಮಹಾಮಯಿಮರು. ಇವರು ಆ ಕರುಣೆಯಿಂದಲೇ ಜ್ಞಾನ, ಅರಿವು ಮತ್ತು ನೀತಿಮಾರ್ಗವನ್ನು ಭೋದಿಸುತ್ತಾರೆ. ಜನರು ಅಜ್ಞಾನದಿಂದ ಪಾಪದ ದಾರಿಗಳಲ್ಲಿ ನಡೆಯುತ್ತಿದ್ದರೆ. ಆಗ ಗುರು ಬಂದೊಡನೆ ಅವರ ದರ್ಶನ ಪಡೆದ ನಂತರ ಜೀವನ ಪರಿವರ್ತನೆಯಾಗುತ್ತದೆ. ಈ ಗುರು ಜಗತ್ತಿನಲ್ಲಿ ತಿಳಿಯದಂತಹ ನಿಜ ಜ್ಞಾನವನ್ನು (ಪರತತ್ವ) ಕರುಣೆಯುಳ್ಳ ಗುರು ಒದಗಿಸುತ್ತಾನೆ. ಜನರನ್ನು ಪಾಪ, ಅಜ್ಞಾನ, ದುರ್ಗುಣಗಳಿಂದ ಉಳಿಸಿ. ಶಾಂತಿ ಮಾರ್ಗಕ್ಕೆ ತರುವುದೇ ಆತನ ನಿಜ ಮಾರ್ಗ. ಗುರು ಅದಂತವನು ಹಳ್ಳಿಯವರಾಗಲಿ, ನಾಡಿನವರಾಗಲಿ, ಯಾರ ಮನೆಯವರಾಗಲಿ ಎಲ್ಲರನ್ನು ಸಮಾನವಾಗಿ ಮುನ್ನೆಡೆಸುವುದೇ ಕರುಣೆಯ ಭಿಜವನ್ನು ಗುರು ಬೀತ್ತುತ್ತ ಕುಸಿದ ಸಮಾಜಕ್ಕೆ ಮತ್ತೆ ನವಜೀವನ ನೀಡುತ್ತಾನೆ. ಒಟ್ಟಾರೆ ಒಳ್ಳೆಯತನ ಬೆಳೆಯಲು ಉಪದೇಶವನ್ನು ಸಾರುವ ಗುರುಗಳ ಕರುಣಾ–ಸಾಧನೆಯ ಪರಿಣಾಮವೆ ಸಮಾಜ ಸುಧಾರಣೆಗೆ ಕಾರಣವಾಗುತ್ತದೆ. ಈ ಪದ್ಯದ ಸಂದೇಶ ಕರುಣೆ ಶಕ್ತಿಯುಳ್ಳ ಗುರು ಹೇಗೆ ಮನುಷ್ಯನನ್ನು ಸಮಾಜವನ್ನು ಬದಲಾಯಿಸುತ್ತಾನೆ ಎಂಬ ತಾತ್ಪರ್ಯವನ್ನು ಸಾರುತ್ತದೆ.

5. ಹಾಲು ಹಾಲೆಂದುಳಿದ ಈ ಲೋಕವು:

"ಹಾಲು ಬೋನವನುಂಡು
ಹಾಲು ಬುತ್ತಿಯ ಪಿಡಿಯಲು ಅಯ್ಯ
ಹಾಲು ಹಾಲೆಂದುಳಿದ ಈ ಲೋಕವು"

(ನೀಲಾ ಕೆ, ಸಾಲೋಟಗಿ ಶಿವಲಿಂಗೇಶ್ವರ ಮತ್ತು ಇತರೆ ತತ್ವಪದಗಳು, ಪುಟ: 105)

ಇಲ್ಲಿ ಬರುವ 'ಹಾಲು' ಎಂಬ ಶಬ್ದವು ಕೇವಲ ಪಾನೀಯವಲ್ಲ ಆದೊಂದು

ಶುದ್ಧತೆಯ ಪ್ರಾಮಾಣಿಕತೆಯ ಮತ್ತು ಜೀವನ ಮೂಲ ಎಂದು ಸೂಚಿಸುತ್ತದೆ. 'ಹಾಲು ಬೋನವನುಂಡು' ಎಂದರೆ ಹಾಲಿನ ಬೋನಿನಲ್ಲಿ ಸಿಲುಕಿಕೊಂಡ ಈ ಲೋಕದ ಬಗ್ಗೆ ತಿಳಿಸುತ್ತದೆ, ಇಲ್ಲಿ ಶಿವಯೋಗೀಶ್ವರರು ಶಿವನ ಸ್ವರೂಡಿಯಾಗಿ ಬಂದು ಈ ಲೋಕವನ್ನು ನೋಡಿದ ನಂತರ ಇಲ್ಲಿನ ಸಂಪತ್ತಿಗೆ ಮರುಳಾಗಿ ಉಳಿದನೇನೂ ಎಂಬುದನ್ನು ಸೂಚಿಸುತ್ತದೆ.

6. ಸಂತೈಸಬಾರದು ಮಹಘನವ ಮಹಿಮ:

"ಸಂತೈಸಬಾರದು ಮಹಘನವ ಮಹಿಮ
ಪಂತಿಗಧಿಕ ಮೇಲು ಪಂಥವರ ತಂದವರ
ಅಂತರವ ತಿಳಿಯಲಾರಳವು॥
ಸಂತೈಸಬಾರದು ಮಹಘನವ ಮಹಿಮ ಕಾ
ಲಾಂತಕನೆ ತಾನೆ ಬಲ್ಲ"

(ನೀಲಾ ಕೆ, ಸಾಲೋಟಗಿ ಶಿವಲಿಂಗೇಶ್ವರ ಮತ್ತು ಇತರೆ ತತ್ವಪದಗಳು, ಪುಟ: 107)

ಮಹಘನ ಮಹಿಮೆಯ ತತ್ವ ಆಧ್ಯಾತ್ಮಿಕ ಮಾರ್ಗ ಅರಿವಿನ ಧರ್ಮ ಸಾಧನೆ ಮತ್ತು ಅನುಭವದ ಮಹತ್ವವನ್ನು ಸಾರುತ್ತಿದೆ, ಇಲ್ಲಿ ಕೇವಲ ಶಾಸ್ತ್ರ ವಾದ–ವಿವಾದಗಳಿಂದ ಸತ್ಯ ತಲುಪಲು ಸಾಧ್ಯವಿಲ್ಲ, ಭಕ್ತಿ– ಅನುಭವ ಗುರುಮಾರ್ಗದರ್ಶನಗಳೆ ಮುಖ್ಯವೆಂದು ಸಾರುತ್ತದೆ. ಇಲ್ಲಿನ ಮಹಘನ ಮಹಿಮೆ ಎಂಬುದು ಕೇವಲ ಮಾತಿನಿಂದ ಸಾಂತ್ವನದಿಂದ ಸಿಗುತ್ತದೆಂಬುದನ್ನು ಅರಿಯಬಾರದು. ಇದು ಸಾಮಾನ್ಯರ ಜ್ಞಾನಕ್ಕೆ ವಿವೇಕಕ್ಕೆ ಸುಲಭವಾಗಿ ಲಭಿಸುವ ದಾರಿಯಲ್ಲ, ಮನಸ್ಸಿನ ಅಂತರಿಕ ಪರಿಶುದ್ಧಿ ಬೇಕು ಎಂಬುದನ್ನು ಕಂಡುಕೊಂಡಿದ್ದಾರೆ. 'ಕಾಲಲಾಂತಕನೆ ತಾನೆ ಬಲ್ಲ... ಶೂಲಧಾರಿಗೆ ಸಲುವದೇ ಮರುಳೇ' ಎನ್ನುವಾಗ ಕೇವಲ ಗರ್ವದಿಂದ ತಾವು ಜ್ಞಾನಿಗಳು ಎಂದು ಕೊಂಡು ಇತರರ ಲೋಪಗಳನ್ನು ತೋರಿಸಬಾರದು, ದೇವರನ್ನು ಮತ್ತು ಶರಣರನ್ನು ಹೀಯಾಳಿಸಿ ಮಾತನಾಡುವವನು ನರಕಕ್ಕೆ ಹೋಗುವನು ಎಂಬ ಮಾತನು ಸಾರುತ್ತಾನೆ. ಇಲ್ಲಿ ಭಕ್ತಿ ಇಲ್ಲದೆ ಜಪ, ತಪ, ಶಾಸ್ತ್ರ ಇವೆಲ್ಲವು ವ್ಯರ್ಥ ಎಂದು ತಿಳಿಯುತ್ತದೆ.

'ವೇದ ಶಾಸ್ತ್ರವ ಓದಿ ಭೇದಿಸಿಕೊಳ್ಳಲೊಲ್ಲೆ.. ಸೌಜವು ದೊರಕೊಂಬುದೇ ಮರುಳೇ' ಕೇವಲ ವೇದಶಾಸ್ತ್ರ ಓದಿದರೆ ಜ್ಞಾನ ಸಾಕಾಗುವುದಿಲ್ಲ. ಆದರೆ ಧರ್ಮದ ದಾರಿಯಲ್ಲಿ ನಡೆದು ಜೀವನಾನುಭದಿಂದ ಕಂಡು ಕೊಳ್ಳುವ ಜ್ಞಾನವೇ ಸತ್ಯ. ಹಾಗಾಗಿ ವಾದ–ವಿವಾದ ಜ್ಞಾನ ಗರ್ವ ಪ್ರಯೋಜನಕಾರಿಯಲ್ಲ ಮರುಳೇ ಎಂದು ಕರೆದಿದ್ದಾರೆ. 'ಗುಪ್ತ ಗಂಭೀರದ ಗಗನ ಪಾತಾಳದ ಸಿಂಪು... ಮರುಳೇ' ಭಗವಂತನ ತತ್ವ ಅಪಾರ

ಬೆಲೆ ಬಾಳುವಂತದ್ದು ಹಾಗೂ ಆದೊಂದು ನಿಗೂಢ ಲೋಕ ಸಂಚಾರ. ಆಕಾಶ ಭೂಮಿಯ ನಡುವೆ ಸುಳಿಯುವ ಗಾಳಿಯನ್ನು ಹಿಡಿಯಲು ಆಗದಂತೆ, ಪರಬ್ರಹ್ಮನ ಅರಿವೂ ಅನುಭವದಿಂದ ಮಾತ್ರ ಸಾಧ್ಯ, ಆದರೆ ಕೇವಲ ಬಣ್ಣ ಬಣ್ಣದ ಮಾತುಗಳಿಂದ ಹೊಗಳಿದರೆ ಅಥವಾ ಉಪದೇಶ ಹೇಳುವುದರಿಂದ ಸತ್ಯ ದೊರೆಯುವುದಿಲ್ಲ ಅದೊಂದು ಪರಬ್ರಹ್ಮನ ಜೊತೆ ಸತ್ಸಂಗ ಮಾಡಿದಂತೆ ಸತ್ಯ ಎಂಬುದೇ ಆಗೋಚರವೆಂದು ತಿಳಿಸಿದ್ದಾನೆ.

'ಅರವತ್ನಾಲ್ಕು ಶೀಲದೊಳಗ ನೋಡಿದರಿಲ್ಲ.. ಆಗಮಗೋಚರವ ತಿಳಿವುದೇ ಮರುಳೇ' ಆಧ್ಯಾತ್ಮಿಕ ಸತ್ಯವನ್ನು ಅರಿಯಲು ಅರವತ್ನಾಲ್ಕು ಕಲೆಯ ಶಿಲ್ಪಗಳಲ್ಲಿ ಹುಡುಕಿದರು ಸಿಗುವುದಿಲ್ಲ. ಹದಿನೆಂಟು ಜ್ಞಾನ ಭಂಡಾರಗಳಲ್ಲಿಯೂ ಇಲ್ಲ. ಇನ್ನೂ ವೇದ–ಶಾಸ್ತ್ರ–ಪುರಾಣ ಗ್ರಂಥಗಳಲ್ಲಿಯೂ ಇಲ್ಲ, ಆರು ದಿವ್ಯ ದರ್ಶನ ತತ್ತ್ವಗಳಲ್ಲಿಯೂ ಹುಡಿಕಿದರೂ ಸಿಗುವುದಿಲ್ಲ, ಆದರೇ ಆಧ್ಯಾತ್ಮಿಕ ಸತ್ಯವಿರುವುದು ಗುರುವಿನಲ್ಲಿ, ಆ ಗುರುವಿನ ಆನುಗ್ರಹದಿಂದ ಮಾತ್ರ ಅದನ್ನು ಕಂಡುಕೊಳ್ಳಬಹುದು. ಅದೇ ನಿಜವಾದ ಆಗಮ ಮಾರ್ಗ ಅದೇ ಸತ್ಯಕ್ಕೆ ನೇರ ದಾರಿ. 'ಒಡವೊಡನೆ ಮಾತಾಡಿ... ಒಡೆಯ ಸನ್ನತಿಪುರದ ಹೊನ್ನ ಸೋಮನ ಕಂದ ಚೆನ್ನ ಬಸವನ ಬೇಡಿಕೊಳ್ಳಿ' ಗುರುಗಳನ್ನು ಮಹಾಮಹಿಮರನ್ನು ಹೀಯಾಳಿಸಿದರೆ ಜ್ಞಾನ ದೊರೆಯದು, ಸತ್ಯವನ್ನು ಅರಿಯುವ ಬಯಕೆಯುಳ್ಳ ಭಕ್ತರಿಗೆ ಮಾತ್ರ ಗುರುಗಳ ದಿವ್ಯದರ್ಶನವಾಗುತ್ತದೆ. ಆತನು ಜ್ಞಾನದ ದೀಪ್ತಿಯನ್ನು ಮುಟ್ಟುತ್ತಾನೆ. ಈ ಭೂಮಂಡಲವೆಂಬುವು ಹದಿನಾಲ್ಕು ಲೋಕಗಳನ್ನು ಕಷ್ಟದಿಂದ ಪಾರುಮಾಡಿ ಅವರನ್ನು ಸಂಕಟದಿಂದ ರಕ್ಷಿಸುವವನೇ ದೈವತ್ವಕ್ಕೇರುತ್ತಾನೆ. ಅಂತಹ ಗುರುವೆ ಶರಣ ಚೆನ್ನ ಬಸವಣ್ಣನೆಂಬುದನ್ನು ಶಿವಯೋಗೀಶ್ವರರು ಡಂಗುರವನ್ನು ಸಾರುತ್ತಾರೆ. ಒಟ್ಟಾರೆ ಮಾನವನು ಗರ್ವದಿಂದ ಅಹಂಕಾರದಿಂದ ಇತರರನ್ನು ನನಗಿಂತ ಕೀಳು ಎಂಬ ಭಾವನೆಯಿಂದ ನೋಡಿದರೆ ಅವನಿಗೆ ಆಧ್ಯಾತ್ಮಿಕ ಸುಳಿಯುವುದಿಲ್ಲ. ಉಳಿಯುವುದಿಲ್ಲ, ನಾವು ಎಷ್ಟೇ ಜಪ, ತಪ, ವ್ರತ, ಶಾಸ್ತ್ರ ಇವು ಎಲ್ಲವೂ ಅನುಭವವಿಲ್ಲದೆ ಭಕ್ತಿಯಿಲ್ಲದೆ, ಗುರು ಮಾರ್ಗದರ್ಶನವಿಲ್ಲದೆ ಸಿದ್ಧಿಸಿಕೊಳ್ಳಲು ಅಸಾಧ್ಯ. ಪರಬ್ರಹ್ಮನ ತತ್ತ್ವ ಗಾಢ ಹಾಗೂ ಗಂಭೀರ ಅದನ್ನು ಕೇವಲ ಗುರು ಅನುಗ್ರಹದಿಂದ ಮಾತ್ರ ಅರಿಯಬಹುದು. ನಾವು ವೇದ ಶಾಸ್ತ್ರ ಪುರಾಣ ಜ್ಞಾನವನ್ನು ಎಷ್ಟೇಗಳಿಸಿದ್ದರೂ ಅಂತರಿಕ ಶುದ್ಧಿ ಇಲ್ಲದಿದ್ದರೆ ಅದಕ್ಕೆ ಅರ್ಥವಿಲ್ಲ. ಶರಣರ ಮಾರ್ಗವೆ ಮೋಕ್ಷದ ಮಾರ್ಗ, ಶರಣಾಗತಿಯೆ ಶ್ರೇಷ್ಠದಾರಿ ಎಂದು, ಅಹಂಕಾರವೆಂಬುದು ಶೂನ್ಯ ಫಲ,

ಗುರು ಅನುಗ್ರಹವೆ ಪರಮ ಸತ್ಯವೆಂಬುದನ್ನು ಸಾರುತ್ತದೆ.

7. ಕೇಡಿನೊಳಗಾಗಲಿ ಬೇಡ :

"ಕೇಡಿನೊಳಗಾಗಲಿ ಬೇಡ
ನಂಬಿ ನಡೆದವರಿಗೊಂದಿಂಬು
ಗೊಂಬುದು ಧರ್ಮ ಮುಂದೆ ಬರುವ ದುರಿತ ತಪ್ಪಿ
ಅಮೃತವೀ ಜಗದೊಳಗ ಶ್ರೀ ಗುರುರಾಯ
ಸಂಭ್ರಮದ ಫಲಗಳುಂಟು"

(ನೀಲಾ ಕೆ, ಸಾಲೋಟಗಿ ಶಿವಲಿಂಗೇಶ್ವರ ಮತ್ತು ಇತರೆ ತತ್ವಪದಗಳು, ಪುಟ: 109)

ಈ ತತ್ವಪದವು ದೇವರ ಮೇಲಿನ ನಂಬಿಕೆಗೆ ಸಂಬಂಧಿಸಿದಂತೆ ಧಾರ್ಮಿಕ ಹಿತೋಪದೇಶವನ್ನು ನೀಡುತ್ತದೆ. ಅದರಲ್ಲಿರುವ ಸಂದೇಶವು ದೇವರನ್ನು ನಂಬಿದರೆ ಪಾಪಗಳನ್ನು ನಿವಾರಿಸಬಹುದು ಮತ್ತು ಧರ್ಮದ ಮಾರ್ಗದಲ್ಲಿ ನಡೆಯಲು ಪ್ರೇರಣೆ ದೊರೆಯುತ್ತದೆ. 'ಕೇಡಿನೊಳಗಾಗಲಿ ಬೇಡ' ಎಂದರೆ ಯಾವುದೇ ಕೆಟ್ಟ ಕರ್ಮಗಳಲ್ಲಿ ಸಿಲುಕಬೇಡಿ, ಧರ್ಮದ ಮಾರ್ಗದಲ್ಲಿ ನಡೆಯಬೇಕೆಂದು ಸಾರುತ್ತದೆ. ಧರ್ಮ ನಿಷ್ಠೆಯಿಂದ ಸತ್ಪಥದಿಂದ ನಡೆದುಹೊಗುವವನಿಗೆ ಯಾವ ಕೇಡು (ದುರಂತ, ಪಾಪ ಫಲ) ತಾಗುವುದಿಲ್ಲ ಎಂಬ ನೀತಿ ಸಾರುತ್ತದೆ, ಧರ್ಮ ನಂಬಿ ನಡೆಯಬೇಕು ತ್ಯ ಅಹಿಂಸೆ ಭಕ್ತಿ ಮತ್ತು ಗುರುನಂಬಿಕೆಯುಳ್ಳವರು ಜೀವನದಲ;ಲಿ ಕೇಡಿನಿಂದ ಪಾರಾಗುತ್ತಾರೆ. ಗುರು ನಂಬಿಕೆಯು ಅಮೃತ ಫಲಕೊಡುತ್ತದೆ. 'ಪಾಪ–ಪುನರ್ಜನ್ಮದ ಉಪದೇಶದಿಂದ ತೊಲಗುತ್ತವೆ' ಇಂದು ನಾಳೆ ಎನ್ನದೆ ಈಗಲೇ ಭಕ್ತಿಯಿಂದ ನಡೆದು ನಿರ್ಗುಣಗಳನ್ನು ಬಿಡಬೇಕೆಂದು ಸಾರುತ್ತಾನೆ.

ಗುರುರಾಯನ ಮಹಿಮೆ ಗುರುವೆಂಬ ಜಪನಾಮವೇ ಮೋಕ್ಷದದಾರಿ ಆತ್ಮನ ಒಳಗೆ ಅಡಗಿರುವ ದೇವನನ್ನು ಆರಿತುಕೊಳ್ಳಬೇಕು. ಪಾಪದ ಫಲದ ಎಚ್ಚರಿಕೆ ದುಷ್ಟಕರ್ಮ ಮಾಡಿದವನು ಬಂಧನದಲ್ಲಿ ಬೀಳುತ್ತಾನೆ. ಅಂತವನಿಗೆ ಪಾಪದ ಫಲ ತಪ್ಪುವುದಿಲ್ಲ. ಅದ್ದರಿಂದ ಏನೇ ಶುಭಕಾರ್ಯಗಳು ಮಾಡಿದರು ಪಾಪದಿಂದ ಮಾಡದೆ ಧರ್ಮಮಾರ್ಗದಿಂದ ಮಾಡುವುದೆ ನಿಜವಾದ ಧರ್ಮ ಪಥವೆಂದು ಸಾರಿದ್ದಾನೆ. ನಿಜವಾದ ಧರ್ಮವು ನಮ್ಮೊಳಗೆಯಿದೆ ಅದನ್ನು ಅರಿತು ನಾವು ಚನ್ನಬಸವನ ಸೋಮಕಂದನ ನಂದಿನಾಥನಾದ ಶಿವಯೋಗಿಶ್ವರರಿಗೆ ಶರಣಾಗತಿಯಾಗಿ, ಜೀವನವನ್ನು ಪಾಪದಿಂದ ಮುಕ್ತಿಗೊಳಿಸಿಕೊಂಡು ನೀತಿಯಮಾರ್ಗವನ್ನು ಹಿಡಿಯಬೇಕೆಂದು ಹೇಳಿದ್ದಾರೆ. ಗುರುವನ್ನು ನಂಬಿದರೆ ದುಃಖವೇ ತಟ್ಟದು ಎನ್ನುವಂತೆ, ಗುರು ನಿಷ್ಠೆಯಿಂದ

ನಡೆವವರ ಜೀವನದಲ್ಲಿ ಕೇಡು ತಾಗುವುದಿಲ್ಲ, ಗುರು ನಂಬಿಕೆಯಿಂದ ಸತ್ಯ ಧರ್ಮದಿಂದ ನಡೆವವರು ದುರಂತಗಳಿಂದ ಪಾರಾಗಿ ಅಮೃತದ (ಮೊಕ್ಷದ) ಫಲವನ್ನು ಪಡೆಯುತ್ತಾರೆ. ಶ್ರೀಗುರುರಾಯನ ಕೃಪೆಯಿಂದ ಸಂತೋಷದ ಫಲ ದೊರೆಯುತ್ತದೆ.

8. ಉಪದೇಶವನು ಕೊಟ್ಟು ಉಂಡಮನೆಯನೆ ಕೊಂಬ:

ಉಪದೇಶವನು ಕೊಟ್ಟು ಉಂಡಮನೆಯನೆ ಕೊಂಬ।
ಅಪದಸ್ಥ ಪಾಪಿಗೆ ಗುರುಯೆನಲುಬುಹುದೇ॥

ಈ ಪದ್ಯವು ಗುರುತನದ ನಿಜವಾದ ಅರ್ಥವನ್ನು ತಿಳಿಸುತ್ತದೆ. ನಕಲಿ ಗುರುಗಳನ್ನು ತೀವ್ರವಾಗಿ ಖಂಡಿಸುತ್ತದೆ. ಕೇವಲ ಉಪದೇಶ ಹೇಳಿ ಶಿಷ್ಯರ ಅನ್ನ, ಸಂಪತ್ತನ್ನು, ಅವರ ಶ್ರಮವನ್ನು ತಾನು ಉಪಯೋಗಿಸಿಕೊಂಡು, ಭಾಷಣದ ಮೆರುಗು, ಭಜನೆಯ ಆರ್ಭಟ, ಹೊರತೋರುವ ಧಾರ್ಮಿಕತೆಯಿಂದ ಜನರನ್ನು ಮರುಳುಗೊಳಿಸುವವನು ಗುರು ಅಗೋದಕ್ಕೆ ಎಂದಿಗೂ ಸಾಧ್ಯವಿಲ್ಲ. ಅವನು ಅಪದಸ್ಥ ಪಾಪಿಯಾಗುತ್ತಾನೆ ಎಂಬುದನ್ನು ಈ ತತ್ವಪದ ಸ್ಪಷ್ಟಪಡಿಸುತ್ತದೆ.

"ಗುರುಧರ್ಮಬೋಧೆಯ ಹೇಳಿ ಕೊಟ್ಟುದ ಕೊಂಡು।
ಪರಲೋಕ ಸಾಧನವ ಸಾಧ್ಯಮಾಡಿ.
ನೆರೆದ ಶಿಷ್ಯರನು ಸರ್ವಜ್ಞರನು ಮಾಡುವದು
ಗುರುತನವು ಹಿರಿತನವಹುದು ಜಗಕೆ
ಸಿರಿವಂತನಿವನ ಹೆಂಡತಿ ಚೆಲುವಿ ಎಂದುಕೊಂಡು
ಮೆರುಗನಿಕ್ಕುವ ಬಣ್ಣ ಭಜನೆಯಿಂದ
ಕರೆಕರೆದು ಸಾಹಿತ್ಯವನೆ ಕೊಟ್ಟವಳಿಗೆ
ಕೊರೆತಿಂಬ ಕುನ್ನಿಗೆ ಗುರುವೆನಲಬಹುದೇ"

(ನೀಲಾ ಕೆ, ಸಾಲೋಟಗಿ ಶಿವಲಿಂಗೇಶ್ವರ ಮತ್ತು ಇತರೆ ತತ್ವಪದಗಳು, ಪುಟ: 115)

ಗುರು ಎಂದರೆ ಶಿಷ್ಯರಿಗೆ ಧರ್ಮವನ್ನು ಬೋಧಿಸಬೇಕು, ಅವರ ಆತ್ಮೋನ್ನತಿಗೆ ಶ್ರಮಿಸಬೇಕು, ಅವರನ್ನು ಮೋಕ್ಷಮಾರ್ಗಕ್ಕೆ ತಲುಪಿಸಬೇಕು. ಶಿಷ್ಯರನ್ನು ಜ್ಞಾನಿಗಳನ್ನಾಗಿ ಮಾಡುವವನು, ಅವರಿಗೆ ವಿವೇಕ, ಆತ್ಮಜ್ಞಾನ ಕೊಡಿಸುವವನು ಅವನದೇ ನಿಜವಾದ ಗುರು. ಶಿಷ್ಯನು ಸ್ವತಂತ್ರವಾಗಿ ಸತ್ಯವನ್ನು ಅರಿಯುವ ಮಟ್ಟಕ್ಕೆ ಬಂದಾಗ ಮಾತ್ರ ಗುರು ತನ್ನ ಕರ್ತವ್ಯ ಪೂರೈಸಿದಂತೆ. ನಿಜವಾದ ಗುರು ನನ್ನನ್ನೇ ಅನುಸರಿಸು ಎಂದು ಹೇಳುವುದಿಲ್ಲ, ನಿನ್ನೊಳಗಿನ ಜ್ಞಾನವನ್ನು ಕಾಣು ಎಂದು ಹೇಳುತ್ತಾನೆ. ಶಿಷ್ಯನು ಗುರುಗಿಂತಲೂ ಮೇಲುಗೈ ಸಾಧಿಸಿದರೂ ಅದನ್ನೇ ಗುರುತನದ ವಿಜಯ

ಎಂದು ಕಾಣುತ್ತಾನೆ. ಹೆಂಡತಿ ಸುಂದರಳು ಎಂದು ಹೇಳಿಕೊಂಡು ಗಂಡನಿಗೆ ಮೆರುಗು ಕೊಟ್ಟಂತೆ, ಗುರುವಿನ ಹೆಸರಿಗೂ ಕೇವಲ ಅಲಂಕಾರ ಮಾತ್ರ. ಹೀಗಾಗಿ ಅಂತರಂಗ ಶುದ್ಧವಿಲ್ಲದಿದ್ದರೆ ಬಾಹ್ಯ ಧಾರ್ಮಿಕತೆ ವ್ಯರ್ಥ.

ಹಿರಿಯನೆಂದೇ ಕರೆಸಿಕೊಂಡಿ ಎಲ್ಲರ ಕೈಲಿ।
ಬೆರಗಲ್ಲ ಕೇಳಿ ಮತ್ತೊಂದು ಮಾತ
ಧರೆಯ ಜನಕೆಲ್ಲ ಕಪ್ಪುರದೊಡೆಯುರಿದು
ಪರಿಮಳವು ಹರಡಿ ನಾರುತಲಿಹುದು
ಅರಿಯದವರಡ್ಡ ಬಿದ್ದರೆ ಕೂಳ ಕೊಬ್ಬಿನಲಿ
ಹಿರಿಯನೆಂದೇ ಬಗೆದು ಲೋಕದೊಳಗೆ
ಹಿರಿಯರಿಗೆ ಹಿರಿಯ ಗುರುವಿನ ಗುರು ಬುಡಪಟ್ಟ
ದರಸನಿದ್ದಂತೆ ಮತ್ತ ಹಿರಿಯರುಂಟೇ॥

(ನೀಲಾ ಕೆ, ಸಾಲೋಟಗಿ ಶಿವಲಿಂಗೇಶ್ವರ ಮತ್ತು ಇತರೆ ತತ್ವಪದಗಳು, ಪುಟ: 116)

ಜನರಿಂದ ಹಿರಿಯ, ಗುರು, ಮಹಾನ್ ಎಂದು ಕರೆಸಿಕೊಳ್ಳುತ್ತಾನೆ. ಆದರೆ ಒಳಗಿನ ಜ್ಞಾನವಿಲ್ಲ. ಆನರ ಅಜ್ಞಾನವೇ ಅವನ ಬಲ ಎಂಬಂತೆ. ಕಪ್ಪೂರ ಸುಟ್ಟರೆ ಸುಗಂಧ ಬರುತ್ತದೆ. ಆದರೆ ಅದರ ಗುಣ ಅರಿಯದವನು ಅದರ ಬೂದಿಯಲ್ಲೇ ಅಂಟಿಕೊಳ್ಳುತ್ತಾನೆ. ಲೋಕದಲ್ಲಿ ಹೆಸರಿನ ಗೌರವ ಹೆಚ್ಚು, ಗುಣದ ಗೌರವ ಕಡಿಮೆ ಎಂಬುದನ್ನು ಸಾರುತ್ತದೆ. ಗುರುತನ ಒಂದು ಸ್ಥಾನವಲ್ಲ ಅದು ಗುಣ. ಶಿಷ್ಯನನ್ನು ಅಜ್ಞಾನದಿಂದ ಜ್ಞಾನಕ್ಕೆ, ಬಂಧನದಿಂದ ಮುಕ್ತಿಗೆ, ಅವಲಂಬನೆಯಿಂದ ಸ್ವಾತಂತ್ರ್ಯಕ್ಕೆ ಕರೆದೊಯ್ಯುವವನೇ ಗುರು ಎಂಬುದನ್ನು ಈ ತತ್ವಪದ ಸಾರುತ್ತದೆ.

9. ಕಕ್ಕುಲತೆ ಬಿಟ್ಟರೆ ಉಳುಹಬಲ್ಲೆ ನೀ:

"ಕಕ್ಕುಲತೆ ಬಿಟ್ಟರೆ ಉಳುಹಬಲ್ಲೆ ನೀ
ಒಕ್ಕಲಿಕ್ಕುತ ಬರನು ಭಿನ್ನರೋಗ ಬಡಿವಾಗ।
ಕಕ್ಕುಲತೆ ಬಿಟ್ಟರೆ ಉಳುಹಬಲ್ಲೆ ನೀ
ಸಿಕ್ಕಿದೆನು ಮರುಳ ಮಾತಿಲ್ಲ ಬುಡಪಟ್ಟದ
ದಕ್ಕು ಬಸವಣ್ಣ ಕೃಪೆಯಿಂದ ಸಲಹು॥
ಆಕಾಶಕಟ್ಟಿ ಭೂಮಂಡಲಕೆ ಬೆಳಸಿಲ್ಲ ।
ನಾಕು ದಿಕ್ಕಿನ ಪುಂಡರಟ್ಟಿ ಬಡಿದು
ಲೋಕದ ಅರಸುಗಳು ನಯವ ಬಿಟ್ಟು ಧರೆಗೆ

ಕಾಕುತನದಿಂದ ಹಾಳಾಯಿತು ನಾಡು
ಸಾಕಾಯಿತು ಹೆಂಡತಿಯ ಮೇಲೆ ಮಕ್ಕಳ ಮೋಹ
ಏಕುಳೆ ಹತ್ತಿ ಒಡಲಿಗೆ ಕಾಣದೆ
ಲೋಕರಕ್ಷಿಪನೆಂದು ಬಿನ್ನಯಿಸಲೇಸು ಮರುಳೆ
ಸಾಕಿ ಸಲಹುವ ದೈವ ಇಲ್ಲವಾಗಿ”

(ನೀಲಾ ಕೆ, ಸಾಲೋಟಗಿ ಶಿವಲಿಂಗೇಶ್ವರ ಮತ್ತು ಇತರೆ ತತ್ವಪದಗಳು, ಪುಟ: 129)

ಕಕ್ಕುಲತೆ (ದಯೆ, ಕರುಣೆ) ಬಿಟ್ಟರೆ ಯಾರನ್ನೂ ಉದ್ಧರಿಸಲು ಸಾಧ್ಯವಿಲ್ಲ. ನಾನು ಮರುಳನಾಗಿ, ಮಾತಿಲ್ಲದೆ, ದಾರಿತಪ್ಪಿದವನಾಗಿ ಸಿಕ್ಕಿಕೊಂಡಿದ್ದೇನೆ. ನನ್ನೊಳಗಿನ ಅಹಂಕಾರ, ಅಜ್ಞಾನ, ದುಃಖಗಳಿಂದ ನನ್ನನ್ನು ಹೊರತನ್ನುವ ಶಕ್ತಿ ನನಗಿಲ್ಲ. ಬಸವಣ್ಣನ ಕೃಪೆಯಿಂದಲೇ ನನ್ನನ್ನು ಕಾಪಾಡಬೇಕು ಎಂದು ಬೇಡಿಕೊಳ್ಳುತ್ತಾರೆ. ಒಟ್ಟಿನಲ್ಲಿ ಮಾನವನಿಗೆ ತನ್ನಿಂದಲೇ ಮುಕ್ತಿ ಇಲ್ಲ; ದಯೆ ಮತ್ತು ಗುರುಕೃಪೆಯೇ ರಕ್ಷಣೆ.

ರಾಜಕೀಯ–ಸಾಮಾಜಿಕ ನೋಟವನ್ನು ಸೂಚಿಸುತ್ತದೆ. ಆಕಾಶವನ್ನೂ ಕಟ್ಟಿಲ್ಲ, ಭೂಮಿಯನ್ನೂ ಬೆಳೆಸಿಲ್ಲ ಅಂದರೆ, ಸೃಷ್ಟಿಗೆ ಏನೂ ಕೊಡುಗೆ ನೀಡದವರು. ನಾಲ್ಕು ದಿಕ್ಕಿನ ದುಷ್ಟರನ್ನು ಸೇರಿಸಿಕೊಂಡು, ಬಲದಿಂದ ಆಡಳಿತ ನಡೆಸಿದರು, ಲೋಕದ ಅರಸುಗಳು ನ್ಯಾಯ, ನಯ, ಧರ್ಮವನ್ನು ಬಿಟ್ಟು ಕೇವಲ ಸ್ವಾರ್ಥ ಮತ್ತು ಕಾಕುತನದಿಂದ, ಕ್ರೌರ್ಯದಿಂದ ದೇಶವನ್ನೇ ಹಾಳು ಮಾಡಿದರು. ಧರ್ಮವಿಲ್ಲದ ಅಧಿಕಾರ, ಕರುಣೆಯಿಲ್ಲದ ಆಡಳಿತ ಸಮಾಜವನ್ನು ನಾಶ ಮಾಡುತ್ತದೆ. ಮೊದಲ ವಚನ ವೈಯಕ್ತಿಕ ಆತ್ಮಶುದ್ಧಿ, ಕರುಣೆಯ ಅವಶ್ಯಕತೆ. ಎರಡನೇ ವಚನ ಅಧರ್ಮಿ ಆಡಳಿತದ ವಿರುದ್ಧ ತೀವ್ರ ಟೀಕೆಯನ್ನು ವ್ಯಕ್ತಪಡಿಸುತ್ತದೆ.

ಈ ಡಂಗುರ ಪದದಲ್ಲಿ ಶಿವಯೋಗೀಶ್ವರರು ತನ್ನ ಜೀವನದ ಹಾಗೂ ಲೋಕದ ದುಸ್ಥಿತಿಯನ್ನು ನೋಡಿ ತೀವ್ರವಾಗಿ ವ್ಯಥೆಪಡುತ್ತಾನೆ. ನಾಡು, ಮನೆ, ಕುಲ, ಧರ್ಮ, ನೀತಿ ಎಲ್ಲವೂ ಕುಸಿದುಹೋಗಿವೆ; ಲೋಭ, ಮೋಹ, ಅಹಂಕಾರದಿಂದ ಮಾನವೀಯತೆ ನಾಶವಾಗಿದೆ. ಸಂಬಂಧಗಳು, ಮಕ್ಕಳು, ಬಂಧುಗಳು ಯಾರೂ ರಕ್ಷಣೆಯಾಗುವುದಿಲ್ಲ ಎಂಬ ಅನುಭವ ಅವನದು. ತನ್ನ ತಪ್ಪುಗಳು, ಪಾಪಗಳು, ಅಜ್ಞಾನವನ್ನು ನಿರಂತರವಾಗಿ ಒಪ್ಪಿಕೊಳ್ಳುತ್ತಾನೆ. ಈ ಎಲ್ಲ ಸ್ಥಿತಿಯಲ್ಲಿ ಅವನಿಗೆ ಆಶ್ರಯ ಒಂದೇ, ಬಸವೇಶ್ವರ, ನಂದೀಶ, ಬುಡಪಟ್ಟದಧಿಕ ಅವರನ್ನು ತಂದೆ ತಾಯಿಯಂತೆ, ದೈವವಾಗಿ, ಗುರುವಾಗಿ ಕಂಡು, “ನನ್ನ ದೋಷಗಳನ್ನು ನೋಡಬೇಡ, ನನ್ನ ಭಕ್ತಿಯನ್ನು ಮಾತ್ರ ಸ್ವೀಕರಿಸು; ಕೈ ಬಿಡಬೇಡ, ಕಾಡಿಗೆ ಬಿಡಬೇಡ” ಎಂದು

ಕರುಣೆಯಿಂದ ಬೇಡಿಕೊಳ್ಳುತ್ತಾನೆ. ಲೋಕದ ಶಕ್ತಿ, ಐಶ್ವರ್ಯ, ಸಂಬಂಧಗಳೆಲ್ಲ ಕ್ಷಣಿಕ. ಗುರುಕೃಪೆ ಮತ್ತು ಲಿಂಗಭಕ್ತಿಯೇ ನಿಜವಾದ ರಕ್ಷಣೆ ಎಂಬುದು ಶಿವಯೋಗೀಶ್ವರರ ಅಂತಿಮ ನಂಬಿಕೆ.

ಒಟ್ಟಾರೆ ಸಾಲೋಟಗಿ ಶಿವಯೋಗೀಶ್ವರರು ಒಬ್ಬ ಸಾಮಾನ್ಯ ಮನುಷ್ಯನಾಗಿ ತನ್ನ ಭಕ್ತಿಯಿಂದ ಲೋಕ ದರ್ಶನಕ್ಕೆ ತೆರೆದುಕೊಂಡು, ಜನಸಾಮಾನ್ಯರ ಬದುಕನ್ನು ಹಸನು ಮಾಡಬೇಕೆಂದು ನಿರಂತರವಾಗಿ ಶ್ರಮಿಸಿದ ಶರಣ ಪಟ್ಟವನ್ನು ಕಟ್ಟಿಕೊಂಡವನು. ಡಂಗುರ ಪದಗಳು ಎಂದರೆ ತನ್ನ ಪರಿಸರದಲ್ಲಿ ನಡೆಯುವ ಅನ್ಯಾಯ, ಮೌಢ್ಯ, ಪ್ರಭುತ್ವ, ಢಾಂಭಿಕತೆಯನ್ನು ಕುರಿತು ಜನಸಾಮಾನ್ಯರಿಗೆ ಎಚ್ಚರಿಸುವ ತತ್ವಸಾರವನ್ನು ಜನರಲ್ಲಿ ಬಿತ್ತಿದರು. ಇವುಗಳಲ್ಲಿ ಗುರು ಶಿಷ್ಯರ ನಡುವಿನ ಬೋಧ ಜ್ಞಾನ, ಲೋಕದಲ್ಲಿ ಮುಂದೆ ನಡೆಯುವ ಅತೀತ ಲೋಕದ ಭವಿಷ್ಯವನ್ನು ಹೇಳುವ ಕಾಲಜ್ಞಾನ, ಮನುಷ್ಯನಾದವನು ಲೋಕದಲ್ಲಿ ಹೇಗೆ ಜೀವಿಸಬೇಕು ಎಂಬುದನ್ನು ತಿಳಿಸುವ ನೀತಿಜ್ಞಾನ. ಲೋಕ ಸಂಚಾರದ ಅನುಭವನ್ನು ಖಂಡಜ್ಞಾನ. ಈ ಎಲ್ಲವುಗಳನ್ನು ಒಳಗೊಂಡ ಲೋಕ ಸಂಚಾರದ ಅನುಭವಗಳನ್ನು ಅಧ್ಯಾತ್ಮಿಕ ನೆಲೆಯಲ್ಲಿ ಮನುಷ್ಯನನ್ನು ಎಚ್ಚರಿಸುವ, ಅವನ ಬದುಕಿನ ಪ್ರಶ್ನೆಗಳಿಗೆ ಉತ್ತರಗಳನ್ನು ಈ ಡಂಗುರ ಪದಗಳಲ್ಲಿ ಶಿವಯೋಗೀಶ್ವರರು ನಿರೂಪಿಸಿದ್ದಾರೆ.

ಪರಾಮರ್ಶನ ಗ್ರಂಥಗಳು:

1. ಅಮರೇಶ ನುಗಡೋಣಿ, ತತ್ವಪದ ಸಾಹಿತ್ಯ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. 2014.
2. ಕೊಪ್ಪಾ ಎಸ್.ಕೆ, ಸಿದ್ಧಲಿಂಗ ಕವಿಯ ಸಾಲೋಟಗಿ ಶ್ರೀ ಶಿವಯೋಗೀಶ್ವರ ಪುರಾಣ, ಶ್ರೀ ಶಿವಯೋಗೀಶ್ವರ ಸೇವಾ ಸಮಿತಿ, ಸಾಲೋಟಗಿ, 2001.
3. ನೀಲಾ ಕೆ, ಸಾಲೋಟಗಿ ಶಿವಲಿಂಗೇಶ್ವರ ಮತ್ತು ಇತರರ ತತ್ವಪದಗಳು, ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಬೆಂಗಳೂರು, 2024.
4. ರಹಮತ್ ತರೀಕೆರೆ, ಕರ್ನಾಟಕ ಗುರುಪಂಥ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,

ಹಂಪಿ. 2020.

5. ರಹಮತ್ ತರೀಕೆರೆ, ಅರುಣ್ ಜೋಳದಕೂಡ್ಲಿಗಿ, (ಸಂ), ತತ್ವಪದ ಪ್ರವೇಶಿಕೆ, ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಬೆಂಗಳೂರು, 2017.
6. ವಾಲಿ ಎಂ.ಎನ್, ಸಾಲೋಟಗಿ ಶಿವಯೋಗೀಶ್ವರ ಡಂಗುರ ಪದಗಳು, ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ, 1982.

***

ಬಸವಣ್ಣನವರ ವಚನಗಳಲ್ಲಿ ಪ್ರಾಣಿ ಪ್ರತಿಮೆಗಳು: ಒಂದು ತಾತ್ವಿಕ ವಿಶ್ಲೇಷಣೆ

ಡಾ. ಸುಮಂಗಲಾ ಎನ್. ರೆಡ್ಡಿ
ಸಹಾಯಕ ಪ್ರಾಧ್ಯಾಪಕ
ಶರಣ ಬಸವ ವಿಶ್ವವಿದ್ಯಾಲಯ
ಕಲಬುರ್ಗಿ
drsumangalanreddy@gmail.com

1

ಪ್ರಮುಖ ಪದಗಳು
ಬಸವಣ್ಣ, ವಚನ ಸಾಹಿತ್ಯ, ಪ್ರಾಣಿ ಪ್ರತಿಮೆಗಳು, ರೂಪಕ, ಅಧ್ಯಾತ್ಮ, ಸಾಮಾಜಿಕ ವಿಡಂಬನೆ.

12ನೇ ಶತಮಾನದ ಸಾಮಾಜಿಕ ಕ್ರಾಂತಿಯ ಹರಿಕಾರ ಬಸವಣ್ಣನವರು ತಮ್ಮ ವಚನಗಳ ಮೂಲಕ ಅಧ್ಯಾತ್ಮ ಮತ್ತು ಸಾಮಾಜಿಕ ಸುಧಾರಣೆಯನ್ನು ಜನಸಾಮಾನ್ಯರ ಭಾಷೆಯಲ್ಲಿ ಮಂಡಿಸಿದರು. ಈ ಪ್ರಕ್ರಿಯೆಯಲ್ಲಿ ಅವರು ಬಳಸಿಕೊಂಡ ಅತ್ಯಂತ ಪರಿಣಾಮಕಾರಿ ಮಾಧ್ಯಮವೆಂದರೆ 'ಪ್ರಾಣಿ ಪ್ರತಿಮೆಗಳು' (Animal Metaphors). ಮಾನವನ ಮನಸ್ಸಿನ ವಿಕಾರಗಳು, ಭಕ್ತಿಯ ಪಾರಮ್ಯ ಮತ್ತು ಸಾಮಾಜಿಕ ಡಾಂಬಿಕತೆಯನ್ನು ವಿವರಿಸಲು ಆನೆ, ಹಾವು, ಕಾಗೆ, ಕತ್ತೆ ಮೊದಲಾದ ಪ್ರಾಣಿಗಳನ್ನು ರೂಪಕಗಳಾಗಿ ಬಳಸಿದ್ದಾರೆ. ಈ ಲೇಖನವು ಬಸವಣ್ಣನವರ ಆಯ್ದ ವಚನಗಳ ಹಿನ್ನೆಲೆಯಲ್ಲಿ ಈ ಪ್ರತಿಮೆಗಳ ತಾತ್ವಿಕ ಮತ್ತು ಮನೋವೈಜ್ಞಾನಿಕ ಆಳವನ್ನು ವಿಶ್ಲೇಷಿಸುತ್ತದೆ.

ಭಾರತದ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳುವಳಿಯ ಪ್ರಮುಖ ಪ್ರವರ್ತಕರಲ್ಲಿ ಬಸವಣ್ಣನವರು ಅಗ್ರಗಣ್ಯರು. ಕಲ್ಯಾಣದ ಅನುಭವ ಮಂಟಪದ ಮೂಲಕ ಜಾತಿ, ಲಿಂಗ ಮತ್ತು ವರ್ಗಭೇದವಿಲ್ಲದ ಸಮಾನ ಸಮಾಜದ

ಕನಸು ಕಂಡವರು. ಅವರ ಬೋಧನೆಗಳು ಜನಸಾಮಾನ್ಯರ ಮನಮುಟ್ಟುವಂತಹ ಸರಳ ಭಾಷೆಯಲ್ಲಿ 'ವಚನ'ಗಳ ರೂಪದಲ್ಲಿ ಪ್ರಕಟಗೊಂಡವು. ಈ ವಚನಗಳಲ್ಲಿ ತಮ್ಮ ಚಿಂತನೆಗಳನ್ನು ಅಭಿವ್ಯಕ್ತಗೊಳಿಸಲು ಅವರು ವಿಭಿನ್ನ ಪ್ರತಿಮೆಗಳನ್ನು ಸಮರ್ಥವಾಗಿ ಬಳಸಿಕೊಂಡಿದ್ದಾರೆ. ಇವುಗಳಲ್ಲಿ ಪ್ರಾಣಿ ಪ್ರತಿಮೆಗಳು ಕೇವಲ ಅಲಂಕಾರಿಕವಾಗಿರದೆ, ಆಳವಾದ ತಾತ್ವಿಕ ಮತ್ತು ಸಾಮಾಜಿಕ ಅರ್ಥಗಳನ್ನು ಒಳಗೊಂಡಿವೆ.

ಪ್ರಾಣಿ ಪ್ರತಿಮೆಗಳ ಸಾಂಕೇತಿಕತೆ:

ಬಸವಣ್ಣನವರ ವಚನಗಳಲ್ಲಿ ಪ್ರಾಣಿಗಳು ಕೇವಲ ಜೀವಿಗಳಾಗಿರದೆ, ಮಾನವ ಸ್ವಭಾವದ ವಿವಿಧ ಮಗ್ಗಲುಗಳನ್ನು ಬಿಂಬಿಸುವ ಪಾತ್ರಗಳಾಗಿವೆ. ಅಜ್ಞಾನ, ಅಹಂಕಾರ, ಕ್ರೋಧದಂತಹ ದುರ್ಗುಣಗಳನ್ನು ಚಿತ್ರಿಸಲು ಕೆಲವು ಪ್ರಾಣಿಗಳನ್ನು ಬಳಸಿದರೆ, ಸಹಜೀವನ ಮತ್ತು ನಿಷ್ಠೆಯನ್ನು ವಿವರಿಸಲು ಇನ್ನು ಕೆಲವು ಪ್ರಾಣಿಗಳನ್ನು ಬಳಸಿದ್ದಾರೆ.

ಅ) ಅಹಂಕಾರ ಮತ್ತು ನಿಯಂತ್ರಣದ ಸಂಕೇತವಾಗಿ 'ಆನೆ':

"ಕರಿಯಂಜುವುದು ಅಂಕುಶಕ್ಕಯ್ಯಾ,
ಗಿರಿಯಂಜುವುದು ಕುಲಿಶಕ್ಕಯ್ಯಾ, ತಮಂಧವಂಜುವುದು ಜ್ಯೋತಿಗಯ್ಯಾ,
ಕಾನನವಂಜುವುದು ಬೇಗೆಗಯ್ಯಾ,
ಪಂಚಮಹಾಪಾತಕವಂಜುವುದು ಕೂಡಲಸಂಗನ ನಾಮಕ್ಕಯ್ಯಾ"॥75 ॥
"ಕರಿಯಂಜುವುದು ಅಂಕುಶಕ್ಕಯ್ಯಾ, ಗಿರಿಯಂಜುವುದು ಕುಲಿಶಕ್ಕಯ್ಯಾ..."

ಇಲ್ಲಿ 'ಕರಿ' (ಆನೆ) ಎನ್ನುವುದು ಮದವೇರಿದ ಅಥವಾ ಕ್ರೋಧಿತ ಮನಸ್ಸಿಗೆ ಸಂಕೇತ. ಕಾಡಾನೆಯನ್ನು ಅಂಕುಶವು ನಿಯಂತ್ರಿಸುವಂತೆ, ಅಹಂಕಾರ ಮತ್ತು ಪಂಚಮಹಾಪಾತಕಗಳನ್ನು ಕೂಡಲಸಂಗಮದೇವನ ನಾಮಸ್ಮರಣೆ ಮತ್ತು ಭಕ್ತಿ ನಿಯಂತ್ರಿಸುತ್ತದೆ ಎಂಬುದು ಇಲ್ಲಿನ ತಾತ್ಪರ್ಯ.

ಆ) ಜ್ಞಾನ ಮತ್ತು ಕಪಟತನದ ವಿಶ್ಲೇಷಣೆಯಲ್ಲಿ 'ಗಿಳಿ–ಬೆಕ್ಕು':

"ಗಿಳಿಯೋದಿ ಫಲವೇನು? ಬೆಕ್ಕು
ಬಹುದ ಹೇಳಲರಿಯದು.
ಜಗವೆಲ್ಲವ ಕಾಬ ಕಣ್ಣು,
ತನ್ನ ಕೊಂಬ ಕೊಲ್ಲೆಯ ಕಾಣಲರಿಯದು. ಇದಿರ ಗುಣವ
ಬಲ್ಲೆವೆಂಬರು, ತಮ್ಮ ಗುಣವನರಿಯರು, ಕೂಡಲಸಂಗಮದೇವಾ." 123
"ಗಿಳಿಯೋದಿ ಫಲವೇನು? ಬೆಕ್ಕು ಬಹುದ ಹೇಳಲರಿಯದು..."

ಪಠಿತ ಜ್ಞಾನವು ಜೀವನದಲ್ಲಿ ಅನ್ವಯವಾಗದಿದ್ದರೆ ಅದು ಗಿಳಿಪಾಠದಂತೆ

ವ್ಯರ್ಥ. ಕಣ್ಣು ಜಗತ್ತನ್ನೆಲ್ಲ ನೋಡಿದರೂ ತನ್ನ ರೆಪ್ಪೆಯನ್ನೇ ನೋಡಲಾರದು. ಹಾಗೆಯೇ ಮನುಷ್ಯನು ಇತರರ ಗುಣ–ದೋಷಗಳನ್ನು ಎಣಿಸುತ್ತಾನೆಯೇ ಹೊರತು ತನ್ನ ಅಂತರಂಗವನ್ನು ಅರಿಯುವುದಿಲ್ಲ ಎಂಬ ಆತ್ಮವಿಮರ್ಶೆಯು ಈ ಪ್ರತಿಮೆಯ ಮೂಲಕ ವ್ಯಕ್ತವಾಗಿದೆ.

ಸಾಮಾಜಿಕ ಸಹಜೀವನದ ಮಾದರಿಯಾಗಿ 'ಕಾಗೆ–ಕೋಳಿ' :

"ಕಾಗೆ ಒಂದಗುಳ ಕಂಡಡೆ ಕರೆಯದೆ ತನ್ನ ಬಳಗವನು?
ಕೋಳಿ ಒಂದು ಕುಟುಕ ಕಂಡಡೆ ಕೂಗಿ ಕರೆಯದೆ ತನ್ನ ಕುಲವನೆಲ್ಲವ?
ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದಡೆ ಕಾಗೆ ಕೋಳಿಯಿಂದ ಕರಕಷ್ಟ
ಕೂಡಲಸಂಗಮದೇವಾ." – 438

'ನಿಸರ್ಗದಲ್ಲಿ ಕಾಗೆ ಮತ್ತು ಕೋಳಿಗಳಂತಹ ಸಾಮಾನ್ಯ ಪಕ್ಷಿಗಳು ತಮಗೆ ಆಹಾರ ಸಿಕ್ಕಾಗ ತಮ್ಮ ಬಳಗವನ್ನು ಕೂಗಿ ಕರೆಯುತ್ತವೆ. ಇದು ಅವುಗಳ ಸಹಜ ಧರ್ಮ. ಆದರೆ ಮನುಷ್ಯನಾಗಿ ಪರಸ್ಪರ ಕಾಳಜಿ ಮತ್ತು ಹಂಚಿಕೊಳ್ಳುವ ಗುಣವಿಲ್ಲದಿದ್ದರೆ ಅವನು ಆ ಪಕ್ಷಿಗಳಿಗಿಂತಲೂ ಕಡೆಯಾದವನು ಎಂದು ಸಾಮಾಜಿಕ ಬೋಧೆಯನ್ನು ಬಸವಣ್ಣನವರು ಇಲ್ಲಿ ನೀಡುತ್ತಾರೆ

ಅಜ್ಞಾನದ ಪ್ರತೀಕವಾಗಿ 'ಕತ್ತೆ ಮತ್ತು ಕೋಣ':

"ಕತ್ತೆ[ಯ] ಕರವೆತ್ತಿ ಕರವೆತ್ತಿ ಕರೆದಡೆ
ಅದೆತ್ತಣ ವಾರ್ತೆಯೆಂದು ಬಲ್ಲುದು?
ಕುಬುದ್ಧಿಯುಳ್ಳವ[ರಿಗೆ]
ಸುಬುದ್ಧಿಯ ಹೇಳಿದಡೆ ಕುಬುದ್ಧಿ ಮಾಣ್ಬುದೆ
ಕೂಡಲಸಂಗಮದೇವಾ?" – 169

ಕುಬುದ್ಧಿಯುಳ್ಳವರಿಗೆ ಸುಬುದ್ಧಿ ಹೇಳುವುದು ವ್ಯರ್ಥ ಎಂಬುದನ್ನು "ಕತ್ತೆಯ ಕರವೆತ್ತಿ ಕರೆದಡೆ ಅದೆತ್ತಣ ವಾರ್ತೆಯೆಂದು ಬಲ್ಲುದು?" ಎಂಬ ಸಾಲುಗಳ ಮೂಲಕ ವಿವರಿಸುತ್ತಾರೆ. ಅಂತೆಯೇ, ಕೋಣನಿಗೆ ಆಹಾರದ ಮೌಲ್ಯ ತಿಳಿಯದಂತೆ, ಅಹಂಕಾರ ಮತ್ತು ಅಜ್ಞಾನ ಮಾನವನ ವಿವೇಕವನ್ನು ಹೇಗೆ ಮುಚ್ಚಿಡುತ್ತದೆ ಎಂಬುದು ಇಲ್ಲಿ ತೀಕ್ಷ್ಣವಾಗಿ ವ್ಯಕ್ತವಾಗುತ್ತದೆ.

ಸಂಸಾರ ಮತ್ತು ಅಧ್ಯಾತ್ಮಿಕ ಹೋರಾಟ:

ಸಂಸಾರವೆಂಬಡವಿಯಲ್ಲಿ ಹುಲಿಯುಂಟು, ಕರಡಿಯುಂಟು.
ಶರಣನಂಜನಂಜ, ಮಹಾಧೀರ ಶರಣನಂಜನಂಜ,
ಕೂಡಲಸಂಗನ ಶರಣಂಗೆ ನಿರ್ಭಯ. (ಬ.ವ.1, 1321)

ಬಸವಣ್ಣನವರು ಲೌಕಿಕ ಜೀವನದ ಸವಾಲುಗಳನ್ನು ಕಾಡಿನ ಪ್ರಾಣಿಗಳಿಗೆ ಹೋಲಿಸುತ್ತಾರೆ:

ಹುಲಿ–ಕರಡಿ: "ಸಂಸಾರವೆಂಬಡವಿಯಲ್ಲಿ ಹುಲಿಯುಂಟು, ಕರಡಿಯುಂಟು..." ಇಲ್ಲಿ ಹುಲಿ ಮತ್ತು ಕರಡಿಗಳು ಕಾಮ, ಕ್ರೋಧಾದಿ ಷಡ್‌ರಿಪುಗಳ ಸಂಕೇತಗಳು. ಶರಣನು ಇವುಗಳಿಗೆ ಅಂಜದೆ ಶಿವನ ನಂಬಿಕೆಯಿಂದ ನಿರ್ಭಯವಾಗಿರುತ್ತಾನೆ.

ಸರ್ಪ: ಸಂಸಾರವನ್ನು ವಿಷಕಾರಿ ಹಾವಿಗೆ ಹೋಲಿಸಿ, ಅದರ ವಿಷವನ್ನು (ಮೋಹ) ಇಳಿಸಲು ಶಿವಭಕ್ತಿಯೆಂಬ 'ಗಾರುಡ' (ಮಾಂತ್ರಿಕವಿದ್ಯೆ) ಅವಶ್ಯಕವೆಂದು ಸಾರುತ್ತಾರೆ.

ಬೆಡಗಿನ ವಚನಗಳಲ್ಲಿ ಪ್ರತಿಮೆಗಳು :

"ಕಪ್ಪೆಯ ಶಿರದ ಮೇಲೆ ಎಪ್ಪತ್ತೆರಡು
ಪುರವ ಕಂಡೆ,
ಆ ಪುರದೊಳಗೊಬ್ಬ ನಾರಿಯ ಕಂಡೆ,
ಆ ನಾರಿಯ ಕೈಯಲ್ಲಿ ನಾರಿವಳ
ಸಸಿಯ ಕಂಡೆ.
ವಾದಲ್ಲಿ ನಾಥನೆಂದರಿದಲ್ಲಿ,
ಇಂತಪ್ಪ ಬೆಡಗಿನ ಕೀಲ ಬಲ್ಲಾತನೆ
ಪ್ರಾಣಲಿಂಗಸಂಬಂಧಿಯೆಂದೆನಯ್ಯಾ, ಕೂಡಲಸಂಗಮದೇವಾ." – 171

'ಕಪ್ಪೆಯ ಶಿರದ ಮೇಲೆ ಎಪ್ಪತ್ತೆರಡು ಪುರವ ಕಂಡೆ..." ಎಂಬಂತಹ ಅತ್ಯಂತ ಕಾವ್ಯಮಯ, ರೂಪಕಾತ್ಮಕ ಮತ್ತು ತಾತ್ವಿಕ ವಚನಗಳಲ್ಲಿ ಒಂದಾಗಿದೆ. ಈ ವಚನದ ಮೂಲಕ ಅವರು ಆತ್ಮ–ಪರಮಾತ್ಮ ಸಂಬಂಧದ ಆಳವಾದ ತವನ್ನು ವರ್ಣನಾತ್ಮಕ ಚಿತ್ರಗಳ ಮೂಲಕ ವಿವರಿಸಿದ್ದಾರೆ. "ಕಪ್ಪೆ" ಇಲ್ಲಿ ಭೂಮಿಗೆ ಸಮೀಪವಾದ, ಭೌತಿಕ, ಅಥವಾ ಅಜ್ಞಾನವುಳ್ಳ ಅಸ್ತಿತ್ವವನ್ನೂ ಸೂಚಿಸುತ್ತದೆ. "ಶಿರ" ಎಂದರೆ ತಲೆ, ಇದು ಆಯ್ಕೆಯ ಬಿಂದು ಅಥವಾ ಸ್ಥಿತಿಯ ಶಕ್ತಿಯನ್ನು ಸೂಚಿಸುತ್ತದೆ. "ಎಪ್ಪತ್ತೆರಡು ಪುರ" ಇದು ಮಾನವನ ದೇಹದಲ್ಲಿ ಇರುವ ನಾಡಿಗಳನ್ನು ಅಥವಾ ಚಕ್ರಗಳನ್ನು ಸೂಚಿಸುತ್ತದೆ. ವಚನಗಳಲ್ಲಿ ಕಪ್ಪೆ ಭೂಮಿಗೆ ಸಮೀಪವಾದ ಭೌತಿಕ ಅಸ್ತಿತ್ವವನ್ನು ಸೂಚಿಸಿದರೆ, ಎಪ್ಪತ್ತೆರಡು ಪುರಗಳು ದೇಹದ ನಾಡಿಗಳನ್ನು ಸೂಚಿಸುತ್ತವೆ. ಇಲ್ಲಿ ಪ್ರಾಣಿ ಪ್ರತಿಮೆಯು ಯೋಗ ಮತ್ತು ಪ್ರಾಣಲಿಂಗ ಸಂಬಂಧದ ಗೂಢಾರ್ಥವನ್ನು ವಿವರಿಸಲು ಬಳಕೆಯಾಗಿದೆ.

ಉಪಸಂಹಾರ :

ಬಸವಣ್ಣನವರ ವಚನಗಳಲ್ಲಿ ಬಳಕೆಯಾದ ಪ್ರಾಣಿ ಪ್ರತಿಮೆಗಳು ಕೇವಲ ಸಾಹಿತ್ಯಿಕ ಅಲಂಕಾರಗಳಲ್ಲ; ಅವು ಸಮಾಜವನ್ನು ತಿದ್ದುವ ತಾತ್ವಿಕ ಮತ್ತು ನೈತಿಕ ಸಾಧನಗಳಾಗಿವೆ. ಮಾನವನ ಅಂತರಂಗದ ವಿಕಾರಗಳನ್ನು, ಸಾಮಾಜಿಕ ವೈಪರಿತ್ಯಗಳನ್ನು ಹಾಗೂ ಅಧ್ಯಾತ್ಮಿಕ ಸಾಧನೆಯ ಹಾದಿಯನ್ನು ಸ್ಪಷ್ಟವಾಗಿ ವಿವರಿಸಲು ಬಸವಣ್ಣನವರು ನಿತ್ಯಜೀವನದಲ್ಲಿ ಕಂಡುಬರುವ ಪ್ರಾಣಿಗಳನ್ನೇ ಪರಿಣಾಮಕಾರಿ ರೂಪಕಗಳಾಗಿ ಬಳಸಿದ್ದಾರೆ.

ಪ್ರತಿಯೊಂದು ಜೀವಿಯಲ್ಲಿಯೂ ಪರಮತತ್ತ್ವದ ಅಂಶವಿದೆ ಎಂಬ ಸಮದೃಷ್ಟಿಯನ್ನು ಬೆಳೆಸುತ್ತಲೇ, ಮನುಷ್ಯನು ತನ್ನ ಪಶುತ್ವವನ್ನು ತೊರೆದು ದೈವತ್ವದತ್ತ ಸಾಗಬೇಕೆಂಬ ಸಂದೇಶವನ್ನು ಈ ಪ್ರತಿಮೆಗಳು ಹೊತ್ತು ತರುತ್ತವೆ. ಈ ದೃಷ್ಟಿಯಿಂದ ಬಸವಣ್ಣನವರ ವಚನಗಳಲ್ಲಿ ಕಾಣುವ ಪ್ರಾಣಿ ಪ್ರತಿಮೆಗಳು ಸಾಮಾಜಿಕ, ಮನೋವೈಜ್ಞಾನಿಕ ಹಾಗೂ ಅಧ್ಯಾತ್ಮಿಕ ಅಧ್ಯಯನಗಳಿಗೆ ಸದಾ ಪ್ರಾಸಂಗಿಕವಾಗಿವೆ.

ಆಕರ ಗ್ರಂಥಗಳು :

1. ಕಲಬುರ್ಗಿ, ಎಂ. ಎಂ. (ಸಂ.), ಬಸವಯುಗದ ವಚನ ಸಂಪುಟ, ಕರ್ನಾಟಕ ಪುಸ್ತಕ ಪ್ರಾಧಿಕಾರ, ಬೆಂಗಳೂರು.
2. ಮಹಾದೇವಪ್ಪ, ಬಿ., ಅರಿವು–ವಿಚಾರ, ಅರಿವು–ಆಚಾರ ಪ್ರಕಟನಾಲಯ, ಯಾದಗಿರಿ.
3. ಬಸವಣ್ಣನವರ ವಚನ ಸಂಗ್ರಹ – ವಿವಿಧ ಪ್ರಕಟಣೆಗಳು

***

ಪಶುಪಾಲನೆ ನಿರ್ವಹಣೆಯಲ್ಲಿ ಪಶುಸಖಿಯರ ಪಾತ್ರ

ಡಾ. ಮೇಘನ ಜಿ.
ಸಂಯೋಜಕರು ಮತ್ತು
ಉಪನ್ಯಾಸಕರು
ಸಮಾಜಶಾಸ್ತ್ರ ಅಧ್ಯಯನ
ವಿಭಾಗ
ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ
ವಿಶ್ವವಿದ್ಯಾಲಯ, ರಾಯಚೂರು
meghashreeg034@gmail.com

1

ಪ್ರಮುಖ ಪದಗಳು
ಪಶುಪಾಲನೆ, ಪಶುಸಖಿ, ದನದ ಕೊಟ್ಟಿಗೆ, ಕೃಷಿ, ಮಹಿಳೆ, ಸ್ವಾವಲಂಬಿ

ಆದಿಮಾನವನಿಂದ ಹಿಡಿದು ನಾಗರೀಕನಾಗಿ ಬೆಳೆದ ಈ ಹೊತ್ತಿನಲ್ಲಿ ಪಶುಪಾಲನೆ ಬದುಕಿನ ಭಾಗವಾಗಿ ಬೆಳೆದುಬಂದದ್ದು ಸೋಜಿಗ. ಕೃಷಿಗೆ ಅಡಿಪಾಯವೂ ಈ ಪಶುಪಾಲನೆ ಎಂದರೆ ತಪ್ಪಾಗಲಿಕ್ಕಿಲ್ಲ. ಹಸಿ ಮಾಂಸ, ಗೆಡ್ಡೆ ಗೆಣಸು, ಅಣಬೆ, ಭೇಟೆಯಾಡಿ ಅಲೆಮಾರಿಯಾಗಿ ಜೀವಿಸುತ್ತಿದ್ದ ಮಾನವನು ಕಲ್ಲಿಗೆ ಕಲ್ಲು ತಾಕಿದೊಡನೆ ಬೆಂಕಿ ಉತ್ಪಾದನೆಗೊಳ್ಳುತ್ತದೆ ಎಂಬುದನ್ನು ಅರಿತ. ಮರಗಳ ತಪ್ಪಲಿನಿಂದ ತನ್ನ ದೇಹವನ್ನು ಮರೆಮಾಚಿಸುತ್ತಿದ್ದ ಮಾನವನು ನಂತರದ ದಿನಗಳಲ್ಲಿ ಬಟ್ಟೆಗಳನ್ನು ನೇಯಲು ಪ್ರಾರಂಭಿಸಿದ. ಕಂಬಳಿ ನೇಯುವುದು, ಮಡಿಕೆ, ಕುಡಿಕೆ ತಯಾರಿಸುವುದು ಇತ್ಯಾದಿಗಳನ್ನು ಕಂಡುಕೊಂಡನು. ಇನ್ನೂ ಮುಂದುವರೆದು ಅಲೆಮಾರಿಯಾಗಿದ್ದ ಮಾನವನು ತನ್ನ ರಕ್ಷಣೆಗಾಗಿ ನಾಯಿ, ಬೆಕ್ಕು ಇಂತಹ ಪ್ರಾಣಿಗಳನ್ನು ಸಾಕುವುದರ ಜೊತೆಗೆ ಆಹಾರದ ಭಾಗವಾಗಿ ಹಸು, ಎಮ್ಮೆ, ಕುರಿ,ಕೋಳಿ ಇತರೆ ಪ್ರಾಣಿಗಳನ್ನು ಸಾಕತೊಡಗಿದ. ಪಾರಂಪರಿಕವಾಗಿ ಇಂತಹ ಪ್ರಾಣಿಗಳ ಪಾಲನೆಯನ್ನು ಮಾಡಲು ಕೆಲವು ನಿಯಮಗಳನ್ನು ಅನುಸರಿಸುತ್ತಿದ್ದರು. ಮಕ್ಕಳಂತೆ ಪಶುಗಳ ಪೋಷಣೆ ಮಾಡುವುದು, ಅವುಗಳಿಗೇನಾದರೂ ಉಣ್ಣೆ ಅಥವಾ ಉಳು ಬಿದ್ದರೆ ವಾಸಿ ಮಾಡಲು ಬೇವಿನ ಬೀಜದಿಂದ ಎಣ್ಣೆ ಅರೆದು ಅದರೊಳಗೆ ಅರಿಶಿಣಪುಡಿ ಬೆರೆಸಿ ಹಚ್ಚುವುದು, ಬೇವಿನ

ತೊಪ್ಪಲ ಹೊಗೆ ಹಾಕುವುದು, ಜೊಲ್ಲು ಸುರಿಸಿದರೆ, ಕಾಲುಬಾಯಿಯಾದರೆ ಖಾರವಾದ ಮೆಣಸು ಅರೆದು ಗೊಟ್ಟಕ್ಕೆ ಹಾಕಿ ಕುಡಿಸುವುದು ಹೀಗೆ ಸಾಕಷ್ಟು ಪಾಲನೆ ಮಾಡುತ್ತಿದ್ದರು. ಏಕೆಂದರೆ ಕೃಷಿ ನಡೆಸಲು ಪಶುಪಾಲನೆಯೇ ಮುಖ್ಯ ಆಧಾರವಾಗಿತ್ತು. ಇನ್ನು ಪಶುಗಳಿಂದ ಬಂದಂತಹ ಹಾಲನ್ನು ತಮ್ಮ ಸುತ್ತಮುತ್ತಲಿನ ಮನೆಯವರಿಗೆ ಕಡ ರೂಪದಲ್ಲಿ ಹಾಲು ಕೊಟ್ಟು ಕೊಡುಕೊಳ್ಳುವಿಕೆಯ ಸಂಕರವನ್ನು ಬೆಳೆಸಿಕೊಳ್ಳಲು ಸಾಕ್ಷಿಪ್ರಜ್ಞೆಯಾಗಿತ್ತು.

ಪಶುಪಾಲನೆ ಕೇವಲ ತಮ್ಮ ಮನೆಗಳ ಆರ್ಥಿಕತೆಯನ್ನು ಮಾತ್ರ ತೂಗಿಸುತ್ತಿರಲಿಲ್ಲ, ನೆರೆ ಹೊರೆಯ ಬಾಂಧವ್ಯದ ಬೆಸುಗೆಗೂ ಸಾಕ್ಷಿಯಾಗಿತ್ತು. ಪಶುಪಾಲನೆ ಭಾರತದ ಗ್ರಾಮೀಣ ಜೀವನೋಪಾಯದ ಮೂಲಾಧಾರವಾಗಿದ್ದು, ಸಹಸ್ರಾರು ವರ್ಷಗಳ ಹಿಂದಿನಿಂದಲೂ ಮಾನವನ ಬದುಕಿನ ಜೀವನಾಧಾರವಾಗಿದೆ. ಗ್ರಾಮೀಣ ಜನರ ಹೃದಯ ಭಾಗದಲ್ಲಿ ಪಶುಪಾಲನೆ ವೃತ್ತಿಯು ಹಾಸುಹೊಕ್ಕಾಗಿದೆ. ಕೃಷಿ ಮತ್ತು ಜಾನುವಾರು ಸಂಗೋಪನೆಯನ್ನು ಒಂದೇ ಸೂರಿನಡಿ ಕಾಣಬಹುದು. ದನ, ಎಮ್ಮೆ, ಕುರಿ, ಮೇಕೆ ಮುಂತಾದ ಜಾನುವಾರುಗಳನ್ನು ಸ್ಥಳೀಯ ತಳಿಗಳಲ್ಲಿ ಬೆಳೆಸುವುದನ್ನು ಪಶುಪಾಲನೆ ಒಳಗೊಂಡಿದೆ. ಪಶುಪಾಲನೆಯು ಪುರಾತನ ವೃತ್ತಿಯಾಗಿದ್ದು, ಕೃಷಿಯ ಆರಂಭವೇ ಇದರಿಂದ ಶುರುವಾಯಿತು. ಕರ್ನಾಟಕದಂತಹ ರಾಜ್ಯಗಳಲ್ಲಿ ಗ್ರಾಮೀಣ ಜನತೆ ಇದನ್ನು ಆಧಾರವಾಗಿ ಇಟ್ಟುಕೊಂಡು ಬದುಕುತ್ತಾರೆ. ಇಂತಹ ಪಶುಪಾಲನಾ ವೃತ್ತಿಯನ್ನು ಮುಂದುವರೆಸಿದ ಹಾಗೂ ಪ್ರಾರಂಭಿಸಬೇಕೆಂದುಕೊಂಡಿರುವವರ ಬದುಕಿಗೆ ಕೈಗನ್ನಡಿಯಾಗಲು ಪಶುಸಖಿಯರನ್ನು ನೇಮಿಸಿ ಮಹಿಳೆಯರನ್ನು ಇದರಿಂದ ಸ್ವಾವಲಂಬಿಗಳನ್ನಾಗಿ ಮಾಡುವ ಸದುದ್ದೇಶದಿಂದ ಪಶುಸಖಿ ಯೋಜನೆ ಹುಟ್ಟಿಕೊಂಡಿದೆ. ಅದರಲ್ಲೂ ಪಶುಸಖಿ ಎಂಬ ಯೋಜನೆ ಕರ್ನಾಟಕದಲ್ಲಿ ಸಾಕಷ್ಟು ಸುದ್ದಿ ಮಾಡುತ್ತಿರುವ ಹಿನ್ನೆಲೆಯಲ್ಲಿ ಗ್ರಾಮೀಣ ಪಶುಪಾಲನೆಯಲ್ಲಿ ಆಗಿರುವ ಪ್ರಸ್ತುತ ಬದಲಾವಣೆಗಳೇನು ಇದರಿಂದ ಪ್ರಯೋಜನಗಳೇನು? ಯಾವ ಕಾರಣಕ್ಕಾಗಿ ಇಂತಹ ಅಧ್ಯಯನಗಳನ್ನು ಮಾಡಬೇಕೆಂಬುದನ್ನು ಪ್ರಸ್ತುತ ಸಮಾಜದೊಂದಿಗೆ ಮುಖಾಮುಖಿಯಾಗಿಸುವ ಪ್ರಾಮಾಣಿಕ ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಲಾಗಿದೆ.

ಪಶುಪಾಲನೆ ಸಹಸ್ರಾರು ವರ್ಷಗಳ ಹಿಂದಿನದು ಎಂದು ಹೇಳಬಹುದು. ಶ್ರೀಕೃಷ್ಣ ಪರಮಾತ್ಮನೂ ಗೋಪಾಲಕನಾಗಿದ್ದನೆಂಬುದನ್ನು ನಾವಿಲ್ಲಿ ಸ್ಮರಿಸಲೇಬೇಕು. ಮನೆಯ ಆರ್ಥಿಕ ಹೊರೆಯನ್ನು ತೂಗಿಸಲು ಪಶುಪಾಲನೆ ಮಾಡುತ್ತಿದ್ದವರು ಹಾಲು, ಮೊಸರು, ಬೆಣ್ಣೆ, ತುಪ್ಪ ಹೀಗೆ ಇವುಗಳ ಮಾರಾಟದಿಂದಲೇ ಬದುಕು ಕಂಡುಕೊಂಡವರು ಹಲವರು. "ಮೊದಲೆಲ್ಲಾ ಅವುಗಳಿಗೆ ಯಾವುದೇ ಕಾಯಿಲೆ, ಕಸಾಲೆ ಬಂದರೂ ಸಹ ಮನೆಮದ್ದುಗಳನ್ನೇ ಬಳಸಿಕೊಂಡು ಚಿಕಿತ್ಸೆ ನೀಡುತ್ತಿದ್ದರು. ಬೇವಿನ ಎಣ್ಣೆ, ಬೇವಿನ ತಪ್ಪಲು, ಮೆಣಸು ಹಲವುಗಳನ್ನು ಅವುಗಳ ಆರೈಕೆಗೆ ಬಂಸುತ್ತಿದ್ದರು. ಮುಂಚಿತವಾಗಿಯೇ ಅವುಗಳಿಗೆ ಯಾವುದೇ ನಂಜು(ಇನ್ಫೆಕ್ಷನ್) ಆಗದಿರಲೆಂದು ಅರಿಶಿನವನ್ನು ನೀರಿನಲ್ಲಿ ಕಲಸಿ ಅವುಗಳ ಸುತ್ತ ಚೆಲ್ಲುತ್ತಿದ್ದರು. ಕೋವಿಡ್ ಬಂದ ಮೇಲೆ ಅನೇಕರು ಅರಿಶಿನ ಹಾಲಲ್ಲಿ ಹಾಖಿ ಕುಡಿದರೆ ನೆಗಡಿ, ಕೆಮ್ಮು ಆಗಲ್ಲ ಅಂತ

ಹೇಳ್ತಿದ್ರು ಆದರೆ ಹಸುಗಳು ಬಾಯಿ ಜೊಲ್ಲು ಸುರಿಸಿದರು ಮುಸುರೆ ನೀರಿಗೆ ಅರಿಶಿನ ಹಾಕುತ್ತಿದ್ದದ್ದು ಹಿಂದಿನ ಪದ್ಧತಿ." (ಮಾ: ಬಂಡ್ರಿ ಚನ್ನಬಸಪ್ಪ, 107,ಚಂದ್ರಶೇಖರಪುರ ಗ್ರಾಮ 583130, ಕೂಡ್ಲಿಗಿ ತಾಲೂಕು, ಬಳ್ಳಾರಿ ಜಿ.)ಇಂತಹ ಪಾರಂಪರಿಕ ಪಶುಸಂಗೋಪನೆಯು ಬದಲಾದ ಈ ಯುಗದಲ್ಲಿ ಯಾವ ಸ್ಥಿತಿಯಲ್ಲಿದೆ. ಪಶುಗಳ ಆರೈಕೆ ಪ್ರಸ್ತುತ ಹೇಗೆ? ಯಾಕೆ ಎಂಬ ಉದ್ದೇಶಗಳನ್ನಿರಿಸಿಕೊಂಡು ಮಹಿಳೆಯರನ್ನೂ ಸ್ವಾವಲಂಬಿಗಳನ್ನಾಗಿಸಲು ಪಶುಸಖಿ ಎಂಬ ಯೋಜನೆ ತಂದು ಈ ಯೋಜನೆಯಡಿಯಲ್ಲಿ ಪಶುಸಖಿಯರನ್ನಾಗಿ ಮಹಿಳೆಯರನ್ನೇ ನೇಮಿಸಿರುವಂತದ್ದು ಹಾಗೂ ಪಶುಗಳ ಆರೈಕೆಗಾಗಿ ಪಶುಚಿಕಿತ್ಸಾಲಯದ ಕಡೆಯಿಂದ ಪಶುವೈದ್ಯರಿಂದ ಅವರಿಗೆ ಪ್ರಾಯೋಗಿಕವಾಗಿ ತರಭೇತಿ ಕೊಡಿಸಿ ಅವುಗಳನ್ನು ಕಾಯಿಲೆಗಳಿಂದ ಮುಕ್ತಗೊಳಿಸಿ ಅವುಗಳ ಸಂತತಿ ಉಳಿಸುವುದು. ಇಂತಹ ಉದ್ದೇಶದಿಂದ ಹುಟ್ಟಿಕೊಂಡ ಈ ಪಶುಸಖಿ ಯೋಜನೆಯಡಿ ಜನರಿಗೆ ಆದಂತಹ ಅನುಕೂಲಗಳೇನು ಎಂಬುದನ್ನು ಅರಿಯುವುದು ಅಧ್ಯಯನದ ಪ್ರಮುಖ ಉದ್ದೇಶವಾಗಿದೆ.

ಯಾವುದೇ ಅಧ್ಯಯನಕ್ಕಾದರೂ ಎಲ್ಲೆ, ಗಡಿ, ವಿಸ್ತಾರ ಎಂಬುದು ಇದ್ದೇ ಇರುತ್ತದೆ. ಇರುವಂತಹ ಸಮಯದಲ್ಲೇ ಆ ಅಧ್ಯಯನಕ್ಕೆ ನ್ಯಾಯ ಒದಗಿಸಬೇಕಾದಂತಹ ಜವಾಬ್ದಾರಿ ಸಂಶೋಧಕರ ಮೇಲಿರುತ್ತದೆ. ಹಾಗಾಗಿ ಕೂಡ್ಲಿಗಿ ತಾಲೂಕಿನ ವಿಜಯನಗರ ಜಿಲ್ಲೆಯ ಚಂದ್ರಶೇಖರಪುರ, ದಿಬ್ಬದಹಳ್ಳಿ, ನಾಗರಹುಣಸೆ, ಎಕ್ಕೆಗುಂದಿ ಗ್ರಾಮದ ಆಯ್ದ ಜನರನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ.

ಪಾರಂಪರಿಕ ಪಶುಪಾಲನೆಯು ಇಂದು ನೆನ್ನೆ ಹುಟ್ಟಿಕೊಂಡಿರುವುದಂತೂ ಅಲ್ಲ. ಸಹಸ್ರಾರು ವರ್ಷಗಳ ಹಿಂದಿನಿಂದಲೂ ಪಶುಪಾಲನೆ ನಡೆಯುತ್ತಿದೆ. ಗೋಮಾಳಗಳಲ್ಲಿ ಅಥವಾ ಬಯಲು ಜಾಗಗಳಲ್ಲಿ ಪಶುಗಳನ್ನು ಮೇಯಿಸುವ ಪದ್ಧತಿ ಸಾಮಾನ್ಯವಾಗಿತ್ತು, ಇದರಿಂದ ನೈಸರ್ಗಿಕ ಆಹಾರ ಸಿಗುತ್ತಿತ್ತು. ಅಷ್ಟಲ್ಲದೆ ಅವುಗಳಿಂದ ಸಂಗ್ರಹಿತವಾಗುವ ಸಗಣಿ(ಹೆಂಡೆ)ಯನ್ನು ಹೊಲಗಳಿಗೆ ಗೊಬ್ಬರವಾಗಿ ಬಳಸುತ್ತಿದ್ದರಿಂದ ಭೂಮಿಯ ಇಳುವರಿಯೂ ಹೆಚ್ಚಾಗುತ್ತಿತ್ತು. ಹೀಗೆ ಅನೇಕ ಉಪಯೋಗಗಳು ಈ ಪಶುಪಾಲನೆಯಿಂದ ಇತ್ತು, ಈಗಲೂ ಇದೆ. ಪಶುಪಾಲನೆ ಎಂದರೆ ಹಸುಗಳು ಕುರಿಗಳನ್ನೂ ಇತರ ಸಾಕು ಪ್ರಾಣಿಗಳನ್ನು ಸಾಕುವುದು. ಇದು ಅನಾದಿ ಕಾಲದಿಂದಲೂ ಒಂದು ಪ್ರಮುಖ ವೃತ್ತಿಯಾಗಿದೆ. "ಅರ್ಥ : ಪಶುಗಳನ್ನು ಪಾಲನೆ ಮಾಡುವ ಅಥವಾ ಇಟ್ಟುಕೊಳ್ಳುವ ಕ್ರಿಯೆ. ಉದಾಹರಣೆ : ಹಳ್ಳಿ ಜನರ ಮುಖ್ಯ ಉದ್ಯೋಗ ಪಶುಪಾಲನೆ. ಸಮಾನಾರ್ಥಕ : ಪಶು–ಪಾಲನೆ, ಪಶು–ಸಂಗೋಪನೆ,

ಪಶುಸಂಗೋಪನೆ." (ಅಮರಕೋಶ) ಇಂತಹ ಪಶುಪಾಲನಾ ವೃತ್ತಿಯನ್ನು ಆಧುನಿಕ ಕಾಲಘಟ್ಟದಲ್ಲಿ ಕೆಲವರು ತೊರೆದರು. ಇನ್ನೂ ಕೆಲವರು ತಮ್ಮ ಜೀವನೋಪಾಯಕ್ಕೆ ಅಡಿಗಲ್ಲು ಮಾಡಿಕೊಳ್ಳತೊಡಗಿದರು. ದೈನೇಸಿ ಬದುಕಿನಲ್ಲಿ ಹಾಲು, ಮೊಸರು, ತುಪ್ಪ ಹೀಗೆ ಡೈರಿಗೆ ಸಂಬಂಧಿಸಿದ ತಿನಿಸುಗಳು ಜನರ ಜೀವನದಲ್ಲಿ ಆಹಾರದ ಭಾಗವಾಗಿ ಪ್ರಮುಖ ಪಾತ್ರ ವಹಿಸಿದವು. ಇವುಗಳನ್ನು ತಯಾರಿಸಲು ಪಶುಪಾಲನಾ ವೃತ್ತಿ ಪ್ರಮುಖವಾಯಿತು.

"ಉಪ್ಪಿಲ್ಲದ ಊಟ ರುಚಿಸುವುದಿಲ್ಲ" ಎನ್ನುವಂತೆಯೇ ಹಾಲು, ಮೊಸರಿಲ್ಲದ ಊಟ, ಊಟದ ಕೊನೆಯಲ್ಲಿ ಮಜ್ಜಿಗೆ ಇರಬೇಕು ಎನ್ನುವಷ್ಟರ ಮಟ್ಟಿಗೆ ನಮ್ಮನ್ನು ಡೈರಿ ವಸ್ತುಗಳು ಆಕರ್ಷಿಸುತ್ತವೆ. ಇಂತಹ ಪಶುಪಾಲನಾ ವೃತ್ತಿಯು ಅನೇಕ ಬದಲಾವಣೆಯ ನಂತರ ಹೊಸ ತಿರುವು ಪಡೆದುಕೊಂಡಿತು. ಮುಂದುವರೆದು ಸರಕಾರವೂ ಜನರ ಪಶುಪಾಲನಾ ವೃತ್ತಿಗೆ ಕೈಜೋಡಿಸುವುದರ ಜೊತೆಗೆ ಸಾಲ, ಸೌಲಭ್ಯ ಹಾಗೂ ಸಹಕಾರ ನೀಡುತ್ತಿದೆ. ಇನ್ನೂ ಮೇಲಾಗಿ ಈ ಪಶುಪಾಲನಾ ವೃತ್ತಿಯಲ್ಲಿ ತೊಡಗಿಕೊಂಡವರಿಗೆ ಇವೆಲ್ಲವುಗಳನ್ನು ತಿಳಿಸಿ ಹೇಳಲು ಪಶುಸಖಿಯರನ್ನಾಗಿ ನೇಮಿಸಿತು. ಅದರಲ್ಲೂ ಮಹಿಳೆಯರನ್ನೇ ಪಶುಸಖಿಗಳನ್ನಾಗಿ ನೇಮಿಸಿ ಅವರಿಗೂ ಉದ್ಯೋಗ ಒದಗಿಸುವುದರ ಜೊತೆಗೆ ತಾಯಿಮನಸುಳ್ಳ ಹೆಣ್ಣಿನ ಬದುಕನ್ನೂ ಹಸನುಗೊಳಿಸುವ ಸದುದ್ದೇಶ ಹೊಂದಿದೆ ಎಂದರೆ ತಪ್ಪಾಗಲಿಕ್ಕಿಲ್ಲ. ಪಶುಸಂಗೋಪನೆಯಲ್ಲಿ ಸಖಿಯರ ಪಾತ್ರವು ಗ್ರಾಮೀಣ ಕರ್ನಾಟಕದ ಸಾಮಾಜಿಕ–ಆರ್ಥಿಕ ಜೀವನದಲ್ಲಿ ಪ್ರಮುಖವಾಗಿದ್ದು, ಹೈನುಗಾರಿಕೆ ಮತ್ತು ಇತರ ಜಾನುವಾರು ಸಾಕಣೆಯಲ್ಲಿ ಸಹಾಯಕರಾಗಿ ಕೆಲಸ ಮಾಡುತ್ತಾರೆ. ದೈನಂದಿನ ನಿರ್ವಹಣೆ ಸಖಿಯರು ಆಹಾರ ನೀಡುವುದು ಹೇಗೆ, ಹಾಲು ಹಿಂಡುವುದು, ಪಶುಗಳ ಆರೋಗ್ಯ ರಕ್ಷಣೆ ಮಾಡುವುದರ ಮೂಲಕ ಕುಟುಂಬದ ಆದಾಯಕ್ಕೆ ಕೊಡುಗೆ ನೀಡುತ್ತಾರೆ. ಇದು ಮಹಿಳಾ ಸಬಲೀಕರಣಕ್ಕೆ ದಾರಿ ಮಾಡಿಕೊಡುತ್ತದೆ. ಪಶುಪಾಲನೆಯಿಂದ ಆರ್ಥಿಕ ಕೊಡುಗೆ ಹೈನುಗಾರಿಕೆಯಲ್ಲಿ ಸಖಿಯರು ಸಹಕಾರಿ ಸಂಘಗಳ ಮೂಲಕ ಸಂಘಟಿತವಾಗಿ ಹಾಲು ಮಾರಾಟ ಮಾಡಿ, ಗ್ರಾಮೀಣ ಆರ್ಥಿಕತೆಯನ್ನು ಬಲಪಡಿಸುತ್ತಾರೆ. ಸಾಂಸ್ಕೃತಿಕ ಸಂದರ್ಭ ಗ್ರಾಮೀಣ ಸಮುದಾಯದಲ್ಲಿ ಸಖಿಯರು ಸಾಮೂಹಿಕವಾಗಿ ಜಾನುವಾರುಗಳ ನಿರ್ವಹಣೆಯಲ್ಲಿ ಭಾಗವಹಿಸುವುದು ಲಿಂಗ ಸಮಾನತೆಯ ಸೂಚನೆಯಾಗಿದ್ದು, ದೀರ್ಘಕಾಲಿಕ ಸಾಂಪ್ರದಾಯಿಕ ಜೀವನಶೈಲಿಯ ಭಾಗವಾಗಿದೆ. ಪಶುಸಖಿ ಎಂದರೆ "ಪಶುಗಳ ಗೆಳತಿ" ಅಥವಾ "ಪಶುಪಾಲಕ ಜಿಜಟಟಟುಟಿಟಜ",

ಇದು ಕರ್ನಾಟಕದಲ್ಲಿ ಪಶುಸಂಗೋಪನೆ ಇಲಾಖೆಯಿಂದ ಮಹಿಳೆಯರನ್ನು ಒಳಗೊಂಡ ಒಂದು ಯೋಜನೆ ಅಥವಾ ಕಾರ್ಯಕ್ರಮವಾಗಿದ್ದು, ಪಶುಗಳಿಗೆ ಆರೋಗ್ಯ ಸೇವೆ ಮತ್ತು ಸಲಹೆ ನೀಡುವುದು, ಕೃಷಿ ಕುಟುಂಬದ ಆದಾಯ ಹೆಚ್ಚಿಸಲು ಪಶುಪಾಲನೆಯಲ್ಲಿ ಮಹಿಳೆಯರನ್ನು ಸಕ್ರಿಯಗೊಳಿಸುವುದು ಇದರ ಮುಖ್ಯ ಉದ್ದೇಶವಾಗಿದೆ. ಅಭಿಯಾನದ ಅಂಗವೆಂದರೆ ದೀನ್ ದಯಾಳ್ ಅಂತ್ಯೋದಯ ಯೋಜನೆ – ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (ಆಂಜ–ಓಖಐಒ) ಅಡಿಯಲ್ಲಿ ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಒಬ್ಬ ಪಶುಸಖಿ ಕಾರ್ಯನಿರ್ವಹಿಸುತ್ತಾರೆ.

ಪಶುಸಖಿ ಯೋಜನೆಯಿಂದ ಆಗುವ ಅನುಕೂಲಗಳೆಂದರೆ ಪಶುಸಖಿಯರು ಹಸು, ಕುರಿ, ಕೋಳಿ ಇತ್ಯಾದಿ ಘಟಕಗಳನ್ನು ಸ್ಥಾಪಿಸಲು ಇರುವ ಮಾನದಂಡಗಳನ್ನು ಕ್ಷೇತ್ರಕ್ಕೆ ತೆರಳಿ ಪ್ರತಿ ಮನೆಯ ಪಶುಗಳನ್ನು ದಾಖಲಿಸಿಕೊಂಡು ಅವರಿಗೆ ಅನುಕೂಲಗಳ ಬಗ್ಗೆ ಮಾಹಿತಿ ನೀಡಬೇಕು. ಹಸು, ಕುರಿ, ಆಡು, ಹಂದಿ, ಕೋಳಿ ಘಟಕಗಳನ್ನು ಸ್ಥಾಪಿಸಲು ಬ್ಯಾಂಕುಗಳಿಂದ ಸಾಲದ ಮೇಲೆ ಸಹಾಯಧನ (ಶೇ. 25–33) ನೀಡಲಾಗುತ್ತಿದ್ದು ಅದನ್ನು ಯಾವ ಮಾರ್ಗಗಳನ್ನು ಅನುಸರಿಸಿ ಪಡೆಯಬೇಕೆಂಬ ಮಾಹಿತಿಯನ್ನು ಕಾಲ ಕಾಲಕ್ಕೆ ಒದಗಿಸಿ ಪಶುಗಳ ಆರೋಗ್ಯವನ್ನು ಪರೀಕ್ಷಿಸಿ ಪಶುಚಿಕಿತ್ಸಾಲಯದಿಂದ ತರಭೇತಿ ಪಡೆದ ಸಖಿಯರು ಅವುಗಳ ಸಂತತಿ ವೃದ್ಧಿಸಲು ಹಾಗೂ ಆರೈಕೆ ಮಾಡುವಲ್ಲಿ ತಾಯಿ ಮಗುವನ್ನು ಕಾಳಜಿ ಮಾಡುವಂತ ಹೊಣೆಗಾರಿಕೆ ಸಖಿಯರದ್ದಾಗಿರುತ್ತದೆ. ಒಂದು ವೇಳೆ ಏನಾದರೂ ಆಕೆಯ ತಪ್ಪುಗಳಿದ್ದರೆ ಅದನ್ನು ನೇರವಾಗಿ ಪ್ರಶ್ನಿಸುವ ಜವಾಬ್ದಾರಿ ಜನರಿಗಿರುತ್ತದೆ. ಕಡಿಮೆ ಬಡ್ಡಿ ಸಹಾಯಧನ ನೀಡಿ ಹೈನುಗಾರಿಕೆಯನ್ನು ಪ್ರೋತ್ಸಾಹಿಸಲಾಗುತ್ತದೆ.

ಪಶುಸಖಿ ಯೋಜನೆಯು ಕರ್ನಾಟಕದಲ್ಲಿ 2006–07ರಲ್ಲಿ ಜಾರಿಗೆ ಬಂದಿದೆ. ಯೋಜನೆಯ ಪ್ರಾರಂಭಿಕ ಹಿನ್ನೆಲೆ ಕರ್ನಾಟಕ ಸರ್ಕಾರದ ಪಶುಸಂಗೋಪನೆ ಮತ್ತು ಹೈನುಗಾರಿಕಾ ಇಲಾಖೆಯಡಿಯಲ್ಲಿ ಈ ಯೋಜನೆ ಆರಂಭವಾಯಿತು, ಗ್ರಾಮೀಣ ಪ್ರದೇಶಗಳಲ್ಲಿ ಪಶುವೈದ್ಯ ಸೇವೆಗಳನ್ನು ಬಲಪಡಿಸಲು ಇದು ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್‌ನ ಭಾಗವಾಗಿ ವಿಸ್ತರಣೆಯಾಯಿತು. ಉದ್ದೇಶ ಮತ್ತು ವ್ಯಾಪ್ತಿ ಯೋಜನೆಯ ಮುಖ್ಯ ಗುರಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸಖಿಗಳನ್ನು ನೇಮಿಸಿ, ದೈನಂದಿನ ಜಾನುವಾರು ಆರೋಗ್ಯ ನಿರ್ವಹಣೆ ಮಾಡುವುದು. 2010ರಿಂದ ಇದು ರಾಜ್ಯಾದ್ಯಂತ ಸಂಪೂರ್ಣ ಜಾರಿಯಲ್ಲಿದೆ. ಯೋಜನೆಯ ಪ್ರಾರಂಭ ಹಂತ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಡಿಯಲ್ಲಿ ಗ್ರಾಮೀಣ

ಪ್ರದೇಶಗಳಲ್ಲಿ ಸಖಿಗಳನ್ನು ನೇಮಿಸುವ ಉದ್ದೇಶದಿಂದ ಈ ಯೋಜನೆ ಆರಂಭವಾಯಿತು. 2006–07ರಲ್ಲಿ ಪೈಲಟ್ ಆಧಾರದಲ್ಲಿ ಚಿತ್ರದುರ್ಗ, ತುಮಕೂರು ಜಿಲ್ಲೆಗಳಲ್ಲಿ ಪ್ರಯೋಗಿಸಲಾಯಿತು. ವಿಸ್ತರಣೆ ಮತ್ತು ಸ್ಥಿರೀಕರಣ 2008ರಿಂದ ರಾಜ್ಯಾದ್ಯಂತ ವಿಸ್ತರಿಸಿ, ಗ್ರಾಮ ಪಂಚಾಯತಿ ಮಟ್ಟದಲ್ಲಿ ಸಖಿಗಳಿಗೆ ತರಬೇತಿ ಮತ್ತು ಸಾಧನ ಸಾಮಗ್ರಿಗಳನ್ನು ಒದಗಿಸಲಾಯಿತು. ಇದು ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್‌ಗೆ ಸಂಯೋಜನೆಯಾಯಿತು. ಪ್ರಮುಖ ಉದ್ದೇಶಗಳು ಗ್ರಾಮ ಪಂಚಾಯತಿ ಮಟ್ಟದಲ್ಲಿ ಸಖಿಗಳ ಮೂಲಕ ರೋಗನಿರೋಧಕ ಕಾರ್ಯಕ್ರಮಗಳು, ಆರಂಭಿಕ ಚಿಕಿತ್ಸೆ ಮತ್ತು ಆರೋಗ್ಯ ಪರೀಕ್ಷೆಗಳನ್ನು ನಡೆಸುವುದು. ಪಶು ರೋಗಗಳ ತಡೆಗಟ್ಟುವಿಕೆ ಮತ್ತು ವೈಜ್ಞಾನಿಕ ಸಂಗೋಪನಾ ವಿಧಾನಗಳನ್ನು ರೈತರಿಗೆ ತಿಳಿಸುವುದು. ಗ್ರಾಮೀಣ ಆರ್ಥಿಕತೆಯನ್ನು ಬಲಪಡಿಸಲು ಹೈನುಗಾರಿಕೆ ಮತ್ತು ಸಣ್ಣ ಜಾನುವಾರು ಸಾಕಣಿಕೆಯನ್ನು ಉತ್ತೇಜಿಸುವುದು. ಇದರಿಂದಾಗುವ ಪ್ರಯೋಜನಗಳೆಂದರೆ ರೈತರು ತುರ್ತು ಸಂದರ್ಭಗಳಲ್ಲಿ ದೂರದ ಪಶುವೈದ್ಯ ಆಸ್ಪತ್ರೆಗಳಿಗೆ ಹೋಗದೆ ಸ್ಥಳೀಯ ಸೇವೆ ಪಡೆಯುತ್ತಾರೆ. ಜಾನುವಾರುಗಳ ಉತ್ಪಾದಕತೆ ಹೆಚ್ಚುತ್ತದೆ, ಆದಾಯ ಮೂಲಗಳು ಸುಧಾರಿಸುತ್ತವೆ ಮತ್ತು ರೋಗ ನಿಯಂತ್ರಣದಿಂದ ನಷ್ಟ ಕಡಿಮೆಯಾಗುತ್ತದೆ. ಸಖಿಗಳಿಗೆ ತರಬೇತಿ ಮತ್ತು ಆದಾಯ ಮೂಲ ನೀಡಿ, ಸಾಮಾಜಿಕ ಅಭಿವೃದ್ಧಿಗೆ ಕೊಡುಗೆ ನೀಡುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ.

ಪಶುಸಖಿ ಯೋಜನೆಯು ಮುಖ್ಯವಾಗಿ ಗ್ರಾಮೀಣ ರೈತರು, ಕಾರ್ಮಿಕರು ಮತ್ತು ಸಣ್ಣ ಪಶುಪಾಲಕರಿಗೆ ಸಹಾಯ ಮಾಡುತ್ತದೆ. ಪ್ರಧಾನ ಫಲಾನುಭವಿಗಳು ಗ್ರಾಮೀಣ ರೈತರು ಸ್ಥಳೀಯ ಸಖಿಗಳ ಮೂಲಕ ದೈನಂದಿನ ಜಾನುವಾರು ಆರೋಗ್ಯ ಪರೀಕ್ಷೆ, ರೋಗನಿರೋಧಕ ಮತ್ತು ಚಿಕಿತ್ಸೆ ಸಲ್ಲಬೇಕು, ಇದರಿಂದ ದೂರದ ಪಶುವೈದ್ಯ ಕೇಂದ್ರಗಳಿಗೆ ಹೋಗುವ ಖರ್ಚು ಮತ್ತು ಸಮಯ ಉಳಿತಾಯಾಗುತ್ತದೆ. ಸಣ್ಣ ಹೈನುಗಾರಿಕೆಗಾರರು ಗೋವು, ಕುರಿ–ಮೇಕೆ, ಕೋಳಿ ಸಾಕಣಿಕೆಗಾರರ ಉತ್ಪಾದಕತೆ ಹೆಚ್ಚಿಸಿ ಆದಾಯ ಸುಧಾರಿಸುತ್ತಾರೆ. ಸಹಾಯದ ವಿಧಾನಗಳೆಂದು ಬಂದಾಗ ಸಖಿಗಳು ಗ್ರಾಮ ಪಂಚಾಯತಿ ಮಟ್ಟದಲ್ಲಿ ರೋಗ–ರುಜಿನ ಗುರುತಿಸಿ ಆರಂಭಿಕ ಔಷಧ ನೀಡಿ, ತುರ್ತು ಸಂದರ್ಭಗಳಲ್ಲಿ ಪಶುವೈದ್ಯ ಡಾಕ್ಟರ್‌ಗಳಿಗೆ ಸಂಪರ್ಕ ಮಾಡುತ್ತಾರೆ. ಇದರಿಂದ ಜಾನುವಾರುಗಳ ರೋಗ ನಿಯಂತ್ರಣ ಸುಧಾರಿಸಿ, ಆರ್ಥಿಕ ನಷ್ಟ ಕಡಿಮೆ ಮಾಡಲು ಸಹಾಯಕವಾಗುತ್ತದೆ ಮತ್ತು ಗ್ರಾಮೀಣ ಆರ್ಥಿಕತೆ ಬಲಗೊಳ್ಳುತ್ತದೆ. ಒಂದು ಗ್ರಾಮ ಪಂಚಾಯತಿಗೆ ಒಬ್ಬ ಸಖಿಯನ್ನು ನೇಮಿಸಿ, ಜಾನುವಾರುಗಳ

ಗಣತಿ, ಲಸಿಕೆ ಮತ್ತು ಆರಂಭಿಕ ಚಿಕಿತ್ಸೆಗೆ ಗಮನ ಹರಿಸುವ ಗುರಿ ಹೊಂದಿದೆ. 2025ರಲ್ಲಿ ಆದಾಯ ವೃದ್ಧಿ ಯೋಜನೆಯೊಂದಿಗೆ ಬಲಗೊಂಡಿದೆ. ಜಾನುವಾರು ಗಣತಿ ನಡೆಸಿ, ಗ್ರಾಮ ಪಂಚಾಯತ್‌ಗೆ ವರದಿ ಸಲ್ಲಿಸುವುದು ಮತ್ತು ಬಡತನ ನಿವಾರಣಾ ಕಾರ್ಯಕ್ರಮಗಳೊಂದಿಗೆ ಸಂಯೋಜಿಸುವುದು. ಉತ್ಪಾದನಾ ಸಮಿತಿಯಡಿ ಕೃಷಿ, ಪಶುಸಂಗೋಪನೆ ಸಂಬಂಧಿತ ಕಾರ್ಯಗಳನ್ನು ನಿರ್ವಹಿಸುವಲ್ಲಿ ಸಹಾಯಕರಾಗಿ ಕೆಲಸ ಮಾಡುವುದು. ಗ್ರಾಮ ಪಂಚಾಯತ್‌ನೊಂದಿಗಿನ ಸಂಬಂಧ ಸಖಿಗಳು ಗ್ರಾಮ ಪಂಚಾಯತ್ ಅಧ್ಯಕ್ಷರು ಮತ್ತು ಸ್ಥಾಯಿ ಸಮಿತಿಗಳೊಂದಿಗೆ ಸಹಯೋಗಿಸಿ, ಪಶು ಕೊಟ್ಟಿಗೆಗಳ ನಿರ್ವಹಣೆ, ಗೊಬ್ಬರ ಸಂಗ್ರಹ ಮತ್ತು ಜೈವಿಕ ವೈವಿಧ್ಯ ಸಂರಕ್ಷಣೆಯಂತಹ ಕಾರ್ಯಗಳನ್ನು ಮುಂದಿಡುತ್ತಾರೆ. ಇದು ಗ್ರಾಮೀಣ ಅಭಿವೃದ್ಧಿಗೆ ಒಂದು ಚೌಕಟ್ಟು ಒಡ್ಡುತ್ತದೆ.

ಪಶುಸಖಿಗಳ ಪಾತ್ರ ನಿರ್ವಹಣೆ ಕುರಿತು ಜನರ ಅಭಿಪ್ರಾಯ

ಕ್ರ.ಸಂ	ಪಶುಸಖಿಯರ ಕಾರ್ಯವೈಖರಿ ಹಾಗೂ ಅನುಕೂಲಗಳ ಕುರಿತ ಜನರ ಅಭಿಪ್ರಾಯ	ಚಂದ್ರಶೇಖರಪುರ	ದಿಬ್ಬದ ಹಳ್ಳಿ	ನಾಗರಹುಣಸೆ	ಎಕ್ಕೆಗುಂದಿ	ಒಟ್ಟು
01	ಅನುಕೂಲವಾಗಿದೆ	12 (3%)	17(4%)	30(7.5%	29(7.2%)	88(22%)
02	ಅನಾನುಕೂಲವಾಗಿದೆ	28(6%)	26(6.5 %)	25(3.7%)	20(2.5%)	99(24.7%)
03	ಪಶುಸಖಿಯರ ನೇಮಕದಿಂದ ಸೌಲಭ್ಯಗಳು ಲಭಿಸಿವೆ	12 (5.5%)	10(4%)	11(2.7%)	08(3.7%)	41(10.2%)
04	ಪಶುಸಖಿಯರು ಕೆಲಸ ಅಚ್ಚುಕಟ್ಟಾಗಿ ನಿರ್ವಹಿಸುತ್ತಾರೆ	34(8.5%)	28(7%)	26(6.5%)	35(8.7%)	123(30.7%)
05	ಗ್ರಾಮ ಪಂಚಾಯತಿ ಪಶುಸಖಿಯರಿಂದ ಮಾಹಿತಿ ಪಡೆದು ಅನುಕೂಲ ನೀಡಿದೆ.	08(2%)	12(3%)	18(4.5%)	11(2.7%)	49(12.2%)
ಒಟ್ಟು		**100(25%)**	**100(2 5%)**	**100(25%)**	**100(25%)**	**400(100%)**

ಈ ಮೇಲಿನ ಕೋಷ್ಟಕವನ್ನು ಗಮನಿಸಿದಾಗ ಪಶುಸಖಿಯರ ಕುರಿತ ಭಿನ್ನ ಅಭಿಪ್ರಾಯಗಳು ಹಲವು ಮಾಹಿತಿಯನ್ನು ನೋಡಬಹುದು. ಚಂದ್ರಶೇಖರಪುರ ಗ್ರಾಮದಲ್ಲಿ ಪಶುಸಖಿಯರಿಂದ ಅನುಕೂಲವಾಗಿದೆ ಎಂದು 12 ಜನರು ಅಭಿಪ್ರಾಯಪಟ್ಟಿದ್ದಾರೆ. ದಿಬ್ಬದಹಳ್ಳಿಯಲ್ಲಿ 17 ಜನರು ನಾಗರಹುಣಸೆಯಲ್ಲಿ 30

ಜನರು, ಎಕ್ಕೆಗುಂದಿ ಗ್ರಾಮದಲ್ಲಿ 29 ಜನರು ಒಟ್ಟು 88ಜನರು ಈ ಯೋಜನೆಯಿಂದ ಅನುಕೂಲವಾಗಿದೆ ಎಂದು ಹೇಳಿದ್ದಾರೆ. ಏಕೆಂದರೆ ಪಶುಗಳಿಗೇನಾದರೂ ತೊಂದರೆಯಾದರೆ ಪಶುವೈದ್ಯರ ಬಳಿ ಕರೆದೊಯ್ಯಬೇಕಿತ್ತು ಆದರೆ ಈಗ ಪಶುಸಖಿಯರೇ ತರಭೇತಿ ಪಡೆದು ಇದ್ದಲ್ಲಿಯೇ ಚಿಕಿತ್ಸೆ ನೀಡುತ್ತಾರೆ. ಹಾಗೆಯೇ ಹೆಚ್ಚು ಪಶುಗಳನ್ನು ಹೊಂದಿದವರಿಗೆ ದನದ ಕೊಟ್ಟಿಗೆ(ಶೆಡ್)ನಿರ್ಮಾಣ, ಕುರಿ ಕೊಟ್ಟಿಗೆ ಹೀಗೆ ಯೋಜನೆಯಡಿಯಲ್ಲಿ ಸಾಲ,ಸೌಲಭ್ಯವನ್ನೂ ನೀಡುತ್ತಿರುವುದು ನಮಗೆ ಅನುಕೂಲವಾಗಿದೆ ಎಂದು ತಮ್ಮ ಅಭಿಪ್ರಾಯ ತಿಳಿಸಿದ್ದಾರೆ.

ಇನ್ನು ಚಂದ್ರಶೇಖರಪುರ ಗ್ರಾಮದಲ್ಲಿನ 28 ಜನರು ದಿಬ್ಬದಹಳ್ಳಿ 26 ಜನರು, ನಾಗರಹುಣಸೆಯಲ್ಲಿ 25 ಎಕ್ಕೆಗುಂದಿ ಗ್ರಾಮದಲ್ಲಿ 20 ಜನರು ಒಟ್ಟು 99ಜನರು ಈ ಯೋಜನೆಯಿಂದ ಅನಾನುಕೂಲವಾಗಿದೆ ಎಂದು ಹೇಳಿದ್ದಾರೆ. ಏಕೆಂದರೆ ಯಾರು ಈ ಯೋಜನೆ ಫಾಲಾನುಭವಿಗಳಾಗಬೇಕು, ಯಾರಿಗೆ ಸಿಗಬೇಕು ಎನ್ನುವಂತಹ ಮಾನದಂಡಗಳನ್ನು ಹೊರತುಪಡಿಸಿ ದನಗಳೇ ಇಲ್ಲದವರಿಗೆ ಈ ಯೋಜನೆಯಡಿಯಲ್ಲಿ ಶೆಡ್ ನಿರ್ಮಾಣಕ್ಕೆ 52 ಸಾವಿರ ರೂಪಾಯಿ ಹಣ ಸಂದಿದೆ. ಅಷ್ಟಲ್ಲದೆ ತಮಗೆ ಬೇಕಾದವರಿಗೆ ಈ ಯೋಜನೆಯಡಿಯಲ್ಲಿ ಸಾಲ,ಸೌಲಭ್ಯಗಳು ಸಿಗುತ್ತಿವೆ ಇದರಿಂದ ಅರ್ಹರು ವಂಚಿತರಾಗುತ್ತಿದ್ದು ಮಧ್ಯವರ್ತಿಗಳ ಹಾವಳಿಯಿಂದ ಈ ಯೋಜನೆ ಅನಾನುಕೂಲ ದೆಸೆಯನ್ನು ಹೊಂದಿದೆ ಎಂದು ತಮ್ಮ ಅಭಿಪ್ರಾಯ ತಿಳಿಸಿದರು. ಪಶುಸಖಿಯರ ನೇಮಕದಿಂದ ಸೌಲಭ್ಯಗಳು ಲಭಿಸಿವೆ ಎಂದು ಚಂದ್ರಶೇಕರಪುರದ 12 ಜನರು, ದಿಬ್ಬದ ಹಳ್ಳಿಯಲ್ಲಿ 10 ಜನರು ನಾಗರಹುಣಸೆಯಲ್ಲಿ 11 ಜನರು ಎಕ್ಕೆಗುಂದಿಯಲ್ಲಿ 8 ಜನರು ಒಟ್ಟು 41 ಜನರು ಪಶುಸಖಿಯರ ನೇಮಕದಿಂದ ಸೌಲಭ್ಯಗಳು ಲಭಿಸಿವೆ ಎಂಬುದಾಗಿ ಇದರಿಂದ ನಮಗೆ ಜಾನುವಾರು ಸಾಕಾಣಿಕೆಗೆ, ಕುರಿ ಸಾಕಾಣಿಕೆಗೆ ಸಾಲ, ಸೌಲಭ್ಯಗಳು ದೊರಕಿವೆ ಹಾಗೂ ಜಾನುವಾರುಗಳಿಗೆ ಕಾಯಿಲೆ ಬಂದರೆ ಅದರ ನಿವಾರಣೆಗಾಗಿ ನಾವು ಪಶು ಆಸ್ಪತ್ರೆಗಳಿಗೆ ತೆರಳಬೇಕಿತ್ತು ಆದರೆ ಪ್ರಸ್ತುತ ನಮಗೆ ಸಖಿಯರೇ ಆ ಕೆಲಸ ನಿರ್ವಹಣೆ ಜವಾಬ್ದಾರಿ ಪಡೆದಿರುವ ಕಾರಣ ಮನಗೆ ಸೌಲಭ್ಯಗಳು ದೊರೆತಿವೆ ಎಂದು ಅಭಿಪ್ರಾಯಪಟ್ಟರು.

ಪಶುಸಖಿಯರು ಕೆಲಸ ಅಚ್ಚುಕಟ್ಟಾಗಿ ನಿರ್ವಹಿಸುತ್ತಾರೆ ಎಂದು ಚಂದ್ರಶೇಖರ ಪುರದ 34 ಜನರು, ದಿಬ್ಬದಹಳ್ಳಿ ಗ್ರಾಮದ 28 ಜನರು ನಾಗರ ಹುಣಸೆ ಗ್ರಾಮದ 26 ಜನರು, ಎಕ್ಕೆಗುಂದಿ ಗ್ರಾಮದ 35 ಜನರು ಒಟ್ಟು 123 ಜನರು ಸಖಿಯರು ಕಾಲಕಾಲಕ್ಕೆ ನಮ್ಮ ಜಾನುವಾರುಗಳು ಎಷ್ಟಿವೆ ಎಂಬ ಮಾಹಿತಿ ಪಡೆದು

ದಾಖಲಿಸಿಕೊಂಡು ಉಣ್ಣೆಗಳು, ಹುಳುಗಳು ಬಿದ್ದರೆ ಏನನ್ನು ಹಚ್ಚಬೇಕು, ಅವುಗಳ ಆರೈಕೆ ಹೇಗೆ ಮಾಡಬೇಕು, ನಮಗೇನಾದರೂ ತೊಂದರೆಗಳಿವೆಯೇ ಎಂಬಂತಹ ಇಂತಹ ಸಾಕಷ್ಟು ವಿಷಯಗಳನ್ನು ದಾಖಲಿಸಿಕೊಂಡು ಅನುಕೂಲವಿರುವಂತಹ ಸೌಲಭ್ಯಗಳನ್ನು ಪಡೆಯಲು ಏನು ಮಾಡಬೇಕೆಂಬ ಮಾಹಿತಿಯನ್ನು ಮಾಹಿತಿ ಹಂಚಿಕೊಂಡರು. ಗ್ರಾಮ ಪಂಚಾಯತಿ ಪಶುಸಖಿಯರಿಂದ ಮಾಹಿತಿ ಪಡೆದು ಅನುಕೂಲ ನೀಡಿದೆ ಎಂಬುದಾಗಿ ಚಂದ್ರಸೇಖರ ಪುರದ 08 ಜನರು, ದಿಬ್ಬದಹಳ್ಳಿಯ 12 ಜನರು, ನಾಗರಹುಣಸೆಯ 18 ಜನರು, ಎಕ್ಕೆಗುಂದಿಯ11 ಜನರು ಒಟ್ಟು 49 ಜನರು ಗ್ರಾಮಪಂಚಾಯಿತಿ ಮುಖೇನ ನೇಮಖಗೊಂಡ ಸಖಿಯರಿಂದ ನಮಗೆ ಸಾಕಷ್ಟು ಅನುಕೂಲವನ್ನು ಗ್ರಾಮಪಂಚಾಯತಿ ಮಾಡಿದೆ ಎಂದು ಅಭಿಪ್ರಾಯಪಟ್ಟರು. ಒಟ್ಟಾರೆಯಾಗಿ ಅಧ್ಯಯನಕ್ಕೊಳಪಡಿಸಿದ ನಾಲ್ಕು ಹಳ್ಳಿಗಳ ಪೈಕಿ ಒಂದೊಂದು ಹಳ್ಳಿಗಳಿಂದ 100 ಜನರನ್ನಾಗಿ ಅಧ್ಯಯನಕ್ಕೆ ತೆಗೆದುಕೊಂಡಾಗ ಅನುಕೂಲ, ಅನಾನುಕೂಲ ಎರಡೂ ಇರುವುದನ್ನು ನಾವು ಕಾಣಬಹುದು.

ಗ್ರಾಮ ಪಂಚಾಯತಿಗಳಲ್ಲಿ ಪಶುಸಂಗೋಪನೆ ಸಖಿಗಳ ದಿನನಿತ್ಯದ ಕರ್ತವ್ಯಗಳು ಗ್ರಾಮೀಣ ಪಶುಪಾಲಕರಿಗೆ ನೇರ ಸೇವೆ ಒದಗಿಸುವುದರ ಮೇಲೆ ಕೇಂದ್ರೀಕರಿಸಿವೆ. ಸಖಿಯರ ದಿನನಿತ್ಯದ ಕರ್ತವ್ಯಗಳು ಯಾವುವು ಎಂದರೆ ಪಶುಗಳ ಆರೋಗ್ಯ ಪರೀಕ್ಷೆ ನಡೆಸಿ, ರೋಗ ಲಕ್ಷಣಗಳನ್ನು ಗುರುತಿಸಿ ಮತ್ತು ಆರಂಭಿಕ ಔಷಧ ನೀಡುವುದು. ಇಂತಹ ಕಾಯಕದಲ್ಲಿ ಕೆಲವು ಅಡಚಣೆಗಳು ಉಂಟೆಂಬುದನ್ನು ಕ್ಷೇತ್ರದಲ್ಲಿ ಸ್ವತಃ ಮಾಹಿತಿದಾರರೇ ಹೇಳಿರುವುದನ್ನು ಗಮನಿಸಬಹುದು. ಹಾಗಾದರೆ ಇಂತಹ ಕಾರ್ಯಕ್ರಮಗಳು ಹುಟ್ಟಿದ್ದು ಯಾವ ಕಾರಣಕ್ಕಾಗಿ ಅಂತ ನೋಡಿದರೆ ಜನರ ಸರ್ವತೋಮುಖ ಅಭಿವೃದ್ದಿಗಾಗಿ ಗ್ರಾಮೀಣ ಪಾರಂಪರಿಕ ಪಶುಪಾಲನಾ ವೃತ್ತಿಯ ಅಭಿವೃದ್ಧಿಗಾಗಿ ಎಂಬುದನ್ನು ಮರೆಯುವಂತಿಲ್ಲ. ಆ ಹಿನ್ನೆಲೆಯಲ್ಲಿ ಪಶುಸಖಿಯರು ಸಾಕಷ್ಟು ಶ್ರಮಿಸಬೇಕಿದೆ. ಗ್ರಾಮೀಣರಿಗೆ ಪಶುಪೋಷಣೆ ಸಲಹೆಗಳು ನೀಡಿ, ಆಹಾರ, ನೀರು ಮತ್ತು ಕೊಳೆಗಳ ಶುಚಿತ್ವದ ಬಗ್ಗೆ ತಿಳಿಸುವುದು.

ಸಖಿಗಳು ದೈನಂದಿನ ಜಾನುವಾರು ಗಣತಿ ಅಂದರೆ ಕುರಿ, ಕೋಳಿ, ದನ ಕರುಗಳ ಮಾಹಿತಿ ಪಡೆದು ಅವುಗಳಿಗೆ ಹಿಂಡಿ, ಮೇವು ಹೇಗೆ ಕೊಡಬೇಕು, ಯಾವ ಸಮಯಕ್ಕೆ ಮುಸುರೆ, ನೀರು ಉಣಿಸಬೇಕು ಇಂತಹ ಹತ್ತು, ಹಲವು ಮಾಹಿತಿಯನ್ನು ಜನರಿಗೆ ತಿಳಿಸಿ ಆ ಮಾಹಿತಿಯನ್ನು ದಾಖಲಿಸಿಕೊಂಡು ನಂತರ ಗ್ರಾಮ ಪಂಚಾಯತ್‌ಗೆ ವರದಿ ಮಾಡುತ್ತಾರೆ ಮತ್ತು ಪಶುವೈದ್ಯಾಧಿಕಾರಿಗಳೊಂದಿಗೆ ಸಂಪರ್ಕದಲ್ಲಿರಬೇಕು.

ಇದರಿಂದ ಗ್ರಾಮೀಣ ಪಶುಸಂಗೋಪನೆ ಕಾರ್ಯಕ್ಕೆ ತ್ವರಿತ ಪರಿಹಾರಗಳು ದೊರೆಯಬಹುದು.

ಒಟ್ಟಾರೆಯಾಗಿ ಪಶುಸಖಿಯರೆಂಬ ಯೋಜನೆಯಡಿ ಪಶುಪಾಲನೆ, ಕೋಳಿ, ಕುರಿ ಸಾಕಾಣಿಕೆ ಮಾಡುವವರ ಬದುಕಿಗೆ ಭರವಸೆಯಾಗಲು ಮತ್ತು ಅವುಗಳ ಸಂತತಿ ಬೆಳೆಸುವುದರ ಜೊತೆಗೆ ಮಹಿಳೆಯರಿಗೂ ಉದ್ಯೋಗ ಒದಗಿಸಿ ಆ ಮೂಲಕ ಅವರನ್ನು ಸರ್ವತೋಮುಖ ಅಭಿವೃದ್ಧಿಯತ್ತ ಕೊಂಡೊಯ್ಯಲು ಇಂತಹ ಯೋಜನೆಗಳು ಸಹಕಾರಿ. ಇದರ ಜೊತೆಗೆ ಪಶುಪಾಲನಾ ನಿರ್ವಹಣಕಾರರಿಗೆ ನೀಡುವ ಸಹಕಾರದಿಂದ ಪಶು ಆರೈಕೆ ಮತ್ತು ಹಾಲು ಉತ್ಪಾದನೆಯಲ್ಲಿ ಸಹಾಯ ಮಾಡುವ ಮಹಿಳಾ ಸ್ವಯಂ ಸಹಾಯಕ ಸಂಘಗಳ ಸದಸದ್ಯರಾಗಿಯೂ ಕಾರ್ಯನಿರ್ವಹಿಸುತ್ತಿರುವುದು ಗ್ರಾಮೀಣಿಗರ ಪಾಲಿಗೆ ವರವೇ ಸರಿ. ಸ್ಥಳೀಯ ಗ್ರಾಮ ಅಭಿವೃದ್ಧಿಗೆ ಅಲ್ಲಿನ ಜ್ಞಾನ ಮತ್ತು ಸಮುದಾಯ ಸಂಪರ್ಕದಿಂದ ರೈತರು ಮತ್ತು ಜಾನುವಾರು ಸಾಕಾಣಿಕೆ ಮಾಡುವವರ ಯೋಜನೆಗಳ ಮಾಹಿತಿಯನ್ನು ತಲುಪಿಸಲು ಸೇತುವೆಯಂತೆ ಪಶುಸಖಿಯರು ಕಾರ್ಯ ನಿರ್ವಹಿಸುತ್ತಾರೆ. ಆದರೆ ಇಂತಹ ಯೋಜನೆಗಳು ಎಷ್ಟರಮಟ್ಟಿಗೆ ಜನರಿಗೆ ತಲುಪಿವೆ ಒಂದು ವೇಳೆ ವಿಳಂಬವಾದರೆ, ಸೌಲಭ್ಯಗಳು ದುರ್ಬಳಕೆಯಾದರೆ ಏನು ಮಾಡಬೇಕೆಂಬುದನ್ನು ಇಂತಹ ಅಧ್ಯಯನಗಳಿಂದ ಕಂಡುಕೊಂಡು ಅದರ ಪರಿಹಾರಕ್ಕಾಗಿ ಶ್ರಮಿಸಬೇಕು. ಏಕೆಂದರೆ ಸಮಾಜದ ಸಂಪರ್ಕ ಕೊಂಡಿಯಾಗಿ ಹಳ್ಳಿಗಳು, ಹಳ್ಳಿಯ ಜನರು ಅವರ ಪಾರಂಪರಿಕ ವೃತ್ತಿಗಳು ಇಡೀ ಸಮಾಜದ ಕನ್ನಡಿಯಾಗಿ ಮುನ್ನಡೆಯುತ್ತವೆ.

ಫಲಿತಗಳು :

- ಪಶುಸಖಿಯರು ಪಶುಪಾಲನೆ, ಆರೈಕೆ ಕುರಿತಾಗಿ ತಿಳಿಸುತ್ತಾರೆ.
- ಪಶುಸಖಿಯರ ನೆರವಿನಿಂದ ನಮಗೆ ಶೆಡ್(ದನದ ಕೊಟ್ಟಿಗೆ, ಕುರಿ,ಕೋಳಿ)ನಿರ್ಮಾಣಕ್ಕೆ ಸರಕಾರದಿಂದ ಹಣ ಪಡೆಯಲು ಸಹಕಾರಿಯಾಗಿದೆ.
- ಪಶು,ಕುರಿ ಪ್ರಾಣಿಗಳಿಗೆ ಏನಾದರೂ ಅನಾರೋಗ್ಯ ಉಂಟಾಗಿದ್ದರೆ ದೂರದ ಪಶುಚಿಕಿತ್ಸಾಲಯಗಳಿಗೆ ತೆರಳುವ ಅಗತ್ಯವಿಲ್ಲ, ಪಶುಸಖಿಯರೇ ಅವುಗಳಿಗೆ ಚಿಕಿತ್ಸೆ ನೀಡಿ ಕಾಲಕಾಲಕ್ಕೆ ಅವುಗಳಿಗೆ ಏನು ಮಾಡಬೇಕೆಂಬ ಮಾಹಿತಿ ನೀಡುತ್ತಾರೆ.
- ಪಶುಪಾಲನೆ ಮಾಡುವ ಪಶುಸಖಿಯರು ಪ್ರತಿ ಮನೆಗೂ ತೆರಳಿ ಪಶುಗಳ

ಗಣತಿ ಮಾಡುವುದರಿಂದ ಹೆಚ್ಚು ಪಶುಪಾಲನೆಯಲ್ಲಿ ತೊಡಗಿಕೊಂಡವರಿಗೆ ಅನುಕೂಲಗಳನ್ನು ಮಾಡಿದ್ದಾರೆ.

- ಮಹಿಳೆಯರಿಗೆ ಈ ಪಶುಸಖಿ ಹುದ್ದೆಯಿಂದ ಸ್ವಾವಲಂಬಿಗಳಾಗುವ ಅವಕಾಶ ದೊರೆತಿದೆ.

ಸಲಹೆಗಳು :

- ಪಶುಸಖಿಯ ಸಹಾಯದಿಂದ ಸಿಗುವ ಸೌಲಭ್ಯಗಳನ್ನು ಮೂರನೇ ವ್ಯಕ್ತಿಗಳು ಲಾಭ ಪಡೆಯುತ್ತಿರುವುದು ವಿಷಾದನೀಯ, ಇದನ್ನು ತಪ್ಪಿಸಲು ಪಾರದರ್ಶಕ ಕ್ಷೇತ್ರಕಾರ್ಯದ ಮಾಹಿತಿ ಪಡೆಯಬೇಕು.
- ಒಂದು ಬಾರಿ ಒಂದು ಮನೆಗೆ ಶೆಡ್ ನಿರ್ಮಾಣವಾಗಿದ್ದರೂ ಅದೇ ಮನೆಯ ಮತ್ತೊಬ್ಬ ಸದಸ್ಯರಿಗೆ ಈ ಸೌಲಭ್ಯ ದೊರಕುತ್ತಿರುವುದು ಖಂಡನೀಯ ಇದನ್ನು ತಪ್ಪಿಸಲು ಅವರ ಸಂಪೂರ್ಣ ವಿಳಾಸ ಮತ್ತು ಮನೆಯ ಸದಸ್ಯರ ಮಾಹಿತಿ ಕಂಡುಕೊಳ್ಳಬೇಕು.
- ಪಶುಪಾಲನೆಯ ವರತ್ತಿಯಲ್ಲಿ ತೊಡಗಿರುವುದಿಲ್ಲವಾದರೂ ಅಂತವರು ಸುಳ್ಳು ಮಾಹಿತಿ ನೀಡಿ ಮತ್ತೊಬ್ಬರ ಮನೆಯ ಪಶುಗಳಿದ್ದಲ್ಲಿ ಛಾಯಾಚಿತ್ರಗಳನ್ನು ತೆಗೆಸಿಕೊಂಡು ಇತರೆಯವರ ಶಾಮೀನಿನೊಂದಿಗೆ ಶೆಡ್ ನಿರ್ಮಾಣಕ್ಕಾಗಿ ಹಣ ಪಡೆದಿರುವ ಪ್ರಕರಣಗಳಿದ್ದು ಅವುಗಳನ್ನು ತಡೆಯಬೇಕು.
- ಪ್ರತಿ ತಿಂಗಳಿಗೊಮ್ಮೆ ಗ್ರಾಮದ ಜನರನ್ನು ಒಂದೆಡೆ ಸೇರಿಸಿ ಇಂತಹ ಅನುಕೂಲಕರ ಮಾಹಿತಿಗಳನ್ನು ತಿಂಗಳ ಚಿಂತನ–ಮಂಥನ ಕಾರ್ಯಕ್ರಮ ನಡೆಸಿ ಜನರಿಗೆ ತಿಳಿಸಬೇಕು. ಮತ್ತು ಇರುವ ಸೌಲಭ್ಯ ಯಾರಿಗೆ, ಹೇಗೆ, ಯಾವಾಗ ತಲುಪಬೇಕು ಅದಕ್ಕಾಗಿ ಏನು ಮಾಡಬೇಕೆಂಬ ಅರಿವಿನ ಮಾಹಿತಿ ನೀಡಬೇಕು.
- ಸಾಕಷ್ಟು ಜನರು ಈ ಯೋಜನೆಯಡಿಯಲ್ಲಿ ಶೆಡ್ ನಿರ್ಮಾಣವಾಗಿರುವುದೇ ನಮಗೆ ತಿಳಿದಿಲ್ಲ, ಒಳಗೊಳಗೆ ಅದಕ್ಕೆ ಅರ್ಹರಲ್ಲದವರಿಗೆ ಈ ಯೋಜನೆ ತಲುಪಿದೆ ಎಂಬ ಮಾಹಿತಿ ಲಭ್ಯವಾಗಿದ್ದು ಈ ಯೋಜನೆಗಳ ಕುರಿತಾಗಿ ಪೂರ್ವಾಪರ ವಿಚಾರ ಜನರಿಗೆ ತಿಳಿಸಬೇಕು.

ಆಯ್ದ ವ್ಯಕ್ತಿಗಳ ತಿಳುವಳಿಕೆದಾರರ ಮಾಹಿತಿ

ಹೆಸರು	ವಯಸ್ಸು	ಸಮುದಾಯ	ವೃತ್ತಿ	ವಿಳಾಸ
ಬಂಡ್ರಿ ಚನ್ನಬಸಪ್ಪ	107	ಲಿಂಗಾಯತ	ಪಶುಪಾಲನೆ	ಚಂದ್ರಶೇಖರಪುರ ಕೂಡ್ಲಿಗಿ ತಾ. ವಿಜಯನಗರ ಜಿ. 583130
ಲಕ್ಷ್ಮೀ ಎ	38	ನಾಯಕ	ಕುರಿಪಾಲನೆ	ಚಂದ್ರಶೇಖರಪುರ ಕೂಡ್ಲಿಗಿ ತಾ. ವಿಜಯನಗರ ಜಿ. 583130
ಜಯಮ್ಮ ಜಿ	47	ಗೊಲ್ಲ	ಪಶುಪಾಲನೆ	ದಿಬ್ಬದಹಳ್ಳಿ, ಕೂಡ್ಲಿಗಿ ತಾ. ವಿಜಯನಗರ ಜಿ. ಮಾರಮ್ಮ ದೇವಸ್ಥಾನ ಹತ್ತಿರ 583218
ರಾಜಮ್ಮ	52	ಪಂಚಮಶಾಲಿ ಲಿಂಗಾಯತ	ಪಶುಪಾಲನೆ	ದಿಬ್ಬದಹಳ್ಳಿ, ಕೂಡ್ಲಿಗಿ ತಾ. ವಿಜಯನಗರ ಜಿ. ಮಾರಮ್ಮ ದೇವಸ್ಥಾನ ಹತ್ತಿರ 583218
ಮುನಿಯಪ್ಪ	32	ಮಣಿಕಾರರು(ದಲಿತ)	ಪಶುಪಾಲನೆ	ಎಕ್ಕೆಗುಂದಿ, ಮತಂಗಿ ದೇವಸ್ಥಾನ ಹತ್ತಿರ, ಕೂಡ್ಲಿಗಿ ತಾ. ವಿಜಯನಗರ ಜಿ. 583135
ರಮೇಶ	30	ನೇಕಾರ	ಕುರಿ	ಎಕ್ಕೆಗುಂದಿ, ಕೂಡ್ಲಿಗಿ ತಾ. ವಿಜಯನಗರ ಜಿ, 583135
ಮಹಾಂತಮ್ಮ	58	ಕುಂಬಾರ	ಪಶುಪಾಲನೆ	ನಾಗರಹುಣಸೆ, ಕೂಡ್ಲಿಗಿ ತಾ. ವಿಜಯನಗರ ಜಿ, 583135
ಹಂಪಕ್ಕ	39	ಮ್ಯಾಸ ನಾಯಕ	ಕುರಿ	ನಾಗರಹುಣಸೆ, ಕೂಡ್ಲಿಗಿ ತಾ. ವಿಜಯನಗರ ಜಿ, 583135

ಪರಾಮರ್ಶನ ಗ್ರಂಥಗಳು :

1. (ಅಮರಕೋಶ)https://xn--3rc7bwa7a5hpa.xn 2scrj9c/dictionary/kannada/%E0%B2%AA%E0%B2%B6%E0%B3%81%E0%B2%AA%E0%B2%BE%E0%B2%B2%E0%B2%A8%E0%B3%86)
2. Khare, P., Sharma, M. L., & Singh, U. R. (2020). Knowledge of rural women in animal husbandry practices. International Journal of Chemical Studies, 8(3), 1262-1265.

ಪಶುಪಾಲನೆಯಲ್ಲಿ ತೊಡಗಿಕೊಂಡವರ ಮೇಯಲು ಬಿಟ್ಟ ಪಶುಗಳು

ಹಸುಗಳ ಸಾಕಾಣಿಕೆ ಮತ್ತು ಅವುಗಳ ಪಾಲನೆಗಾಗಿ ಮನೆಯ ಒಳಗೆಯೇ ಹಸು ಆಂಕಣ(ಗ್ವಾಡ್ಲಿ)ಮಾಡಿ ಹಸುಗಳ ಪಾಲನೆಗಾಗಿ ಪಶುಸಖಿಗಳಿಂದ ಮಾಹಿತಿ ಪಡೆದವರಿಂದ ಮಾಹಿತಿ ಪಡೆಯುತ್ತಿರುವ ಛಾಯಾಚಿತ್ರ

ಪಶುಸಖಿಯರಿಂದ ದನದ ಕೊಟ್ಟಿಗೆ ನಿರ್ಮಾಣ ಮಾಡಿಕೊಂಡಿರುವ ಜೊತೆಗೆ ಅವುಗಳಿಗೆ ಶಕ್ತಿ ಬರಲು ಹಿಂಡಿ ಕೊಡಲು ಹಾಕಿರುವುದನ್ನು ಸಂದರ್ಶಕರಿಗೆ ವಿವರಿಸುತ್ತಿರುವ ಛಾಯಾಚಿತ್ರ

ಪಶುಸಖಿಯ ಸಹಾಯದಿಂದ ಹೆಚ್ಚು ದನಕರುಗಳನ್ನು ಹೊಂದಿದವರಿಗೆ ದನದ ಕೊಟ್ಟಿಗೆ ನಿರ್ಮಾಣವಾಗಿರುವ ಛಾಯಾಚಿತ್ರ

ಕುರಿ ಸಾಕಾಣಿಕೆ ಮಾಡುವ ಇವರಿಗೆ ಶೆಡ್ ನಿರ್ಮಾಣಕ್ಕಾಗಿ ಆಯ್ಕೆಯಾರಿವ ಕುರಿತು ಮಾಹಿತಿ ನೀಡಿದರು.

ನೆರಿಕೆ(ಗರಿ)ಪಾಕಿಕೊಂಡು ಕುರಿ ಸಾಕಾಣಿಕೆ ಮಾಡುವ ಇವರ ಕುರಿಗಳಿಗೆ ರೋಗ ಬಂದಾಗ ಪಶುಸಖಿಯರು ಔಷಧಿ ಕೊಟ್ಟು ಗುಣಪಡಿಸಿ ಲೆಕ್ಕ ಪಡೆದು ಶೆಡ್ ನಿರ್ಮಾಣ ಮಾಡಿಕೊಡುವುದಾಗಿ ಹೇಳಿರುವ ಮಾಹಿತಿ ನೀಡಿದರು.

***

ಸಾಮಾಜಿಕ ಪ್ರಜ್ಞೆಯ ಹಿನ್ನಲೆಯಲ್ಲಿ 'ಪುರಂದರದಾಸರು'

ಅಭಿಜಿತ್ ಬಿ.
ಸಂಶೋಧನಾರ್ಥಿ,
ಕನ್ನಡ ಭಾರತಿ.
ಕುವೆಂಪು ವಿಶ್ವವಿದ್ಯಾನಿಲಯ,
ಶಂಕರಘಟ್ಟ–577451
abhijithb736@gmail.com

1

ಪ್ರಮುಖ ಪದಗಳು
ಕೀರ್ತನೆಗಳು, ದಾಸಪರಂಪರೆ, ಸಾಮಾಜಿಕ ಪ್ರಜ್ಞೆ, ಆಂದೋಲನ

ಕೀರ್ತನೆಗಳಲ್ಲಿ ಕಾಣಿಸಿಕೊಳ್ಳುವುದು ಮುಖ್ಯವಾಗಿ ಭಕ್ತಿ ಹಾಗೂ ದೈವ ನಿಷ್ಠೆ. ಇಲ್ಲಿ ಕೀರ್ತನಕಾರರು ತಮ್ಮ ಇಷ್ಟದೈವಗಳನ್ನು ಕೀರ್ತನೆಗಳ ಮೂಲಕ ಹಾಡಿ ಹೊಗಳುವ ಇವರು ಸಮಾಜದಲ್ಲಿ ತಮ್ಮದೇ ಆದ ಒಂದು ಅಸ್ತಿತ್ವವನ್ನು ಸ್ಥಾಪಿಸಿಕೊಂಡವರು. 15–16 ನೇ ಶತಮಾನದಲ್ಲಿ ಕಾಣಿಸಿಕೊಳ್ಳುವ ಈ ಹರಿದಾಸ ಪರಂಪರೆಯು ತನ್ನದೇ ಆದ ಭಕ್ತ ಪರಂಪರೆಯನ್ನು ಹುಟ್ಟು ಹಾಕಿತು. ದಾಸಕೂಟದ ಈ ಹರಿದಾಸರನ್ನು, ಕೀರ್ತನಾಕಾರರು ಎಂದು ಸಹ ಕರೆಯಲಾಗುತ್ತದೆ. ನರಹರಿತೀರ್ಥರಿಂದ ಮೊದಲುಗೊಂಡ ಈ ಹರಿದಾಸ ಸಾಹಿತ್ಯವು ವ್ಯಾಸರಾಯ, ಪುರಂದರದಾಸ, ಕನಕದಾಸ, ಜಗನ್ನಾಥದಾಸ, ವಿಜಯದಾಸ, ಗೋಪಾಲದಾಸ ಹೀಗೆ ಹಲವಾರು ಕೀರ್ತನಕಾರರನ್ನು ಒಳಗೊಂಡು ಒಂದು ಸಾಮಾಜಿಕ ಆಂದೋಲನವನ್ನೇ ನಡೆಸಿದ್ದು ವಿಶೇಷವೆಂದರೆ ತಪ್ಪಾಗಲಾರದು. ಒಬ್ಬೊಬ್ಬ ಕೀರ್ತನಾಕಾರನು ಅಂಕಿತನಾಮಗಳನ್ನು ಬಳಸಿಕೊಂಡು ವಿಭಿನ್ನ ರೀತಿಯಲ್ಲಿ ತಮ್ಮ ಇಷ್ಟದೈವಗಳನ್ನು ಸ್ಮರಿಸುತ್ತಾ ತಮ್ಮ ಭಕ್ತಿಯನ್ನು ಅರ್ಪಿಸುತ್ತಾ ಸಾಮಾಜಿಕ ಕಾಳಜಿಯನ್ನು ಬಿತ್ತಿರುವುದು ಇಲ್ಲಿ ಮುಖ್ಯವಾಗುತ್ತದೆ. ಕನ್ನಡ ಸಾಹಿತ್ಯದಲ್ಲಿ ತಮ್ಮದೇ ಆದ ವಿಶಿಷ್ಟ ಹಾಗೂ ವಿಭಿನ್ನವಾದ ಸಾಮಾಜಿಕ ಆಂದೋಲನ ಚಟುವಟಿಕೆ ಈ ಕೀರ್ತನಾಕಾರರಲ್ಲಿ, ಹರಿದಾಸ ಪರಂಪರೆಯಲ್ಲಿ ಕಂಡುಬರುತ್ತದೆ.

ಇಲ್ಲಿ ಪ್ರಮುಖವಾಗಿ ಪುರಂದರದಾಸರನ್ನು ಕಾಣುವ ಹಾಗೂ ದಾಸ ಸಾಹಿತ್ಯದಲ್ಲಿ ಅವರ ಕೊಡುಗೆ ಅವರ ಸಾಹಿತ್ಯ ರಚನೆಯ ಹಿಂದಿನ ತಾತ್ವಿಕ ಮೌಲ್ಯವನ್ನು ಕೂಲಂಕುಶವಾಗಿ ಒಂದು ಚೌಕಟ್ಟಿನಡಿಯಲ್ಲಿ ನೋಡಲಾಗುವುದು. ಪುರಂದರದಾಸರ ಬರವಣಿಗೆಯ ಮೇಲೆ ಗುರುಗಳಾದ ವ್ಯಾಸರಾಯರ ಪ್ರಭಾವ ಹೆಚ್ಚಾಗಿ ಬೀರಿದೆ. ಹರಿದಾಸ ಸಾಹಿತ್ಯದ ಅಶ್ವಿನಿ ದೇವತೆಗಳು, ಮಹೋನ್ನತ ಕಾಣಿಕೆಗಳು ಎಂದರೆ ಕನಕದಾಸರು ಹಾಗೂ ಪುರಂದರದಾಸರು ಎಂಬ ಮಾತು ಮೊದಲಿನಿಂದಲೂ ಕೇಳಿ ಬಂದಿರುವುದು ಸತ್ಯ ಸಹಜ. ಈ ಕಾರಣದ ಹಿನ್ನೆಲೆಯಲ್ಲಿ ಪುರಂದರದಾಸರನ್ನು ಅಧ್ಯಯನ ಮಾಡುವುದು ಸೂಕ್ತವೆಂದು ಅನಿಸುತ್ತದೆ. ಪುರಂದರದಾಸರು ಮೂಲತಃ ಪುರಂದರಗಡದವರು. ದಾಸ ಸಾಹಿತ್ಯದಲ್ಲಿ ದೊಡ್ಡ ಹೆಸರನ್ನೇ ಪಡೆದವರು. ಇವರ ಎಲ್ಲಾ ಕೃತಿಗಳು ಸಹ ಅಭೂತಪೂರ್ವವಾದವುಗಳು.

'ವ್ಯಾಸರಾಯರೇ ದಾಸರೆಂದರೆ ಪುರಂದರದಾಸರಯ್ಯ' ಎಂಬ ಮಾತನ್ನು ಹೇಳುವ ಮೂಲಕ ಪುರಂದರದಾಸರ ಹೆಗ್ಗಳಿಕೆಯನ್ನು ಮೆರೆದರು. ಅಂತಹ ಶ್ರೇಷ್ಠ ವ್ಯಕ್ತಿ ಇವರಾಗಿದ್ದಾರೆ. ಪುರಂದರದಾಸರಿಗೆ ಈ ದಾಸ ಸಾಹಿತ್ಯದಲ್ಲಿ ದಾಸ ಕೂಟದಲ್ಲಿ ಹೆಚ್ಚಿನ ಗೌರವ ಸಂದಿದೆ. ಇಂತಹ ಶ್ರೇಷ್ಠ ವ್ಯಕ್ತಿಯೇ ತನ್ನ ಮುಂದಿನ ಹರಿದಾಸರಿಗೆ ಮಾದರಿಯಾಗಿದ್ದರು ಅಥವಾ ಮಾರ್ಗವಾಗಿದ್ದರು ಎಂದರು ತಪ್ಪಾಗುವುದಿಲ್ಲ. 'ಪುರಂದರವಿಠಲ' ಎಂಬ ಅಂಕಿತದೊಂದಿಗೆ ಭಾಗವತ ಸಂಪ್ರದಾಯಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದರು. ಪುರಂದರದಾಸರು ಹಲವಾರು ಕೀರ್ತನೆಗಳನ್ನು ಬರೆದಿದ್ದಾರೆ. ಅವರ ಗುರುಗಳು ವ್ಯಾಸರಾಯರೇ ಇವರು ಬರೆದ ಕೃತಿಗಳನ್ನು ಪುರಂದರೋಪನಿಷತ್ತು ಎಂದು ಕರೆದಿದ್ದಾರೆ. ಅಂತಹ ಸುಪ್ರಸಿದ್ಧವಾದ ಕೃತಿಗಳು ಇವರದಾಗಿತ್ತು. ಇದಕ್ಕೆಲ್ಲ ಕಾರಣ ಅವರಲ್ಲಿದ್ದ ಭಕ್ತಿ ಹಾಗೂ ಅತಿಯಾದ ಲೌಕಿಕ ಅನುಭವ ಸರಳವಾದ ಬರವಣಿಗೆಯ ಶೈಲಿ ಎಂಬುದು ಸಂಶಯವಿಲ್ಲದ ಮಾತು. ಅತಿಯಾಗಿ ಭಕ್ತಿಗೀತೆಗಳನ್ನು, ಭಾವಗೀತೆಗಳನ್ನು ಒಳಗೊಂಡಿರುವ ಇವರ ಕವನಗಳು ಇಂದಿಗೂ ಜನಸಾಮಾನ್ಯರ ಬಾಯಿಯಲ್ಲಿ ರಾರಾಜಿಸುತ್ತಿರುವುದು ಗಮನಿಸಬಹುದು. ಇವರು ಜನರ ಮೌಢ್ಯವನ್ನು ತಮ್ಮ ಕೃತಿಗಳ ಮೂಲಕ ಖಂಡಿಸಿದರು ಭೋಗ ಜೀವನದ ನಶ್ವರತೆ ಹಾಗೂ ಸಂಸಾರದ ನಿಸ್ಸಾರತೆಯನ್ನು ತಿಳಿಸಿದರು, ನೈತಿಕತೆಯನ್ನು ಸಾರಿದರು. ಸಾಮಾಜಿಕ ಪ್ರಜ್ಞೆಯನ್ನು ಹುಟ್ಟು ಹಾಕಿದರು.

ಜಿ.ಎಸ್ ಶಿವರುದ್ರಪ್ಪನವರು ಹೇಳುವಂತೆ ಪುರಂದರದಾಸರಂತ ದಾಸರ ವ್ಯಕ್ತಿತ್ವಕ್ಕೆ ಎರಡು ರೇಖೆ: "ಒಂದು ತಮಗೂ ತಮ್ಮ ಭಗವಂತನಿಗೂ ಇರುವ ಸಂಬಂಧ.

ಇನ್ನೊಂದು ತಮಗೂ ತಮ್ಮ ಸುತ್ತಣ ಲೋಕಕ್ಕೂ ಇರುವ ಸಂಬಂಧ. ಈ ಎರಡು ಸಂಬಂಧಗಳು ಹೊರಡುವ ಒಂದು ಬಿಂದುವಿನಲ್ಲಿದೆ ಇವರ ವ್ಯಕ್ತಿತ್ವ" (ಎಚ್.ಎಸ್. ವೆಂಕಟೇಶಮೂರ್ತಿ, (2021) ಕೀರ್ತನಾಕಾರರು, ಪು.ಸಂ. 27) ಎಂಬ ಮಾತು ಅಕ್ಷರಶಃ ಸತ್ಯವಾದದ್ದು. ಇವರು ಭಗವಂತನನ್ನು ತಮ್ಮ ಕೀರ್ತನೆಗಳ ಮೂಲಕ ಅರ್ಚಿಸುತ್ತಾ, ಜನಸಾಮಾನ್ಯರಿಗೂ ಸಾಮಾಜಿಕ ಪ್ರಜ್ಞೆಯನ್ನು ಮೂಡಿಸಿದರು. ನಂಬಿಕೆಟ್ಟವರಿಲ್ಲವೋ, ಯಾರಿಗೆ ಯಾರುಂಟು, ಆರು ಹಿತವರು ನಿನಗೆ ಎಂಬಂತಹ ಇವರ ಅನೇಕ ಕೃತಿಗಳು ಇವರ ಅನೇಕ ಸಾಲುಗಳು ಗಮನೀಯವೆನಿಸುತ್ತದೆ. ಅತಿ ಹೆಚ್ಚು ಕೃಷ್ಣ ಲೀಲೆಗಳು ಇವರ ಸಾಹಿತ್ಯದೊಳಗೆ ಕಾಣಿಸಿಕೊಳ್ಳುತ್ತದೆ. ಅದರಂತೆಯೇ ಮುರುಳೀವಾದನ, ಕಾಳಿಂಗ ಮರ್ದನ ಹೀಗೆ ಅನೇಕ ಸಂಗತಿಗಳು ಇವರ ಭಾವಲಹರಿಯಲ್ಲಿ ಕಾಣಿಸಿಕೊಳ್ಳುತ್ತವೆ.

'ಮಾನವ ಜನ್ಮ ದೊಡ್ಡದು ಅದನ್ನು ಹಾಳು ಮಾಡಬೇಡಿ ಹುಚ್ಚಪ್ಪಗಳಿರಾ... ಈಸಬೇಕು ಇದ್ದು ಜಯಿಸಬೇಕು' ಎಂಬ ದಾಸರ ಮಾತುಗಳೇ ಬದುಕಿನ ಮಹತ್ವವನ್ನು ತಿಳಿಸಿ ಹೇಳಿವೆ. ಈ ಮೂಲಕ ಲೌಕಿಕ ಬದುಕಿನ ಸುಖ ದುಃಖಗಳನ್ನು ಹೇಳುವುದರ ಜೊತೆಗೆ ಕಷ್ಟಗಳನ್ನು ತಮ್ಮ ಆತ್ಮವಿಶ್ವಾಸದೊಂದಿಗೆ ಹೇಗೆ ಎದುರಿಸಬೇಕು ಎಂಬುದು ದಾಸರ ಪ್ರತಿ ಹಾಡಿನಲ್ಲೂ ಕಾಣಿಸಿಕೊಳ್ಳುತ್ತದೆ. ಹಾಗೆಯೇ ಪ್ರಸ್ತುತದಲ್ಲಿಯೂ ದಾಸರ ಕೀರ್ತನೆಗಳು ಜನಪ್ರಸಿದ್ಧವಾಗಿರುವುದು ಗಮನಾರ್ಹವಾಗಿದೆ. ಇಡೀ ಬದುಕಿನ ಆಗುಹೋಗುಗಳನ್ನು ಹರಿಗೆ ಸಮರ್ಪಿಸುವ ದಾಸರು ಹರಿಭಕ್ತಿಯನ್ನು ಮೆರೆಯುವುದರ ಜೊತೆ ಜೊತೆಗೆ ಪ್ರತಿಯೊಬ್ಬ ಸಾಮಾನ್ಯ ಮನುಷ್ಯನಿಗೂ ಬದುಕಿನ ಪಾಠಗಳನ್ನು ಹೇಳಿದರು. ಬದುಕಿನ ಸವಿಯನ್ನು ಹಂಚಿದರು. ಈ ಹಾಡುಗಳ ಮೂಲಕವೇ ನಾವು ದಾಸರು ನೀಡಿದ ಸಾಮಾಜಿಕ ಪ್ರಜ್ಞೆಯನ್ನು ಗಮನಿಸಬಹುದು.

ಪುರಂದರದಾಸರ ಕೀರ್ತನೆಗಳ ಮಹತ್ವವೇ ಸಾಮಾಜಿಕ ಪ್ರಜ್ಞೆ ಅದರಲ್ಲಿ ಸಂಶಯವಿಲ್ಲ. 'ಡೊಂಕು ಬಾಲದ ನಾಯಕರೆ', 'ಆಚಾರವಿಲ್ಲದ ನಾಲಿಗೆ', 'ನಿಂದಕರಿರಬೇಕಯ್ಯ', 'ಹೊಲೆಯ ಹೊರಗಿಹನೇ, ಊರೊಳಗಿಲ್ಲವೇ'. ಎಂಬ ದಾಸರ ಹಲವು ಕೀರ್ತನೆಗಳು ಇಂದಿಗೂ ಪ್ರಸಿದ್ಧವಾದವುಗಳೇ. ಈ ಹಾಡಿನ ಪ್ರತಿಯೊಂದು ಸಾಲುಗಳಲ್ಲಿಯೂ, ಪದಗಳಲ್ಲಿಯೂ, ಅಕ್ಷರಾಕ್ಷರಗಳಲ್ಲಿಯೂ ಒಂದೊಂದು ತೂಕವಿದೆ. ತಮ್ಮ ಬದುಕಿನಲ್ಲಿ ಅವರಿಗಾದ ಅನುಭವಗಳನ್ನು ಅಕ್ಷರ ರೂಪದಲ್ಲಿ ದಾಖಲಿಸಿದ ದಾಸರು ಈ ಸಮಾಜವನ್ನು ಮೌಢ್ಯತೆಯಿಂದ ಹೊರ ತರುವ, ಅಸಮಾನತೆಯನ್ನು ವಿರೋಧಿಸಿ ಸಮಾನತೆಯನ್ನು ಸಾರಿದ, ದೊಡ್ಡವರು ಎನಿಸಿಕೊಂಡ ದೊಡ್ಡ ಜನಗಳ

ಸಣ್ಣತನಗಳನ್ನು ವ್ಯಂಗ್ಯ ಮಾಡಿ ಒಂದು ಹೊಸ ಸಾಮಾಜಿಕ ಆಂದೋಲನವನ್ನೇ ಬಿತ್ತರಿಸಿದ ಮಹಾನ್ ವ್ಯಕ್ತಿ ಪುರಂದರದಾಸರು. ಇವರ ಈ ಎಲ್ಲಾ ಹಾಡುಗಳು ಪ್ರಸ್ತುತ ಸಮಾಜಕ್ಕೂ ನೀತಿ ಪಾಠವಾಗಿದೆ.

ಒಟ್ಟಾರೆಯಾಗಿ ದಾಸ ಸಾಹಿತ್ಯದಲ್ಲಿ ಪುರಂದರದಾಸರದು ಅನನ್ಯವಾದ ಕೊಡುಗೆ. ಅವರಿಗಿದ್ದ ಜೀವನಾನುಭವ ಸಾಮಾಜಿಕ ಕಳಕಳಿ, ಸಾಮಾಜಿಕ ಪ್ರಜ್ಞೆಯ ಎಲ್ಲಾ ಅಂಶಗಳು ಇವರ ಪ್ರತಿ ಕೀರ್ತನೆಗಳಲ್ಲಿಯೂ ವ್ಯಕ್ತವಾಗಿದೆ. ಹರಿಸ್ಮರಣೆಯೊಂದಿಗೆ ಲೌಖಿಕ ಬದುಕಿನ ಆಗು–ಹೋಗುಗಳಿಗೆ ಕವಿಗೊಟ್ಟು ಅಲ್ಲಿನ ನೋವು–ನಲಿವುಗಳನ್ನು ಅಕ್ಷರರೂಪಕ್ಕಿಳಿಸಿ ಜನಸಾಮಾನ್ಯರಿಗೆ ತಲುಪುವಂತೆ ಮಾಡಿ ಸಾಮಾಜಿಕ ಪ್ರಜ್ಞೆಯ ಕುರಿತು ಸಾರಿದ ಕೀರ್ತಿ ಪುರಂದರದಾಸರಿಗೆ ಸಲ್ಲುತ್ತದೆ. ಆದ್ದರಿಂದ ದಾಸಸಾಹಿತ್ಯದಲ್ಲಿ ಪುರಂದರದಾಸರು ಅಗ್ರಮಾನ್ಯರಾಗಿ ಕಾಣಿಸಿಕೊಳ್ಳುತ್ತಾರೆ.

ಪರಾಮರ್ಶನ ಗ್ರಂಥಗಳು :

1. ಅ.ರಾ.ಮಿತ್ರ ಮತ್ತು ರತ್ನಾ ಶಿವಶಂಕರ್, (ಸಂ), (1985), ಅಧ್ಯಾತ್ಮ ದರ್ಶನ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.
2. ಇಲ್ಲೂರು ಜಯರಾಮಪ್ಪ, (1981), ದಾಸ ಸಾಹಿತ್ಯ ಹಾಗೂ ಸಾಮಾಜಿಕ ಮೌಲ್ಯಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಪ್ರಕಾಶನ, ಮೈಸೂರು.
3. ಎಚ್ಚೆಸ್ಕೆ (ಸಂ), (1984), ದಾಸ ಸಾಹಿತ್ಯ ದರ್ಶನ, ಮಂಗಳ ಭಾರತಿ ಪ್ರಕಾಶನ ಮೈಸೂರು.
4. ವೆಂಕಟೇಶ್, ಎಂ.ಎನ್, (2022), ಕೀರ್ತನ ಸಾಹಿತ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
5. ವೆಂಕಟೇಶಮೂರ್ತಿ, ಎಚ್.ಎಸ್, (2021), ಕೀರ್ತನಾಕಾರರು, ಸಪ್ನ ಬುಕ್ ಹೌಸ್, ಬೆಂಗಳೂರು.

***

ವಚನ ಸಾಹಿತ್ಯದಲ್ಲಿ ಕಾಯಕದ ಪರಿಕಲ್ಪನೆ

ಕವನ ಕೆ.
ಸಂಶೋಧನಾರ್ಥಿ, ಕನ್ನಡ ಭಾರತಿ
ಕುವೆಂಪು ವಿಶ್ವವಿದ್ಯಾನಿಲಯ
ಶಂಕರಘಟ್ಟ –577451
kavanak9353@gmail.com

ಪ್ರಮುಖ ಪದಗಳು
ವಚನ ಸಾಹಿತ್ಯ, ಕಾಯಕ, ಶರಣ, ಶ್ರದ್ಧೆ, ನಿಷ್ಠೆ

ವಚನ ಸಾಹಿತ್ಯದ ಆರಂಭದ ಕಾಲಘಟ್ಟವನ್ನು ಬಸವಯುಗವೆಂದು ಕರೆಯುತ್ತೇವೆ. ವಚನ ಎಂದರೆ ಮಾತು ಎಂದರ್ಥ. ಈ ಸಾಹಿತ್ಯ ಪ್ರಕಾರವು ಬೆಳಕಿಗೆ ಬಂದದ್ದು 12ನೇ ಶತಮಾನದಲ್ಲಿ. ಈ ವಚನ ಸಾಹಿತ್ಯ ಕಾಲಘಟ್ಟವನ್ನು ಕನ್ನಡ ಸಾಹಿತ್ಯದಲ್ಲಿ ಮುಖ್ಯ ಘಟ್ಟವೆಂದೇ ನೋಡಬಹುದು. ಅನುಭವ ಪ್ರಧಾನವಾದ ಈ ವಚನ ಸಾಹಿತ್ಯವು ವಿಭಿನ್ನ ಬಗೆಯ ಆತ್ಮಾವಲೋಕನ ಹಾಗೂ ಅಭಿವ್ಯಕ್ತಿ ಕ್ರಮದ ನೆಲೆಗಳನ್ನು ಸೃಷ್ಟೀಕರಿಸುತ್ತದೆ.

ಪುರೋಹಿತಶಾಹಿ ಸಿದ್ಧಾಂತಗಳಿಗೆ ಮುಖಾಮುಖಿಯಾಗಿ ಅಲ್ಲಿನ ಸಿದ್ಧಾಂತವನ್ನು ಮಡಿವಂತಿಕೆಯನ್ನು ವಿರೋಧಿಸುವ ಈ ವಚನ ಸಾಹಿತ್ಯ ಕಾಲಘಟ್ಟವು ಮಡಿವಂತಿಕೆಯಿಂದ ಕಾಯಕಕ್ಕೆ ಹೆಚ್ಚಿನ ಮಹತ್ವ ನೀಡಿತು. ಪ್ರತಿಯೊಬ್ಬ ಮನುಷ್ಯನು ಕೂಡ ದುಡಿದು ತಿನ್ನಬೇಕು ಎಂಬುದು ಇವರ ಪ್ರಮುಖ ನಿಲುವು. ಅದರಂತೆ ಬದುಕಿ, ಬಾಳಿದವರು ಇಲ್ಲಿನ ಶರಣರು. ಇಲ್ಲಿ ಕಂಡು ಬರುವ ಪ್ರತಿಯೊಬ್ಬ ಶರಣನು ಕೂಡ ಒಂದೊಂದು ಕಾಯಕದಲ್ಲಿ ನಿರತನಾದವನು

ಹಾಗೂ ತನ್ನ ಕಾಯಕಕ್ಕೆ ಗೌರವದಿಂದ ನಡೆದುಕೊಂಡವನು. ತಾವು ಮಾಡುವ ಕೆಲಸದಲ್ಲಿ ದೇವರನ್ನು ಕಾಣುವ ಇಲ್ಲಿನ ಶರಣರು ತಮ್ಮ ಕೆಲಸದ ಮೇಲೆ ಶ್ರದ್ಧೆಯನ್ನು ನಿಷ್ಠೆಯನ್ನು ಹೊಂದಿದ್ದರು.

ಬಸವಣ್ಣನ ಹಲವಾರು ವಚನಗಳಲ್ಲಿ ನಾವು ಕಾಯಕಕ್ಕೆ ನೀಡಿದ ಮಹತ್ವವನ್ನು ಗುರುತಿಸಬಹುದು. ಹಾಗೆಯೇ ಬಸವಣ್ಣನ ಅನುಭವ ಮಂಟಪದಲ್ಲಿ ಕಂಡುಬರುವ ಹಲವಾರು ಜನ ಶರಣರು ಕಾಯಕ ಜೀವಿಗಳೇ ಆಗಿದ್ದರು ಇಲ್ಲಿ ಯಾವುದೇ ತಾರತಮ್ಯವಿರಲಿಲ್ಲ ಯಾವ ಕೆಲಸಗಳಿಗೂ ಅವಮರ್ಯಾದೆ, ಅಗೌರವಗಳಿರಲಿಲ್ಲ. ಪ್ರತಿಯೊಂದು ಕೆಲಸವನ್ನು ಗೌರವಿಸುವ ಪ್ರತಿಯೊಬ್ಬ ವ್ಯಕ್ತಿಯನ್ನು ಗೌರವಿಸುವ ಪ್ರತೀತಿ ನಾವಿಲ್ಲಿ ಗುರುತಿಸಬಹುದು. ಈ ಮೂಲಕ ಇಡೀ ಲೋಕಕ್ಕೆ ಪ್ರತಿ ಕೆಲಸವೂ ಕೂಡ ಶ್ರೇಷ್ಠವೆಂದು ಸಾರಿದ ಶರಣರು ಅಥವಾ ವಚನಕಾರರು ಕಾಯಕಕ್ಕೆ ಹೆಚ್ಚಿನ ಮಹತ್ವ ನೀಡಿದರು.

"ಮಾರ್ಕ್ಸ್ ದುಡಿತಕ್ಕೆ ತಕ್ಕ ಕೂಲಿ ದೊರೆಯುವಂತೆ ಪ್ರಯತ್ನಿಸಬೇಕಾದರೆ ಹೋರಾಟ ಮಾಡಬೇಕಾಯಿತು. ಜಗತ್ತಿನ ಕೂಲಿಕಾರರೆಲ್ಲರನ್ನು ಒಂದುಗೂಡಿಸಲು ಪ್ರಯತ್ನಿಸಿದ. ಈ ದೃಷ್ಟಿಯಿಂದ ಇವನ ಪ್ರಯತ್ನ ಗಮನಿಸುವಂತಹದೇ. ಆದರೆ ಬಸವಣ್ಣನು ಮಾಡಿದುದು ಮಾರ್ಕ್ಸ್ ಗಿಂತ ಮುಂದಿನ ಮೆಟ್ಟಿಲು. ಈತ ಬರೀ ದುಡಿತ ಹಾಗೂ ಅದಕ್ಕೆ ತಕ್ಕ ಸಂಬಳ ಪ್ರಯತ್ನಿಸಲಿಲ್ಲ ಅದನ್ನು ಮೀರಿದ ಆಧ್ಯಾತ್ಮಿಕ ತಳಹದಿಯ ಮೇಲೆ ಕಾಯಕತ್ವದ ಮಹಲು ನಿರ್ಮಿಸಿದ" (ವಚನ ಸಾಹಿತ್ಯ, ಡಾ. ಎಂ.ಬಿ ಹೂಗಾರ, ಪುಟ 73) ದುಡಿತದಲ್ಲೂ ಶ್ರದ್ಧೆ ನಿಷ್ಠೆ ಪ್ರಾಮಾಣಿಕತೆ ಇರಬೇಕು ಎಂಬುದು ಬಸವಣ್ಣನ ಮುಖ್ಯ ಕಾಳಜಿಯಾಗಿತ್ತು.

'ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ' ಎಂಬ ಮಾತು ಇಲ್ಲಿನ ಪ್ರತಿಯೊಬ್ಬ ಶರಣನ ಕೆಲಸವನ್ನು ಸೂಚಿಸುವಂಥದ್ದು. ಅಂಬಿಗರ ಚೌಡಯ್ಯ, ನುಲಿಯ ಚಂದಯ್ಯ, ಡೋಹರ ಕಕ್ಕಯ್ಯ, ಸೂಳೇ ಸಂಕವ್ವ, ಆಯ್ದಕ್ಕಿ ಲಕ್ಕಮ್ಮ, ಆಯ್ದಕ್ಕಿ ಮಾರಯ್ಯ, ಮಾದರ ಧೂಳಯ್ಯ, ಮಾದರ ಚೆನ್ನಯ್ಯ ಇವರನ್ನು ಸೇರಿದಂತೆ ಹಲವಾರು ಜನ ವಚನಕಾರರು ತಮ್ಮ ಹೆಸರಿಗೆ ತಮ್ಮ ಕಾಯಕವನ್ನು ಸೇರಿಸಿಕೊಂಡವರು ಅದರಂತೆ ತಮ್ಮ ಕಾಯಕಕ್ಕೆ ಗೌರವ ನೀಡಿದವರಾಗಿದ್ದಾರೆ. ರೆಮ್ಮೆವ್ವೆ, ಕಾಳವ್ವೆ ಸಹ ನೂಲುವ ಕಾಯಕದವರಾಗಿದ್ದರು. ಹೀಗೆ ಕಾಯಕವೇ ಕೈಲಾಸ ಎನ್ನುವ ಮೂಲಕ ಕಾಯಕದಲ್ಲೆ ದೇವರನ್ನು ಕಾಣುವ ಅಥವಾ ಸ್ವರ್ಗವನ್ನು ಕಾಣುವ ಪ್ರಯತ್ನ ಮಾಡಿದ್ದಾರೆ.

"ಕಾಯಕದಲ್ಲಿ ನಿರತನಾದಡೆ
ಗುರುದರ್ಶನವಾದಡೂ ಮರೆಯಬೇಕು
ಲಿಂಗಪೂಜೆಯಾದಡೂ ಮರೆಯಬೇಕು
ಜಂಗಮ ಮುಂದಿದ್ದಡೂ ಹಂಗು ಹರಿಯಬೇಕು.
ಕಾಯಕವೇ ಕೈಲಾಸವಾದ ಕಾರಣ.
ಅಮರೇಶ್ವರ ಲಿಂಗವಾಯಿತ್ತಾದರೂ ಕಾಯಕದೊಳಗು" (ಆಯ್ದಕ್ಕಿ ಮಾರಯ್ಯ).

(ಪ್ರೊ.ಲಲಿತಾಂಬಾ ವೃಷಭೇಂದ್ರಸ್ವಾಮಿ, (2009) ವಚನಾಂಜಲಿ – ಕಾವ್ಯಾಂಜಲಿ (ವಚನವ್ಯಾಖ್ಯಾನ ಮತ್ತು ಸ್ವತಂತ್ರ ಕವನಗಳು) ಪು–46).

ಈ ವಚನದ ಮೂಲಕ ಶರಣರು ಕಾಯಕಕ್ಕೆ ನೀಡುತ್ತಿದ್ದ ಮಹತ್ವವನ್ನು ಕಾಣಬಹುದು. ಆಯ್ದಕ್ಕಿ ಮಾರಯ್ಯ ಕಾಯಕ ಮುಗಿಸಿ ಬರುವಾಗ ಹೆಚ್ಚು ಅಕ್ಕಿ ತಂದಿರುವುದನ್ನು ಕಂಡ ಆಯ್ದಕ್ಕಿ ಲಕ್ಕಮ್ಮ 'ಈಸಕ್ಕಿಯಾಸೆ ನಿಮಗೇಕೆ' ಎಂಬ ಮಾತನ್ನು ಹೇಳುತ್ತಾಳೆ. ಈ ಮಾತು ಸಹ ಅವರು ಕಾಯಕಕ್ಕೆ ನೀಡುತ್ತಿದ್ದ ಗೌರವವನ್ನು ತಿಳಿಸುತ್ತದೆ. ಇಲ್ಲಿ 'ಬಹುಪಾಲು ವಚನಕಾರರಿಗೆ ವಚನರಚನೆ ಎಂಬುದು 'ಕಲೆ' ಅಲ್ಲ; ಅದೊಂದು ಕ್ರಿಯೆ' ಕಾಯಕ' ಎಂಬುದಾಗಿತ್ತು. ಎಂಬ ಚಿದಾನಂದ ಮೂರ್ತಿ ಅವರ ಮಾತು ಇಲ್ಲಿ ಪ್ರಮುಖವೆನಿಸುತ್ತದೆ.

ಇವರಿಗೆ ಮಾಡುವ ಕಾಯಕದಲ್ಲಿ ಗೌರವವಿದೆ. ಶ್ರದ್ಧೆ ಇದೆ. ಯಾವುದೇ ಅಳುಕಿಲ್ಲದೆ ತಾವು ಮಾಡುವ ಕೆಲಸದಲ್ಲಿ ದೇವರನ್ನು ಕಾಣುವ ಪ್ರಯತ್ನ ಹಾಗೂ ಕಾಯಕದ ಮೇಲಿನ ಆಶಾಭಾವನೆ ಇವರಲ್ಲಿ ಕಾಣಿಸಿಕೊಳ್ಳುತ್ತದೆ. ದುಡಿಯದೇ ಜೀವನ ಸಾಗಿಸುವವನು ಶರಣನೆ ಅಲ್ಲ ಎಂಬುದು ಇವರ ನಂಬಿಕೆ. ಕಾಯಕದಲ್ಲಿ ಸತ್ಯ ಮತ್ತು ಶುದ್ಧತೆಯನ್ನು ಕಾಪಾಡಿಕೊಂಡವರು ಅದರಂತೆ ದುಡಿದು ಬದುಕಿದವರು ಇಲ್ಲಿನ ಶರಣರು. ಪತಿಯ ಜೊತೆ ಜೊತೆಗೆ ಹೆಜ್ಜೆ ಹಾಕುವ ಸತಿಯರು ಕೂಡ ಪತಿಯ ಕಾಯಕದಲ್ಲಿ ಜೊತೆಯಾದರು. ಪತಿಯ ಕಾಯಕದಲ್ಲಿ ಕಾಳಜಿ ತೋರಿದರು ಜೊತೆಗೆ ಪ್ರೋತ್ಸಾಹವನ್ನು ನೀಡಿದರು. ಸ್ವಾಭಿಮಾನಯುತವಾದ ಬದುಕಿಗೆ ಯಾವ ಕೆಲಸವಾದರೇನು? ಬೇಡಿ ತಿನ್ನುವುದಕ್ಕಿಂತ ದುಡಿದು ತಿನ್ನುವುದು ಆತ್ಮಗೌರವವನ್ನು ಹೆಚ್ಚಿಸುತ್ತದೆ ಎಂಬುದು ಶರಣರನ್ನು ಕಂಡಾಗ ತಿಳಿಯಬಹುದು. ಅವರ ಹೆಸರುಗಳಲ್ಲಿಯೇ ಅವರ ಕಾಯಕ ಅಡಕಗೊಂಡಿದೆ ಇದರಲ್ಲಿಯೇ ಶರಣರು ಕಾಯಕಕ್ಕೆ ನೀಡುತ್ತಿದ್ದ ಮಹತ್ವವನ್ನು ಗಮನಿಸಬಹುದು. ಈ ಮೂಲಕ ಶರಣರು ದುಡಿಮೆಯ ಪವಿತ್ರತೆಯನ್ನು ಜಗತ್ತಿಗೆ ಸಾರಿದರು.

ಪುರೋಹಿತ ವರ್ಗವು ಪ್ರತಿಯೊಬ್ಬ ಕೆಳವರ್ಗದ ಜನರನ್ನು ತಮ್ಮ ಕೆಲಸ ಕಾರ್ಯಗಳಿಗೆ ಬಳಸಿಕೊಂಡು ಅವರನ್ನು ದೇವಾಲಯದಿಂದ ಹಾಗೂ ತಮ್ಮಿಂದ ದೂರವಿರಿಸಿತು ಇದನ್ನು ವಿರೋಧಿಸುವ ಮೂಲಕ ಅನುಭವ ಮಂಟಪದಲ್ಲಿ ಕಾಯಕಜೀವಿಗಳಿಗೆ ವಿಶೇಷ ಸ್ಥಾನವನ್ನು ಕಲ್ಪಿಸಿಕೊಡಲಾಯಿತು. ಕಾಯಕದಲ್ಲಿ ತೃಪ್ತಿ ಹೊಂದಿದ ಶರಣರು ತಮ್ಮ ಕಾಯಕಕ್ಕೆ ಅಥವಾ ಇತರ ಕಾಯಕಗಳಿಗೆ ಅಗೌರವ ತೋರಿದವರಲ್ಲ ಕೆಲಸದಲ್ಲೂ ಭಕ್ತಿಯನ್ನು ಇಟ್ಟು ಗೌರವಿಸಿದವರಾಗಿದ್ದಾರೆ. ಅಪ್ರಾಮಾಣಿಕತೆಯಿಂದ ಹಣಗಳಿಸಿದವರನ್ನು ಟೀಕೆಗೂ ಗುರಿಪಡಿಸಿದ್ದಾರೆ. ಇಲ್ಲಿನ ಶರಣರು ಯಾವುದೇ ಆಸೆ ಆಮೀಷಗಳಿಗಾಗಿ ದುಡಿಯದೇ ಆತ್ಮೋದ್ಧಾರಕ್ಕಾಗಿ ದುಡಿದಿದ್ದಾರೆ. ದುಡಿದು ಗಳಿಸಿದ ಹಣವನ್ನು ದಾನ ಮಾಡಿ ದೊಡ್ಡತನ ಮೆರೆದಿದ್ದಾರೆ. ಇವರ ಕಾಯಕ ಇವರ ಜೀವನೋಪಾಯಕ್ಕೆ ಮಾತ್ರವಲ್ಲದೆ ಒಂದು ಬಗೆಯ ಅನ್ಯಾಯದ ವಿರುದ್ಧವಾದ ಪ್ರತಿಭಟನೆಯು ಆಗಿತ್ತು. ಕಾಯಕವೇ ಇವರ ಪ್ರತಿಭಟನೆಯವಾಗಿತ್ತು ಎಂದರೆ ತಪ್ಪಾಗಲಾರದು. ಈ ರೀತಿಯಲ್ಲಿ 12ನೇ ಶತಮಾನದಲ್ಲಿ ಕಂಡುಬರುವ ಶರಣರು ಕಾಯಕಕ್ಕೆ ನೀಡುತ್ತಿದ್ದ ಮಹತ್ವವನ್ನು ಕಾಣಬಹುದು.

ಪರಾಮರ್ಶನ ಗ್ರಂಥಗಳು :

1. ಚಿದಾನಂದಮೂರ್ತಿ ಎಂ, (2009), ವಚನ ಸಾಹಿತ್ಯ, ಸಪ್ನ ಬುಕ್ ಹೌಸ್, ಬೆಂಗಳೂರು.
2. ಪ್ರೊ, ಲಲಿತಾಂಬಾ ವೃಷಭೇಂದ್ರಸ್ವಾಮಿ, (2009) ವಚನಾಂಜಲಿ – ಕಾವ್ಯಾಂಜಲಿ (ವಚನವ್ಯಾಖ್ಯಾನ ಮತ್ತು ಸ್ವತಂತ್ರ ಕವನಗಳು), ಪ್ರಸಾದ ಪ್ರಕಾಶನ, ಧಾರವಾಡ.
3. ಭೂಸನೂರ ಮಠ (ಸಂ), (2021), ಶ್ಯೂನ ಸಂಪಾದನೆಯ ಪರಾಮರ್ಶೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.
4. ಶ್ರೀ ನಿವಾಸ ಮೂರ್ತಿ,ಎಂ.ಆರ್, (2023), ವಚನ ಧರ್ಮಸಾರ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
5. ಸವಿತಾ ಬನ್ನಡಿ, (2010), ಆಲಯವು ಬಯಲಾಗಿ, ತಿಂಗಳು ಬೆಳಕು ಪ್ರಕಾಶನ, ಕುಂದಪುರ.
6. ಹೂಗಾರ್. ಎಂ.ಬಿ, (2022), ವಚನ ಸಾಹಿತ್ಯ, ಕನಾ?ಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

***

'ಹೊಸಗನ್ನಡ ನುಡಿಗನ್ನಡಿ ಎಂಬ ಹೊಸಗನ್ನಡ ವ್ಯಾಕರಣವು' ಅವಲೋಕನ

ಸುಂದ್ರೇಶ್ ಕೆ.ಎಸ್.
ಸಂಶೋಧನಾರ್ಥಿ
ಎಸ್.ಜೆ.ಬಿ.ಸಿ.ಎಂ.ಎಸ್ ಕನ್ನಡ ಸಂಶೋಧನಾ ಕೇಂದ್ರ
ಮೈಸೂರು ವಿಶ್ವವಿದ್ಯಾಲಯ
ಕೆಂಗೇರಿ, ಬೆಂಗಳೂರು.

1

ಪ್ರಮುಖ ಪದಗಳು
ವ್ಯಾಕರಣ, ಪೀಠಿಕೆ, ಭಾಷೆ, ಕೃತಿ

ಎರಡು ಸಾವಿರ ವರ್ಷಗಳ ಇತಿಹಾಸವಿರುವ ಕನ್ನಡ ಭಾಷೆಯು ವ್ಯಾಕರಣಕ್ಕೆ ಸಂಬಂಧಿಸಿದಂತೆ ರಚನೆಯಾದ ಕೃತಿಗಳ ಸಂಖ್ಯೆ 19ನೇ ಶತಮಾನದವರೆಗೆ ಬೆರಳೆಣಿಕೆಯಷ್ಟು ಮಾತ್ರ ಅವುಗಳೆಂದರೆ ಎರಡನೇ ನಾಗವರ್ಮನ ಕರ್ಣಾಟ ಭಾಷಾ ಭೂಷಣಂ,[ಸಂಸ್ಕೃತ ಸೂತ್ರ ಪದ್ಧತಿಗೆ ಅನುಗುಣವಾಗಿ ರಚನೆಯಾಗಿದೆ] ಶಬ್ದಸ್ಮೃತಿ, [ಕಾವ್ಯಾವಲೋಕನ ಎಂಬ ಮೀಮಾಂಸೆ ಗ್ರಂಥದ ಮೊದಲನೇ ಅಧ್ಯಾಯ] ಕೇಶಿರಾಜನ ಶಬ್ದಮಣಿದರ್ಪಣ, ಭಟ್ಟಾಕಳಂಕನ ಕರ್ಣಾಟ ಶಬ್ದಾನುಶಾಸನ. ವ್ಯಾಕರಣ ಕೃತಿಗಳಲ್ಲದೆ ಕವಿರಾಜಮಾರ್ಗ ಮತ್ತು ಇತರೆ ಕೃತಿಗಳಲ್ಲಿ ಕನ್ನಡ ವ್ಯಾಕರಣಕ್ಕೆ ಸಂಬಂಧಿಸಿದ ವಿಚಾರಗಳು ಪ್ರಸ್ತಾಪವಾಗಿವೆ.

ಬ್ರಿಟೀಷ್ ಆಳ್ವಿಕೆಯ ಸಂದರ್ಭದಲ್ಲಿ ಆಡಳಿತಗಾರರಿಗೆ ಮತ್ತು ಮಿಶನರಿ ವಿದ್ವಾಂಸರುಗಳಿಗೆ ಸ್ಥಳೀಯ ಭಾಷೆಯನ್ನು ಕಲಿಯುವ ಅನಿವಾರ್ಯತೆ ಉಂಟಾದಾಗ ಕನ್ನಡ ಭಾಷೆಗೆ ಮತ್ತು ವ್ಯಾಕರಣಕ್ಕೆ

ಸಂಬಂಧಿಸಿದಂತೆ ಕೃತಿಗಳು ಮಿಶನರಿಗಳಿಂದ ರಚನೆಯಾಗ ತೊಡಗಿದವು. ಅವುಗಳಲ್ಲಿ ಮೊದಲನೆಯದೆಂದರೆ ಕಲ್ಕತ್ತೆಯ ಸೇರಾಂಪುರದ ಫೋರ್ಟ್ ವಿಲಿಯಂ ಕಾಲೇಜಿನಲ್ಲಿ ಸಂಸ್ಕೃತ, ಬೆಂಗಾಳಿ, ಮರಾಠಿ ಭಾಷೆಗಳ ಪ್ರೊಫೆಸರ್ ಆಗಿದ್ದ ವಿಲಿಯಂ ಕೇರಿ ಅವರ ಎ ಗ್ರಾಮರ್ ಆಫ್ ದಿ ಕರ್ಣಾಟ ಲಾಂಗ್ವೇಜ್ [A Grammar of The Kurnata Language]. ಎರಡನೆಯದು ಜಾನ್ ಮೆಕೆರಲ್‌ನ A Grammar of the Carnataca language (1820) ಆನಂತರ ದೇಶಿಯ ವಿದ್ವಾಂಸರಾದ ಶ್ರೀರಂಗಪಟ್ಟಣದ ಕೃಷ್ಣಮಾಚಾರ್ಯರಿಂದ 1838 ರಲ್ಲಿ 'ಹೊಸಗನ್ನಡ ನುಡಿಗನ್ನಡಿ ಎಂಬ ಹೊಸಗನ್ನಡ ವ್ಯಾಕರಣವು' ರಚನೆಯಾಯಿತು.

ಜಾನ್ ಮೆಕರಲ್‌ನ ವ್ಯಾಕರಣ ಕೃತಿಯನ್ನು 'ಹೊಸಗನ್ನಡ ನುಡಿಗನ್ನಡಿ ಎಂಬ ಹೊಸಗನ್ನಡ ವ್ಯಾಕರಣವು' ಕೃತಿ ಅನುಸರಿಸಿದೆ. ಈ ಸಂದರ್ಭದಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಲೇಖಕರು ಪೀಠಿಕೆಯಲ್ಲಿ ಜಾನ್ ಮೆಕರಲ್‌ನ ಹೆಸರು ಪ್ರಸ್ತಾಪಿಸುವುದು ಹಾಗೂ ವಿಲಿಯಂ ಕೇರಿಯ ಹೆಸರನ್ನು ಪ್ರಸ್ತಾಪಿಸದೆ ಇರುವುದು.

ೀಲಖಿಲರ ಮೊದಲ ಮುದ್ರಣದ ಮುಖಪುಟದಲ್ಲಿ ಇಂಗ್ಲಿಷ್‌ನಲ್ಲಿ ಈ ರೀತಿ ಇದೆ.

HOSA GANNADA NUDI GANNADI

A

GRAMMAR

OF

THE MODERN CANARESE LANGUAGE

BY

KRISHNAMACHARYA

OF

SRIRANGAPATTANAM

PLEADER IN THE COURT OF SUDDER ASAULUT AT MADRAS

Madras - printed a Asylum press, Mount Road by G. CALDER and published E MANDEK

1838

೧೮೩೮ರ ಮೊದಲ ಮುದ್ರಣದ ಮುಖಪುಟದಲ್ಲಿ ಕನ್ನಡದಲ್ಲಿ ಈ ರೀತಿ ಇದೆ.

ಶ್ರೀ

ಚೆನ್ನಪಟ್ಟಣದಲ್ಲಿರುವ ಸದರದಾಲತ್ತು ಕೋರ್ಟಿನಲ್ಲಿ

ಪ್ಲೀಡರಾಗಿರುವ

ಶ್ರೀರಂಗಪಟ್ಟಣದ

ಕೃಷ್ಣಮಾಚಾರ್ಯರು

ಮಾಡಿದಂಥಾ

ಹೊಸಗನ್ನಡ ನುಡಿಗನ್ನಡಿ

ಯೆಂಬ

ಹೊಸಗನ್ನಡ ವ್ಯಾಕರಣವು

ಇದು ಚೆನ್ನಪಟ್ಟಣದಲ್ಲಿ ಮೌಂಟು ರೋಡಿನಲ್ಲಿರುವ ಮೇಲಸ್ನಲ್ಲವೆಂಬ

ಅಚ್ಚಾಫೀಸಿನ ಶಾಲಿವಾಹನ ಶಕಾಬ್ದ ೧೭೬೧ನೇ ವಿಳಂಬಿ ಸಂವತ್ಸರದಲ್ಲಿ ಏಳುಂಬೂರು

ಅರುಣಾಚಲದಿಂದ ಅಚ್ಚು ಹಾಕಿಸಿ ಪ್ರಸಿದ್ಧಿ ಮಾಡಲ್ಪಟ್ಟಿತು

೧೮೩೮

ಶ್ರೀರಂಗಪಟ್ಟಣದ ಕೃಷ್ಣಮಾಚಾರ್ಯರು ಜನಿಸಿದ್ದು ಈಗಿನ ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣದಲ್ಲಿ, ನಂತರ ಚನ್ನಪಟ್ಟಣ (ಈಗಿನ ಚೆನ್ನೈ, ತಮಿಳುನಾಡು)ದ ಸದರದಾಲತ್ತು ಕೋರ್ಟಿನಲ್ಲಿ ಪ್ಲೀಡರ್ ಆಗಿದ್ದ ಸಂದರ್ಭದಲ್ಲಿ ಹಾರ್ಕಿನ್ ಸೂಚನೆಯ ಮೇರೆಗೆ ಈ ಕೃತಿಯನ್ನು ಬರೆಯುತ್ತಾರೆ.

ಕೃತಿಯ ಆರಂಭದಲ್ಲಿ ಲೇಖಕರೆ ಬರೆದ 'ಹೊಸಗನ್ನಡ ನುಡಿಗನ್ನಡಿ ಪೀಠಿಕೆ' ಎಂಬ ಹೆಸರಿನ ಪೀಠಿಕೆ ಎಂಟು ಪುಟಗಳಲ್ಲಿದ್ದು ಕೃತಿಯ ಪ್ರವೇಶಕ್ಕೆ ಮುನ್ನುಡಿಯಂತಿದ್ದು, ಆ ಕಾಲಘಟ್ಟದಲ್ಲಿ ಭಾಷೆಯ ಉಗಮ ಮತ್ತು ವರ್ಗೀಕರಣದ ಬಗ್ಗೆ ನಡೆಯುತ್ತಿದ್ದ ಸಂಶೋಧನೆಗಳ ತಿಳಿವು ನಮಗೆ ಲಭ್ಯವಾಗುತ್ತದೆ. ಈ ಕೃತಿ ಬರೆಯಲು ಕಾರಣವನ್ನು ಪೀಠಿಕೆಯಲ್ಲಿ ಕೃಷ್ಣಮಾಚಾರ್ಯರು ಹೀಗೆ ತಿಳಿಸುತ್ತಾರೆ.

"ಈ ವ್ಯಾಕರಣವು ತತ್ಕಾಲದಲ್ಲಿ ಚನ್ನಪಟ್ಟಣದಲ್ಲಿ ಸದರದಾಲತ್ತು ಕೋರ್ಟಿನಲ್ಲಿ ವಕೀಲಾಗಿಯೂ ಪಂಡಿತೋದ್ಯೋಗಕ್ಕೆ ಪಡೆದವನಾಗಿಯೂ ಯೋಗ್ಯತಾಪತ್ರಿಕೆಯನ್ನು ಪಡೆದವನಾಗಿಯೂ ಇರುವಂಥಾ ಶ್ರೀರಂಗಪಟ್ಟಣದ ಕೃಷ್ಣಮಾಚಾರ್ಯನೆಂಬ ನನ್ನಿಂದ ಮಾಡಲ್ಪಟ್ಟಿತು. ಆದರೆ ನಾನು ಕಾಲೀಜಿನಲ್ಲಿ ಪಂಡಿತ ವಿದ್ಯಾರ್ಥಿಯುದ್ಯೋಗದಲ್ಲಿರುವಾಗ ಕಾಲೀಜು ಬೋರ್ಡಿಗೆ ಸಿಕ್ರಿಟೆರಿಯಾಗಿದ್ದ ಕೆಪ್ಟನ್ ಹಾರ್ಕಿನನು ದೊರೆಯವರು,

ಇಂಗಲೀಷು, ಸಂಸ್ಕೃತವು ತಿಳಿಯದ ವಿದ್ಯಾರ್ಥಿಗಳಿಗೆ ಸುಲಭವಾಗಿ ತಿಳಿಯುವ ಹಾಂಗೆ ಕನ್ನಡದಲ್ಲಿ ಪ್ರಶ್ನೋತ್ತರ ರೂಪವಾಗೊಂದು ವ್ಯಾಕರಣವ ಮಾಡಹೇಳಿದ್ದರಿಂದ ಈ ಗ್ರಂಥವನ್ನು ನಾನು ಮಾಡಿದೆನು. ಅವರು ತ್ವರೆಯಾಗಿ ತಮ್ಮ ಸ್ವದೇಶಕ್ಕೆ ಹೊರಟು ಹೋದದ್ದರಿಂದಲೂ, ಅದು ಮೊದಲು ಕನ್ನಡ ಭಾಷೆಯಲ್ಲಭಿಮಾನವುಳ್ಳ ದೊರೆಗಳು ಯಾರು ಶಿಕ್ಕದ್ದರಿಂದಲೂ ಇದು ಪ್ರಸಿದ್ಧಿಯನ್ನು ಹೊಂದದೇ ಇತ್ತು.

ಈಗ ಸಿವಿಲುದ್ಯೋಗಸ್ಥರಾದ ಮಹಾರಾಜ ಶ್ರೀ ಜಾನ್‌ವಾಕರು ದೊರೆಯವರು ಸಂಸ್ಕೃತ ಕರ್ಣಾಟಕ ದ್ರಾವಿಡ ಹಿಂದುಸ್ಥಾನಿ ಮೊದಲಾದ ಈ ದೇಶ ಭಾಷೆಗಳಲ್ಲೆಲ್ಲಾ ಅತಿಶ್ರಮ ಪಟ್ಟವರಾಗಿಯೂ, ಪರೋಪಕಾರಾರ್ಥವಾಗಿ ಈ ಭಾಷೆಗಳಲ್ಲಿ ಸ್ವದೇಹಾಯಾಸದಿಂದಲೂ ಅರ್ಥವ್ಯಯದಿಂದಲೂ, ಅನೇಕೋಪಯುಕ್ತ ಗ್ರಂಥಗಳನ್ನು ಮಾಡಿಯೂ ಮಾಡಿಸಿಯೂ ಮತ್ತೂ ಈ ಭಾಷೆಗಳಲ್ಲಿ ಉಪಯುಕ್ತವಾದ ಗ್ರಂಥಗಳನ್ನು ಹುಡುಕುವವರಾಗಿಯೂ ಇರುವದ್ದರಿಂದ ಅವರು ಈ ಗ್ರಂಥದ ಕೈ ಬರಹದ ಪುಸ್ತಕವನ್ನು ಸಮಗ್ರವಾಗೋದಿ, ಇದರಲ್ಲಿ ಜನಗಳಿಗಿರುವ ಪ್ರಯೋಜನವನ್ನು ನೋಡಿ, ಇದನ್ನು ಲೋಕೋಪಕಾರಾರ್ಥವಾಗಿ ನನಗೆ ದ್ರವ್ಯವ್ಯಯವಿಲ್ಲದೆ ಅಚ್ಚು ಹಾಕಿಸಿ ಪ್ರಸಿದ್ಧೀ ಮಾಡಿಸುತ್ತೇವೆಂದು ಹೇಳಿದ್ದರಿಂದಲೂ, ಕಡಮೇ ಭಾಷೆಗಳ ಹಾಂಗೆ ಅಭಿಮಾನಿ ದುರ್ಲಭವಾದ್ದರಿಂದಲೂ ಈ ಗ್ರಂಥವನ್ನು ಅವರ ಹೆಸರಿಗೆ ಅಂಕಿತವ ಕೊಟ್ಟು, ಗ್ರಂಥವನ್ನು ಸಹಾ ಅವರಿಗೆ ಕೊಟ್ಟುಬಿಟ್ಟೆನು"

ಈ ಕೃತಿಯಲ್ಲಿ ಒಟ್ಟು ಹತ್ತು ಪ್ರಕರಣಗಳಿದ್ದು ಅವುಗಳೆಂದರೆ

1. ಸಂಜ್ಞಾಪ್ರಕರಣ
2. ಸಂಧಿ ಪ್ರಕರಣ
3. ಶಬ್ದ ಪ್ರಕರಣ
4. ಆಖ್ಯಾತ ಪ್ರಕರಣ
5. ಕೃತ್ ಪ್ರಕರಣ
6. ತದ್ಧಿತ ಪ್ರಕರಣ
7. ತತ್ಸಮ ಪ್ರಕರಣ
8. ತದ್ಭವ ಪ್ರಕರಣ
9. ಸಮಾಸ ಪ್ರಕರಣ
10. ಪ್ರಯೋಗ ಪ್ರಕರಣ

'ಹೊಸಗನ್ನಡ ನುಡಿಗನ್ನಡಿ ಎಂಬ ಹೊಸಗನ್ನಡ ವ್ಯಾಕರಣವು' ಕೃತಿಯಲ್ಲಿ

ವಿಷಯ ನಿರೂಪಣೆ ಪ್ರಶ್ನೆ–ಉತ್ತರ ಮಾದರಿಯಲ್ಲಿದೆ. ಉದಾಹರಣೆಗೆ,

1. ಪ್ರ. ಸಂಧಿ ಪ್ರಕರಣದಲ್ಲೇನು ಹೇಳಲ್ಪಡುತ್ತದೆ?

   ಉ. ಸಂಧಿಕಾರ್ಯವೂ ಪ್ರಕೃತಿಭಾವವೂ ಹೇಳಲ್ಪಡುತ್ತದೆ.

2. ಪ್ರ. ಸಂಧಿಯೆಂದರೇನು?

   ಉ. ಎರಡು ವರ್ಣಗಳನ್ನೆಡೆ ಬಿಡದೆ ಕೂಡಿಸಿ ಹೇಳುವುದು

3. ಪ್ರ. ಸಂಧಿಕಾರ್ಯವೆಂದರೇನು?

   ಉ. ಆಗ ಮಾಡುವ ಲೋಪಾಗಮಾದೇಶಗಳು ಸಂಧಿಕಾರ್ಯವು.

4. ಪ್ರ. ಪ್ರಕೃತಿಭಾವವೆಂದರೇನು?

   ಉ. ಸಂಧಿಕಾರ್ಯವಾದ ಲೋಪಗಮಾದೇಶಗಳ ಮಾಡದೆ ಇರುವಿಕೆ.

5. ಪ್ರ. ಎಲ್ಲಾ ಕಡೆಯಲ್ಲೂ ಸಂಧಿ ನಿತ್ಯವೋ

   ಉ. ಒಂದೇ ಪದದಲ್ಲಿ ಪೂರ್ವೋತ್ತರ ವರ್ಣಗಳಿಗೆ ನಿತ್ಯವೂ ಒಂದೇ ಪದದಲ್ಲಿ ಪ್ರಕೃತಿ ಪ್ರತ್ಯಯಾಗಮಾದೇಶಗಳಿಗೆ ಸಂಧಿನಿತ್ಯವೂ, ವಾಕ್ಯದಲ್ಲಿ ಮನಸ್ಸು ಬಂದ ಹಾಂಗೆ ಸಂಧಿ ಮಾಡಿದರೂ ಮಾಡದಿದ್ದರೂ ಚಿಂತೆಯಿಲ್ಲವು.

ವಿದೇಶಿ ವಿದ್ವಾಂಸರಿಂದ ಪ್ರಾರಂಭವಾದ ಹೊಸಗನ್ನಡ ವ್ಯಾಕರಣದ ಅಧ್ಯಯನಕ್ಕೆ ಮೊದಲ ದೇಸಿ ವಿದ್ವಾಂಸನಾದ ಶ್ರೀರಂಗಪಟ್ಟಣದ ಕೃಷ್ಣಮಾಚಾರ್ಯರ ಹೊಸಗನ್ನಡ ನುಡಿಗನ್ನಡಿ ಎಂಬ ಹೊಸಗನ್ನಡ ವ್ಯಾಕರಣವು ಮಹತ್ತರವಾದುದು. ಇದನ್ನು ವಾಲ್ಟರ್ ಎಲಿಯಟನ AS YOUR HONOURS KIND AND LIBERAL CONSIDER ಈ ಮಾತುಗಳೆ ಸಾಕ್ಷೀಕರಿಸುತ್ತವೆ.

ಉನ್ನತ ಶಿಕ್ಷಣದಲ್ಲಿ ಖಿನ್ನತೆಯ ಪ್ರವೃತ್ತಿಗಳು: ವಯಸ್ಸು, ಲಿಂಗ ಮತ್ತು ಶೈಕ್ಷಣಿಕ ಪ್ರಮುಖ ಪಾತ್ರಗಳು

ಡಾ. ವಿಜಯಾ ಯು. ಪಾಟೀಲ
ಗೃಹ ವಿಜ್ಞಾನದ
ಸಹಾಯಕ ಪ್ರಾಧ್ಯಾಪಕರು ಮತ್ತು
ಪ್ರಾಂಶುಪಾಲರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಅಂಕೋಲಾ–581353,
ಜಿಲ್ಲೆ: ಉತ್ತರ ಕನ್ನಡ
patilvijayau@gmail.com

1

ಪ್ರಮುಖ ಪದಗಳು
ಕಾಲೇಜು ವಿದ್ಯಾರ್ಥಿಗಳು, ಖಿನ್ನತೆ, ಲಿಂಗ, ವಯಸ್ಸು ಮತ್ತು ಅಧ್ಯಯನದ ಕ್ಷೇತ್ರ.

ಕಾಲೇಜು ವಿದ್ಯಾರ್ಥಿಗಳು ಸಾಮಾನ್ಯವಾಗಿ ಒತ್ತಡ, ಆತಂಕ, ಖಿನ್ನತೆ, ತಿನ್ನುವ ಅಸ್ವಸ್ಥತೆಗಳು ಮತ್ತು ಅವರ ಜೀವನದ ಮೇಲೆ ನಕಾರಾತ್ಮಕ ಪರಿಣಾಮ ಬೀರುವ ಇತರ ಮಾನಸಿಕ ಸಮಸ್ಯೆಗಳನ್ನು ಅನುಭವಿಸುತ್ತಾರೆ (ಸಲೀಮ್ ಮತ್ತು ಇತರರು, 2013). ವಿಶ್ವ ಆರೋಗ್ಯ ಸಂಸ್ಥೆ (2017) ಪ್ರಕಾರ, ಸುಮಾರು 7.5% ಭಾರತೀಯರು ವೃತ್ತಿಪರ ಹಸ್ತಕ್ಷೇಪದ (ವೃತ್ತಿಪರ ಆಪ್ತಸಮಾಲೋಚನೆ ಅಥವಾ ಚಿಕಿತ್ಸೆ) ಅಗತ್ಯವಿರುವ ಮಾನಸಿಕ ಅಸ್ವಸ್ಥತೆಗಳಿಂದ ಬಳಲುತ್ತಿದ್ದಾರೆ. ಕರ್ನಾಟಕದ ಯುವ ಜನಸಂಖ್ಯೆ (15 24 ವರ್ಷಗಳು) ಒಟ್ಟು ಜನಸಂಖ್ಯೆಯು 19.45% ರಷ್ಟಿದೆ, ಮತ್ತು ಅಂಕೋಲಾ ತಾಲ್ಲೂಕಿನಲ್ಲಿ, ಜನಗಣತಿ ದತ್ತಾಂಶ (2011) ನಿವಾಸಿಗಳಲ್ಲಿ ಸುಮಾರು ಐದನೇ ಒಂದು ಭಾಗದಷ್ಟು ಜನರು ಯುವಕರು ಎಂದು ತೋರಿಸುತ್ತದೆ.

ವಿಧಾನ: ಪ್ರಸ್ತುತ ಅಧ್ಯಯನವು ಕಾಲೇಜು ವಿದ್ಯಾರ್ಥಿಗಳಲ್ಲಿ ಖಿನ್ನತೆ, ಮತ್ತು ಲಿಂಗ, ವಯಸ್ಸು ಮತ್ತು ಅಧ್ಯಯನ ಕ್ಷೇತ್ರದೊಂದಿಗಿನ ಅದರ ಸಂಬಂಧವನ್ನು ಪರಿಶೀಲಿಸಿದೆ. ಅಂಕೋಲಾ ತಾಲ್ಲೂಕಿನ ಒಟ್ಟು 1,455 ಪದವಿಪೂರ್ವ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಸ್ವಯಂ–ವಿನ್ಯಾಸಗೊಳಿಸಿದ

ಪ್ರಶ್ನಾವಳಿಯನ್ನು ಬಳಸಿಕೊಂಡು ವೈಯಕ್ತಿಕ ಡೇಟಾವನ್ನು ಸಂಗ್ರಹಿಸಲಾಯಿತು ಮತ್ತು ಭಟ್ನಾಗರ್ ಮತ್ತು ಇತರರು (2011) ಅಭಿವೃದ್ಧಿಪಡಿಸಿದ ಆತಂಕ ಖಿನ್ನತೆಯ ಒತ್ತಡ ಮಾಪಕ (ADSS) ಬಳಸಿ ಖಿನ್ನತೆಯ ಮಟ್ಟವನ್ನು ನಿರ್ಣಯಿಸಲಾಯಿತು.

ಫಲಿತಾಂಶಗಳು: ಒಟ್ಟಾರೆಯಾಗಿ, 67% ವಿದ್ಯಾರ್ಥಿಗಳು ಸೌಮ್ಯದಿಂದ ತೀವ್ರವರೆಗಿನ ಖಿನ್ನತೆಯನ್ನು ವರದಿ ಮಾಡಿದ್ದಾರೆ, ಆದರೆ 33% ಜನರು ಸಾಮಾನ್ಯ ಎಂದು ವರ್ಗೀಕರಿಸಲ್ಪಟ್ಟಿದ್ದಾರೆ. ಮಧ್ಯಮ (29%) ಮತ್ತು ತೀವ್ರ (26%) ಖಿನ್ನತೆಯು ವಿಶೇಷವಾಗಿ ಸಾಮಾನ್ಯವಾಗಿದೆ. ಲಿಂಗ ವಿಶ್ಲೇಷಣೆಯು 66.5% ಪುರುಷರು ಮತ್ತು 66.9% ಮಹಿಳೆಯರು ಸೌಮ್ಯದಿಂದ ತೀವ್ರ ಖಿನ್ನತೆಯನ್ನು ಅನುಭವಿಸಿದ್ದಾರೆ ಎಂದು ತೋರಿಸಿದೆ. ಲಿಂಗ ಮತ್ತು ಖಿನ್ನತೆಯ ಮಟ್ಟಗಳ ನಡುವೆ ಗಮನಾರ್ಹ ಸಂಬಂಧ ಕಂಡುಬಂದಿದೆ ($?^2(3) = 10.611$, $ϑ < 0.05$). ವಯಸ್ಸಿನ ಪ್ರಕಾರ, 19 ವರ್ಷ ವಯಸ್ಸಿನವರು ಅತಿ ಹೆಚ್ಚು ದರಗಳನ್ನು (69%) ತೋರಿಸಿದ್ದಾರೆ, ನಂತರ 18 ವರ್ಷ ವಯಸ್ಸಿನವರು (68.7%), ಆದರೆ 20+ ವರ್ಷ ವಯಸ್ಸಿನವರು ಕಡಿಮೆ ಹರಡುವಿಕೆಯನ್ನು (61.5%) ತೋರಿಸಿದ್ದಾರೆ. ಕ್ಷೇತ್ರವಾರು, ಕಲಾ ವಿದ್ಯಾರ್ಥಿಗಳಲ್ಲಿ (80%) ಖಿನ್ನತೆ ಅತ್ಯಧಿಕವಾಗಿದೆ, ನಂತರ ವಾಣಿಜ್ಯ (65.2%) ಮತ್ತು ವಿಜ್ಞಾನ (45%).

ಒಟ್ಟಾರೆಯಾಗಿ, ಮಹಿಳೆಯರು (66.9%), 19 ವರ್ಷ ವಯಸ್ಸಿನವರು (69%) ಮತ್ತು ಕಲಾ ವಿದ್ಯಾರ್ಥಿಗಳಲ್ಲಿ (80%) ಹೆಚ್ಚಿನ ದರಗಳನ್ನು ಗಮನಿಸಲಾಗಿದೆ. ಕಾಲೇಜು ವಿದ್ಯಾರ್ಥಿಗಳು ಮಾನಸಿಕ ಸವಾಲುಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಸಹಾಯ ಮಾಡಲು ಉದ್ದೇಶಿತ ಹಸ್ತಕ್ಷೇಪ, ಸಮಾಲೋಚನೆ ಮತ್ತು ಕೌಶಲ್ಯ–ನಿರ್ಮಾಣ ಕಾರ್ಯಕ್ರಮಗಳ ತುರ್ತು ಅಗತ್ಯವನ್ನು ಈ ಸಂಶೋಧನೆಗಳು ಎತ್ತಿ ತೋರಿಸುತ್ತವೆ.

ಪರಿಚಯ :

ಯುವ ವಯಸ್ಸಿನ ಗುಂಪಿಗೆ ಸಾರ್ವತ್ರಿಕವಾಗಿ ಒಪ್ಪಲ್ಪಟ್ಟ ಅಂತರರಾಷ್ಟ್ರೀಯ ವ್ಯಾಖ್ಯಾನವಿಲ್ಲ. ಆದಾಗ್ಯೂ, ಸಂಖ್ಯಾಶಾಸ್ತ್ರೀಯ ಉದ್ದೇಶಗಳಿಗಾಗಿ, ವಿಶ್ವಸಂಸ್ಥೆಯು 15 ರಿಂದ 24 ವರ್ಷ ವಯಸ್ಸಿನ ವ್ಯಕ್ತಿಗಳನ್ನು 'ಯುವಕರು' ಎಂದು ವ್ಯಾಖ್ಯಾನಿಸುತ್ತದೆ. ಇಂದು, 15 ರಿಂದ 24 ವರ್ಷ ವಯಸ್ಸಿನ 1.2 ಬಿಲಿಯನ್ ಯುವಕರಿದ್ದು, ಅವರು ಜಾಗತಿಕ ಜನಸಂಖ್ಯೆಯ ಶೇಕಡಾ 16 ರಷ್ಟಿದ್ದಾರೆ. (ಗಓ ವ್ಯಾಖ್ಯಾನ). 2011 ರಲ್ಲಿ 1211 ಮಿಲಿಯನ್ ತಲುಪಿದ ಮತ್ತು 2021 ರಲ್ಲಿ 1363 ಮಿಲಿಯನ್ ತಲುಪುವ

ನಿರೀಕ್ಷೆಯಿರುವ ಭಾರತದ ಜನಸಂಖ್ಯೆಯು ಭಾರತವನ್ನು ವಿಶ್ವದ ಅತ್ಯಂತ ಕಿರಿಯ ದೇಶಗಳಲ್ಲಿ ಒಂದನ್ನಾಗಿ ಮಾಡುತ್ತದೆ, ಅದರ ಜನಸಂಖ್ಯೆಯ ಶೇಕಡಾ 27.3 ರಷ್ಟು 15–29 ವರ್ಷ ವಯಸ್ಸಿನವರು, ಅಂದರೆ, ಯುವಕರು (ಭಾರತ ಮತ್ತು ರಾಜ್ಯಗಳ ಜನಸಂಖ್ಯಾ ಪ್ರಕ್ಷೇಪಗಳ ತಾಂತ್ರಿಕ ಗುಂಪಿನ ವರದಿ 2011–2036, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ). ಕರ್ನಾಟಕದ ಯುವ ಜನಸಂಖ್ಯೆ (15 ರಿಂದ 24) ಒಟ್ಟು ಜನಸಂಖ್ಯೆಯ 19.45% ರಷ್ಟಿದೆ (statisticstimes.com/demographics/india/karnataka-population php). 2011 ರ ಜನಗಣತಿಯ ಪ್ರಕಾರ, ಅಂಕೋಲಾ ತಾಲ್ಲೂಕಿನ ಒಟ್ಟು ಜನಸಂಖ್ಯೆ 129525 (15–19 ವರ್ಷ ವಯಸ್ಸಿನವರು) ಮತ್ತು 134794 (20–24 ವರ್ಷ ವಯಸ್ಸಿನವರು) ಆಗಿದೆ. ಒಟ್ಟು ಜನಸಂಖ್ಯೆಯ ಸುಮಾರು ಐದನೇ ಒಂದು ಭಾಗ ಯುವಕರು. ಕಾಲೇಜು ವಿದ್ಯಾರ್ಥಿಗಳು ಎದುರಿಸುವ ಸಾಮಾನ್ಯ ಸಮಸ್ಯೆಗಳೆಂದರೆ ಒತ್ತಡ, ಆತಂಕ, ಖಿನ್ನತೆಯ ಲಕ್ಷಣಗಳು, ತಿನ್ನುವ ಸಮಸ್ಯೆಗಳು ಮತ್ತು ಇತರ ಮಾನಸಿಕ ಸಮಸ್ಯೆಗಳು, ಇವು ಅವರ ಜೀವನದ ಮೇಲೆ ಗಮನಾರ್ಹ ನಕಾರಾತ್ಮಕ ಪರಿಣಾಮ ಬೀರುತ್ತವೆ (ಸೇಲಂ, ಇತರರು 2013). ಖಿನ್ನತೆಯ ಕುರಿತಾದ ವಿಶ್ವ ಆರೋಗ್ಯ ಸಂಸ್ಥೆಯ ಇತ್ತೀಚಿನ ವರದಿ (2017) ಪ್ರಕಾರ, ಸುಮಾರು 7.5% ಭಾರತೀಯರು ತಜ್ಞರ ಹಸ್ತಕ್ಷೇಪದ (ವೃತ್ತಿಪರ ಆಪ್ತಸಮಾಲೋಚನೆ ಅಥವಾ ಚಿಕಿತ್ಸೆ) ಅಗತ್ಯವಿರುವ ಪ್ರಮುಖ ಅಥವಾ ಸಣ್ಣ ಮಾನಸಿಕ ಅಸ್ವಸ್ಥತೆಗಳಿಂದ ಬಳಲುತ್ತಿದ್ದಾರೆ. ಕೇಂದ್ರವು ನಿಯೋಜಿಸಿದ ಮತ್ತು ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ (ನಿಮ್ಹಾನ್ಸ್) ಜಾರಿಗೆ ತಂದ ರಾಷ್ಟ್ರೀಯ ಮಾನಸಿಕ ಆರೋಗ್ಯ ಸಮೀಕ್ಷೆ (ಎನ್‌ಎಂಎಚ್‌ಎಸ್) (2016) ಯ ಸಂಶೋಧನೆಗಳ ಪ್ರಕಾರ, ಜನಸಂಖ್ಯೆಯ ಸುಮಾರು 8% ಜನರು ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿದ್ದಾರೆ ಮತ್ತು ಅವರಿಗೆ ಮಾನಸಿಕ ಆರೋಗ್ಯ ಆರೈಕೆಯ ಅಗತ್ಯವಿದೆ.

ವಿಧಾನ

ಉದ್ದೇಶ: ಕಾಲೇಜು ವಿದ್ಯಾರ್ಥಿಗಳಲ್ಲಿ ಖಿನ್ನತೆ ಮತ್ತು ಲಿಂಗ, ವಯಸ್ಸು ಮತ್ತು ಅಧ್ಯಯನ ಕ್ಷೇತ್ರದೊಂದಿಗಿನ ಅದರ ಸಂಬಂಧವನ್ನು ಅಧ್ಯಯನ ಮಾಡುವುದು.

ಉದ್ದೇಶಗಳು:

1. ಕಾಲೇಜು ವಿದ್ಯಾರ್ಥಿಗಳಲ್ಲಿ ಖಿನ್ನತೆಯ ಸಂಭವವನ್ನು ಕಂಡುಹಿಡಿಯುವುದು.
2. ಖಿನ್ನತೆಯೊಂದಿಗೆ ಲಿಂಗ, ವಯಸ್ಸು ಮತ್ತು ಶೈಕ್ಷಣಿಕ ಶಿಸ್ತಿನ ಸಂಬಂಧವನ್ನು

ತಿಳಿಯುವುದು.

ಶೂನ್ಯ ಕಲ್ಪನೆ (Hypothesis)

H01: ಕಾಲೇಜು ವಿದ್ಯಾರ್ಥಿಗಳಲ್ಲಿ ಖಿನ್ನತೆಯ ಹರಡುವಿಕೆ ಕಡಿಮೆ/ನಗಣ್ಯ.

H02: ಕಾಲೇಜು ವಿದ್ಯಾರ್ಥಿಗಳಲ್ಲಿ ಲಿಂಗ, ವಯಸ್ಸು, ಅಧ್ಯಯನ ಕ್ಷೇತ್ರ ಮತ್ತು ಖಿನ್ನತೆಯ ನಡುವೆ ಯಾವುದೇ ಸಂಬಂಧವಿಲ್ಲ

ಅಂಕೋಲಾ ತಾಲ್ಲೂಕಿನ ಪದವಿ ಕಾಲೇಜುಗಳಿಂದ ಒಟ್ಟು 1,455 ಪದವಿ ವಿದ್ಯಾರ್ಥಿಗಳನ್ನು ಅಧ್ಯಯನ ಮಾದರಿಯಾಗಿ ಆಯ್ಕೆ ಮಾಡಲಾಗಿದೆ. ಭಾಗವಹಿಸುವವರ ಬಗ್ಗೆ ವೈಯಕ್ತಿಕ ಮಾಹಿತಿಯನ್ನು ಸ್ವಯಂ–ವಿನ್ಯಾಸಗೊಳಿಸಿದ ಪ್ರಶ್ನಾವಳಿಯನ್ನು ಬಳಸಿಕೊಂಡು ಸಂಗ್ರಹಿಸಲಾಗಿದೆ. ಭಟ್ನಾಗರ್ ಮತ್ತು ಇತರರು (2011) ಅಭಿವೃದ್ಧಿಪಡಿಸಿದ ಆತಂಕ ಖಿನ್ನತೆಯ ಒತ್ತಡ ಮಾಪಕವನ್ನು (ADSS) ಆತಂಕ, ಖಿನ್ನತೆ ಮತ್ತು ಒತ್ತಡದ ಮಟ್ಟವನ್ನು ನಿರ್ಣಯಿಸಲು ಬಳಸಲಾಯಿತು. ತನಿಖಾಧಿಕಾರಿ ವೈಯಕ್ತಿಕವಾಗಿ ಎಲ್ಲಾ ಸ್ಥಳಗಳಿಗೆ ಭೇಟಿ ನೀಡಿದರು.

ಫಲಿತಾಂಶಗಳು ಮತ್ತು ಚರ್ಚೆ

ಚಿತ್ರ 1: ಕಾಲೇಜು ವಿದ್ಯಾರ್ಥಿಗಳಲ್ಲಿ ಖಿನ್ನತೆಯ ಹರಡುವಿಕೆ



ಚಿತ್ರ 1 ಕಾಲೇಜು ವಿದ್ಯಾರ್ಥಿಗಳಲ್ಲಿ ಖಿನ್ನತೆಯ ಹರಡುವಿಕೆಯನ್ನು ವಿವರಿಸುತ್ತದೆ. ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನಲ್ಲಿರುವ ಸರ್ಕಾರಿ ಮತ್ತು ಖಾಸಗಿ ಪದವಿ ಕಾಲೇಜುಗಳಲ್ಲಿ ವಿವಿಧ ವಿಭಾಗಗಳಲ್ಲಿ (ಕಲೆ, ವಾಣಿಜ್ಯ, ವಿಜ್ಞಾನ) ಪದವಿ ಪಡೆಯುತ್ತಿರುವ 1,455 ಪುರುಷ ಮತ್ತು ಮಹಿಳಾ ವಿದ್ಯಾರ್ಥಿಗಳು ಈ ಅಧ್ಯಯನ ಮಾದರಿಯಲ್ಲಿ ಭಾಗವಹಿಸಿದ್ದರು. ಭಟ್ನಾಗರ್ ಮತ್ತು ಇತರರು (2011) ಬರೆದ

ಆತಂಕ, ಖಿನ್ನತೆ ಮತ್ತು ಒತ್ತಡದ ಮಾಪಕವನ್ನು (ADSS) ಈ ವಿದ್ಯಾರ್ಥಿಗಳಲ್ಲಿ ಮಾನಸಿಕ ಆರೋಗ್ಯ ಸಮಸ್ಯೆಗಳನ್ನು ನಿರ್ಣಯಿಸಲು ಬಳಸಲಾಯಿತು, ಆತಂಕ, ಖಿನ್ನತೆ ಮತ್ತು ಒತ್ತಡದ ಮೇಲೆ ಕೇಂದ್ರೀಕರಿಸಲಾಯಿತು. ಈ ಕೆಳಗಿನ ಚರ್ಚೆಯು ವಿದ್ಯಾರ್ಥಿಗಳಲ್ಲಿ ಖಿನ್ನತೆಯ ಮಟ್ಟವನ್ನು ವಿವರಿಸುತ್ತದೆ.

ಚಿತ್ರ 1 ರ ಪ್ರಕಾರ, ಸರಿಸುಮಾರು 67% ಕಾಲೇಜು ವಿದ್ಯಾರ್ಥಿಗಳು ಖಿನ್ನತೆಯಿಂದ ಬಳಲುತ್ತಿದ್ದರು ಮತ್ತು ಉಳಿದ 33% ವಿದ್ಯಾರ್ಥಿಗಳನ್ನು ಸಾಮಾನ್ಯ ಎಂದು ವರ್ಗೀಕರಿಸಲಾಗಿದೆ. ಗಮನಾರ್ಹ ಪ್ರಮಾಣದ ವಿದ್ಯಾರ್ಥಿಗಳು ಮಧ್ಯಮ ಮಟ್ಟದ ಖಿನ್ನತೆಯನ್ನು (29%) ಮತ್ತು ತೀವ್ರ ಮಟ್ಟದ ಖಿನ್ನತೆಯನ್ನು (26%) ಪ್ರದರ್ಶಿಸಿದರು. ಆದ್ದರಿಂದ, ಕಾಲೇಜು ವಿದ್ಯಾರ್ಥಿಗಳಲ್ಲಿ ಖಿನ್ನತೆಯ ಹರಡುವಿಕೆ ಕಡಿಮೆ ಅಥವಾ ಅತ್ಯಲ್ಪ ಎಂದು ಪ್ರತಿಪಾದಿಸಿದ ಶೂನ್ಯ ಊಹೆ H01 ಅನ್ನು ತಿರಸ್ಕರಿಸಲಾಗಿದೆ.

